ಸ್ವಾಮಿ ವಿವೇಕಾನಂದರ ಬೋಧನೆಯ ಸಾರ

VEC, Library
009970

ಶ್ರೀ ರಾಮಕೃಷ್ಣ ಆಶ್ರಮ ಮೈಸೂರು

VEC, Library
009970

21

VIJAYA EVENING COLLEGE
LIBRARY
BANGALORE-4

ಸ್ವಾಮಿ ವಿವೇಕಾನಂದರ ಬೋಧನೆಯ ಸಾರ

VIJAYA EVENING COLLEGE
LIBRARY
BANGALORE-4
ACCN NO. 9970
SECTION Kan
COST 21-00
Date 21/9/93 Librarian

ಶ್ರೀರಾಮಕೃಷ್ಣಾಶ್ರಮ
ಮೈಸೂರು ೨೦

ಮೊದಲನೆಯ ಮುದ್ರಣ : ೧೯೫೯
ಎರಡನೆಯ ಮುದ್ರಣ : ೧೯೬೫
ಮೂರನೆಯ ಮುದ್ರಣ : ೧೯೭೪
ನಾಲ್ಕನೆಯ ಮುದ್ರಣ : ೧೯೮೨
ಐದನೆಯ ಮುದ್ರಣ : ೧೯೮೭
ಆರನೆಯ ಮುದ್ರಣ : ೧೯೯೨

ಪ್ರಕಾಶಕರು :

ಅಧ್ಯಕ್ಷರು, ಶ್ರೀ ರಾಮಕೃಷ್ಣಾಶ್ರಮ
ಮೈಸೂರು

ಮುದ್ರಕರು :

ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಜಯನಗರ, ಮೈಸೂರು 14

ಮುನ್ನುಡಿ

"ಸ್ವಾಮಿ ವಿವೇಕಾನಂದರ ಬೋಧನೆಯ ಸಾರ" ಎಂಬುದು ಆಂಗ್ಲ ಭಾಷೆಯಲ್ಲಿರುವ ಸ್ವಾಮೀಜಿ ಅವರ ಸಾಹಿತ್ಯರಾಶಿಯಿಂದ ಆಯ್ದ ಮಾಣಿಕ್ಯಗಳ ಕನ್ನಡ ಅನುವಾದ. ಸ್ವಾಮೀಜಿ ಅವರು ದ್ರಷ್ಟಾರ. ಅವರ ದಿವ್ಯ ಚಕ್ಷು ಕಾಲದೇಶವನ್ನು ತೂರಿ ನೋಡಬಲ್ಲದು. ವ್ಯಕ್ತಿ ಮತ್ತು ಜನಾಂಗಕ್ಕೆ ಯಾವುದು ಶ್ರೇಯಸ್ಕರ ಎಂಬುದನ್ನು ಅವರು ಸ್ಪಷ್ಟವಾಗಿ ನಿರ್ಧರಿಸಬಲ್ಲರು. ನಮ್ಮ ಲೋಪದೋಷಗಳೇನು, ಅದಕ್ಕೆ ಚಿಕಿತ್ಸೆ ಯಾವುದು ಎಂಬುದನ್ನು ಸ್ವಲ್ಪವೂ ಬಚ್ಚಿಡದೆ ನೇರವಾದ ವೀರ್ಯವತ್ತಾದ ಭಾಷೆಯಲ್ಲಿ ನಮ್ಮೆದೆಗೆ ತಟ್ಟುವಂತೆ ಹೇಳುವರು. ಅವರ ನುಡಿ ಶಕ್ತಿ ಸಂಜೀವಿನಿ, ಜ್ಞಾನದ ಖನಿ, ಸಾಕ್ಷಾತ್ಕಾರದ ಅಗ್ನಿಕುಂಡದಿಂದ ಸಿಡಿದು ಬಂದ ಕಿಡಿಗಳು.

ಸ್ವಾಮಿ ವಿವೇಕಾನಂದರು ಶಕ್ತಿಸಮುದ್ರದಿಂದ ಉದ್ಭವಿಸಿ ಬಂದವರು. ಸಾಮಾನ್ಯ ಚೇತನರನ್ನು ಅಂಜಿಸುವ, ಕಷ್ಟನಷ್ಟ, ಶೋಕತಾಪ, ಸ್ತುತಿನಿಂದೆಗಳನ್ನು ಮೆಟ್ಟಿನಿಂತ ಧೀರರು. ಯಾವ ಆತಂಕಕ್ಕೂ ಬಗ್ಗದ ಜಗ್ಗದ ಅದಮ್ಯ ಚೇತನ ಇವರದು. ಆಧ್ಯಾತ್ಮಿಕ ಜೀವನದಲ್ಲಿ ಸಾಕ್ಷಾತ್ಕಾರದ ಮೇರುಗಿರಿಗೆ ಹಾರಿದ ಸಾಹಸಿಗಳು. ಅಲ್ಲಿಂದ ಮಾನವ ಕೋಟಿಯ ಮೇಲೆ ಕರುಣೆತಾಳಿ ಧರೆಗಿಳಿದು ಬಂದರು. ನಿದ್ರಿಸುತ್ತಿರುವ ಜೀವಿಗಳನ್ನು ಎಚ್ಚರಿಸುವುದಕ್ಕೆ, ಆಲಸ್ಯದಿಂದ ನಿಂತವರನ್ನು ಮುಂದೂಡುವುದಕ್ಕೆ, ಸೋತ ಕಾಲಿಗೆ ನವಶಕ್ತಿ ನೀಡಲು, ಬತ್ತಿದೆದೆಗೆ ಸ್ಫೂರ್ತಿ ತುಂಬಲು, ಆಡಿದ ನುಡಿಗಳು ಇಲ್ಲಿ ಸಂಗ್ರಹವಾಗಿವೆ. ಅನುಮಾನದ ಅಂಧಕಾರದಲ್ಲಿ ದಿಕ್ಕೆಟ್ಟು ಅಲೆಯುವ ಜೀವಿಗಳಿಗೆ ದಾರಿ ಬೆಳಕಾಗಬಲ್ಲವು ಇವು.

ಪ್ರಕಾಶಕರು

ವಿಷಯಸೂಚಿಕೆ

			ಪುಟ
೧	ಆತ್ಮ	....	೧
೨	ಭಕ್ತಿ	....	೫
೩	ಬ್ರಹ್ಮ	....	೧೩
೪	ಬಂಧ್ಧ	....	೧೬
೫	ಬೌದ್ಧಧರ್ಮ	....	೨೦
೬	ಕ್ರಿಸ್ತ	....	೨೪
೭	ಕ್ರೈಸ್ತಧರ್ಮ	....	೨೮
೮	ಏಕಾಗ್ರತೆ	....	೩೦
೯	ಕರ್ತವ್ಯ	....	೩೩
೧೦	ಶಿಕ್ಷಣ	....	೩೭
೧೧	ನೀತಿ	....	೪೨
೧೨	ಆತ್ಮಶ್ರದ್ಧೆ	....	೪೭
೧೩	ಆಹಾರ	....	೫೦
೧೪	ಮುಕ್ತಿ	....	೫೩
೧೫	ಭಗವತ್‌ಗೀತಾ	....	೫೯
೧೬	ಈಶ್ವರ	....	೬೩
೧೭	ಗುರು	....	೭೧
೧೮	ಸುಖ	....	೭೪
೧೯	ಹಿಂದೂಧರ್ಮ	....	೭೮
೨೦	ಹಿಂದೂಗಳು	....	೮೨
೨೧	ಗೃಹಸ್ಥರು ಮತ್ತು ಗೃಹಸ್ಥಧರ್ಮ	....	೮೩
೨೨	ವಿಗ್ರಹಾರಾಧನೆ	....	೮೮
೨೩	ಅವತಾರ	....	೯೪
೨೪	ಭಾರತ : ಇದರ ಅವನತಿಗೆ ಕಾರಣ	....	೯೬
೨೫	ಭಾರತ : ಅದರ ಸ್ವಭಾವ	....	೯೯

			ಪುಟ
೨೬	ಭಾರತದ ಉದ್ಧಾರ ಮಾರ್ಗ	....	೧೦೨
೨೭	ಕರ್ಮಯೋಗ	....	೧೦೮
೨೮	ಜ್ಞಾನ ಮತ್ತು ಅಜ್ಞಾನ	....	೧೧೬
೨೯	ಮಾನವ	....	೧೨೧
೩೦	ಮಾಯೆ	....	೧೨೫
೩೧	ಧ್ಯಾನ	....	೧೩೦
೩೨	ಮನಸ್ಸು ಮತ್ತು ಆಲೋಚನೆ	....	೧೩೩
೩೩	ಮಹಮ್ಮದ್ ಮತ್ತು ಇಸ್ಲಾಂಧರ್ಮ	....	೧೩೬
೩೪	ಅಹಿಂಸೆ	....	೧೩೯
೩೫	ಏಕತ್ವ	....	೧೪೨
೩೬	ಧರ್ಮ	....	೧೪೫
೪೭	ಸಂನ್ಯಾಸ	....	೧೫೧
೩೮	ಸೇವೆ	....	೧೫೭
೩೯	ಶಕ್ತಿ	....	೧೬೧
೪೦	ಉಪನಿಷತ್	....	೧೯೫
೪೧	ವೇದಾಂತ	....	೧೭೦
೪೨	ಯೋಗ	....	೧೭೭
೪೩	ಸ್ತ್ರೀಯರು ಮತ್ತು ಆಧ್ಯಾತ್ಮಿಕ ಜೀವನ	....	೧೮೧

ಸ್ವಾಮಿ ವಿವೇಕಾನಂದರ ಬೋಧನೆಯ ಸಾರ

೧ ಆತ್ಮ

೧. ಪ್ರತಿ ಜೀವಿಯ ಹಿನ್ನೆಲೆ ಸತ್ಯವೂ, ಸನಾತನವೂ, ನಿತ್ಯ ಧನ್ಯವೂ, ಪರಿಶುದ್ಧವೂ ಆದ ಪರಿಪೂರ್ಣ ಆತ್ಮ. ಈ ಆತ್ಮವೇ ಪತಿತನಲ್ಲಿ ಮತ್ತು ಪವಿತ್ರಾತ್ಮನಲ್ಲಿ, ಸುಖಿಯಲ್ಲಿ ದುಃಖಿಯಲ್ಲಿ, ಸೌಂದರ್ಯದಾಗರದಲ್ಲಿ ಮತ್ತು ಕುರೂಪಿನ ಬೀಡಿನಲ್ಲಿ, ಮಾನವನಲ್ಲಿ ಮತ್ತು ಪ್ರಾಣಿಗಳಲ್ಲಿ ಇರುವುದು. ಇದೇ ಸ್ವಯಂಜ್ಯೋತಿ.

೨. ನಾನಿಲ್ಲಿ ನಿಂತಿರುವೆ. ಕಣ್ಣು ಮುಚ್ಚಿಕೊಂಡು ನನ್ನನ್ನರಿಯಲು "ನಾನು" "ನಾನು" ಎಂದರೆ ಯಾವ ಭಾವನೆ ಮುಂದೆ ಬರುವುದು ? ಒಂದು ದೇಹದ ಭಾವನೆ ಬರುವುದು. ಹಾಗಾದರೆ ನಾನು ಪಂಚಭೌತಿಕ ವಸ್ತುಗಳ ಮಿಶ್ರ ಮಾತ್ರವೆ? ಆದರೆ ವೇದಗಳು ಅಲ್ಲ ಎಂದು ಸಾರುವುವು. ದೇಹದಲ್ಲಿರುವ ನಾನೊಂದು ಆತ್ಮ. ನಾನು ದೇಹವಲ್ಲ. ದೇಹ ಸಾಯುವುದು ಆದರೆ ನಾನು ಸಾಯುವುದಿಲ್ಲ. ನಾನಿಲ್ಲಿ ದೇಹದಲ್ಲಿರುವೆ. ಈ ದೇಹ ಸಾಯುವುದು, ಆದರೆ ನಾನು ಎಂದೆಂದಿಗೂ ಇರುವೆ.

೩. ವೇದವು ಪ್ರಪಂಚವೆಲ್ಲಾ ಸ್ವಾತಂತ್ರ್ಯ ಮತ್ತು ಪರತಂತ್ರದ, ಮುಕ್ತಿ ಮತ್ತು ಬಂಧನದ ಮಿಶ್ರ ಎನ್ನುವುದು. ಆದರೆ ಇವುಗಳೆಲ್ಲದರ ಮೂಲಕ ನಿತ್ಯ ಮುಕ್ತವೂ, ಅಮೃತವೂ, ಪರಿಶುದ್ಧವೂ, ಪರಿಪೂರ್ಣವೂ, ನಿತ್ಯ ಮಂಗಳವೂ ಆದ ಆತ್ಮ ಪ್ರಕಾಶಿಸುತ್ತಿರುವುದು. ಇದು ಸ್ವತಂತ್ರವಾಗಿದ್ದರೆ ಎಂದಿಗೂ ನಾಶವಾಗಲಾರದು. ಏಕೆಂದರೆ ನಾಶ ಎಂದರೆ ಇಂದೊಂದು ಬದಲಾವಣೆ, ಅನ್ಯಾಶ್ರಯ. ಇದು ಸ್ವತಂತ್ರವಾಗಿದ್ದರೆ ಇದು ಪರಿಪೂರ್ಣವಾಗಿರಬೇಕು. ಏಕೆಂದರೆ ಅಪರಿಪೂರ್ಣತೆ ಒಂದು ಸ್ಥಿತಿ, ಅನ್ಯಾಶ್ರಯದ ಮೇಲೆ ನಿಂತಿದೆ. ಪರಿಪೂರ್ಣವಾದ ಅಮೃತಸ್ವರೂಪವಾದ ಆತ್ಮ, ಅತಿ ಶ್ರೇಷ್ಠ ದೇವನಲ್ಲಾಗಲಿ ಅತಿ ದೀನ ಮಾನವನಲ್ಲಾಗಲಿ ಒಂದೇ. ಇರುವ ಅಂತರ ಇದರ ಪ್ರಕಾಶದ ತರತಮದಲ್ಲಿ ಮಾತ್ರ.

೪. ಆತ್ಮ ಅರಿಯುವುದು ಎಂದಲ್ಲ, ಅರಿವೇ ಆದಾಗಿದೆ. ಆತ್ಮ ಆನಂದವಾಗಿದೆ ಎಂದಲ್ಲ. ಆನಂದವೇ ಅದರ ಸ್ವರೂಪ. ಯಾವ ವಸ್ತು ಆನಂದವಾಗಿದೆಯೋ ಅದು ಆನಂದವನ್ನು ಬೇರೊಂದರಿಂದ ಎರವಲಾಗಿ ತೆಗೆದುಕೊಂಡಿದೆ. ಎಲ್ಲಿ ಜ್ಞಾನವಿದೆಯೊ ಅದು ಬೇರೊಂದರಿಂದ ಜ್ಞಾನವನ್ನು ಎರವಲಾಗಿ ತೆಗೆದುಕೊಂಡಿದೆ. ಯಾವ ವಸ್ತುವಿಗೆ ಸಾಪೇಕ್ಷ ಅಸ್ತಿತ್ವವಿದೆಯೋ ಅದು ಕೇವಲ ಭ್ರಾಂತಿ ಮಾತ್ರ.

೫. ನಾವೀಗ ಯಾವುದನ್ನು ವಿಶ್ವವೆಂದು ನೋಡುತ್ತಿರುವೆವೋ ಅದೇ ಸಾಕ್ಷಾತ್ಕಾರವಾದಾಗ ದೇವರಂತೆ ಕಾಣುವುದು. ಇದುವರೆಗೆ ಯಾವ ದೇವರು ಹೊರಗೆ ಇರುವನೆಂದು ಭಾವಿಸುತ್ತಿರುವೆವೊ ಅವನೇ ಅಂತರ್ಯಾಮಿಯಾಗುವನು, ನಮ್ಮ ಆತ್ಮನಾಗುವನು.

೬. ಆತ್ಮನಲ್ಲಿ ಯಾವ ಬದಲಾವಣೆಯೂ ಇಲ್ಲ ; ಅದು ಅನಂತ, ವಿಭು, ನಿತ್ಯ, ಸಚ್ಚಿದಾನಂದ.

೭. ಪರಸ್ಪರ ವಿರೋಧದಂತೆ ತೋರುತ್ತಿರುವ ನಮ್ಮ ತತ್ತ್ವಸಿದ್ಧಾಂತ ಗಳಲ್ಲಿ ಒಂದು ಸಾಮಾನ್ಯ ಭಾವನೆ ಇದ್ದರೆ, ಅದೇ ಎಲ್ಲಾ ಮಹಿಮೆ, ಶಕ್ತಿ, ಪವಿತ್ರತೆ ಆತ್ಮನಲ್ಲಿದೆ ಎಂಬುದು. ರಾಮಾನುಜರ ಸಿದ್ಧಾಂತದ ಪ್ರಕಾರ ಆತ್ಮ ಸಂಕೋಚ ವಿಕಾಸವಾಗುತ್ತಿದೆ ; ಶಂಕರಾಚಾರ್ಯರ ಸಿದ್ಧಾಂತದ ಪ್ರಕಾರ ಅದು ಭ್ರಾಂತಿಗೆ ಒಳಗಾಗಿದೆ. ಈ ಭಿನ್ನಾಭಿಪ್ರಾಯಗಳನ್ನು ಗಮನಿಸಬೇಕಾಗಿಲ್ಲ. ಎಲ್ಲರೂ ಆತ್ಮನಲ್ಲಿ ಆಗಲೇ ಶಕ್ತಿ ಇದೆ ಎನ್ನುವುದನ್ನು ಒಪ್ಪುವರು. ಅದು ಕೆಲವು ವೇಳೆ ಗುಪ್ತವಾಗಿರಬಹುದು. ಕೆಲವು ವೇಳೆ ವ್ಯಕ್ತವಾಗಿರಬಹುದು. ಅಂತೂ ಅದು ಅಲ್ಲಿದೆ. ನೀವು ಅದನ್ನು ಎಷ್ಟು ಬೇಗ ನಂಬಿದರೆ ಅಷ್ಟು ಒಳ್ಳೆಯದು.

೮. ನಮ್ಮೆಲ್ಲರಲ್ಲೂ ಇರುವ ಸ್ವಾತಂತ್ರ್ಯದ ಭಾವನೆಯೆ ದೇಹ ಮತ್ತು ಮನಸ್ಸಿಗೀತ ಮತ್ತಾವುದೋ ನಮ್ಮಲ್ಲಿದೆ ಎಂಬುದನ್ನು ತೋರುವುದು. ಅಂತರ್ಯಾಮಿಯಾಗಿರುವ ಆತ್ಮ ಸ್ವತಂತ್ರವಾಗಿರುವುದು. ಆದಕಾರಣವೇ ಸ್ವಾತಂತ್ರ್ಯದ ಭಾವನೆಯನ್ನು ಕೆರಳಿಸುತ್ತದೆ.

೯. ಪ್ರತಿಯೊಂದು ಆತ್ಮನೂ ಒಂದು ನಕ್ಷತ್ರ, ಎಲ್ಲಾ ತಾರೆಗಳಿರುವುದು ಅನಂತನಾದ ಶುಭ್ರ ನೀಲಾಕಾಶವೆಂಬ ಭಗವಂತನಲ್ಲಿ. ಅದೇ ಮೂಲ, ಅದೇ ಸತ್ಯ, ಅದೇ ಪ್ರತಿಜೀವಿಯ ವ್ಯಕ್ತಿತ್ವ. ಧರ್ಮ ಪ್ರಾರಂಭವಾಗುವುದು ನಮ್ಮ ಕಣ್ಣಿಗೆ ಕಾಣದೇ ಹೋದ ಇಂತಹ ಯಾವುದಾದರೊಂದು ತಾರೆಯ ಅನ್ವೇಷಣೆಯಲ್ಲಿ. ಎಲ್ಲಾ ತಾರೆಗಳನ್ನೂ ದೇವರಲ್ಲಿ ಕಂಡಾಗ, ನಮ್ಮನ್ನೂ ಅಲ್ಲಿ ಕಂಡುಕೊಂಡಾಗ, ಧರ್ಮ ತನ್ನ ಗುರಿಯನ್ನು ಮುಟ್ಟುವುದು.

೧೦. ನೀನೆ ಅವನು ಎಂಬುದನ್ನು ಅರಿತು ಅದರಂತೆ ನಿನ್ನ ಜೀವನವನ್ನು ತಿದ್ದಿಕೊ. ಯಾರು ಇದನ್ನು ಅರಿತು ಇದರಂತೆ ಜೀವನವನ್ನು ತಿದ್ದಿಕೊಳ್ಳುವರೋ ಅವರು ಎಂದಿಗೂ ಅಜ್ಞಾನದಲ್ಲಿ ತೊಳಲುವುದಿಲ್ಲ.

೧೧. ಅವಿಕಾರಿಯಾದ ಆತ್ಮನನ್ನು ಮರೆಮಾಡುವುದು (ಅಜ್ಞಾನದ) ತೆರೆ.

ತೆರೆ ಸರಿದಾಗ ಹಿಂದೆ ಆತ್ಮನನ್ನು ನೋಡುವೆವು. ಬದಲಾವಣೆಯೆಲ್ಲ ತೆರೆಯಲ್ಲಿರುವುದು. ಪವಿತ್ರಾತ್ಮನಲ್ಲಿ ತೆರೆ ತುಂಬಾ ತೆಳ್ಳಗಿರುವುದು. ಸತ್ಯ ಅದರ ಮೂಲಕ ಚೆನ್ನಾಗಿ ಪ್ರಕಾಶಿಸುತ್ತಿರುವುದು. ಪಾಪಿಯಲ್ಲಿ ತೆರೆ ದಪ್ಪವಾಗಿರುವುದು. ಪವಿತ್ರಾತ್ಮನಲ್ಲಿರುವಂತೆಯೇ ಪಾಪಾತ್ಮನ ಹಿಂದೆಯೂ ಜ್ಞಾನಜ್ಯೋತಿ ಬೆಳಗುತ್ತಿದೆ ಎಂಬುದು ಕಾಣುವುದಿಲ್ಲ. ತೆರೆಯನ್ನು ಪೂರ್ಣ ಸರಿಸಿದಾಗ, ಆ ತೆರೆ ಎಂದಿಗೂ ಇರಲೇ ಇಲ್ಲವೆಂದು ತೋರುವುದು. ನಾವು ಯಾವಾಗಲೂ ಆತ್ಮನಾಗಿಯೇ ಇದ್ದೆವು, ಮತ್ತೇನೂ ಆಗಿರಲಿಲ್ಲ ಎಂದು ಗೊತ್ತಾಗುವುದು. ತೆರೆ ಸಂಪೂರ್ಣ ಮರೆತೇ ಹೋಗುವುದು.

೧೨. ನಮಗೆ ಕಣ್ಣಿದೆ ಎಂಬುದನ್ನು ಅದರ ಪರಿಣಾಮದ ಮೂಲಕವಾಗಿ ಅಲ್ಲದೆ ಬೇರೆ ತಿಳಿದುಕೊಳ್ಳುವುದಕ್ಕೆ ಹೇಗೆ ಆಗುವುದಿಲ್ಲವೋ ಹಾಗೆಯೇ ಆತ್ಮನನ್ನು ಕೂಡ ಅದರ ಪರಿಣಾಮದ ಮೂಲಕವಾಗಿ ಅಲ್ಲದೆ ಅದನ್ನೇ ನಾವು ಪ್ರತ್ಯಕ್ಷ ನೋಡಲಾಗುವುದಿಲ್ಲ. ಅದನ್ನು ನಮಗೆ ಕಾಣುವಂತೆ ಮಾಡುವ ಅಧೋಸ್ಥಿತಿಗೆ ತರಲಾರೆವು. ಪ್ರಪಂಚದಲ್ಲಿ ಅದೊಂದೇ ನಿರುಪಾಧಿಕ; ಉಳಿದೆಲ್ಲವೂ ಉಪಾಧಿಕ.

೧೩. ಪತಿಗಾಗಿ ಅಲ್ಲ, ಸತಿ ಪತಿಯನ್ನು ಪ್ರೀತಿಸುವುದು, ಆತ್ಮನಿಗಾಗಿ ಸತಿ ಪತಿಯನ್ನು ಪ್ರೀತಿಸುವಳು. ಸತಿಗಾಗಿ ಅಲ್ಲ, ಪತಿ ಸತಿಯನ್ನು ಪ್ರೀತಿಸುವುದು, ಆತ್ಮನಿಗಾಗಿ ಪತಿ ಸತಿಯನ್ನು ಪ್ರೀತಿಸುವನು. ಮಕ್ಕಳಿಗಾಗಿ ಅಲ್ಲ ಮಕ್ಕಳನ್ನು ಪ್ರೀತಿಸುವುದು, ಆತ್ಮನಿಗಾಗಿ ಮಕ್ಕಳನ್ನು ಪ್ರೀತಿಸುವುದು. ಐಶ್ವರ್ಯಕ್ಕಾಗಿ ಅಲ್ಲ, ಐಶ್ವರ್ಯವನ್ನು ಪ್ರೀತಿಸುವುದು, ಆತ್ಮನಿಗಾಗಿ ಐಶ್ವರ್ಯವನ್ನು ಪ್ರೀತಿಸುವುದು. ಬ್ರಾಹ್ಮಣನಿಗಾಗಿ ಯಾರೂ ಬ್ರಾಹ್ಮಣನನ್ನು ಪ್ರೀತಿಸುವುದಿಲ್ಲ, ಆತ್ಮನಿಗಾಗಿ ಬ್ರಾಹ್ಮಣನನ್ನು ಪ್ರೀತಿಸುವುದು. ಕ್ಷತ್ರಿಯನಿಗಾಗಿ ಯಾರೂ ಕ್ಷತ್ರಿಯನನ್ನು ಪ್ರೀತಿಸುವುದಿಲ್ಲ. ಆತ್ಮನಿಗಾಗಿ ಕ್ಷತ್ರಿಯನನ್ನು ಪ್ರೀತಿಸುವರು. ಪ್ರಪಂಚಕ್ಕೋಸ್ಕರ ಯಾರೂ ಪ್ರಪಂಚವನ್ನು ಪ್ರೀತಿಸುವುದಿಲ್ಲ, ಆತ್ಮನಿಗಾಗಿ ಪ್ರಪಂಚವನ್ನು ಪ್ರೀತಿಸುವರು.

ಇದರಂತೆಯೇ ದೇವತೆಗಳಿಗಾಗಿ ಯಾರೂ ದೇವತೆಗಳನ್ನು ಪ್ರೀತಿಸುವುದಿಲ್ಲ; ಆತ್ಮನಿಗಾಗಿ ದೇವತೆಗಳನ್ನು ಪ್ರೀತಿಸುವರು. ಯಾರೂ ಯಾವ ವಸ್ತುವನ್ನೂ ಅದಕ್ಕಾಗಿ ಪ್ರೀತಿಸುವುದಿಲ್ಲ. ಆತ್ಮನಿಗಾಗಿ ಅದನ್ನು ಪ್ರೀತಿಸುವರು. ಆದಕಾರಣ ನಾವು ಆತ್ಮನ ವಿಷಯವಾಗಿ ಕೇಳಬೇಕು, ಮನನ ಮಾಡಬೇಕು. ಅದನ್ನು ಕುರಿತು ಧ್ಯಾನಿಸಬೇಕು.

೧೪. ಅಂತರಾಳದಲ್ಲಿ ಆತ್ಮನಿರುವನು. ನಿತ್ಯ ಪರಿಶುದ್ಧನವನು, ಸ್ವಯಂ ಜ್ಯೋತಿ ಅವನು, ನಿತ್ಯಮುಕ್ತನವನು. ಅವನನ್ನು ಧ್ಯಾನ ಮತ್ತು ಏಕಾಗ್ರತೆಯ ಮೂಲಕ ಸಾಕ್ಷಾತ್ಕಾರ ಮಾಡಿಕೊಂಡ ಒಡನೆಯೇ ಭ್ರಾಂತಿ ಪ್ರಪಂಚ ಮಾಯ ವಾಗುವುದು. ಇದು ಎಲ್ಲರಲ್ಲಿಯೂ ಒಂದೇ ಸಮನಾಗಿರುವುದು. ಇದನ್ನು ಎಷ್ಟು ಹೆಚ್ಚು ಅಭ್ಯಾಸಮಾಡಿದರೆ ಅಷ್ಟು ಬೇಗ ಕುಂಡಲಿನಿ ಜಾಗ್ರತವಾಗುವುದು. ಇದು ಸಹಸ್ರಾರಕ್ಕೆ ಬಂದಾಗ ದೃಷ್ಟಿ ಸ್ಪಷ್ಟವಾಗುವುದು; ಆತ್ಮಸಾಕ್ಷಾತ್ಕಾರವಾಗುವುದು.

೧೫. ಮೂಢರು ಯಾರನ್ನು ಪ್ರೀತಿಸುತ್ತಿರುವರೋ ಅವನನ್ನೇ ನಾನು ನಿಮಗೆ ಬೋಧಿಸುತ್ತಿರುವುದು. ಇವನೊಬ್ಬನೇ ಜ್ಞಾನಕ್ಕೆ ಜ್ಞೇಯವಾಗಿರು ವವನು. ಅವನನ್ನೇ ಎಲ್ಲಾ ಕಡೆಯಲ್ಲಿಯೂ ನಾವು ನೋಡುವುದು. ಪ್ರತಿಯೊಬ್ಬ ರಿಗೂ ಅವರಾತ್ಮ ವೇದ್ಯವಾಗಿದೆ. ಪ್ರತಿಯೊಂದು ಪ್ರಾಣಿಗೂ ಅದು ವೇದ್ಯ ವಾಗಿದೆ. ನಮಗೆ ಗೊತ್ತಿರುವುದೆಲ್ಲ ಈ ಆತ್ಮನ ಆವಿರ್ಭಾವ.

೧೬. ಸ್ವತಃಸಿದ್ಧನಾದ ಆತ್ಮ ಇಂದ್ರಿಯಾತೀತ. ಇಂದ್ರಿಯಗಳು ಬಾಹ್ಯ ದಲ್ಲಿ ನೋಡುವುವು, ಆತ್ಮವಾದರೊ ಆಂತರ್ಯದಲ್ಲಿರುವುದು. ಇದನ್ನು ನೋಡ ಬೇಕಾದರೆ ನಮಗೆ ಬೇಕಾಗುವ ಸಿದ್ಧತೆ ಗೊತ್ತಿರಬೇಕು. ದೃಷ್ಟಿಯನ್ನು ಅಂತ ರ್ಮುಖ ಮಾಡಿ ನಾವಲ್ಲಿ ನೋಡಬೇಕು.

೧೭. ಯಾರು ದುರಾತ್ಮರೋ, ಶಾಂತಚಿತ್ತರಲ್ಲವೋ, ಅವರಿಗೆ ಜ್ಞಾನ ದೊರಕಲಾರದು. ಯಾರ ಹೃದಯ ಪರಿಶುದ್ಧವಾಗಿದೆಯೋ ಕರ್ಮ ಪವಿತ್ರ ವಾಗಿದೆಯೋ, ಯಾರ ಇಂದ್ರಿಯ ನಿಗ್ರಹದಲ್ಲಿರುವುದೋ ಅವರಿಗೆ ಆತ್ಮ ಗೋಚರವಾಗುವುದು.

೧೮. ಆತ್ಮನನ್ನು ಬರೀ ಮಾತಿನ ಮೂಲಕ ಗ್ರಹಿಸಲಾಗುವುದಿಲ್ಲ; ಬುದ್ಧಿಯ ಮೂಲಕ ಗ್ರಹಿಸಲಾಗುವುದಿಲ್ಲ; ಬೇಕಾದಷ್ಟು ಶಾಸ್ತ್ರಾಧ್ಯಯನ ದಿಂದಲೂ ಗ್ರಹಿಸಲಾಗುವುದಿಲ್ಲ.

೧೯. ಗುಡಿ, ಚರ್ಚುಗಳಲ್ಲಿ, ಭೂಮಿ ಮತ್ತು ಸ್ವರ್ಗಗಳಲ್ಲಿ, ಹಲವು ಕಡೆ ಅವನನ್ನು ಅರಸಿ ಆದ ಮೇಲೆ ನೀವು ಎಲ್ಲಿಂದ ಹೊರಟಿರೋ ಪುನಃ ಅಲ್ಲಿಗೆ ಬಂದಮೇಲೆ ಪ್ರದಕ್ಷಿಣೆ ಪೂರ್ತಿಯಾಗುವುದು. ಯಾರನ್ನು ನೀವು ಪ್ರಪಂಚದ ಲ್ಲೆಲ್ಲಾ ಹುಡುಕಾಡುತ್ತಿದ್ದಿರೊ, ಯಾರಿಗಾಗಿ ಗುಡಿ ಗೋಪುರಗಳಲ್ಲಿ, ಚರ್ಚು, ಮಸೀದಿಗಳಲ್ಲಿ ಕಣ್ಣೀರು ಕರೆದು ಪ್ರಾರ್ಥಿಸುತ್ತಿದ್ದಿರೋ ಯಾರನ್ನು ಮುಗಿಲು ಗಳಾಚೆ ಇರುವ ರಹಸ್ಯತಮ ವಸ್ತು ಎಂದು ಭಾವಿಸಿದ್ದಿರೊ ಅವನೇ ನಿಮ್ಮ ಅಂತ ರ್ಯಾಮಿ ಆತ್ಮ ; ನಿಮ್ಮ ದೇಹ, ಮನಸ್ಸು, ಪ್ರಾಣವಾಗಿರುವನೆಂದು ಅರಿಯಿರಿ.

೨ ಭಕ್ತಿ

೧. ಭಕ್ತಿಯೋಗ ಎಂದರೆ ನಿಜವಾದ ಹೃತ್ಪೂರ್ವಕವಾದ ಭಗವದ ನ್ವೇಷಣೆ. ಇದು ಪ್ರೀತಿಯಲ್ಲಿ ಪ್ರಾರಂಭವಾಗಿ, ಪ್ರೀತಿಯಲ್ಲಿ ಸಾಗಿ, ಕೊನೆಗೆ ಪ್ರೀತಿಯಲ್ಲಿ ಪರ್ಯವಸಾನವಾಗುವುದು.

೨. ಭಕ್ತಿ ಎಂದರೆ ಪರಮಪ್ರೇಮ. ಅದು ಲಭಿಸಿದರೆ ಅವನು ಎಲ್ಲರನ್ನೂ ಪ್ರೀತಿಸುವನು ; ಯಾರನ್ನೂ ದ್ವೇಷಿಸುವುದಿಲ್ಲ. ಅವನು ಎಂದೆಂದಿಗೂ ತೃಪ್ತ ನಾಗುವನು. ಇದು ಕಾಮನೆಗೆ ಸಂಬಂಧಪಟ್ಟುದಲ್ಲ. ಎಲ್ಲಿಯವರೆಗೆ ಕಾಮನೆಗಳಿರು ವುವೋ ಅಲ್ಲಿಯವರೆಗೆ ಭಗವತ್‌ಪ್ರೇಮ ಲಭಿಸುವುದಿಲ್ಲ.

೩. ಭಕ್ತಿ ಕರ್ಮಕ್ಕಿಂತ ಮೇಲು, ಯೋಗಕ್ಕಿಂತ ಮೇಲು, ಏಕೆಂದರೆ ಇವು ಗಳೆಲ್ಲ ಮತ್ತಾವುದನ್ನೊ ಪಡೆಯುವುದಕ್ಕಾಗಿವೆ. ಆದರೆ ಭಕ್ತಿಗಾದರೋ ಅದೇ ಫಲ. ಭಕ್ತಿಯೇ ಗುರಿ, ಭಕ್ತಿಯೇ ದಾರಿ.

೪. ಭಕ್ತಿಯೋಗದ ಒಂದು ದೊಡ್ಡ ಅನುಕೂಲವೇ, ಈ ಮಾರ್ಗ ಬಹಳ ಸುಲಭವಾಗಿರುವುದು ಮತ್ತು ದೇವರನ್ನು ಸೇರಲು ನಮ್ಮ ಸ್ವಭಾವಕ್ಕೆ ಸಹಜ ವಾಗಿರುವುದು. ಇದರ ಒಂದು ದೊಡ್ಡ ನ್ಯೂನತೆಯೆಂದರೆ ಇದು ಪ್ರಾರಂಭ ದೆಸೆಯಲ್ಲಿ ಕೆಲವು ವೇಳೆ ಭಯಂಕರ ಮತಭ್ರಾಂತಿಯ ರೂಪವನ್ನು ತಾಳುವ ಅಪಾಯವಿದೆ. ಈ ಕೀಳುಭಕ್ತಿಯ ಗುಂಪಿನಿಂದಲೇ ಹಿಂದೂ, ಮಹಮದೀಯ ಮತ್ತು ಕ್ರೈಸ್ತ ಮತಾಂಧರು ಬಂದಿರುವುದು.

೫. ಇಷ್ಟ ದೇವತೆಯ ಮೇಲೆ ಏಕಾಗ್ರದಿಂದ ನಿಷ್ಠೆ ಇಲ್ಲದೇ ಇದ್ದರೆ ಭಕ್ತಿ ಸ್ವಾಭಾವಿಕವಾಗಿ ವೃದ್ಧಿಯಾಗಲಾರದು. ಆದರೆ ಕೆಲವು ವೇಳೆ ತಮ್ಮ ಪಂಥಕ್ಕೆ ಸೇರದೇ ಇರುವ ಇತರರನ್ನು ದೂರುವುದಕ್ಕೂ ಇದೇ ಕಾರಣ. ಪ್ರತಿಯೊಂದು ಧರ್ಮ ಮತ್ತು ದೇಶದಲ್ಲಿರುವ ದುರ್ಬಲರು ಮತ್ತು ಇನ್ನೂ ಸಾಕಷ್ಟು ಮುಂದುವರಿಯದೆ ಇರುವವರು ತಮ್ಮ ಇಷ್ಟವನ್ನು ಪ್ರೀತಿಸುವುದು ಒಂದೇ ರೀತಿ: ಅದೇ ತಮ್ಮದಲ್ಲದೇ ಇರುವುದನ್ನು ದ್ವೇಷಿಸುವುದು. ತನ್ನ ಇಷ್ಟದೇವರು, ತನ್ನ ಧರ್ಮ ಮುಂತಾದುವನ್ನು ಅಷ್ಟೊಂದು ಪ್ರೀತಿಯಿಂದ ನೋಡುವವರು ಇತರರ ಆದರ್ಶಗಳನ್ನು ಕಂಡಾಗ ಅಥವಾ ಕೇಳಿದಾಗ ಬಾಯಿಗೆ ಬಂದಂತೆ ಕೂಗಾಡುವ ಮತಭ್ರಾಂತರಾಗುವುದಕ್ಕೆ ಇದೇ ಕಾರಣ.

೬. ಪ್ರತಿಯೊಬ್ಬರೂ 'ಪ್ರಯೋಜನ' ಎನ್ನುವುದನ್ನು ತಮ್ಮದೇ ಒಂದು ದೃಷ್ಟಿಯಿಂದ ನೋಡುವರು. ಊಟ, ಕುಡಿತ, ಇಂದ್ರಿಯ ಭೋಗದಲ್ಲೇ ಮಗ್ನರಾಗಿ ಅದಕ್ಕಿಂತ ಮೇಲೇಳದೆ ಅಲ್ಲೇ ಸಾಯುವವರಿಗೆ ಸ್ವಲ್ಪ ಧಾರ್ಮಿಕ ಆವಶ್ಯಕತೆ ಅಂಕುರಿಸಬೇಕಾದರೂ ಹಲವು ಜನ್ಮಗಳು ಕಾಯಬೇಕು. ಯಾರಿಗೆ ಕ್ಷಣಿಕ ಪ್ರಾಪಂಚಿಕ ಸುಖಕ್ಕಿಂತ ಆತ್ಮಾನ್ವೇಷಣೆ ಹೆಚ್ಚು ಮುಖ್ಯವಾಗಿರುವುದೋ, ಯಾರಿಗೆ ಇಂದ್ರಿಯ ಲೋಲುಪತೆ ಏನೂ ಅರಿಯದ ಮಕ್ಕಳ ಆಟದಂತೆ ಕಾಣುತ್ತಿದೆಯೊ, ಅವರಿಗೆ ದೇವರು ಮತ್ತು ಭಕ್ತಿ ಇವೇ ಮುಖ್ಯ ಪ್ರಯೋಜನಕಾರಿ.

೭. ನಿಮ್ಮಲ್ಲಿ ಭಕ್ತಿ ಇದೆ. ಆದರೆ ಕಾಮಕಾಂಚನದ ತೆರೆ ಅದನ್ನು ಮರೆಮಾಡಿದೆ. ಅದು ಅತ್ತ ಸರಿದೊಡನೆಯೆ ಭಕ್ತಿ ವ್ಯಕ್ತವಾಗುವುದು.

೮. ಭಕ್ತಿಯನ್ನು ಪಡೆಯುವುದಕ್ಕೆ ಭಗವಂತನ ನಾಮಜಪ ಒಂದು ಮಾರ್ಗ. ಮಂತ್ರಜಪ ಬಹಳ ಪ್ರಯೋಜನಕಾರಿ. ಭಕ್ತಿ ಪಡೆಯಬೇಕಾದರೆ ಅದನ್ನು ಪಡೆದ ಸಾಧುಸಂತರ ಸಹವಾಸಮಾಡಿ. ಭಗವದ್ಗೀತೆ, ಇಮಿಟೇಷನ್ ಆಫ್ ಕ್ರೈಸ್ಟ್ ಮುಂತಾದ ಪುಸ್ತಕಗಳನ್ನು ಓದಿ. ಯಾವಾಗಲೂ ಭಗವಂತನ ಗುಣಗಳನ್ನು ಮನನ ಮಾಡುತ್ತಿರಿ.

೯. ಸುಮ್ಮನೇ ದೇವರ ವಿಷಯದಲ್ಲಿ ತರ್ಕಮಾಡುತ್ತಿದ್ದರೆ ಸಾಲದು. ಯಾವಾಗ ಆಧ್ಯಾತ್ಮಿಕ ಭಾವನೆ ಇನ್ನೂ ಪ್ರಾರಂಭದೆಸೆಯಲ್ಲಿ ಇದೆಯೋ ಆಗ ಪ್ರಾಪಂಚಿಕ ವಸ್ತುಗಳಿಂದ ದೂರ ಇರಿ. ಸಾಧ್ಯವಾದಷ್ಟು ಹಗಲೂ ರಾತ್ರಿ ದೇವರಲ್ಲದೆ ಅನ್ಯಥಾ ಯಾವುದನ್ನೂ ಭಾವಿಸಬೇಡಿ. ನಾವು ನಿತ್ಯ ಮಾಡಬೇಕಾದ ಆವಶ್ಯಕ ಆಲೋಚನೆಗಳನ್ನು ಕೂಡ ದೇವರ ಮೂಲಕ ಮಾಡಬಹುದು. ಅವನಿಗಾಗಿ ಊಟ ಮಾಡಿ, ಅವನಿಗಾಗಿ ಕುಡಿಯಿರಿ, ಅವನಿಗಾಗಿ ಮಲಗಿರಿ, ಅವನಿಗಾಗಿ ಎಲ್ಲವನ್ನೂ ಮಾಡಿರಿ. ಇತರರೊಂದಿಗೆ ದೇವರ ವಿಷಯವನ್ನು ಕುರಿತು ಮಾತನಾಡಿ.

೧೦. ಭಗವಂತ ಮತ್ತು ಆತನ ಶ್ರೇಷ್ಠತಮ ಭಕ್ತರ ದಯೆಯನ್ನು ಪಡೆಯಿರಿ. ಭಗವದ್ದರ್ಶನಕ್ಕೆ ಇವೆರಡೂ ಅತಿ ಮುಖ್ಯ. ಭಗವತ್ ಭಕ್ತರ ಸಂಗ ಅತಿ ದುರ್ಲಭ. ಐದು ನಿಮಿಷಗಳು ಅವರೊಡನೆ ಕಳೆದರೂ ಅದು ನಿಮ್ಮ ಇಡೀ ಜೀವನವನ್ನೇ ಬದಲಾಯಿಸುವುದು. ನಿಮಗೆ ಅದು ತೀವ್ರವಾಗಿ ಬೇಕು ಅನ್ನಿಸಿದರೆ ಲಭಿಸುವುದು. ಭಗವತ್ ಭಕ್ತರ ಸಾನ್ನಿಧ್ಯದಿಂದ ಒಂದು ಸ್ಥಳ ಪವಿತ್ರವಾಗುವುದು. ಭಗವತ್ ಭಕ್ತರ ಮಹಿಮೆ ಅಂತಹುದು. ಅವರೇ ದೇವರು. ಅವರು ಮಾತನಾಡುವುದೇ ಶಾಸ್ತ್ರವಾಗುವುದು. ಅವರಿದ್ದ ಸ್ಥಳ ಅವರ ಭಾವನೆಯಿಂದ

ಓತಪ್ರೋತವಾಗುವುದು. ಯಾರು ಅಲ್ಲಿಗೆ ಹೋಗುವರೋ ಅವರಿಗೆ ಇದು ವೇದ್ಯ ವಾಗುವುದು. ಅವರು ಕೂಡ ಭಕ್ತರಾಗಲು ಬಯಸುವರು.

೧೧. ಭಕ್ತಿ ತ್ಯಜಿಸು ಎನ್ನುವುದಿಲ್ಲ; ಪ್ರೀತಿಸು, ಶ್ರೇಷ್ಠವಾದುದನ್ನು ಪ್ರೀತಿಸು ಎನ್ನುವುದು. ಯಾರು ಈ ಶ್ರೇಷ್ಠವನ್ನು ಪ್ರೀತಿಸುವರೋ ಅವರ ಮನಸ್ಸಿನಿಂದ ಹೀನವಾದುದೆಲ್ಲ ಸ್ವಭಾವತಃ ಬಿದ್ದು ಹೋಗುವುದು.

೧೨. ಭಕ್ತಿಯೋಗದಲ್ಲಿ ನಮಗೆ ಮುಖ್ಯವಾಗಿ ಬೇಕಾಗಿರುವುದು ದೇವರೇ ನನಗೆ ಬೇಕು ಎಂಬ ಯಥಾರ್ಥವಾದ ಹೃತ್ಪೂರ್ವಕ ಹಂಬಲ. ನಮಗೆ ದೇವ ರಲ್ಲದೆ ಎಲ್ಲಾ ಬೇಕು. ಏಕೆಂದರೆ ನಮ್ಮ ಸಾಧಾರಣ ಬಯಕೆಗಳನ್ನು ಪ್ರಪಂಚ ಈಡೇರಿಸುವುದು. ಎಲ್ಲಿಯವರೆಗೆ ನಮ್ಮ ಬಯಕೆಗಳು ಈ ಪ್ರಪಂಚಕ್ಕೆ ಸಂಬಂಧ ಪಟ್ಟಿರುವುದೋ ಅಲ್ಲಿಯವರೆಗೆ ನಮಗೆ ದೇವರ ಆವಶ್ಯಕತೆ ಇಲ್ಲ. ಈ ಪ್ರಪಂಚ ದಲ್ಲಿ ನಮಗೆ ಚೆನ್ನಾಗಿ ಪೆಟ್ಟುಬಿದ್ದ ಮೇಲೆ, ನಮ್ಮ ಭರವಸೆಗಳು ಚೂರು ಚೂರಾದ ಮೇಲೆ ಇದಕ್ಕಿಂತ ಮಿಗಿಲಾಗಿರುವುದನ್ನು ಆಶಿಸುವೆವು. ಆಗಲೇ ದೇವರನ್ನು ನಾವು ಅರಸುವುದು.

೧೩. ಭಕ್ತಿ ಧ್ವಂಸಕಾರಿಯಲ್ಲ; ನಮ್ಮ ಸ್ವಭಾವವೆಲ್ಲ ಅವನನ್ನು ಪಡೆಯು ವುದಕ್ಕೆ ಸಾಧನವಾಗಬೇಕು ಎನ್ನುವುದು. ಇವುಗಳನ್ನೆಲ್ಲಾ ನಾವು ಭಗವಂತನ ಕಡೆ ಹರಿಸಬೇಕು, ಕ್ಷಣಿಕ ವಿಷಯ ವಸ್ತುಗಳ ಮೇಲೆ ವ್ಯರ್ಥ ಮಾಡುವ ಪ್ರೀತಿಯನ್ನು ದೇವರಿಗೆ ಅರ್ಪಿಸಬೇಕು.

೧೪. ಭಕ್ತಿ ನಿಮ್ಮ ಪಾಶ್ಚಾತ್ಯ ಧರ್ಮದಂತೆ ಅಲ್ಲ. ಭಕ್ತಿಯಲ್ಲಿ ಅಂಜಿಕೆ ಇಲ್ಲ. ಇಲ್ಲಿ ಯಾರ ಕೋಪವನ್ನೂ ಶಾಂತಮಾಡಬೇಕಾಗಿಲ್ಲ, ಯಾರ ಬಯಕೆ ಯನ್ನೂ ತೃಪ್ತಿಪಡಿಸಬೇಕಾಗಿಲ್ಲ. ಭಗವಂತನನ್ನು ತಮ್ಮ ಮಗು ಎಂದು ಪ್ರೀತಿ ಸುವ ಭಕ್ತರೂ ಇರುವರು. ಏಕೆಂದರೆ ಇಲ್ಲಿ ಗೌರವ ಮತ್ತು ಅಂಜಿಕೆಯ ಛಾಯೆಯೂ ಇರಲಾರದು. ನಿಜವಾದ ಪ್ರೀತಿಯಲ್ಲಿ ಅಂಜಿಕೆ ಇಲ್ಲ. ಎಲ್ಲಿಯ ವರೆಗೆ ಸ್ವಲ್ಪವಾದರೂ ಅಂಜಿಕೆ ಇರುವುದೋ ಅಲ್ಲಿ ಭಕ್ತಿ ಅಂಕುರಿಸುವುದೂ ಇಲ್ಲ. ಭಕ್ತ ದೇವರ ಹತ್ತಿರ ಗೋಗರೆಯುವುದಿಲ್ಲ, ಅವನ ಹತ್ತಿರ ವ್ಯಾಪಾರ ಮಾಡುವುದಿಲ್ಲ. ದೇವರನ್ನು (ಅವನ ಪ್ರೀತಿ ಅಲ್ಲದೆ) ಏನನ್ನಾದರೂ ಕೇಳುವುದು ಎಂದರೆ ಭಕ್ತನಿಗೆ ಆಗುವುದಿಲ್ಲ. ಭಕ್ತ ಆರೋಗ್ಯವನ್ನಾಗಲಿ, ಐಶ್ವರ್ಯವನ್ನಾಗಲಿ, ಸ್ವರ್ಗವನ್ನಾಗಲಿ ಯಾವುದನ್ನೂ ಕೇಳುವುದಿಲ್ಲ.

೧೫. ಭಕ್ತಿಯ ಧರ್ಮದಲ್ಲಿ ನಾವೆಲ್ಲಾ ದ್ವೈತಿಗಳಾಗಿ ಪ್ರಾರಂಭ ಮಾಡ ಬೇಕಾಗಿದೆ. ದೇವರು ನಮಗಿಂತ ಬೇರೆ ಇರುವನು ; ನಾವು ಕೂಡ ಅವನಿಗಿಂತ

ಬೇರೆ ಇರುವೆವು. ಇಬ್ಬರ ಮಧ್ಯೆ ಪ್ರೇಮ ಬರುವುದು. ಆಗ ಭಕ್ತ ದೇವರ ಕಡೆಗೆ ಸಮಿಾಪಿಸುವನು, ದೇವರೂ ಕೂಡ ಭಕ್ತನ ಕಡೆಗೆ ಸಮಿಾಪಿಸುವನು. ಭಕ್ತ ಮಾನವ ಸಹಜವಾದ ತಂದೆ, ತಾಯಿ, ಮಗು, ಸಖ, ಸ್ವಾಮಿ ಮೊದಲಾದ ಎಲ್ಲಾ ಭಾವಗಳಿಂದಲೂ ದೇವರನ್ನು ಪ್ರೀತಿಸುವನು. ಅವನಿಗೆ ದೇವರು ಇವುಗಳೆಲ್ಲದರಲ್ಲಿಯೂ ಇರುವನು. ಅವನು ತನ್ನ ಇಷ್ಟದೈವನಲ್ಲಿ ಐಕ್ಯನಾದಾಗ ಗುರಿಯನ್ನು ಮುಟ್ಟಿದಂತೆ.

೧೬. ನಾವೆಲ್ಲ ಸ್ವಾರ್ಥ ಪ್ರೀತಿಯಿಂದ ಮೊದಲು ಮಾಡುವೆವು. ಈ ಕ್ಷುದ್ರ ಜೀವಿಯ ಬೇಡಿಕೆ ಪ್ರೀತಿಯನ್ನು ಕೂಡ ಸ್ವಾರ್ಥತೆಗೆ ಇಳಿಸುವುದು. ಅಂತೂ ಕೊನೆಗೆ ಭಗವತ್ ಪ್ರೇಮದ ಸೂರ್ಯೋದಯವಾಗುವುದು. ಆಗ ಈ ಅಲ್ಪಾತ್ಮ ಪರಮಾತ್ಮನಲ್ಲಿ ಒಂದಾಗುವುದು. ಈ ಪ್ರೇಮಜ್ಯೋತಿಯ ಸಾನ್ನಿಧ್ಯದಲ್ಲಿ ಭಕ್ತನೂ ಬದಲಾಯಿಸಿ ಹೋಗುವನು. ಕೊನೆಗೆ ಪ್ರೀತಿ, ಪ್ರಿಯ, ಪ್ರಿಯತಮ ಎಲ್ಲವೂ ಒಂದೇ ಎಂಬ ಅಮೋಘವಾದ ಅದ್ಭುತ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವನು.

೧೭. ಭಕ್ತಿಮಾರ್ಗ ಸ್ವಾಭಾವಿಕವಾದುದು, ಹರ್ಷದಾಯಕವಾದುದು. ಜ್ಞಾನ ಒಂದು ನದಿಯನ್ನು ಪರ್ವತದಲ್ಲಿರುವ ಅದರ ಉಗಮಸ್ಥಾನಕ್ಕೆ ಒಯ್ದಂತೆ. ಇದೇನೊ ಹತ್ತಿರದ ಮಾರ್ಗ, ಆದರೆ ಬಹಳ ಕಠಿಣ. ಜ್ಞಾನ ಎಲ್ಲವನ್ನೂ ನಿಗ್ರಹಿಸು ಎನ್ನುವುದು. ಭಕ್ತಿ ಎಲ್ಲವನ್ನೂ ಭಗವಂತನಿಗೆ ಅರ್ಪಿಸು, ಅವನಲ್ಲಿ ಶರಣಾಗತನಾಗು ಎನ್ನುವುದು. ಇದೇನೊ ದೂರದ ಮಾರ್ಗ ಆದರೆ ಸುಲಭ, ಸುಖ.

೧೮. ಶಾಶ್ವತವಾದ ಭಕ್ತಿ ಬೇಕಾದರೆ ದ್ವೇಷಭಾವನೆಯನ್ನು ತ್ಯಜಿಸಿ. ದ್ವೇಷಭಾವನೆ ಭಕ್ತಿಗೆ ದೊಡ್ಡ ಆತಂಕ. ಯಾರನ್ನೂ ದ್ವೇಷಿಸದವನು ದೇವರನ್ನು ಸೇರುವನು.

೧೯. ಒಬ್ಬನಿಗೆ ಒಪ್ಪತ್ತು ಊಟಕ್ಕೆ ಸಿಕ್ಕದೆ ಇದ್ದರೆ ತಳಮಳಿಸುವನು. ಅವನ ಮಗ ಸತ್ತರೆ ಅವನೆಷ್ಟು ವ್ಯಥೆಪಡುವನು! ನಿಜವಾದ ಭಕ್ತ ಭಗವಂತನಿಗಾಗಿ ಹೀಗೆ ವ್ಯಥೆಪಡುವನು. ಭಕ್ತಿಯ ಒಂದು ದೊಡ್ಡ ಗುಣವೇ ಅದು ನಮ್ಮ ಚಿತ್ತವನ್ನು ಶುದ್ಧಿಮಾಡುವುದು. ಭಗವಂತನ ಮೇಲೆ ಅವಿಚ್ಛಿನ್ನವಾದ ಭಕ್ತಿಯೊಂದು ಇದ್ದರೆ ಸಾಕು ನಮ್ಮ ಚಿತ್ತವನ್ನು ಶುದ್ಧಿಮಾಡಲು.

೨೦. ತ್ಯಾಗಗಳಲ್ಲೆಲ್ಲಾ ಅತಿ ಸ್ವಾಭಾವಿಕವಾದುದೇ ಭಕ್ತಿಯೋಗಿಯ ತ್ಯಾಗ. ಇಲ್ಲಿ ಯಾವ ಬಲಾತ್ಕಾರವೂ ಇಲ್ಲ ; ಇಲ್ಲಿ ಏನನ್ನೂ ಬಿಡಬೇಕಾಗಿಲ್ಲ. ಯಾವುದನ್ನೂ ನಮ್ಮಿಂದ ಕಿತ್ತೊಗೆಯಬೇಕಾಗಿಲ್ಲ ; ಯಾವುದರಿಂದಲೂ ನಾವು ಬಲಾ

ತ್ಕಾರವಾಗಿ ಹೊರಗಿರಬೇಕಾಗಿಲ್ಲ. ಭಕ್ತನ ತ್ಯಾಗ ಸುಲಭವಾದುದು, ನಿಧಾನ ವಾಗಿ ಹರಿಯುವುದು, ನಮ್ಮ ಸುತ್ತಲಿರುವ ವಸ್ತುಗಳಷ್ಟೇ ಸಹಜವಾದುದು.

೨೧. ಪ್ರತಿಯೊಂದು ವಸ್ತುವೂ ನಾಶವಾಗುತ್ತಿರುವ ಕ್ಷಣಿಕ ಪ್ರಪಂಚದಲ್ಲಿ ನಮಗೆ ಲಭಿಸಿರುವ ಕಾಲವನ್ನು ಹೆಚ್ಚು ಲಾಭದಾಯಕವಾಗಿ ಉಪಯೋಗಿಸ ಬೇಕು ಎನ್ನುವನು ಭಕ್ತ. ಅತಿಶ್ರೇಷ್ಠ ಉಪಯೋಗವನ್ನು ಪಡೆಯುವುದೆಂದರೆ ನಮ್ಮ ಬಾಳನ್ನು ಎಲ್ಲರ ಹಿತಕ್ಕಾಗಿ ವಿನಿಯೋಗಿಸುವುದು.

೨೨. ಪ್ರಪಂಚದಲ್ಲಿ ಎಲ್ಲಾ ಸ್ವಾರ್ಥತೆಗೆ ಮೂಲ ನಾನು ದೇಹವೆಂಬ ಭಾವನೆ. ನಾನು ಈ ದೇಹ ಮಾತ್ರ ಎಂದು ಭಾವಿಸಿ, ಇದನ್ನು ರಕ್ಷಿಸಲು, ಇದನ್ನು ತೃಪ್ತಿಪಡಿಸಲು, ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತೇವೆ. ನಾವು ದೇಹವಲ್ಲ ಎಂದು ಚೆನ್ನಾಗಿ ತಿಳಿದರೆ ಆಗ ನಾವು ಯಾರೊಡನೆಯೂ ಹೋರಾಡಬೇಕಾಗಿಲ್ಲ. ಆದಕಾರಣವೇ ಪ್ರಪಂಚದಲ್ಲಿ ನಾವು ಸತ್ತಂತೆ ಇರಬೇಕು,ಎನ್ನುವನು ಭಕ್ತ. ಇದೇ ನಿಜವಾಗಿ ಶರಣಾಗತಿ. ಏನು ಬೇಕಾದರೂ ಬರಲಿ, ನಿನ್ನ ಇಚ್ಛೆ ಇದ್ದಂತೆ ಆಗಲಿ ಎನ್ನುವುದರ ಅರ್ಥವೇ ಇದು. ಸುಮ್ಮನೆ ದೇವರು ನಮ್ಮ ಪ್ರಾಪಂಚಿಕ ಆಸೆ ಆಕಾಂಕ್ಷೆಗಳನ್ನು ನೆರವೇರಿಸುವನು ಎಂಬುದಲ್ಲ.

೨೩. "ಹೇ ಭಗವಾನ್, ನಿನ್ನ ಹೆಸರಿನಲ್ಲಿ ಜನ ದೊಡ್ಡ ದೊಡ್ಡ ಗುಡಿ ಗೋಪುರಗಳನ್ನು ಕಟ್ಟುವರು. ನಿನ್ನ ಹೆಸರಿನಲ್ಲಿ ದಾನಧರ್ಮಗಳನ್ನು ಮಾಡು ವರು. ನಾನು ದೀನ, ನನ್ನಲ್ಲಿ ಏನೂ ಇಲ್ಲ. ಆದಕಾರಣ ನನ್ನ ಈ ದೇಹವನ್ನು ನಿನ್ನ ಪಾದಗಳಿಗೆ ಅರ್ಪಿಸುವೆ. ಅದನ್ನು ತಿರಸ್ಕರಿಸಬೇಡ" ಎಂದು ಪ್ರಾರ್ಥಿಸು ವನು ಭಕ್ತ. ಯಾರು ತನ್ನ ಪ್ರಿಯ ಭಗವಂತನಿಗಾಗಿ ಆತ್ಮನ ಈ ನಿತ್ಯ ಯಜ್ಞ ವನ್ನು ಮಾಡುವನೊ ಅವನಿಗೆ ಇದು ಎಲ್ಲ ಐಶ್ವರ್ಯ, ಅಧಿಕಾರ, ಕೀರ್ತಿ, ಭೋಗ ಗಳಿಗಿಂತ ಮೇಲು ಎಂಬುದು ಗೊತ್ತು.

೨೪. ಶರಣಾಗತಿಯಿಂದ ಭಕ್ತನಿಗೆ ಬರುವ ಶಾಂತಿ ವಾಕ್ ಮನಾತೀತ ; ಇದನ್ನು ಬಣ್ಣಿಸುವುದಕ್ಕೆ ಸಾಧ್ಯವಿಲ್ಲ.

೨೫. ಭಕ್ತ ಈ ಸ್ಥಿತಿಗೆ ಬಂದರೆ, ದೇವರನ್ನು ಕಾಣಲು ಸಾಧ್ಯವೆ ಇಲ್ಲವೆ ? ಅವನು ಸರ್ವಶಕ್ತನೆ ಸರ್ವಜ್ಞನೆ ? ಎಂಬ ಪ್ರಶ್ನೆಗಳನ್ನೇ ಕೇಳಲಿಚ್ಛಿಸುವುದಿಲ್ಲ. ಭಕ್ತನಿಗೆ ಭಗವಂತ ಪ್ರೇಮಮಯ. ಅವನೇ ಪ್ರೇಮದ ಪರಮಾದರ್ಶ. ಭಕ್ತನಿಗೆ ಇಷ್ಟೇ ಸಾಕು. ಭಗವಂತ ಪ್ರೇಮಮಯನಾಗಿರುವುದರಿಂದ ಸ್ವಯಂ ವೇದ್ಯ. ಇವ ನನ್ನು ತೋರಲು ಬೇರೆ ಯಾವ ಕಾರಣಗಳೂ ಬೇಕಾಗಿಲ್ಲ. ಅನ್ಯಧರ್ಮದಲ್ಲಿ ಬರುವ ನ್ಯಾಯಾಧಿಪತಿಯಂತಹ ದೇವರನ್ನು ಸಮರ್ಥಿಸಲು ಸಾಕಷ್ಟು ಕಾರಣ

ಗಳು ಬೇಕು. ಆದರೆ ಭಕ್ತನಾದರೊ ಇಂತಹ ದೇವರನ್ನು ಚಿಂತಿಸುವುದೇ ಇಲ್ಲ ; ಇದು ಅವನಿಗೆ ಸಾಧ್ಯವೇ ಇಲ್ಲ. ಭಕ್ತನಿಗೆ ಭಗವಂತ ಪ್ರೇಮಸ್ವರೂಪದಂತೆ ಇರುವನು.

೨೬. ಸಿದ್ಧನಾದ ಭಕ್ತ ದೇವರನ್ನು ನೋಡಲು ದೇವಸ್ಥಾನ ಚರ್ಚು ಮುಂತಾದುವುಗಳಿಗೆ ಹೋಗುವುದೇ ಇಲ್ಲ. ಅವನಿಲ್ಲದೆ ಇರುವ ಸ್ಥಳವೇ ಅವನಿಗೆ ಗೊತ್ತಿಲ್ಲ. ಅವನಿಗೆ ದೇವರು ದೇವಸ್ಥಾನದ ಒಳಗೂ ಕಾಣುವನು, ಹೊರಗೂ ಕಾಣುವನು. ಅವನಿಗೆ ಸಾಧುವಿನ ಸಾತ್ತ್ವಿಕತೆಯಲ್ಲಿಯೂ, ದುರಾತ್ಮನ ದುಷ್ಟತನದಲ್ಲಿಯೂ ದೇವರು ಕಾಣುವನು. ಏಕೆಂದರೆ ಅವನಾಗಲೇ ಇವನ ಹೃತ್‌ಮಂದಿರದಲ್ಲಿ ಎಂದೆಂದಿಗೂ ನಂದಿಹೋಗದ ಪ್ರೇಮದ ನಂದಾದೀವಿಗೆಯಂತೆ ಬೆಳಗುತ್ತಿರುವನು.

೨೭. ಭಕ್ತ ಕೊನೆಗೆ ಈ ನಿರ್ಧಾರಕ್ಕೆ ಬರುವನು : ಪ್ರೇಮವೇ ದೇವರು ಮತ್ತಾವುದೂ ಅಲ್ಲ. ದೇವರನ್ನು ಸಮರ್ಥಿಸುವುದಕ್ಕೆ ಎಲ್ಲಿಗೆ ಹೋಗಬೇಕು ? ಪ್ರೇಮವೇ ಎಲ್ಲಕ್ಕಿಂತ ಸ್ಪಷ್ಟವಾಗಿ ಕಾಣುವುದು. ಈ ಶಕ್ತಿಯೇ ಸೂರ್ಯ ಚಂದ್ರ ತಾರಾವಳಿಗಳನ್ನು ಚಲಿಸುವಂತೆ ಮಾಡುತ್ತಿರುವುದು. ಇದೇ ಸ್ತ್ರೀ ಪುರುಷರು, ಪಶುಪಕ್ಷಿಗಳು ಮತ್ತು ಸೃಷ್ಟಿಯ ಪ್ರತಿಯೊಂದರ ಅಂತರಾಳದಲ್ಲಿಯೂ ಇರುವುದು. ಇದೇ ಭೌತ ಪ್ರಪಂಚದಲ್ಲಿ ಆಕರ್ಷಣೆ ಮುಂತಾದುವಂತೆ ವ್ಯಕ್ತವಾಗುತ್ತಿದೆ. ಇದು ಎಲ್ಲಾ ಕಡೆಯೂ ಪ್ರತಿಯೊಂದು ಕಣದ ಅಂತರಾಳದಲ್ಲಿಯೂ ಇರುವುದು. ಸುತ್ತಲೂ ವ್ಯಕ್ತವಾಗಿರುವ ಪ್ರಪಂಚದ ಹಿಂದೆ ಇರುವ ಏಕಮಾತ್ರ ಕ್ರಿಯೋತ್ತೇಜಕ ಶಕ್ತಿಯೇ ಅನಂತ ಪ್ರೇಮ. ಇದೇ ಸ್ವಯಂ ಭಗವಂತ.

೨೮. "ನಾನು ಅವನೇ (ದೇವರು) ಎಂಬುದು ಗೊತ್ತಿರಬಹುದು. ಆದರೂ ನಾನು ಅವನನ್ನು ಪ್ರೀತಿಸುವುದಕ್ಕಾಗಿ ಬೇರೆಯಾಗುವೆನು" ಎನ್ನುವನು ಭಕ್ತ.

೨೯. ಸಾಧಾರಣ ಜನ ಯಾರನ್ನು ಹುಚ್ಚನೆಂದು ಕರೆಯುತ್ತಿದ್ದರೊ ಅವರ ಪರಿಚಯ ನನಗಿತ್ತು. ಅವರು ಅದಕ್ಕೆ ಹೀಗೆ ಹೇಳುತ್ತಿದ್ದರು: "ಸ್ನೇಹಿತರೆ, ಈ ಪ್ರಪಂಚವೇ ದೊಡ್ಡ ಹುಚ್ಚರ ಆಸ್ಪತ್ರೆ. ಕೆಲವರಿಗೆ ಹೆಣ್ಣಿನ ಹುಚ್ಚು, ಕೆಲವರಿಗೆ ಕೀರ್ತಿಯ ಹುಚ್ಚು, ಕೆಲವರಿಗೆ ದ್ರವ್ಯದ ಹುಚ್ಚು, ಕೆಲವರಿಗೆ ಮುಕ್ತಿ ಪಡೆಯಬೇಕು, ಸ್ವರ್ಗಕ್ಕೆ ಹೋಗಬೇಕು ಎನ್ನುವುದರ ಮೇಲೆ ಹುಚ್ಚು. ಈ ದೊಡ್ಡ ಹುಚ್ಚರ ಆಸ್ಪತ್ರೆಯಲ್ಲಿ ನಾನೂ ಕೂಡ ದೇವರಿಗಾಗಿ ಹುಚ್ಚ. ನಿಮ್ಮಂತೆಯೆ ನಾನೂ ಹುಚ್ಚ. ಆದರೆ ನನ್ನ ಹುಚ್ಚು ಇತರರ ಹುಚ್ಚಿಗಿಂತ ಮೇಲೆಂದು ಭಾವಿಸುತ್ತೇನೆ." ನಿಜವಾದ ಭಕ್ತನ ಪ್ರೀತಿ ಇಂತಹ ಅಸಾಧ್ಯ ಹುಚ್ಚಿನಂತೆ. ಇದರ

ನಿಂದ ಎಲ್ಲವೂ ಮಾಯವಾಗುವುದು. ಪ್ರಪಂಚವೆಲ್ಲ ಪ್ರೀತಿಯಿಂದ ತುಂಬಿ ತುಳುಕಾಡುತ್ತಿರುವಂತೆ ಕಾಣುತ್ತದೆ ಭಕ್ತನಿಗೆ. ಎಂದು ಒಬ್ಬ ಇಂತಹ ಪ್ರೇಮ ವನ್ನು ಪಡೆಯುವನೊ ಅವನು ನಿತ್ಯಧನ್ಯನಾಗುವನು, ನಿತ್ಯಸುಖಿಯಾಗುವನು. ಈ ಪರಮಪ್ರೇಮವೆಂಬ ಧನ್ಯ ಉನ್ಮಾದವೆ ನಮ್ಮ ಭವರೋಗವನ್ನು ನಾಶ ಮಾಡುವುದು.

೩೦. ಜನ ಯಾವಾಗಲೂ ಕಾಮಿನಿಕಾಂಚನ ಕೀರ್ತಿಗಾಗಿ ಧಾವಿಸುತ್ತಿರು ವರು. ಕೆಲವು ವೇಳೆ ಅವರಿಗೆ ಬಲವಾಗಿ ತಲೆಗೆ ಪೆಟ್ಟು ಬೀಳುವುದು. ಆಗ ಈ ಪ್ರಪಂಚ ಏನು ಎಂಬುದು ಸ್ವಲ್ಪ ಅರಿವಾಗುವುದು. ಈ ಪ್ರಪಂಚದಲ್ಲಿ ಯಾರೂ ದೇವರು ವಿನಃ ಬೇರೆ ಯಾವುದನ್ನೂ ಪ್ರೀತಿಸಲಾರರು. ಮಾನವ ಪ್ರೀತಿಯೆಲ್ಲ ಬರೀ ಪೊಳ್ಳು ಎಂಬುದನ್ನು ಬೇಗ ಅರಿಯುವನು. ಜನರು ಪ್ರೀತಿಯ ವಿಷಯ ವಾಗಿ ಬೇಕಾದಷ್ಟು ಮಾತನಾಡಿದರೂ ಪ್ರೀತಿಸಲಾರರು. ಹೆಂಡತಿ ತನ್ನ ಗಂಡ ನನ್ನು ಪ್ರೀತಿಸುತ್ತೇನೆ ಎಂದು ಹೇಳಿ ಮುತ್ತಿಡುವಳು. ಆದರೆ ಅವನು ಕಾಲವಾ ದೊಡನೆಯೆ ಅವಳ ಮನಸ್ಸಿನಲ್ಲಿ ಏಳುವ ಮೊದಲನೆ ಆಲೋಚನೆಯೆ, ಅವನು ಎಷ್ಟು ದುಡ್ಡು ಬ್ಯಾಂಕಿನಲ್ಲಿ ಇಟ್ಟಿರುವನು, ನಾಳೆ ಖರ್ಚಿಗೆ ಏನು ಗತಿ ಎಂಬುದು. ಗಂಡ ಹೆಂಡತಿಯನ್ನು ಪ್ರೀತಿಸುವನು. ಆದರೆ ಅವಳಿಗೆ ಖಾಯಿಲೆಯಾದರೆ, ಸೌಂದರ್ಯವನ್ನು ಕಳೆದುಕೊಂಡರೆ, ಕುರೂಪಿಯಾದರೆ ಅಥವಾ ಏನಾದರೂ ತಪ್ಪು ಮಾಡಿದರೆ ಅವಳನ್ನು ಗಣನೆಗೇ ತರುವುದಿಲ್ಲ. ಈ ಪ್ರಪಂಚದ ಪ್ರೀತಿ ಯೆಲ್ಲ ಒಂದು ನಟನೆ, ಹುರುಳಿಲ್ಲ ಅದರಲ್ಲಿ.

೩೧. ಪ್ರೀತಿಯಿಂದ ಯಾವ ವ್ಯಥೆಯೂ ಆಗುವುದಿಲ್ಲ. ಪ್ರೀತಿ ಯಾವಾ ಗಲೂ ಆನಂದದ ಪರಿಣಾಮವನ್ನೇ ತರುವುದು. ಇಲ್ಲದೇ ಇದ್ದರೆ ಅದು ಪ್ರೀತಿಯೇ ಅಲ್ಲ. ಮತ್ತಾವುದನ್ನೊ ಪ್ರೀತಿ ಎಂದು ಭ್ರಾಂತಿಪಟ್ಟಂತೆ. ಯಾವ ವ್ಯಥೆಯೂ ಇಲ್ಲದೆ ಯಾವ ಅಸೂಯೆಯೂ ಇಲ್ಲದೆ ಸ್ವಾರ್ಥತೆಯೂ ಇಲ್ಲದೆ ನಿನ್ನ ಗಂಡ, ಹೆಂಡತಿ, ಮಕ್ಕಳು ಮತ್ತು ಇಡೀ ಪ್ರಪಂಚವನ್ನೇ ಪ್ರೀತಿಸಬಲ್ಲೆ ಯಾದರೆ ಆಗ ಮಾತ್ರ ನೀನು ನಿಸ್ಸಂಗಿಯಾಗಿರಲು ಸಾಧ್ಯ.

೩೨. ಪ್ರಶ್ನೆ : ಹಾಗಾದರೆ ಗೃಹಸ್ಥರಿಗೆ ದೇವರನ್ನು ತಮ್ಮ ಪತಿ ಅಥವಾ ಪ್ರೇಯಕ ಎಂದು ಭಕ್ತಿಮಾರ್ಗದ ಮೂಲಕ ಅವನನ್ನು ಸಾಕ್ಷಾತ್ಕರಿಸಿಕೊಳ್ಳು ವುದು ಸಾಧ್ಯವಿಲ್ಲವೆ ?

ಉತ್ತರ : ಕೆಲವು ವಿನಾಯಿತಿ ವಿನಃ ಸಾಧಾರಣ ಗೃಹಸ್ಥರಿಗೆ ಇದು ನಿಸ್ಸಂದೇಹವಾಗಿ ಅಸಾಧ್ಯವೇನೋ ಹೌದು. ಎಲ್ಲಕ್ಕಿಂತ ಹೆಚ್ಚಾಗಿ ಈ ಮಧುರ

ಭಾವಕ್ಕೆ ಏತಕ್ಕೆ ಅಷ್ಟೊಂದು ಪ್ರಾಮುಖ್ಯತೆ ಕೊಡುವುದು ? ಈ ಮಧುರ ಭಾವವಿಲ್ಲದೆ ದೇವರನ್ನು ಪ್ರೀತಿಸಲು ಬೇರೆ ಭಾವಗಳಿಲ್ಲವೆ ? ಉಳಿದ ನಾಲ್ಕು ಭಾವಗಳ ಮೂಲಕ ಏತಕ್ಕೆ ಭಗವಂತನನ್ನು ಹೃತ್ಪೂರ್ವಕ ಪ್ರೀತಿಸಬಾರದು. ಮುಂಚೆ ನಿಮ್ಮ ಹೃದಯದ ಬಾಗಿಲು ತೆಗೆಯಲಿ, ಅನಂತರ ಉಳಿದೆಲ್ಲವೂ ತಾವೇ ಅನುಸರಿಸುವುವು. ಆದರೆ ಇದನ್ನು ಜ್ಞಾಪಕದಲ್ಲಿಡಿ, ಕಾಮ ಇರುವವರೆಗೆ ಪ್ರೇಮ ಎಂದಿಗೂ ಬರುವುದಿಲ್ಲ. ಮೊದಲು ಕಾಮದಿಂದ ಪಾರಾಗಲು ಏತಕ್ಕೆ ಯತ್ನಿಸ ಬಾರದು. "ನಾವು ಗೃಹಸ್ಥರು, ನಮಗೆ ಇದು ಹೇಗೆ ಸಾಧ್ಯ" ಎನ್ನಬಹುದು ನೀವು. ಆದರೆ ಇದು ಅಯೋಗ್ಯವಾದ ಮಾತು. ಒಬ್ಬ ಗೃಹಸ್ಥನಾದ ಮಾತ್ರಕ್ಕೆ ಜಿತೇಂದ್ರಿಯನಾಗಿರಕೂಡದೆ ? ಬದುಕಿರುವ ತನಕ ಹೆಂಡತಿಯೊಂದಿಗೆ ದೈಹಿಕ ಸಂಬಂಧವನ್ನು ಇಟ್ಟುಕೊಂಡಿರಬೇಕೆ ? ಅದೂ ಅಲ್ಲದೆ ಈ ಮಧುರಭಾವವನ್ನು ಅಭ್ಯಾಸಮಾಡುವುದಕ್ಕಾಗಿ ಒಬ್ಬ ಪುರುಷನು ತಾನು ಸ್ತ್ರೀ ಎಂದು ಭಾವಿಸುವುದು ಎಷ್ಟು ಅಯೋಗ್ಯವಾದುದು !

೩೩. ನನಗೆ ನಿಜವಾಗಿ ದೇವರು ಬೇಕು ಎಂದು ಅವನನ್ನು ಒಪ್ಪಿಕೊಳ್ಳು ವುದೇನಲ್ಲ; ಅವನಿಂದ ನಮ್ಮ ಸ್ವಾರ್ಥ ಸಾಧಿಸಬೇಕಾಗಿದೆ, ಅದಕ್ಕಾಗಿ ಅವನನ್ನು ಒಪ್ಪಿಕೊಳ್ಳುವೆವು. ಪ್ರೀತಿಯಲ್ಲಿ ಸ್ವಲ್ಪವೂ ಸ್ವಾರ್ಥವಿಲ್ಲ. ನಾವು ಯಾರನ್ನು ಪ್ರೀತಿಸುತ್ತೇವೆಯೊ ಅವನನ್ನು ಗೌರವಿಸುವುದು, ಪೂಜಿಸುವುದಲ್ಲದೆ ಬೇರೆ ಯೋಚನೆಯೇ ಅಲ್ಲಿರುವುದಿಲ್ಲ. ಇದು ಬಾಗಿ ಪೂಜಿಸುವುದಲ್ಲದೆ ಮತ್ತೇನನ್ನೂ ಪ್ರತಿಯಾಗಿ ಕೇಳುವುದಿಲ್ಲ. ಪ್ರೀತಿಸಬೇಕು ಎಂದು ಮಾತ್ರ ನಿಜವಾದ ಪ್ರೀತಿ ಕೇಳುವುದು.

೩೪. ತಾನು ಯಾರನ್ನು ಪ್ರೀತಿಸುವನೊ ಅದು ಕ್ಷುದ್ರವಾದ ಅಲ್ಪ ಮಾನವನಲ್ಲ ಎಂದು ಯಾವಾಗ ಅರಿಯುವನೊ ಆಗ ಮಾತ್ರ ಒಬ್ಬ ನಿಜವಾಗಿ ಪ್ರೀತಿಸಬಲ್ಲ. ತಾನು ಪ್ರೀತಿಸುವ ವಸ್ತು ಕೇವಲ ಪಂಚ ಭೌತಿಕ ದೇಹವಲ್ಲ, ಅದು ಪ್ರತ್ಯಕ್ಷ ಭಗವಂತ ಎಂದು ಯಾವಾಗ ಅರಿಯುವನೊ ಆಗ ಮಾತ್ರ ಒಬ್ಬ ನಿಜ ವಾಗಿ ಪ್ರೀತಿಸಬಲ್ಲ. ಗಂಡ ದೇವರು ಎಂದು ಭಾವಿಸಿದಾಗ ಸತಿ ಅವನನ್ನು ಹೆಚ್ಚು ಪ್ರೀತಿಸಬಲ್ಲಳು. ಹಾಗೆಯೇ ಗಂಡ ಸತಿಯೇ ದೇವರು ಎಂದು ಭಾವಿಸಿದಾಗ ಅವ ಳನ್ನು ಹೆಚ್ಚು ಪ್ರೀತಿಸಬಲ್ಲನು. ಮಕ್ಕಳನ್ನು ದೇವರು ಎಂದು ಭಾವಿಸಿದಾಗ ತಾಯಿ ತನ್ನ ಮಕ್ಕಳನ್ನು ಹೆಚ್ಚು ಪ್ರೀತಿಸಬಲ್ಲಳು. ಪರಮ ವೈರಿಯಲ್ಲಿಯೂ ದೇವರಿರುವನು ಎಂದು ಅರಿತಾಗ ಅವನನ್ನೂ ಪ್ರೀತಿಸಬಲ್ಲನು. ಸಾಧುವಿನಲ್ಲಿ ದೇವರಿರುವನು ಎಂದು ಭಾವಿಸಿದಾಗ ಅವನನ್ನು ಪ್ರೀತಿಸುವನು. ಅಸಾಧುವಿನಲ್ಲಿ ಕೂಡ ದೇವರಿರುವನು ಎಂದು ಭಾವಿಸಿದಾಗ ಅವನನ್ನೂ ಪ್ರೀತಿಸುವನು.

೩. ಬ್ರಹ್ಮ

೧. ನಾವು ಬರಬಹುದಾದ ಕೊನೆಯ ಸಾಮಾನ್ಯೀಕರಣವೇ (Generalisation) ಬ್ರಹ್ಮ. ಅದಕ್ಕೆ ಬೇರೆ ಗುಣವೇ ಇಲ್ಲ. ಅದು ಸಚ್ಚಿದಾನಂದ. ಸತ್ ಅಥವಾ ಅಸ್ತಿತ್ವವೇ ಮಾನವ ಬರಬಹುದಾದ ಕೊನೆಯ ಸಾಮಾನ್ಯೀಕರಣ. ಚಿತ್ ಅಥವಾ ಜ್ಞಾನವೆಂದರೆ ಈಗ ನಮ್ಮಲ್ಲಿರುವ ಜ್ಞಾನವಲ್ಲ. ಆದರೆ ಅದರ ಸಾರ. ಪ್ರಾಣಿವರ್ಗದಲ್ಲಿ ಮತ್ತು ಮಾನವಕೋಟಿಯಲ್ಲಿ ಕ್ರಮೇಣ ಅದು ವಿಕಾಸವಾಗುತ್ತಿರುವುದು. ಇಲ್ಲಿ ಜ್ಞಾನದ ಸಾರವೆಂದರೆ ಪ್ರಜ್ಞೆಗೂ ಯಾವುದು ಅತೀತವಾಗಿದೆಯೊ ಅದು. ಎಲ್ಲಾ ವಸ್ತುಗಳ ಪರಮ ಐಕ್ಯತೆ ಎಂದು ನಾವು ಯಾವುದನ್ನು ಕರೆಯುವೆವೊ ಅದೇ ಚಿತ್.

೨. ವೇದಾಂತದ ದೇವರೆ ಬ್ರಹ್ಮ. ಅವನಿಂದ ಹೊರಗೆ ಯಾವುದೂ ಇಲ್ಲ. ಎಲ್ಲವೂ ಅವನೇ. ಅವನು ಪ್ರಪಂಚದಲ್ಲಿರುವನು, ಅವನೇ ಪ್ರಪಂಚ. "ನೀನೇ ಸ್ತ್ರೀ, ನೀನೇ ಪುರುಷ, ನೀನೇ ಯೌವನದ ಮದದಲ್ಲಿ ಸಂಚರಿಸುತ್ತಿರುವ ಯುವಕ ಮತ್ತು ಇಳಿವಯಸ್ಸಿನಲ್ಲಿ ನಡನಡಗುತ್ತ ನಡೆಯುತ್ತಿರುವ ವೃದ್ಧ !"

೩. ಬ್ರಹ್ಮ ಸಚ್ಚಿದಾನಂದ. ಸತ್ ಎಂದರೆ ಅಸ್ತಿತ್ವ, ಚಿತ್ ಎಂದರೆ ಜ್ಞಾನ ಅಥವಾ ಅರಿವು; ಆನಂದ ಎಂದರೆ ಪ್ರೇಮ. ಬ್ರಹ್ಮನ ಸತ್ ದೃಷ್ಟಿಯಿಂದ ಜ್ಞಾನಿಗೂ ಭಕ್ತನಿಗೂ ಯಾವ ಭಿನ್ನತೆಯೂ ಇಲ್ಲ. ಆದರೆ ಚಿತ್ ಭಾವವನ್ನು ಜ್ಞಾನಿ ಹೆಚ್ಚು ಲಕ್ಷಿಸುವನು, ಭಕ್ತ ಆನಂದದ ಭಾವವನ್ನು ಲಕ್ಷಿಸುವನು. ಚಿತ್ ಅನ್ನು ಸಾಕ್ಷಾತ್ಕರಿಸಿಕೊಂಡ ಕೂಡಲೆ ಆನಂದವನ್ನು ಸಾಕ್ಷಾತ್ಕರಿಸಿಕೊಂಡಂತೆ. ಏಕೆಂದರೆ ಯಾವುದು ಚಿತ್ ಆಗಿದೆಯೋ ಅದೇ ಆನಂದ.

೪. ಕೆಲವು ವೇಳೆ ಒಂದು ವಸ್ತುವಿನ ಮೇರೆಯ ಮೂಲಕ ಮತ್ತೊಂದು ವಸ್ತುವನ್ನು ವಿವರಿಸುವೆವು. ನಾವು ಸಚ್ಚಿದಾನಂದ ಎಂದು ಹೇಳಿದಾಗ ವಿವರಣೆಗೆ ಅತೀತವಾದ ಒಂದು ವಸ್ತುವಿನ ತೀರವನ್ನು ಹೇಳುತ್ತಿರುವೆವು. ನಾವು ಅದನ್ನು (ಬ್ರಹ್ಮವನ್ನು) ಇದೆ ಎಂತಲೂ ಹೇಳಲಾಗುವುದಿಲ್ಲ. ಏಕೆಂದರೆ ಅದೂ ಕೂಡ ಸಾಪೇಕ್ಷವಾದುದು. ಯಾವ ಕಲ್ಪನೆಯಾಗಲಿ, ಚಿಂತನೆಯಾಗಲಿ ಅದನ್ನು ವಿವರಿಸಲಾರದು. ಕೇವಲ "ನೇತಿ, ನೇತಿ" ಎಂದು ಮಾತ್ರ ಹೇಳಬಹುದು. ಅದನ್ನು

ಕುರಿತು ಚಿಂತಿಸಿದರೂ ಅದನ್ನು ಮಿತಿಗೆ ತಂದಂತೆ ಆಗುವುದು. ಆಗ ಅದು ನಮಗೆ ಸಿಕ್ಕದೇ ಹೋಗುವುದು.

೫. ಬ್ರಹ್ಮ ಒಂದು. ಆದರೂ ವ್ಯಾವಹಾರಿಕ ದೃಷ್ಟಿಯಿಂದ ನೋಡಿದಾಗ ಹಲವದರಂತೆ ಕಾಣುತ್ತಿರುವದು. ನಾಮ ರೂಪಗಳೇ ಈ ಸಾಪೇಕ್ಷಕ್ಕೆ ಮೂಲ. ಒಂದು ಮಡಕೆಯ ನಾಮ ರೂಪಗಳನ್ನು ಕಳೆದರೆ ನಿಮಗೆ ಸಿಕ್ಕುವುದೇನು ? ಅದರ ಸಾರವಾದ ಮಣ್ಣು ಮಾತ್ರ. ಅದರಂತೆಯೇ ಭ್ರಾಂತಿಯಿಂದ ನೀವು ಮಡಿಕೆ ಕುಡಿಕೆ, ಮನೆ ಮಠ ಮುಂತಾದುವನ್ನು ನೋಡುತ್ತಿರುವಿರಿ. ಈ ವ್ಯಾವ ಹಾರಿಕ ಜಗತ್ತು ಅಜ್ಞಾನದ ಮೇಲೆ ನಿಂತಿದೆ. ಅದು ನಿಜವಾಗಿ ಇಲ್ಲ. ನಾಮ ರೂಪದ ಅಜ್ಞಾನದಿಂದ ಕಲ್ಪಿತವಾದ ಪ್ರಪಂಚದಲ್ಲಿ ಮಾತ್ರ ಹೆಂಡತಿ, ಮನೆ, ಮಕ್ಕಳು ಇವನ್ನು ನೋಡುವುದು. ಈ ಅಜ್ಞಾನ ಮಾಯವಾದೊಡನೆಯೆ ಸದಾ ಕಾಲದಲ್ಲಿಯೂ ಇರುವ ಬ್ರಹ್ಮ ಸಾಕ್ಷಾತ್ಕಾರವಾಗುವುದು.

೬. ನೀನೂ ಕೂಡ ಆ ಅವಿಭಕ್ತನಾದ ಬ್ರಹ್ಮ. ನೀನು ನಿಜವಾಗಿಯೂ ಅದು ಎಂದು ಭಾವಿಸಿದರೆ ಈ ಕ್ಷಣವೇ ನೀನು ಅದನ್ನು ಸಾಕ್ಷಾತ್ಕಾರ ಮಾಡಿ ಕೊಳ್ಳಬಲ್ಲೆ. ನಮಗೆ ಅದು ಸಾಧ್ಯವಾಗದೇ ಇರುವುದರಿಂದ ಅಜ್ಞಾನದಲ್ಲಿರು ವುದು. ಈ ಭ್ರಾಂತಿಯ ದಂಡಕಾರಣ್ಯದಲ್ಲಿ ಪುನಃ ಪುನಃ ಸಿಕ್ಕಿ ದುಃಖ ದುರಂತ ಗಳಿಂದ ಚೆನ್ನಾಗಿ ಪೆಟ್ಟು ಬಿದ್ದಾದ ಮೇಲೆ ಆತ್ಮ ಸ್ವಾಭಾವಿಕವಾಗಿ ಸ್ವಸ್ವರೂಪ ವನ್ನು ಅರಿಯಲು ಅಂತರ್ಮುಖವಾಗುವುದು. ಈ ಸಚ್ಚಿದಾನಂದವನ್ನು ಪಡೆಯ ಬೇಕೆಂಬ ಆಸೆ ನಮ್ಮಲ್ಲಿರುವುದರಿಂದಲೇ ಪ್ರಪಂಚದ ಪೆಟ್ಟನ್ನು ಪುನಃ ಪುನಃ ತಿಂದಾದಮೇಲೆ ತನ್ನಾತ್ಮನ ಕಡೆ ಅಂತರ್ಮುಖಿಯಾಗುವುದು. ವಿನಾಯಿತಿ ಇಲ್ಲದೆ ಎಲ್ಲರಿಗೂ ಇಂತಹ ಕಾಲ ಪ್ರಾಪ್ತವಾಗುವುದರಲ್ಲಿ ಸಂದೇಹವಿಲ್ಲ. ಕೆಲವರಿಗೆ ಈ ಜನ್ಮದಲ್ಲಿಯೆ ಅದು ಪ್ರಾಪ್ತವಾಗಬಹುದು, ಮತ್ತೆ ಕೆಲವರಿಗೆ ಸಾವಿರಾರು ಜನ್ಮಗಳಾದ ಮೇಲೆ ಪ್ರಾಪ್ತವಾಗಬಹುದು.

೭. ಈ ವಿಶ್ವವೆಲ್ಲ ಬ್ರಹ್ಮನಲ್ಲಿಯೇ ಇತ್ತು. ಅವನಿಂದ ಈಗ ಇದು ಹೊರ ಬಂದಂತಿದೆ. ಪುನಃ ಅಲ್ಲಿಗೆ ಹೋಗಲು ಪ್ರಯತ್ನಿಸುತ್ತಿದೆ. ಡೈನಮೊ ಇಂದ ಬಂದ ವಿದ್ಯುತ್ ಶಕ್ತಿ ಹೊರಗೆ ಸಂಚರಿಸಿ ಪುನಃ ಬಂದೆಡೆಗೇ ಹೋಗುವಂತೆ ಇದೆ ಇದು. ಬ್ರಹ್ಮನಿಂದ ಪ್ರಕ್ಷೇಪವಾಗಿ, ಸಸ್ಯ ಪ್ರಾಣಿಗಳ ಮೂಲಕ ಸಾಗಿ ಕೊನೆಗೆ ಮನುಷ್ಯನ ಸ್ಥಿತಿಗೆ ಬಂದಿದೆ. ಮಾನವನೇ ಬ್ರಹ್ಮನಿಗೆ ಅತ್ಯಂತ ಸಮೀಪದಲ್ಲಿರುವನು. ನಾವು ಬಂದ ಬ್ರಹ್ಮನ ಬಳಿಗೆ ಹಿಂತಿರುಗಿ ಹೋಗುವುದಕ್ಕೇ ಈ ಜೀವನದ ಮಹಾ ಹೋರಾಟ.

೮. ಯಾರು ಸ್ಪರ್ಶಾತೀತನೊ, ಆಕಾರಕ್ಕೆ ಅತೀತನೊ, ರುಚಿಗೆ ಅತೀತನೋ, ಯಾರು ಅವಿಕಾರಿಯೊ ಅನಂತನೋ, ಪ್ರಜ್ಞೆಗೂ ಯಾರು ಅತೀತನೊ ಅವಿನಾಶಿಯೊ ಅವನನ್ನು ಅರಿತ ಮೇಲೆ ಮಾತ್ರ ನಾವು ಮೃತ್ಯುಪಾಶದಿಂದ ಪಾರಾಗುವೆವು.

೪ ಬುದ್ಧ

೧. ಶಾಕ್ಯಮುನಿ ಧ್ವಂಸಕಾರ್ಯಕ್ಕೆ ಬರಲಿಲ್ಲ, ನಿರ್ಮಾಣ ಕಾರ್ಯಕ್ಕೆ ಬಂದನು. ಅವನು ಹಿಂದೂಧರ್ಮದ ಪೂರ್ತಿಕೆ, ಹಿಂದೂಗಳ ನಿಯಮಬದ್ಧವಾದ ತರ್ಕದ ಚರಮಗತಿಯಂತೆ ಇರುವನು.

೨. ಗೌತಮ ಬುದ್ಧ ಈಶ್ವರನನ್ನಾಗಲಿ ಜೀವಾತ್ಮನನ್ನಾಗಲಿ ನಂಬಲಿಲ್ಲ. ಅದರ ವಿಷಯವಾಗಿ ಹೇಳಲೂ ಇಲ್ಲ. ಅವುಗಳ ವಿಷಯದಲ್ಲಿ ಮೌನವಾಗಿದ್ದನು. ಆದರೂ ಅವನು ತನ್ನ ಜೀವನವನ್ನು ಯಾರಿಗೆ ಬೇಕಾದರೂ ಬಲಿಕೊಡಲು ಸಿದ್ಧನಾಗಿದ್ದನು. ಬದುಕಿರುವತನಕ ಬಹುಜನರ ಹಿತಕ್ಕೆ ಬಹುಜನರ ಸುಖಕ್ಕೆ ಶ್ರಮಿಸಿದನು. ಇಂತಹ ನೀತಿ ಪುರುಷರನ್ನು ನೋಡಲಿಚ್ಛಿಸುವೆನು. ಅವನ ಜೀವನವನ್ನು ಬರೆದವರು ಬಹುಜನರ ಹಿತಕ್ಕೆ ಬಹು ಜನರ ಸುಖಕ್ಕೆ ಬುದ್ಧ ಜನ್ಮವೆತ್ತಿದ ಎಂದು ಚೆನ್ನಾಗಿಯೇ ಹೇಳಿರುವರು. ತನ್ನ ಮುಕ್ತಿಗಾಗಿ ತಪಸ್ಸು ಮಾಡಲು ಅವನು ಕಾಡಿಗೆ ಹೋಗಲಿಲ್ಲ. ಪ್ರಪಂಚ ದುಃಖದಲ್ಲಿ ದಗ್ಧವಾಗುತ್ತಿದೆ, ಅದಕ್ಕೊಂದು ದಾರಿಯನ್ನು ಕಂಡುಹಿಡಿಯಬೇಕೆಂದು ಯೋಚಿಸಿದನು. ಈ ಪ್ರಪಂಚದಲ್ಲಿ ಏತಕ್ಕೆ ಇಷ್ಟೊಂದು ದುಃಖವಿದೆ ಎಂಬುದೊಂದೇ ಪ್ರಶ್ನೆ ಅವನ ಜೀವನವನ್ನೆಲ್ಲಾ ವ್ಯಾಪಿಸಿತು.

೩. ಬುದ್ಧ ದೊಡ್ಡ ವೇದಾಂತಿ. ಬೌದ್ಧಧರ್ಮ ಹಿಂದೂಧರ್ಮದ ಒಂದು ಶಾಖೆಯಂತೆ ಇದೆ. ಶಂಕರಾಚಾರ್ಯರನ್ನು ಪ್ರಚ್ಛನ್ನ ಬುದ್ಧ ಎಂದು ಅನೇಕ ವೇಳೆ ಕರೆಯುವರು. ಬುದ್ಧ ವೇದಕ್ಕಾಗಲಿ, ಜಾತಿಗಾಗಲಿ, ಪುರೋಹಿತರಿಗಾಗಲಿ, ಯಾವ ಕಂದಾಚಾರಕ್ಕಾಗಲಿ ಮಣಿಯಲಿಲ್ಲ, ಯುಕ್ತಿ ಒಯ್ಯುವತನಕ ನಿರ್ಭಯವಾಗಿ ಅದನ್ನು ಅನುಸರಿಸಿದನು. ಅವನಲ್ಲಿದ್ದ ನಿರ್ಭಯವಾದ ಸತ್ಯಾನ್ವೇಷಣೆ ಮತ್ತು ಮಾನವಕೋಟಿಯ ಮೇಲೆ ಅಸೀಮ ಪ್ರೀತಿಯನ್ನು ಪ್ರಪಂಚ ಮತ್ತೊಂದು ವ್ಯಕ್ತಿಯಲ್ಲಿ ಕಂಡಿಲ್ಲ.

೪. ಬುದ್ಧನಿಗೆ ಮುಂಚೆ ನಮ್ಮ ದೇಶದಲ್ಲಿದ್ದುದೇನು ? ಓಲೆಯುಗರಿಯ ಮೇಲೆ ಇದ್ದ ಕೆಲವು ಧಾರ್ಮಿಕ ನಿಯಮಗಳು. ಅದೂ ಎಲ್ಲೋ ಕೆಲವರಿಗೆ ಮಾತ್ರ ತಿಳಿದಿತ್ತು. ಅದನ್ನು ವ್ಯವಹಾರ ರಂಗಕ್ಕೆ ಇಳಿಸಿದವನು ಬುದ್ಧ. ಜನರ ನಿತ್ಯ ಜೀವನದಲ್ಲಿ ಅದನ್ನು ಹೇಗೆ ಅನುಷ್ಠಾನಕ್ಕೆ ತರಬೇಕು ಎಂಬುದನ್ನು ತೋರಿದನು.

ಒಂದು ದೃಷ್ಟಿಯಲ್ಲಿ ನಿಜವಾದ ವೇದಾಂತದ ಜೀವಂತ ಉದಾಹರಣೆಯೇ ಅವನು.

೫. ಬುದ್ಧ ಧರ್ಮದ ಇತರ ಸಮಸ್ಯೆಗಳನ್ನೆಲ್ಲಾ ಬದಿಗೊತ್ತಿ ದುಃಖದಲ್ಲಿ ನರಳುತ್ತಿರುವ ಜೀವಿಗಳನ್ನು ಹೇಗೆ ಮೇಲಕ್ಕೆ ಎತ್ತುವುದು ಎಂಬ ಮಹಾ ಸಾಹಸದಲ್ಲಿ ತೊಡಗಿದನು. ಆದರೂ ಕ್ಷುದ್ರ ಅಹಂಕಾರಕ್ಕೆ ಅಂಟಿಕೊಂಡಿರುವುದು ವ್ಯರ್ಥ ಎಂಬುದನ್ನು ಅರಿಯಲು ಬೇಕಾದಷ್ಟು ಆತ್ಮ ವಿಶ್ಲೇಷಣೆ ಮಾಡಬೇಕಾ ಯಿತು. ಇಷ್ಟು ನಿಃಸ್ವಾರ್ಥಿಯಾದ ತನ್ನ ಶ್ರಮವನ್ನೇ ಗಮನಿಸದ ಒಂದು ಜೀವ ಬಹಳ ಅಪರೂಪ ಈ ಜಗತ್ತಿನಲ್ಲಿ. ಆದರೂ ಈ ಪ್ರಪಂಚದ ನೈಜ ಸ್ವಭಾವ ವನ್ನು ಅರಿಯಲು ಅವನಿಗಿಂತ ಕಷ್ಟಪಟ್ಟವರ್ಯಾರು? ಕೆಲಸ ಮಹತ್ತರವಾದಷ್ಟೂ ಅದರ ಹಿಂದಿರುವ ಸಾಕ್ಷಾತ್ಕಾರವೂ ಮಹತ್ತಾಗಿರಬೇಕು ಎಂಬುದು ಎಲ್ಲಾ ಕಾಲಕ್ಕೂ ಅನ್ವಯಿಸುವುದು.

೬. ಬುದ್ಧನ ಸಂದೇಶವನ್ನು ಕೇಳಿ ; ಅದೊಂದು ಅದ್ಭುತವಾದ ಸಂದೇಶ. ಅದಕ್ಕೆ ನಮ್ಮ ಹೃದಯದಲ್ಲಿ ಒಂದು ಸ್ಥಾನವಿದೆ. ಸ್ವಾರ್ಥವನ್ನು ನಿರ್ಮೂಲ ಮಾಡಿ, ನಿಮ್ಮನ್ನು ಸ್ವಾರ್ಥರನ್ನಾಗಿ ಮಾಡುವ ಪ್ರತಿಯೊಂದನ್ನೂ ನಾಶಮಾಡಿ ಎನ್ನುವನು ಬುದ್ಧ. ಹೆಂಡತಿ, ಮನೆ, ಮಕ್ಕಳು ಯಾವುದೂ ಇಲ್ಲದಿರಲಿ. ಸಂಸಾರ ವನ್ನು ತ್ಯಾಗಮಾಡಿ. ಸಂಪೂರ್ಣವಾಗಿ ನಿಃಸ್ವಾರ್ಥರಾಗಿ. ಸಂಸಾರವೊಂದಿಗ ತಾನು ನಿಃಸ್ವಾರ್ಥಿ ಎಂದು ಭಾವಿಸುವನು. ಆದರೆ ತನ್ನ ಹೆಂಡತಿಯ ಮುಖವನ್ನು ನೋಡಿದಾಗ ಅವನನ್ನು ಸ್ವಾರ್ಥಿಯನ್ನಾಗಿ ಮಾಡುವುದು. ತಾಯಿ ತಾನು ಸಂಪೂರ್ಣವಾಗಿ ನಿಃಸ್ವಾರ್ಥಗಳಾಗುವೆನು ಎಂದು ಭಾವಿಸುವಳು. ಆದರೆ ತನ್ನ ಮಗುವಿನ ಮುಖವನ್ನು ನೋಡಿದಾಗ ಸ್ವಾರ್ಥಿಯಾಗುವಳು, ಇದರಂತೆಯೇ ಪ್ರಪಂಚದಲ್ಲಿ ಪ್ರತಿಯೊಂದೂ ಕೂಡ. ಸ್ವಾರ್ಥ ಆಲೋಚನೆ ಮನಸ್ಸಿನಲ್ಲಿ ಎದ್ದೊ ಡನೆಯೆ, ನಿಜವಾದ ಮಾನವತೆ ಅಲ್ಲಿ ಮಾಯವಾಗುವುದು. ಅವನು ಮೃಗ ಸಮಾನನಾಗುವನು, ಅವನೊಬ್ಬ ಗುಲಾಮನಾಗುವನು; ತನ್ನ ಸಹೋದರರನ್ನು ಮರೆಯುವನು. ಇನ್ನು ಮೇಲೆ ಅವನು, ನೀನು ಮೊದಲು ನಾನು ಅನಂತರ ಎನ್ನುವುದಿಲ್ಲ; ಮುಂಚೆ ನಾನು, ಅನಂತರ ಯಾರು ಏನಾದರೂ ಚಿಂತೆಯಿಲ್ಲ ಎನ್ನುವನು.

೭. ದೇವರಿಗೆ ಸಂಬಂಧಪಟ್ಟ ಸಿದ್ಧಾಂತಗಳು ನನಗೆ ಬೇಕಿಲ್ಲ. ಆತ್ಮನಿಗೆ ಸಂಬಂಧಪಟ್ಟ ಸೂಕ್ಷ್ಮ ಸಿದ್ಧಾಂತಗಳನ್ನೆಲ್ಲಾ ಚರ್ಚಿಸಿ ಫಲವೇನು. ಒಳ್ಳೆಯವ ರಾಗಿ, ಒಳ್ಳೆಯದನ್ನು ಮಾಡಿ, ಇದು ನಿಮ್ಮನ್ನು ಮುಕ್ತರನ್ನಾಗಿ ಮಾಡುವುದು ; ಸತ್ಯ ಏನೇ ಇರಲಿ ಅದರೆಡೆಗೆ ನಿಮ್ಮನ್ನು ಒಯ್ಯುವುದು. ಬುದ್ಧ ಹೀಗೆ ಹೇಳಿದ.

೮. ಬುದ್ಧನೊಬ್ಬನೇ ಪ್ರಥಮ ಬಾರಿ ಹೀಗೆ ಹೇಳಿದವನು: "ಯಾವುದೋ ಪುರಾತನ ಶಾಸ್ತ್ರ ಹೇಳುವುದು ಎಂದು ನಂಬಬೇಡಿ ; ಇದು ನಿಮ್ಮ ದೇಶದ ಅಭಿಪ್ರಾಯವೆಂದು ನಂಬಬೇಡಿ ; ಬಾಲ್ಯದಿಂದಲೂ ಹೀಗೆ ನಂಬಿ ಅಭ್ಯಾಸವಾಗಿದೆ ಎಂದು ನಂಬಬೇಡಿ. ಆದರೆ ಇದನ್ನೆಲ್ಲಾ ವಿಚಾರಮಾಡಿ. ಚೆನ್ನಾಗಿ ಪರ್ಯಾಲೋಚಿಸಿದ ಮೇಲೆ, ಅನಂತರ ಅದು ಎಲ್ಲರಿಗೂ ಸಹಾಯ ಮಾಡುವುದೆಂದು ತಿಳಿದರೆ, ಅದನ್ನು ನಂಬಿ. ಅದರಂತೆ ಆಚರಿಸಿ, ಇತರರಿಗೂ ಹಾಗೆ ಆಚರಿಸಲು ಸಹಾಯ ಮಾಡಿ."

೯. ತಾವು ಭಗವಂತನ ಅವತಾರ, ಯಾರು ಅದರಲ್ಲಿ ನಂಬುವರೋ ಉದ್ಧಾರವಾಗುವರು ಎಂದು ಸಾರಿದ ಮಹಾ ವ್ಯಕ್ತಿಗಳು ಕೆಲವರು ಇದ್ದರು. ಆದರೆ ಬುದ್ಧ ತಾನು ಸಾಯುವ ಕಾಲದಲ್ಲಿ ಹೇಳಿದ್ದು ಏನು? "ಯಾರೂ ನಿನಗೆ ಸಹಾಯ ಮಾಡಲಾರರು, ನಿನಗೆ ನೀನೇ ಸಹಾಯ ಮಾಡಿಕೊಳ್ಳಬೇಕು."

೧೦. "ಬುದ್ಧ ಎಂದರೆ ಆಕಾಶದಂತೆ ಅಸೀಮವಾದ ಜ್ಞಾನದ ನೆಲೆ. ಗೌತಮನಾದ ನಾನು ಅದನ್ನು ಪಡೆದಿರುವೆನು. ಸಾಧನೆಮಾಡಿದರೆ ನೀವು ಕೂಡ ಅದನ್ನು ಪಡೆಯಬಹುದು" ಎಂದ ಬುದ್ಧ.

೧೧. ಯಾವ ಪ್ರತಿಫಲಾಕಾಂಕ್ಷೆಯನ್ನೂ ಇಚ್ಛೈಸಲಿಲ್ಲ, ಸ್ವರ್ಗಕ್ಕೆ ಹೋಗಲು ಇಚ್ಛೈಸಲಿಲ್ಲ, ಹಣವನ್ನು ಇಚ್ಛೈಸಲಿಲ್ಲ. ರಾಜ್ಯ ಮೊದಲಾದವುಗಳನ್ನೆಲ್ಲಾ ತ್ಯಜಿಸಿ, ಭರತಖಂಡದ ಬೀದಿಬೀದಿಯಲ್ಲಿ ಭಿಕ್ಷೆ ಬೇಡಿಕೊಂಡು ಹೋದನು. ಅನಂತ ಸಾಗರದಷ್ಟು ವಿಶಾಲಹೃದಯದಿಂದ ಮಾನವಕೋಟಿಗೆ ಪ್ರಾಣಿಕೋಟಿಗೆ ಒಳ್ಳೆಯದಾಗಲೆಂದು ಬೋಧಿಸುತ್ತ ಹೋದನು. ಬಲಿಯನ್ನು ತಪ್ಪಿಸಲು, ಪ್ರಾಣಿಗಳ ವಧೆಯನ್ನು ನಿಲ್ಲಿಸಲು, ತನ್ನ ಪ್ರಾಣವನ್ನೂ ಬಲಿಕೊಡಲು ಸಿದ್ಧನಾದವನು ಇವನೊಬ್ಬನೇ. ಇವನೊಮ್ಮೆ ಒಬ್ಬ ರಾಜನಿಗೆ ಹೇಳಿದ "ಒಂದು ಕುರಿಮರಿಯನ್ನು ಬಲಿಕೊಡುವುದರಿಂದ ನೀನು ಸ್ವರ್ಗಕ್ಕೆ ಹೋಗುವುದಾದರೆ, ಮಾನವನ ಬಲಿ ಕೊಟ್ಟರೆ ಅದು ಮತ್ತೂ ಸುಲಭವಾಗುವುದು. ನನ್ನನ್ನು ಬಲಿಕೊಡು". ರಾಜನಿಗೆ ಅತ್ಯಾಶ್ಚರ್ಯವಾಯಿತು.

೧೨. ಹಲವರಿಗೆ ಸುಗುಣೋಪಾಸನೆಯ ಮಾರ್ಗ ಸುಲಭವಾಗುವುದು. ಆದರೆ ಬುದ್ಧನ ಜೀವನವನ್ನು ನೋಡಿದರೆ, ಒಬ್ಬ ದೇವರಲ್ಲಿ ನಂಬದಿರಲಿ, ಅವನಿಗೆ ಯಾವ ಸಿದ್ಧಾಂತದ ಸಹಾಯವೇ ಇಲ್ಲದಿರಲಿ, ಯಾವ ಜಾತಿಗೂ ಸೇರದಿರಲಿ, ಯಾವ ಗುಡಿಗೋಪುರಗಳಿಗೂ ಹೋಗದೆ ಇರಲಿ, ಅವನು ಕೇವಲ ಜಡವಾದಿಯಾಗಿದ್ದರೂ ಚಿಂತೆಯಿಲ್ಲ, ಅವನೂ ಕೂಡ ಪರಮ ಸತ್ಯವನ್ನು ಸೇರಬಹುದು

ಎಂಬುದು ಕಂಡುಬರುತ್ತದೆ. ಇವನನ್ನು ಟೀಕಿಸಲು ನಮಗೆ ಅಧಿಕಾರವಿಲ್ಲ. ಬುದ್ಧನು ಅಸೀಮ ಅನುಕಂಪದ ಮಹಾಸಾಗರದ ಒಂದು ಬಿಂದು ನನ್ನಲ್ಲಿದ್ದರೆ ಸಾಕು ಎನ್ನಿಸುವುದು. ಬುದ್ಧ ದೇವರಲ್ಲಿ ನಂಬಿದ್ದನೋ ಇಲ್ಲವೊ ಅದು ನನಗೆ ಬೇಕಾಗಿಲ್ಲ. ಇತರರು ಜ್ಞಾನ ಯೋಗ ಭಕ್ತಿಯ ಮೂಲಕ ಯಾವ ಗುರಿಯನ್ನು ಸೇರಿದ್ದರೋ ಅದನ್ನೇ ಇವನೂ ಸೇರಿದ್ದ.

೧೩. ಬುದ್ಧ ಒಮ್ಮೆ ಬೋಧಿ ವೃಕ್ಷದ ಕೆಳಗೆ ತಪಸ್ಸು ಮಾಡುತ್ತಿದ್ದಾಗ ಮಾರ ಬಂದು ಇವನ ಮುಂದೆ ಪ್ರಲೋಭನೆಯ ಬಲೆಯನ್ನು ಬೀಸಿದ. ಸತ್ಯಾನ್ವೇಷಣೆಯನ್ನು ತ್ಯಜಿಸಿ, ಪ್ರಪಂಚಕ್ಕೆ ಮರಳಿ ಹಿಂದಿನಂತೆ ನಾಮರೂಪದ ಮಿಥ್ಯಾ ಪ್ರಪಂಚದಲ್ಲಿ ವಿಹರಿಸುತ್ತಾ ತನಗೆ ಸುಳ್ಳು ಹೇಳಿಕೊಳ್ಳುತ್ತ, ಸುತ್ತಮುತ್ತಲಿರುವವರಿಗೆ ಸುಳ್ಳು ಹೇಳುತ್ತ ಇರು ಎಂದನು. ಆದರೆ ಮಹಾನುಭಾವನಾದ ಬುದ್ಧ ಅವನನ್ನು ಗೆದ್ದ. "ಸೋಮಾರಿಯಾಗಿ ಭ್ರಾಂತಿಯಲ್ಲಿ ನರಳುವುದಕ್ಕಿಂತ ಮೃತ್ಯು ಮೇಲು. ಸೋಲನ್ನು ಒಪ್ಪಿಕೊಂಡು ಬಾಳುವುದಕ್ಕಿಂತ ಹೋರಾಡುತ್ತಾ ಪ್ರಾಣ ಬಿಡುವುದು ಮೇಲು" ಎಂದ ಬುದ್ಧ. ಯಾರು ಧೈರ್ಯವಾಗಿ ಹೀಗೆ ಹೇಳುವರೊ ಅವರು ಮಾತ್ರ ಧರ್ಮಾತ್ಮರು.

೧೪. ಬುದ್ಧ ದ್ವೈತಿಗಳ ದೇವರನ್ನು ಲೆಕ್ಕಿಸಲೇ ಇಲ್ಲ; ಅವನನ್ನು ನಾಸ್ತಿಕ, ಜಡವಾದಿ ಎಂದೂ ಕರೆದರು. ಆದರೂ ಅವನು ತನ್ನ ಪ್ರಾಣವನ್ನು ಒಂದು ಬಡ ಕುರಿಮರಿಗೆ ಕೊಡುವುದಕ್ಕೂ ಸಿದ್ಧನಾಗಿದ್ದನು, ಯಾವ ಜನಾಂಗದಲ್ಲಿಯೂ ಇಲ್ಲದ ಅತಿಶ್ರೇಷ್ಠ ನೈತಿಕ ಆದರ್ಶವನ್ನು ಪ್ರಪಂಚದಲ್ಲಿ ಜಾರಿಗೆ ತಂದನು. ಎಲ್ಲಿಯಾದರೂ ಒಂದು ನೀತಿ ನಿಯಮಾವಳಿಯ ಕಿರಣವಿದ್ದರೂ ಅದು ಬುದ್ಧನಿಂದ ಬಂದುದು.

೧೫. ಬುದ್ಧ ವೈದಿಕ ಸನ್ಯಾಸಿ. ಇತರೆರು ಈಗ ಸ್ಥಾಪಿಸುತ್ತಿರುವಂತೆ ಅವನೊಂದು ಬೇರೆ ಶಾಖೆಯನ್ನು ಸ್ಥಾಪಿಸಿದ. ಈಗ ಯಾವುದನ್ನು ಬೌದ್ಧಧರ್ಮ ಎನ್ನುತ್ತಾರೊ ಆ ಭಾವನೆಗಳು ಬುದ್ಧನಿಗೆ ಸೇರಿದುವಲ್ಲ. ಆ ಭಾವನೆಗಳು ಅವನಿಗಿಂತ ಮುಂಚೆ ಇದ್ದುವು. ಬುದ್ಧನೊಬ್ಬ ಮಹಾ ವ್ಯಕ್ತಿ. ಆಗಲೇ ಇದ್ದ ಭಾವನೆಗಳಿಗೆ ಪ್ರಾಣ ಪ್ರತಿಷ್ಠೆ ಮಾಡಿದ. ಬೌದ್ಧರ ಒಂದು ವಿಶೇಷವೇ ಅವರ ಸಾಮಾಜಿಕ ಭಾವನೆ.

೧೬. ಬುದ್ಧ ಉಳಿದೆಲ್ಲ ಗುರುಗಳಿಗಿಂತಲೂ ಧೀರನಾಗಿದ್ದ, ನಿಸ್ಪೃಹನಾಗಿದ್ದ. "ಯಾವ ಶಾಸ್ತ್ರವನ್ನೂ ನಂಬಬೇಡಿ, ವೇದಗಳು ಒಂದು ಕಂತೆಯ ಪುರಾಣ, ನಾನು ಹೇಳಿದಂತೆ ಅವು ಇದ್ದರೆ ಅವಕ್ಕೆ ಶ್ರೇಯಸ್ಕರ. ನಾನೇ ಎಲ್ಲಕ್ಕಿಂತ

ದೊಡ್ಡ ಶಾಸ್ತ್ರ. ಯಾಗಯಜ್ಞಗಳು, ಪ್ರಾರ್ಥನೆ ಇವುಗಳಿಂದ ಪ್ರಯೋಜನವಿಲ್ಲ.” ಪ್ರಪಂಚಕ್ಕೆ ಒಂದು ನೀತಿ ನಿಯಮಾವಳಿಯ ಸಿದ್ಧಾಂತವನ್ನು ಕೊಟ್ಟವನು ಬುದ್ಧ. ಪ್ರೀತಿಗಾಗಿ ಪ್ರೀತಿಸಿದವನು ಅವನು, ಒಳ್ಳೆಯದಕ್ಕಾಗಿ ಒಳ್ಳೆಯದನ್ನು ಮಾಡಿದವನವನು.

೧೭. ಉಪನಿಷತ್ತಿನಲ್ಲಿ ಯಾವ ಭಾವನೆಯನ್ನು ಎಲ್ಲೋ ಕೆಲವರಿಗೆ ವಿಶಾಸಲಾಗಿಟ್ಟಿದ್ದರೂ ಅದನ್ನು ಎಲ್ಲರಿಗೂ ಬಹಿರಂಗಪಡಿಸಿದವನು ಬುದ್ಧ. ನಿರ್ವಾಣ ಸಿದ್ಧಾಂತದಿಂದ ಅವನ ದೊಡ್ಡಸ್ತಿಕೆ ಏನೂ ಏರುವುದಿಲ್ಲ. ಅವನ ಮಹಿಮೆ ಇರುವುದು ಅಸದೃಶವಾದ ಅನುಕಂಪದ ಮೇಲೆ. ಅವನ ಧರ್ಮಕ್ಕೆ ಕಳೆ ಕೊಡುವ ಉತ್ತಮ ದರ್ಜೆಯ ಸಮಾಧಿ ಮುಂತಾದವುಗಳಲ್ಲಿ ಬಹುಪಾಲು ಆಗಲೇ ವೇದಗಳಲ್ಲಿವೆ. ಅಲ್ಲಿ ಇಲ್ಲದೇ ಇರುವುದೇ ಬುದ್ಧನ ಬುದ್ಧಿ ಮತ್ತು ಹೃದಯ. ಪ್ರಪಂಚದ ಇತಿಹಾಸದಲ್ಲೇ ಅವನಿಗೆ ಸರಿಸಮನಾದ ವ್ಯಕ್ತಿ ಮತ್ತೊಂದು ಇದುವರೆಗೆ ಜನಿಸಿಲ್ಲ.

೫ ಬೌದ್ಧ ಧರ್ಮ

೧. ತಾತ್ತ್ವಿಕ ದೃಷ್ಟಿಯಿಂದ ಬುದ್ಧನ ಶಿಷ್ಯರು ವೇದಗಳೆಂಬ ವಜ್ರಪರ್ವತದ ಮೇಲೆ ಬಿದ್ದರು. ಅದನ್ನು ನಾಶಮಾಡಲಾಗಲಿಲ್ಲ. ಆದರ ಬದಲು ಪ್ರತಿಯೊಬ್ಬ ಸ್ತ್ರೀ, ಪುರುಷರು ಮತ್ತು ಮಕ್ಕಳು ಪ್ರೀತಿಯಿಂದ ಅಪ್ಪಿಕೊಂಡಿದ್ದ ಸಗುಣದೇವರನ್ನು ದೇಶದಿಂದ ಕಣ್ಮರೆಯಾಗುವಂತೆ ಮಾಡಿದರು. ಇದರ ಪರಿಣಾಮ ಏನಾಯಿತೆಂದರೆ ಬೌದ್ಧಧರ್ಮ ಭರತಖಂಡದಲ್ಲೇ ಕ್ರಮೇಣ ನಿರ್ನಾಮವಾಯಿತು.

೨. ಬುದ್ಧ ವೇದಾಂತವನ್ನು ಬೆಳಕಿಗೆ ತಂದ. ಅದನ್ನು ಜನರಿಗೆ ಕೊಟ್ಟು ಭರತಖಂಡವನ್ನು ಉದ್ಧಾರಮಾಡಿದ. ಇದಾದ ಒಂದು ಸಾವಿರ ವರುಷಗಳ ತರುವಾಯ ಪರಿಸ್ಥಿತಿ ಹಿಂದೆ ಇದ್ದಂತೆಯೇ ಆಯಿತು. ಹಲವು ದೇಶದವರು, ಜನಾಂಗದವರು, ಜನರ ದೊಂಬಿಯೇ ಬೌದ್ಧಧರ್ಮಕ್ಕೆ ಸೇರಿದರು. ಕ್ರಮೇಣ ಬುದ್ಧನ ಬೋಧನೆ ಅಧೋಗತಿಗೆ ಇಳಿಯಿತು. ಏಕೆಂದರೆ ಅವನ ಅನುಯಾಯಿಗಳಿಗೆ ಅದನ್ನು ಅರ್ಥಮಾಡಿಕೊಳ್ಳಲು ಆಗಲಿಲ್ಲ. ಅವರೆಲ್ಲ ಬಹುಪಾಲು ಮೂಢರಾಗಿದ್ದರು. ಬೌದ್ಧಧರ್ಮ ಯಾವ ದೇವರನ್ನೂ ಬೋಧಿಸಲಿಲ್ಲ, ಯಾವ ಪರಮೇಶ್ವರನನ್ನೂ ಕುರಿತು ಹೇಳಲಿಲ್ಲ. ಕ್ರಮೇಣ ಯಾರು ಈ ಧರ್ಮಕ್ಕೆ ಸೇರಿದರೊ ಅವರು ತಮ್ಮ ಹಿಂದಿನ ಧರ್ಮದಲ್ಲಿದ್ದ ದೇವರು, ದೆವ್ವ, ಭೂತ, ಪ್ರೇತ ಮುಂತಾದುವನ್ನೆಲ್ಲಾ ತಂದರು. ಈಗ ಭರತಖಂಡದಲ್ಲಿ ಕಾಣುವ ಧರ್ಮ ಅದು.

೩. ಪೂರ್ವದಲ್ಲಿ ಬಂದ ಬೌದ್ಧರು ಪ್ರಾಣಿಬಲಿಯನ್ನು ವಿರೋಧಿಸಿ ವೇದದಲ್ಲಿ ಬರುವ ಯಾಗ ಯಜ್ಞಗಳನ್ನು ಬಹಿಷ್ಕರಿಸಿದರು. ಆಗ ಇದನ್ನು ಪ್ರತಿಯೊಂದು ಮನೆಯಲ್ಲಿಯೂ ಮಾಡುತ್ತಿದ್ದರು. ಮನೆಯ ಒಂದು ಮೂಲೆಯಲ್ಲಿ ಬೆಂಕಿ ಉರಿಯುತ್ತಿತ್ತು. ಅಷ್ಟೇ ಹಿಂದೂಗಳು ಇದಕ್ಕಾಗಿ ಮಾಡುತ್ತಿದ್ದುದು. ಬೌದ್ಧರು ಯಾಗ ಯಜ್ಞಗಳನ್ನು ನಿಲ್ಲಿಸಿದರು. ಆದರ ಬದಲು ಕೋರೈಸುವಂತಹ ಸ್ತೂಪಗಳು, ವಿಸ್ಮಯಕಾರಕವಾದಂತಹ ಆಚಾರಗಳು, ಆಕರ್ಷಣೀಯರಾದ ಭಿಕ್ಷುಗಳು ಮತ್ತು ಈಗ ನಾವು ಏನು ನೋಡುತ್ತೇವೆಯೋ ಅವನ್ನೆಲ್ಲ ತಂದರು. ಆಧುನಿಕ ಕಾಲದ ಕೆಲವು ಪಂಡಿತರು (ಅವರಿಗೆ ಇನ್ನೂ ಸ್ವಲ್ಪ ಚೆನ್ನಾಗಿ ತಿಳಿವಳಿಕೆ ಬೇಕಾಗಿದೆ) ಬ್ರಾಹ್ಮಣರ ವಿಗ್ರಹಗಳನ್ನು ಬೌದ್ಧಧರ್ಮ ನಾಶಮಾಡಿತು ಎಂಬು

ದನ್ನು ಬರೆದಿರುವುದನ್ನು ಓದಿದಾಗ ನನಗೆ ನಗೆ ಬರುವುದು. ಪಾಪ ಅವರಿಗೆ ಗೊತ್ತಿಲ್ಲ. ಬ್ರಾಹ್ಮಣರ ಆಚಾರ ಅವರ ವಿಗ್ರಹಾರಾಧನೆ ಇವುಗಳನ್ನೆಲ್ಲಾ ಬೌದ್ಧರೇ ತಂದರು ಎಂಬುದನ್ನು ಅವರು ಅರಿಯರು.

೪. ಭಗವಾನ್ ಬುದ್ಧನ ಮೇಲೆ ನನಗೆ ಅಸೀಮವಾದ ಗೌರವ ಭಕ್ತಿಗಳಿವೆ. ಆದರೆ ಬೌದ್ಧಧರ್ಮ ಪ್ರಸಾರಕ್ಕೆ ಕಾರಣ ಬುದ್ಧನ ವ್ಯಕ್ತಿತ್ವವೂ ಅಲ್ಲ, ಅವನ ಸಂದೇಶವೂ ಅಲ್ಲ ಎಂಬುದನ್ನು ಗಮನಿಸಿ. ಅವರು ಕಟ್ಟಿದ ಗುಡಿ ಗೋಪುರಗಳು, ಮಾಡಿದ ವಿಗ್ರಹಗಳು, ಜಾರಿಗೆ ತಂದ ಆಕರ್ಷಣೀಯವಾದ ಆಚಾರಗಳೇ ಇದಕ್ಕೆ ಕಾರಣ. ಬೌದ್ಧಧರ್ಮ ಹರಡಿದ್ದು ಹೀಗೆ. ಮನೆಯ ಮೂಲೆಯಲ್ಲಿ ನಡೆಯುತ್ತಿದ್ದ ಸಣ್ಣ ಯಾಗಯಜ್ಞಗಳು, ಅದಕ್ಕೆ ಹಾಕುತ್ತಿದ್ದ ಆಜ್ಯಾಹುತಿ ಇವಕ್ಕೆ ಬೌದ್ಧರ ಅದ್ಭುತ ಆಚಾರಗಳು, ಅವರ ವಿಗ್ರಹ ಮತ್ತು ಸ್ತೂಪಗಳೆದುರಿಗೆ ನಿಲ್ಲಲಾಗಲಿಲ್ಲ. ಆದರೆ ಕ್ರಮೇಣ ಇವುಗಳೆಲ್ಲ ಹೀನ ಸ್ಥಿತಿಗೆ ಬಂದವು.

೫. ಬುದ್ಧ ಪದೇ ಪದೇ ಸಾಕಾರವನ್ನು ವಿರೋಧಿಸುತ್ತಿದ್ದುದೇ ವಿಗ್ರಹಗಳು ಭರತಖಂಡದಲ್ಲಿ ಜಾರಿಗೆ ಬರಲು ಕಾರಣವಾಯಿತು. ವೇದಗಳಲ್ಲಿ ವಿಗ್ರಹದ ಮಾತೇ ಇಲ್ಲ. ಏಕೆಂದರೆ ಅವರು ದೇವರನ್ನು ಎಲ್ಲಾ ಕಡೆಯಲ್ಲಿಯೂ ನೋಡುತ್ತಿದ್ದರು. ಆದರೆ ಸೃಷ್ಟಿಕರ್ತನಾದ ಸಖನಾದ ದೇವರು ಹೋದಮೇಲೆ ವಿಗ್ರಹಗಳು ಬಂದವು. ಬುದ್ಧನೂ ಒಂದು ವಿಗ್ರಹವಾದ. ಅದರಂತೆಯೇ ಏಸೂ ಒಂದು ವಿಗ್ರಹವಾದ. ಕಲ್ಲು, ಮಣ್ಣು, ಮರಗಳಿಂದ ಹಿಡಿದು ಜೀಸಸ್ ಮತ್ತು ಬುದ್ಧರವರೆಗೆ ವಿಗ್ರಹಗಳಾದವು. ಆದರೆ ನಮಗೆ ವಿಗ್ರಹಗಳಿಲ್ಲದೇ ಇದ್ದರೆ ಆಗದು.

೬. ವೇದಾಂತ ಬೌದ್ಧರೊಂದಿಗೆ ಹೋರಾಡುವುದಿಲ್ಲ. ಎಲ್ಲದಕ್ಕೂ ಸಾಮರಸ್ಯವನ್ನು ಕಲ್ಪಿಸುವುದೇ ವೇದಾಂತದ ಆದರ್ಶ. ಔತ್ತರೇಯ ಬೌದ್ಧರೊಂದಿಗೂ ನಮಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಬರ್ಮಾ, ಸಯಾಂ ಮತ್ತು ದಾಕ್ಷಿಣಾತ್ಯ ಬೌದ್ಧರು ಒಂದು ತೋರಿಕೆಯ ಪ್ರಪಂಚ ಹೊರಗೆ ಇರುವಾಗ ಅದರ ಹಿಂದೆ ಮತ್ತೊಂದು ನಿಜವಾದ ವಸ್ತುವಿದೆ ಎಂದು ಹೇಳಲು ನಿಮಗೆ ಯಾವ ಆಧಾರವಿದೆ ಎನ್ನುವರು. ಆದರೆ ಇದು ವೇದಾಂತದ ದೃಷ್ಟಿಯಲ್ಲ ಎನ್ನುವುದು ವೇದಾಂತ. ವೇದಾಂತ ಎಂದಿಗೂ ಒಂದು ತೋರಿಕೆಯ ಪ್ರಪಂಚ ಮತ್ತು ಅದರ ಹಿಂದೆ ಮತ್ತೊಂದು ನಿಜವಾದ ವಸ್ತುವಿದೆ ಎಂದು ಎರಡನ್ನೂ ಒಪ್ಪಿಕೊಳ್ಳುವುದಿಲ್ಲ. ಪಂಚೇಂದ್ರಿಯಗಳ ಮೂಲಕ ನೋಡಿದಾಗ ಅದು ತೋರಿಕೆಯ ಪ್ರಪಂಚ

ದಂತೆ ಕಾಣುವುದು. ಆದರೂ ಇದು ನಿಜವಾಗಿಯೂ ಯಾವಾಗಲೂ ಪರಮಾರ್ಥವೇ ಆಗಿರುವುದು. ಯಾರು ಹಗ್ಗವನ್ನು ನೋಡುವರೋ ಅವರು ಹಾವನ್ನು ನೋಡುವುದಿಲ್ಲ. ಅದು ಹಾವು, ಇಲ್ಲ ಹಗ್ಗವಾಗಿರುವುದೇ ವಿನಃ ಎರಡೂ ಆಗಿರಲಾರದು. ಹಿಂದೂಗಳು ವ್ಯವಹಾರ, ಪರಮಾರ್ಥ ಎರಡರಲ್ಲೂ ನಂಬುತ್ತಾರೆ ಎಂದು ಬೌದ್ಧರು ಭಾವಿಸಿದರೆ ಅದು ತಪ್ಪು. ಅವರು ಬೇಕಾದರೆ ತಮ್ಮ ಎದುರಿಗೆ ಇರುವುದನ್ನು ವ್ಯಾವಹಾರಿಕ ಎಂದು ಬೇಕಾದರೆ ಕರೆಯಲಿ. ಆದರೆ ಅದನ್ನು ಪರಮಾರ್ಥ ಎಂದು ಕರೆದರೆ ಅವರಿಗೆ ನಮ್ಮನ್ನು ವಿರೋಧಿಸಲು ಯಾವ ಹಕ್ಕೂ ಇಲ್ಲ.

೭. "ಅಹಿಂಸಾ ಪರಮೋ ಧರ್ಮಃ" ಎಂಬ ಬೌದ್ಧರ ನೀತಿ ಅತಿ ಅಮೋಘವಾದುದು. ಆದರೆ ಜನರ ಯೋಗ್ಯತೆಯನ್ನು ಅರಿಯದೆ ಎಲ್ಲರ ಮೇಲೂ ಅದನ್ನು ಬಲಾತ್ಕರಿಸಿದಾಗ ಅದು ನಮ್ಮ ಭರತಖಂಡದ ಅವನತಿಗೆ ಕಾರಣವಾಯಿತು. ನಾನು ಭರತಖಂಡದಲ್ಲಿ ಎಷ್ಟೋ ಜನ ಆಷಾಢಭೂತಿಗಳನ್ನು ನೋಡಿರುವೆನು. ಅವರು ಇರುವೆಗೆ ಸಕ್ಕರೆ ಹಾಕುವರು. ಆದರೆ ಸ್ವಲ್ಪ ಹಣಕ್ಕಾಗಿ ಮತ್ತೊಬ್ಬ ಮಾನವನನ್ನು ಅವರು ಕೊಲೆ ಮಾಡುವುದಕ್ಕೂ ಹೇಸುವವರಲ್ಲ.

೮. ಔತ್ತರೇಯ ಬೌದ್ಧರಲ್ಲಿ ಬಹುಪಾಲು ಮುಕ್ತಿಯನ್ನು ನಂಬುವರು. ಅವರು ನಿಜವಾಗಿಯೂ ವೇದಾಂತಿಗಳು. ಆದರೆ ಸಿಲೋನಿನವರು ಮಾತ್ರ ನಿರ್ವಾಣವೆಂದರೆ ಶೂನ್ಯವೆನ್ನುವರು.

೬ ಕ್ರಿಸ್ತ

೧. ಭಗವಂತನೊಂದಿಗೆ ಐಕ್ಯತೆಯನ್ನು ಪಡೆದ ಜೀವಿಯೇ ಸಮರ್ಥನಾದವನು, ಇತರರಲ್ಲ. ನಿಮ್ಮ ಬೈಬಲ್ಲಿನಲ್ಲಿ ಬರುವ ನಜರತ್ತಿನ ಏಸೂ ಕ್ರಿಸ್ತನ ಶಕ್ತಿ ಎಲ್ಲಿ ಇತ್ತು ಎಂದು ಭಾವಿಸಿದಿರಿ? ವಿಶ್ವಾಸಘಾತುಕನನ್ನು ಕಂಡಾಗ ಸುಮ್ಮನೇ ನಕ್ಕನು, ಅವನನ್ನು ಕೊಲೆ ಮಾಡಲು ಬಂದವರನ್ನು ಆಶೀರ್ವದಿಸಿದನು. ಈ ಅದ್ಭುತ ಶಕ್ತಿ ಎಲ್ಲಿತ್ತು ಎಂದು ಭಾವಿಸಿದಿರಿ? ಅದೇ "ನಾನು ನನ್ನ ತಂದೆ ಒಂದೇ", "ಹೇ ತಂದೆ, ಹೇಗೆ ನಾನು ನಿನ್ನಲ್ಲಿ ಒಂದಾಗಿರುವೆನೊ ಹಾಗೆಯೇ ಅವರನ್ನೂ ನಿನ್ನಲ್ಲಿ ಒಂದಾಗುವಂತೆ ಮಾಡು" ಎಂಬ ಪ್ರಾರ್ಥನೆ.

೨. ನಾನೂ ನನ್ನ ತಂದೆ ಇಬ್ಬರೂ ಒಂದೇ ಎಂಬ ಆ ಜೀವಿಯ ಶಕ್ತಿಯೇ ಮಾನವ ಕೋಟಿಗೆ ಬಂದದ್ದು. ಸಹಸ್ರಾರು ವರ್ಷಗಳಿಂದ ಅದು ಮಾನವನ ಶ್ರೇಯಸ್ಸಿಗೆ ಸಹಾಯ ಮಾಡಿದೆ. ಅವನು ಅದ್ವೈತಿಯಾಗಿದ್ದುದರಿಂದ ಇತರರಿಗೂ ದಯೆ ತೋರಿದನು. ಸಗುಣ ದೇವರಿಗಿಂತ ಹೆಚ್ಚು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲದ ಜನಸಾಮಾನ್ಯರಿಗೆ ಅವನು "ಸ್ವರ್ಗದಲ್ಲಿರುವ ನಿನ್ನ ತಂದೆಗೆ ಪ್ರಾರ್ಥಿಸು" ಎಂದನು. ಇದಕ್ಕಿಂತ ಸ್ವಲ್ಪ ಮೇಲಿನ ಮಟ್ಟದಲ್ಲಿದ್ದವರಿಗೆ "ನಾನೇ ಬಳ್ಳಿ, ನೀವೇ ಅದರ ಶಾಖೆಗಳು" ಎಂದನು. ಆದರೆ ತನ್ನ ನೈಜ ಮಹಾತ್ಮೆಯನ್ನು ತೋರಿದ ಶಿಷ್ಯರಿಗೆ "ನಾನು ನನ್ನ ತಂದೆ ಒಂದೇ" ಎಂಬ ಶ್ರೇಷ್ಠ ಸತ್ಯವನ್ನು ಬೋಧಿಸಿದನು.

೩. ಅವನ ವಿಷಯವಾಗಿ ಬರೆದ ಅನೇಕ ಕಥೆಗಳನ್ನು ಓದಿರುವೆವು. ಅವನ ವಿಷಯವಾಗಿ ಬರೆದ ಬರೆಹಗಳು ಮತ್ತು ಅದನ್ನು ಬರೆದವರು ಮತ್ತು ಮೇಲ್ತರದ ವಿಮರ್ಶೆಗಳು ಇವನ್ನು ನಾವು ಬಲ್ಲೆವು. ಅಧ್ಯಯನದ ಮೂಲಕ ಏನನ್ನು ತಿಳಿಯಬಹುದೊ ಅದನ್ನೆಲ್ಲಾ ನಾವು ಬಲ್ಲೆವು. ನ್ಯೂ ಟೆಸ್ಟಮೆಂಟಿನಲ್ಲಿ ಎಷ್ಟು ಭಾಗ ನಿಜ, ಅವನ ಜೀವನದಲ್ಲಿ ಎಷ್ಟು ಭಾಗ ಐತಿಹಾಸಿಕವಾಗಿ ನಿಜ ಎಂಬುದನ್ನು ನಾವು ಚರ್ಚಿಸಲು ಇಲ್ಲಿ ನಿಂತಿಲ್ಲ. ನ್ಯೂ ಟೆಸ್ಟಮೆಂಟ್ ಕ್ರಿಸ್ತ ಹುಟ್ಟಿದ ಐನೂರು ವರುಷಗಳ ನಂತರ ಬರೆದುದೆ, ಅಥವಾ ಅಲ್ಲಿ ಬರುವ ಜೀವನದಲ್ಲಿ ಎಷ್ಟು ಸತ್ಯ ಎಂಬುದೂ ನಮಗೆ ಆವಶ್ಯಕವಿಲ್ಲ. ಆದರೆ ಆ ಗ್ರಂಥದ ಹಿಂದೆ ಒಂದು ಸತ್ಯ ಇದೆ. ನಾವು ಅದನ್ನು ಅನುಸರಿಸಲು ಇಚ್ಛಿಸುವೆವು. ನೀವು ಒಂದು ಸುಳ್ಳನ್ನು ಹೇಳಬೇಕಾದರೆ

ಸತ್ಯವನ್ನು ಅನುಸರಿಸಬೇಕು. ಆ ಸತ್ಯ ನಿಜ. ನೀವು ಯಾವುದನ್ನು ಗ್ರಹಿಸಲಾರಿರೋ ಅದನ್ನು ಅನುಕರಿಸಲಾರಿರಿ. ಆದರೆ ಈ ಪ್ರಪಂಚಕ್ಕೆ ಬಂದ ಆ ಅದ್ಭುತ ಶಕ್ತಿಗೆ ಒಂದು ಕೇಂದ್ರವಿರಬೇಕು. ಅದೊಂದು ಅದ್ಭುತ ಆಧ್ಯಾತ್ಮಿಕ ಶಕ್ತಿಯ ಆವಿರ್ಭಾವ. ಅದನ್ನೇ ನಾವಿಂದು ಕುರಿತು ವಿಚಾರಿಸುತ್ತಿರುವುದು. ಆದಕಾರಣವೇ ಪಂಡಿತರು ಎಷ್ಟೇ ವಿಮರ್ಶೆಮಾಡಿದರೂ ನಾವು ಅಂಜಬೇಕಾಗಿಲ್ಲ. ಪೌರಾತ್ಯನಾದ ನಾನು ನಜರತ್ತಿನ ಜೀಸಸ್ಸನ್ನು ಪೂಜೆ ಮಾಡಬೇಕಾದರೆ ಒಂದೇ ಮಾರ್ಗವಿರುವುದು. ಅದೇ ಅವನನ್ನು ದೇವರೆಂದು ಭಾವಿಸುವುದು, ಅನ್ಯಥಾ ಅಲ್ಲ.

೪. ನಿಜವಾದ ಶ್ರೇಯಸ್ಸಿನ ರಹಸ್ಯವೆ, ನಿಜವಾದ ಸಂತೋಷದ ರಹಸ್ಯವೆ, ಪ್ರತಿಫಲವನ್ನು ಬಯಸದೆ ಇರುವುದು, ಸಂಪೂರ್ಣ ನಿಃಸ್ವಾರ್ಥನಾಗಿರುವುದು. ಇದೊಂದು ವಿರೋಧವಾಗಿ ಕಾಣುವುದು. ಜೀವನದಲ್ಲಿ ಯಾರು ನಿಃಸ್ವಾರ್ಥಿಗಳೋ ಅವರು ಮೋಸ ಹೋಗುತ್ತಾರೆ. ಅವರು ತೊಂದರೆಗೆ ಒಳಗಾಗುವರು ಎಂಬುದು ನಮಗೆ ಗೊತ್ತಿಲ್ಲವೆ? ತೋರಿಕೆಗೆ ಇದು ನಿಜ. ಕ್ರಿಸ್ತ ನಿಃಸ್ವಾರ್ಥಿಯಾಗಿದ್ದ. ಆದರೂ ಅವನನ್ನು ಶಿಲುಬೆಗೆ ಏರಿಸಿದರು. ಆದರೆ ಅವನು ನಿಃಸ್ವಾರ್ಥಿಯಾಗಿದ್ದುದರಿಂದಲೇ ಕೋಟ್ಯಂತರ ಜೀವಿಗಳಿಗೆ ಶಾಂತಿ ಸಿಕ್ಕಲು ಸಾಧ್ಯವಾಯಿತು ಎಂಬುದು ನಮಗೆ ಗೊತ್ತಿದೆ.

೫. ಈಗಿನ ಕಾಲದಲ್ಲಿ ತ್ಯಾಗದ ವಿಷಯವಾಗಿ ಮಾತನಾಡುವುದೂ ಕೂಡ ಕಷ್ಟವೆ. ಐದು ಸಾವಿರ ವರುಷಗಳ ಹಿಂದೆಯೇ ನಾಮಾವಶೇಷವಾದ ದೇಶದಿಂದ ಬಂದು ಈಗ ತ್ಯಾಗದ ವಿಷಯವನ್ನು ಅಮೇರಿಕಾ ದೇಶದಲ್ಲಿ ಬೋಧಿಸುತ್ತಿರುವನು ಎಂದು ನನ್ನ ವಿಷಯವಾಗಿ ಜನರು ಆಡಿಕೊಳ್ಳುತ್ತಿರುವರು. ಆಂಗ್ಲೇಯ ತತ್ತ್ವಶಾಸ್ತ್ರಜ್ಞನೂ ಕೂಡ ಹೀಗೆಯೇ ಹೇಳಬಹುದು. ಆದರೂ ಧಾರ್ಮಿಕನಾಗಲು ಅದೊಂದೇ ಮಾರ್ಗ ಇರುವುದು. ಅದೇ ತ್ಯಾಗಮಾಡು, ಸರ್ವವನ್ನೂ ತ್ಯಜಿಸು ಎಂಬುದು. ಕ್ರಿಸ್ತ ಏನು ಹೇಳಿದ ? "ಯಾರು ನನಗಾಗಿ ಪ್ರಾಣವನ್ನು ಕಳೆದುಕೊಳ್ಳುವರೊ ಅವರಿಗೆ ಪ್ರಾಣ ದೊರಕುವುದು." ಪುನಃ ಪುನಃ ಅವನು ಮುಕ್ತನಾಗಬೇಕಾದರೆ ತ್ಯಾಗ ಒಂದೇ ಮಾರ್ಗ ಎಂಬುದನ್ನು ಬೋಧಿಸುವನು.

೬. "ಪರಿಶುದ್ಧಾತ್ಮರು ಧನ್ಯರು, ಅವರೇ ದೇವರನ್ನು ನೋಡುವರು." "ಸ್ವರ್ಗ ಆಗಲೇ ನಿನ್ನಲ್ಲಿರುವುದು. ಅದನ್ನು ಹುಡುಕಿಕೊಂಡು ಎಲ್ಲಿಗೆ ಹೋಗುತ್ತೀಯ ಅದಾಗಲೆ ನಿನ್ನಲ್ಲಿರುವಾಗ" ಎಂದು ಕೇಳುವನು ಕ್ರಿಸ್ತ. ನಿನ್ನ ಆತ್ಮವನ್ನು ಪರಿಶುದ್ಧ ಮಾಡು. ಅದಾಗಲೆ ಅಲ್ಲಿರುವುದು ಗೊತ್ತಾಗುವುದು. ಅದಾಗಲೇ ನಿನ್ನದು. ಯಾವುದು ನಿನ್ನದಲ್ಲವೊ ಅದು ನಿನಗೆ ಹೇಗೆ ಬಂದೀತು? ನ್ಯಾಯವಾಗಿ

ಅದು ನಿನಗೆ ಸೇರಿದ್ದು. ನೀವೆಲ್ಲ ಅಮೃತತ್ವಕ್ಕೆ ಅಧಿಕಾರಿಗಳು. ನಿತ್ಯಾತ್ಮನ ಸಂತಾನರು.

೭. ಚರ್ಚ್‌ಗಳು ಬೇಕಾದಷ್ಟು ಸಿದ್ಧಾಂತ, ನಂಬಿಕೆ, ತತ್ತ್ವಗಳನ್ನು ಬೋಧಿಸಲಿ. ಆದರೆ ನಿಜವಾದ ಧರ್ಮದ ವ್ಯಾವಹಾರಿಕ ಭಾಗವಾದ ಪೂಜೆಗೆ ಬಂದರೆ ಅದು ಕ್ರಿಸ್ತ ಹೇಳಿದಂತೆ ಇರಬೇಕು : "ನೀನು ಪ್ರಾರ್ಥಿಸುವಾಗ ನಿನ್ನ ಮನಸ್ಸಿನ ಅಂತರಂಗಕ್ಕೆ ಹೋಗು. ನೀನು ನಿನ್ನ ಮನಸ್ಸಿನ ಬಾಗಿಲನ್ನು ಮುಚ್ಚಿದ ಮೇಲೆ, ರಹಸ್ಯದಲ್ಲಿರುವ ನಿನ್ನ ತಂದೆಗೆ ಪ್ರಾರ್ಥಿಸು."

೮. ಕ್ರಿಸ್ತನ ಈ ನುಡಿಗಳನ್ನು ನೆನಪಿನಲ್ಲಿಡಿ : "ಕೇಳಿ, ನಿಮಗೆ ಅದನ್ನು ಕೊಡುವರು. ಅರಸಿ, ನಿಮಗೆ ಅದು ದೊರಕುವುದು. ಬಾಗಿಲನ್ನು ತಟ್ಟಿ, ಅದು ತೆರೆಯುವುದು." ಈ ಮಾತುಗಳು ನಿಜವಾಗಿ ಸತ್ಯ. ಇವು ಕೇವಲ ಉಪಮಾನವಲ್ಲ, ಅಲಂಕಾರವಲ್ಲ. ಈ ಪ್ರಪಂಚಕ್ಕೆ ಬಂದ ಶ್ರೇಷ್ಠತಮ ವ್ಯಕ್ತಿಯೊಬ್ಬನ ಹೃದಯದಿಂದ ಹರಿದು ಬಂದ ನುಡಿಗಳಿವು. ಆತ್ಮಸಾಕ್ಷಾತ್ಕಾರದ ಫಲವಾಗಿ ಬಂದ ನುಡಿಗಳಿವು. ಯಾರು ದೇವರನ್ನು ಕಂಡನೊ, ಅವನನ್ನು ಮುಟ್ಟಿದನೊ, ಅವನಿಂದ ಬಂದವು ಇವು. ನಾನು ಅಥವಾ ನೀವು ಎದುರಿಗೆ ಇರುವ ಕಟ್ಟಡವನ್ನು ನೋಡುವುದಕ್ಕಿಂತ ಚೆನ್ನಾಗಿ ದೇವರನ್ನು ಕಂಡವನು ಈತ, ಆತನೊಡನೆ ಮಾತನಾಡಿದವನು ಈತ.

೯. ಅವನು ಮೂರು ವರುಷದಲ್ಲಿ ಮಾಡಿದ ಬೋಧನೆ ಒಂದು ಯುಗವನ್ನೇ ಸಂಕೋಚಮಾಡಿದಂತೆ ಇದೆ. ಅದು ವಿಕಾಸವಾಗಲು ಹತ್ತೊಂಬತ್ತು ಶತಮಾನಗಳಾದವು. ಪೂರ್ಣ ವಿಕಾಸವಾಗಲು ಇನ್ನೂ ಎಷ್ಟು ಶತಮಾನಗಳು ಬೇಕಾಗಬಹುದೊ ಯಾರು ಬಲ್ಲರು? ನಮ್ಮಂತಹ ಮತ್ತು ನಿಮ್ಮಂತಹ ವ್ಯಕ್ತಿಗಳಲ್ಲಿ ಎಲ್ಲೊ ಸ್ವಲ್ಪ ಶಕ್ತಿ ಸಂಚಯವಾಗಿದೆ. ಅದನ್ನು ಖರ್ಚು ಮಾಡಬೇಕಾದರೆ ಕೆಲವು ನಿಮಿಷವೋ, ಗಂಟೆಯೋ ಅಥವಾ ಹೆಚ್ಚು ಎಂದರೆ ಕೆಲವು ವರುಷಗಳು ಹಿಡಿಯಬಹುದು, ಅನಂತರ ಅದೆಲ್ಲಾ ಖರ್ಚಾಗಿ ಹೋಗುವುದು. ಪುನಃ ಬರುವಂತೆ ಇಲ್ಲ. ಆದರೆ ಈ ಪ್ರಪಂಚಕ್ಕೆ ಬಂದ ಮಹಾವ್ಯಕ್ತಿಯನ್ನು ನೋಡಿ. ಈತ ಬಂದು ಹಲವು ಶತಮಾನಗಳಾದವು. ಆದರೂ ಅವನು ಈ ಪ್ರಪಂಚಕ್ಕೆ ಕೊಟ್ಟ ಶಕ್ತಿ ಇನ್ನೂ ಖರ್ಚಾಗಿಲ್ಲ ; ಇನ್ನೂ ಪೂರ್ಣವಾಗಿ ಹರಡಿಲ್ಲ. ಕಾಲ ಕಳೆದಂತೆ ಇದು ಮತ್ತೂ ಪ್ರಬಲವಾಗುತ್ತ ಬರುವುದು.

೧೦. ಟ್ರಿನಿಟಿಯಲ್ಲಿರುವ ಕ್ರಿಸ್ತ ನಮಗಿಂತ ಮೇಲೇನೊ ಇರುವನು ; ಯೂನಿಟೇರಿಯನ್ನರ ಕ್ರಿಸ್ತ ಒಬ್ಬ ಸಾಧಾರಣ ಮಾನವ. ಇವರಿಬ್ಬರೂ ನಮಗೆ

ಸಹಾಯ ಮಾಡಲಾರರು. ಯಾರು ದೇವರ ಅವತಾರವಾಗಿದ್ದನೊ, ಯಾರು ತನ್ನ ದೈವತ್ವವನ್ನು ಮರೆತಿರಲಿಲ್ಲವೊ ಆ ಕ್ರಿಸ್ತ ನಮಗೆ ಸಹಾಯ ಮಾಡಬಲ್ಲ. ಅಲ್ಲಿ ಅಪೂರ್ಣತೆ ಇಲ್ಲ. ಅವತಾರ ವ್ಯಕ್ತಿಗಳಿಗೆ ಯಾವಾಗಲೂ ಅವರ ದೈವತ್ವ ನೆನಪಿನಲ್ಲಿರುವುದು, ಹುಟ್ಟಿನಿಂದಲೂ ಅವರಿಗೆ ಅದು ಗೊತ್ತು. ತಮ್ಮ ಪಾತ್ರವನ್ನು ಅಭಿನಯಿಸಿದ ಪಾತ್ರಿಗಳಂತೆ ಇವರು. ಆದರೆ ಇತರರ ಕೋರಿಕೆಯ ಮೇಲೆ ಅವರು ಪುನಃ ಬರುವರು. ಈ ಮಹಾ ವ್ಯಕ್ತಿಗಳನ್ನು ಪ್ರಪಂಚದ ಕಶ್ಮಲತೆ ಸೋಂಕದು. ನಮಗೆ ಬೋಧಿಸುವುದಕ್ಕಾಗಿ ತಾತ್ಕಾಲಿಕವಾಗಿ ನಮ್ಮಂತೆ ದೇಹ ಧರಿಸಿ, ನಮ್ಮಂತೆ ಮಿತಿಗೆ ಒಳಗಾಗುವರು. ಆದರೆ ಅವರಿಗೆ ಯಾವ ಮಿತಿಯೂ ಇಲ್ಲ. ಅವರು ನಿತ್ಯಮುಕ್ತರು.

೭ ಕ್ರೈಸ್ತಧರ್ಮ

೧. ಕ್ರೈಸ್ತಧರ್ಮದ ಅತಿ ಉದಾತ್ತವಾದ ಭವ್ಯವಾದ ಭಾವನೆಗಳನ್ನು ಯೂರೋಪ್ ಸರಿಯಾಗಿ ತಿಳಿದುಕೊಳ್ಳಲೇ ಇಲ್ಲ. ಏಕೆಂದರೆ ಬೈಬಲಿನಲ್ಲಿ ಬರುವ ಭಾವನೆ ಮತ್ತು ಚಿತ್ರಗಳು ಐರೋಪ್ಯರಿಗೆ ಹೊಸದು. ಕ್ರಿಸ್ತನ ಅತ್ಯಮೋಘವಾದ ಧರ್ಮ, ಕಥೆ ಪುರಾಣಗಳಿಂದ ಸುತ್ತುವರಿಯಲ್ಪಟ್ಟಿರುವುದರಿಂದ ಅದು ಜನರಿಗೆ ತಿಳಿದಿರುವುದು ಅತ್ಯಲ್ಪ. ಜನ ಅದನ್ನು ಒಬ್ಬ ದಳಾಳಿಯ ಧರ್ಮವನ್ನಾಗಿ ಮಾಡಿರುವುದು ಒಂದು ಆಶ್ಚರ್ಯವೇನೂ ಅಲ್ಲ.

೨. "ಜಾಗ್ರತರಾಗಿ ಪ್ರಾರ್ಥಿಸಿ, ಸ್ವರ್ಗ ನಿಮ್ಮ ಸಮೀಪದಲ್ಲಿಯೇ ಇರುವುದು" ಎಂದರೆ, ನಿಮ್ಮ ಹೃದಯವನ್ನು ಶುದ್ಧಿಮಾಡಿ ಅಣಿಯಾಗಿರಿ ಎಂದು. ಆತ್ಮ ಎಂದಿಗೂ ನಾಶವಾಗುವುದಿಲ್ಲ. ಕ್ರೈಸ್ತರು ತಮ್ಮ ಅತ್ಯಂತ ಕಷ್ಟಕಾಲದಲ್ಲಿಯೂ, ತುಂಬಾ ಮೂಢರಾದ ಕ್ರೈಸ್ತರು ಕೂಡ ಭಗವಂತನನ್ನು ಸ್ವಾಗತಿಸುವುದಕ್ಕೆ ಇತರರಿಗೆ ಸಹಾಯ ಮಾಡುತ್ತ ಔಷಧಾಲಯಗಳನ್ನು ಕಟ್ಟುತ್ತಾ ಅಣಿಯಾಗುತ್ತಿದ್ದರು. ಎಲ್ಲಿಯವರೆಗೆ ಕ್ರೈಸ್ತರು ಈ ಆದರ್ಶವನ್ನು ಮರೆಯುವುದಿಲ್ಲವೋ ಅಲ್ಲಿಯವರೆಗೆ ಅವರ ಧರ್ಮ ಜೀವಂತವಾಗಿರುವುದು.

೩. ಹಿಂದೂಗಳಿಗೂ ಕ್ರೈಸ್ತರಿಗೂ ಇರುವ ವ್ಯತ್ಯಾಸವೇ ಇದು : ಪ್ರತಿಯೊಂದು ಜೀವಿ ಹುಟ್ಟಿದಾಗ ಅವನಾತ್ಮ ಜನಿಸಿತು ಎನ್ನುವರು ಕ್ರೈಸ್ತರು. ಆದರೆ ಹಿಂದೂಗಳಾದರೊ ಜೀವ ಭಗವಂತನಿಂದ ಆವಿರ್ಭವಿಸಿತು, ಭಗವಂತನಿಗೆ ಹೇಗೆ ಆದಿ ಇಲ್ಲವೋ ಹಾಗೆಯೇ ಜೀವ ಕೂಡ ಎನ್ನುವರು. ಜೀವ ಮುಕ್ತಿಯನ್ನು ಪಡೆಯುವವರೆಗೆ ತನ್ನ ಕರ್ಮಾನುಸಾರ ಹಲವು ಜನ್ಮಗಳನ್ನು ತಾಳುತ್ತ ಹೋಗುವುದು.

೪. ಪ್ರತಿಯೊಂದು ಧರ್ಮದಲ್ಲಿಯೂ ದೇವರ ಉಪಾಸನೆಯಲ್ಲಿ ಈ ಮೂರು ವಿಷಯಗಳು ಇರುತ್ತವೆ. ಅವೇ ಆಕಾರ ಅಥವಾ ಚಿಹ್ನೆ, ಹೆಸರು ಮತ್ತು ಮಹಾತ್ಮರು. ಪ್ರತಿಯೊಂದು ಧರ್ಮದಲ್ಲಿಯೂ ಇವು ಇವೆ. ಆದರೆ ಒಂದು ಮತ್ತೊಂದು ಧರ್ಮದೊಡನೆ ಹೋರಾಡುತ್ತದೆ. ಕೆಲವರು "ನಮ್ಮ ದೇವರ ಹೆಸರೇ ನಿಜ. ನಮ್ಮ ದೇವರ ಆಕಾರವೇ ನಿಜ, ನಮ್ಮ ಭಗವತ್ ಭಕ್ತರೇ ನಿಜವಾದ ಭಕ್ತರು, ಉಳಿದುವುಗಳೆಲ್ಲ ಕಂತೆ ಪುರಾಣ" ಎನ್ನುವರು. ಈಗಿನ ಕಾಲದ

ಕ್ರೈಸ್ತ ಪಾದ್ರಿಗಳಾದರೊ ಸ್ವಲ್ಪ ಉದಾರ ಬುದ್ಧಿಯನ್ನು ತೋರುವರು, ಹಿಂದಿನ ಧರ್ಮಗಳು ಮುಂದೆ ಬರುವ ಕ್ರೈಸ್ತಧರ್ಮ ಹೇಗಿರಬಲ್ಲದೆಂಬ ಮುನ್ ಸೂಚನೆ ಎಂದು ಹೇಳಿ, ಕ್ರೈಸ್ತಧರ್ಮ ಒಂದೇ ನಿಜವಾದ ಧರ್ಮ ಎನ್ನುವರು. ದೇವರು ಮುಂಚೆ ಎಲ್ಲಾ ಧರ್ಮಗಳನ್ನೂ ಪರೀಕ್ಷಿಸಿ ಕೊನೆಗೆ ಕ್ರೈಸ್ತ ಧರ್ಮವನ್ನು ಸೃಷ್ಟಿಸಿದನು ಎನ್ನುವರು. ಇದು ಕೂಡ ಎಷ್ಟೋ ಪ್ರಗತಿಗಾಮಿ ಎನ್ನಬಹುದು. ಐವತ್ತು ವರುಷಗಳ ಹಿಂದೆ ಇದನ್ನೂ ಹೇಳುತ್ತಿರಲಿಲ್ಲ, ಕ್ರೈಸ್ತಧರ್ಮ ವಿನಃ ಮತ್ತಾವುದೂ ನಿಜ ಎಂದು ಭಾವಿಸಿರಲಿಲ್ಲ. ಈ ಭಾವನೆ ಯಾವುದೋ ಒಂದು ಧರ್ಮದ ಜನ ಅಥವಾ ಮತದವರು ಮಾತ್ರ ಯೋಚಿಸುವುದಲ್ಲ. ತಾವು ಯಾವು ದನ್ನು ಸರಿ ಎಂದು ಭಾವಿಸುವರೊ ಪ್ರಪಂಚದಲ್ಲಿ ಅದೊಂದೇ ಸರಿ ಎನ್ನುವುದು ಮಾನವ ಸ್ವಭಾವ. ಇಲ್ಲಿಯೇ ಅನ್ಯಧರ್ಮಗಳ ಅಧ್ಯಯನ ನಮಗೆ ಸಹಾಯ ಮಾಡುವುದು. ಯಾವ ಭಾವನೆಯನ್ನು ನಮ್ಮದು ಎಂದು ಈಗ ಹೇಳುತ್ತಿರು ವೆವೋ ಅದನ್ನು ನೂರಾರು ವರುಷಗಳ ಹಿಂದೆ ಇತರರೂ ಯೋಚಿಸಿದ್ದರು, ಈಗ ನಾನು ಅದನ್ನು ವಿವರಿಸುವುದಕ್ಕಿಂತ ಚೆನ್ನಾಗಿ ವಿವರಿಸಿದ್ದರು ಎಂದು ಗೊತ್ತಾಗು ವುದು.

೫. ಕ್ರೈಸ್ತರು ತಾವು ಮಾತ್ರ ಸರಿ, ಉಳಿದವರು ತಪ್ಪು ಎನ್ನುತ್ತಾರೆ. ಅವರಿಗೆ ಕ್ರೈಸ್ತ ಧರ್ಮದ ಜ್ಯೋತಿ ಬೇಕಾಗಿದೆ. ಎಲ್ಲಾ ಧರ್ಮಗಳ ಮೂಲದಲ್ಲಿ ಒಂದೇ ಸತ್ಯವಿದೆ. ಒಂದು ಆದರ್ಶಕ್ಕಾಗಿ ಪ್ರಪಂಚ ಒಟ್ಟು ಕಲೆಯಬೇಕಾದರೆ ಕ್ರೈಸ್ತರು ಉದಾರಿಗಳಾಗಬೇಕು. ದೇವರು ಎಲ್ಲಾ ಹೃದಯದಲ್ಲಿಯೂ ಸಾಕ್ಷಿ ಯಂತೆ ಇರುವನು. ಯಾರು ಕ್ರಿಸ್ತನ ಅನುಯಾಯಿಗಳೊ ಅವರು ಇದನ್ನು ಗಮ ನಿಸಬೇಕಾಗಿದೆ. ಕ್ರಿಸ್ತ ಪ್ರತಿಯೊಬ್ಬ ಒಳ್ಳೆಯ ಮನುಷ್ಯನನ್ನೂ ಭಗವಂತನ ಸಾನ್ನಿ ಧ್ಯಕ್ಕೆ ತೆಗೆದುಕೊಳ್ಳಲು ಸಿದ್ಧನಾಗಿದ್ದ. ಏನನ್ನೂ ನಂಬುವವನಲ್ಲ, ಭಗವಂತನ ಆಣತಿಯನ್ನು ಪರಿಪಾಲಿಸುವವನು ಯೋಗ್ಯ. ಸರಿಯಾಗಿರುವುದು, ಸರಿಯಾ ಗಿರುವುದನ್ನು ಮಾಡುವುದು—ಈ ಆದರ್ಶದ ಆಧಾರದ ಮೇಲೆ ಮಾತ್ರ ಎಲ್ಲರೂ ಒಟ್ಟು ಕಲೆಯಲು ಸಾಧ್ಯ.

೮ ಏಕಾಗ್ರತೆ

೧. ಮಾನಸಿಕ ಶಕ್ತಿಯನ್ನು ಏಕಾಗ್ರಗೊಳಿಸದೆ ಪ್ರಪಂಚದ ಜ್ಞಾನ ಭಂಡಾರ ದೊರಕಿತೇನು ? ಪ್ರಪಂಚ ತನ್ನ ರಹಸ್ಯಗಳನ್ನು ನಮಗೆ ಕೊಡಲು ಸಿದ್ಧವಾಗಿದೆ. ಆದರೆ ಹೇಗೆ ಆದರ ಬಾಗಿಲನ್ನು ತಟ್ಟಬೇಕು, ಅದನ್ನು ಹೇಗೆ ತೆಗೆಯಬೇಕೆಂಬು ದನ್ನು ನಾವು ಅರಿತಿರಬೇಕು. ತಟ್ಟುವ ಶಕ್ತಿ ಮತ್ತು ಉದ್ವೇಗ ಏಕಾಗ್ರತೆಯಿಂದ ಲಭಿಸುವುದು. ಮಾನಸಿಕ ಶಕ್ತಿಗೆ ಒಂದು ಮಿತಿ ಇಲ್ಲ. ಮನಸ್ಸನ್ನು ಏಕಾಗ್ರ ಮಾಡಿದಷ್ಟೂ ಅದು ಬಲವಾಗುವುದು. ಇದೇ ಅದರ ರಹಸ್ಯ.

೨. ಮನಸ್ಸು ಹಲವು ವಸ್ತುಗಳನ್ನು ತೆಗೆದುಕೊಳ್ಳುವುದು. ಹಲವು ವಸ್ತು ಗಳನ್ನು ಬೆನ್ನಟ್ಟಿಕೊಂಡು ಹೋಗುವುದು. ಇದು ಮನಸ್ಸಿನ ಕೆಳಗಿನ ಅವಸ್ಥೆ. ಮನಸ್ಸಿನ ಮೇಲಿನ ಅವಸ್ಥೆಯೊಂದಿರುವುದು. ಅಲ್ಲಿ ಯಾವುದಾದರೂ ಒಂದು ವಸ್ತುವನ್ನು ತೆಗೆದುಕೊಂಡು ಉಳಿದುದನ್ನೆಲ್ಲಾ ತ್ಯಜಿಸುವುದು. ಆಗ ಸಮಾಧಿ ಲಭಿಸುವುದು.

೩. ಸತತ ಏಕಾಗ್ರತೆಯ ಪ್ರವಾಹ ಪ್ರತಿದಿನದ ಅಭ್ಯಾಸದಿಂದ ಅವಿಚ್ಛಿನ್ನ ವಾಗುವುದು. ಮನಸ್ಸಿಗೆ ಸದಾ ಏಕಾಗ್ರ ಮಾಡಬಲ್ಲ ಶಕ್ತಿ ದೊರಕುವುದು.

೪. ಮನಸ್ಸಿಗೆ ಏಕಾಗ್ರತೆ ಸಿದ್ಧಿಸಿದೆ ಎಂದು ನಮಗೆ ಹೇಗೆ ಗೊತ್ತಾಗ ಬೇಕು ? ಆ ಸಮಯದಲ್ಲಿ ಕಾಲದ ಭಾವನೆಯೇ ಇರುವುದಿಲ್ಲ. ಎಷ್ಟು ನಮಗೆ ಕಾಲದ ಅರಿವಿರುವುದಿಲ್ಲವೊ ಅಷ್ಟು ನಮ್ಮ ಮನಸ್ಸು ಏಕಾಗ್ರವಾಗಿದೆ ಎಂದು ಭಾವಿಸಬೇಕು. ನಮ್ಮ ನಿತ್ಯಜೀವನದಲ್ಲಿ ನಾವು ಯಾವುದಾದರೂ ಪುಸ್ತಕವನ್ನು ಓದುವುದರಲ್ಲಿ ತಲ್ಲೀನರಾಗಿದ್ದರೆ ಕಾಲದ ಭಾವನೆ ನಮಗೆ ಗೊತ್ತೇ ಆಗುವುದಿಲ್ಲ. ಆ ಪುಸ್ತಕವನ್ನು ಇಟ್ಟಮೇಲೆ ಆಗಲೇ ಅಷ್ಟು ಹೊತ್ತಾಗಿರುವುದನ್ನು ನೋಡಿ ಆಶ್ಚರ್ಯವಾಗುವುದು. ಕಾಲವೆಲ್ಲ ವರ್ತಮಾನದಲ್ಲಿ ನಿಂತಂತೆ ಕಾಣುವುದು. ಭೂತ ಮತ್ತು ವರ್ತಮಾನ ಕಾಲವೆಲ್ಲ ಸದ್ಯದಲ್ಲಿ ಇರುವಂತೆ ಕಂಡಾಗ ಮನಸ್ಸು ಏಕಾಗ್ರ ವಾಗಿದೆ ಎಂಬ ವಿವರಣೆ ಕೊಡುವರು.

೫. ಪ್ರಾಣಿಗಳಿಗೂ ಮನುಷ್ಯನಿಗೂ ಇಲ್ಲೇ ವ್ಯತ್ಯಾಸ ಇರುವುದು. ಮನುಷ್ಯನಿಗೆ ಏಕಾಗ್ರತೆ ಹೆಚ್ಚು. ಒಬ್ಬ ಮನುಷ್ಯನಿಗೂ ಮತ್ತೊಬ್ಬ ಮನುಷ್ಯ ನಿಗೂ ಇರುವ ವ್ಯತ್ಯಾಸಕ್ಕೆ ಕಾರಣ ಕೂಡ ಅವರ ಏಕಾಗ್ರತೆಯ ಶಕ್ತಿಯ ಹೆಚ್ಚು

ಕಡಿಮೆಯಲ್ಲಿದೆ. ಅತಿ ಕೆಳಗಿರುವ ಮನುಷ್ಯನನ್ನು ಅತಿ ಉತ್ತಮನೊಂದಿಗೆ ಹೋಲಿಸಿ ನೋಡಿ. ಅವರ ಏಕಾಗ್ರತೆಯು ತರತಮದಲ್ಲಿ ವ್ಯತ್ಯಾಸವಿದೆ, ಇದೊಂದೇ ಅವರ ವ್ಯತ್ಯಾಸಕ್ಕೆ ಕಾರಣ.

೬. ಪ್ರತಿಯೊಬ್ಬರ ಮನಸ್ಸೂ ಕೆಲವು ವೇಳೆ ಏಕಾಗ್ರವಾಗುವುದು. ನಾವೆಲ್ಲ ಪ್ರೀತಿಸುವ ವಸ್ತುವಿನ ಮೇಲೆ ಏಕಾಗ್ರಗೊಳಿಸುವೆವು. ನಮ್ಮ ಮನಸ್ಸನ್ನು ಯಾವ ವಸ್ತುವಿನ ಮೇಲೆ ಏಕಾಗ್ರಗೊಳಿಸಬಹುದೊ ಅದನ್ನು ನಾವು ಪ್ರೀತಿಸುವೆವು.

೭. ನಾವು ವಸ್ತುವನ್ನು ಚಿಂತಿಸಬೇಕೇ ಹೊರತು ವಸ್ತುಗಳು ನಮ್ಮನ್ನು ಸೆಳೆಯಬಾರದು. ಕೆಲವು ವೇಳೆ ಯಾವುದೋ ನಮ್ಮನ್ನು ಏಕಾಗ್ರ ಮಾಡುವಂತೆ ಬಲಾತ್ಕರಿಸುವುದು. ಕೆಲವು ವಸ್ತುಗಳಲ್ಲಿರುವ ಆಕರ್ಷಣೆಗೆ ಒಳಗಾಗಿ ನಮ್ಮ ಮನಸ್ಸು ಏಕಾಗ್ರವಾಗುವುದು. ನಾವು ಅದನ್ನು ತಡೆಯುವುದಕ್ಕೇ ಆಗುವುದಿಲ್ಲ. ಮನಸ್ಸನ್ನು ನಿಗ್ರಹಿಸಬೇಕಾದರೆ, ಅದನ್ನು ಬೇಕಾದ ಕಡೆ ಇಡಬೇಕಾದರೆ, ಅದಕ್ಕೆ ಬೇರೊಂದು ಬಗೆಯ ಅಭ್ಯಾಸವನ್ನು ಕೊಡಬೇಕು. ಅದಕ್ಕೆ ಬೇರೆ ಮಾರ್ಗವೇ ಇಲ್ಲ. ಧಾರ್ಮಿಕ ಅಧ್ಯಯನದಲ್ಲಿ ಮನಸ್ಸಿನ ಏಕಾಗ್ರತೆ ಅತ್ಯಾವಶ್ಯಕ. ಇಲ್ಲಿ ಮನಸ್ಸನ್ನೇ ಮನಸ್ಸಿನ ಮೇಲೆಯೇ ಏಕಾಗ್ರಗೊಳಿಸಬೇಕಾಗಿದೆ.

೮. ದೇವರನ್ನು ನೋಡಲು ನಮಗೆ ಸಹಾಯ ಮಾಡುವುದು ಏಕಾಗ್ರತೆಯೊಂದೇ. ನಿಮಗೆ ನಿಮ್ಮ ಆತ್ಮ ಒಂದು ಗೊತ್ತಾದರೆ, ಎಲ್ಲಾ ಆತ್ಮಗಳನ್ನೂ ಹಿಂದಿನ, ಈಗಿನ, ಮುಂದಿನ ಆತ್ಮಗಳನ್ನೆಲ್ಲಾ ತಿಳಿದುಕೊಳ್ಳಬಲ್ಲಿರಿ. ಇಚ್ಛಾ ಶಕ್ತಿ ಮನಸ್ಸನ್ನು ಏಕಾಗ್ರಗೊಳಿಸುವುದು; ಕೆಲವು ಇಚ್ಛಾಶಕ್ತಿಯನ್ನು ಉದ್ರೇಕಗೊಳಿಸುತ್ತವೆ. ಅವೇ ವಿಚಾರ, ಪ್ರೀತಿ, ಭಕ್ತಿ ಮತ್ತು ಪ್ರಾಣಾಯಾಮ ಮುಂತಾದುವು. ಏಕಾಗ್ರವಾದ ಮನಸ್ಸು ಒಂದು ದೀಪದಂತೆ. ಅದು ಒಳಗಿರುವ ಎಲ್ಲವನ್ನೂ ತೋರುವುದು.

೯. ಪ್ರಶ್ನೆ : ಏಕಾಗ್ರತೆ ಸಿದ್ಧಿಸಿದ ಮೇಲೆಯೂ ಆಸೆಗಳು ಏಳುವುದಕ್ಕೆ ಕಾರಣವೇನು ?

ಉತ್ತರ : ಅವೆಲ್ಲಾ ನಮ್ಮ ಸಂಸ್ಕಾರದ ಪರಿಣಾಮ. ಬುದ್ಧ ಇನ್ನೇನು ನಿರ್ವಿಕಲ್ಪ ಸಮಾಧಿಯನ್ನು ಪಡೆಯುವುದರಲ್ಲಿದ್ದ. ಆಗ ಮಾರ ಬಂದ. ಅವನ ಮನಸ್ಸಿನ ಹೊರಗೆ ನಿಜವಾದ ಮಾರನಿರಲಿಲ್ಲ, ಅವೆಲ್ಲಾ ಮನಸ್ಸಿನಲ್ಲಿದ್ದ ಹಿಂದಿನ ಸಂಸ್ಕಾರಗಳ ಬಾಹ್ಯ ಪ್ರತಿಬಿಂಬಗಳು.

೧೦. ಏಕಾಗ್ರತೆಯೇ ಎಲ್ಲಾ ಜ್ಞಾನದ ಸಾರ. ಏಕಾಗ್ರತೆಯಿಲ್ಲದೆ ಏನನ್ನೂ ಪಡೆಯಲಾರೆವು. ಸಾಧಾರಣ ಮನುಷ್ಯರು ತಮ್ಮ ಮನಸ್ಸಿನ ಶೇಕಡ ತೊಂಬತ್ತು

ರಷ್ಟು ಶಕ್ತಿಯನ್ನು ವ್ಯರ್ಥಮಾಡುತ್ತಿರುವರು. ಆದಕ್ಕೇ ಪದೇ ಪದೇ ತಪ್ಪು ಮಾಡುತ್ತಿರುವುದು. ಶಿಕ್ಷಿತ ಮನುಷ್ಯ ಎಂದಿಗೂ ತಪ್ಪು ಮಾಡುವುದಿಲ್ಲ.

೧೧. ಮನಸ್ಸು ಏಕಾಗ್ರವಾಗಿ ನಮ್ಮ ಮೇಲೆಯೇ ಯಾವಾಗ ಅದು ಪ್ರತಿಬಿಂಬಿತವಾಗುವುದೋ ಆಗ ನಮ್ಮಲ್ಲಿರುವದೆಲ್ಲ ನಮಗೆ ಸೇವಕರಾಗುವುವು, ಯಜಮಾನರಾಗುವುದಿಲ್ಲ. ಹಿಂದೂ ಏಕಾಗ್ರ ಮನಸ್ಸನ್ನು ಅಂತರ್ಮುಖಿಗೊಳಿಸಿದ, ನಮಗೆ ಅಗೋಚರವಾದ ಆತ್ಮಪ್ರಪಂಚದ ಕಡೆ ತಿರುಗಿಸಿದ. ಇದರಿಂದ ಯೋಗ ಶಾಸ್ತ್ರ ಬೆಳೆಯಿತು. ಇಂದ್ರಿಯ, ಮನಸ್ಸು, ಇಚ್ಛಾಶಕ್ತಿಗಳನ್ನು ನಿಗ್ರಹಿಸುವುದೇ ಯೋಗಶಾಸ್ತ್ರ. ಇದರಿಂದ ಆಗುವ ಪ್ರಯೋಜನವೇ, ಅವು ಎಂದರೆ ಇಂದ್ರಿಯಾದಿಗಳು ನಮ್ಮನ್ನು ಆಳುವ ಬದಲು ನಾವು ಅವುಗಳನ್ನು ಆಳುತ್ತೇವೆ. ಮನಸ್ಸಿಗೆ ಅನೇಕ ಪದರಗಳಿವೆ. ನಮ್ಮ ನಿಜವಾದ ಗುರಿಯೇ ಈ ಪದರಗಳನ್ನೆಲ್ಲಾ ದಾಟಿ ದೇವರನ್ನು ಕಾಣುವುದು.

೧೨. ರಾಜಯೋಗ ಬೋಧಿಸುವುದೇ ಇದನ್ನು. ರಾಜಯೋಗದ ಉದ್ದೇಶವೆ ಮನಸ್ಸನ್ನು ನಿಗ್ರಹಿಸುವುದು ಹೇಗೆ, ನಮ್ಮ ಮನಸ್ಸಿನ ಅಂತರಾಳದಲ್ಲಿ ಏನೇನು ಹುದುಗಿಕೊಂಡಿದೆ ಎಂಬುದನ್ನು ಅರಿಯುವುದು. ಅವುಗಳನ್ನೆಲ್ಲಾ ಒಂದು ನಿಯಮಕ್ಕೆ ತಂದು ಅವುಗಳಿಂದ ಒಂದು ಇತ್ಯರ್ಥಕ್ಕೆ ಬರುವುದು. ಆದ ಕಾರಣವೆ ಇದು, ನಮ್ಮ ಧರ್ಮ ಯಾವುದೆಂದು ಪ್ರಶ್ನಿಸುವುದಿಲ್ಲ. ನಾವು ಆಸ್ತಿಕರೆ, ನಾಸ್ತಿಕರೆ, ಕ್ರಿಸ್ತರೇ, ಯಹೂದ್ಯರೆ, ಬೌದ್ಧರೆ ಯಾವುದನ್ನೂ ಕೇಳುವುದಿಲ್ಲ. ನಾವೆಲ್ಲ ಮಾನವರು. ಅದೇ ಸಾಕು. ಪ್ರತಿಯೊಬ್ಬ ಮಾನವನಿಗೂ ಧರ್ಮವನ್ನು ಹುಡುಕುವ ಅಧಿಕಾರವಿದೆ, ಅದನ್ನು ತಿಳಿದುಕೊಳ್ಳುವ ಶಕ್ತಿ ಇದೆ. ಪ್ರತಿಯೊಬ್ಬನೂ ಇದು ಹೇಗೆ ಎಂದು ಕೇಳಬಹುದು. ಅವನು ಸಾಕಷ್ಟು ತೊಂದರೆ ತೆಗೆದುಕೊಂಡರೆ ಈ ಪ್ರಶ್ನೆಯನ್ನು ತಾನೇ ಬಗೆಹರಿಸಿಕೊಳ್ಳಬಲ್ಲ.

೯ ಕರ್ತವ್ಯ

೧. ಕರ್ತವ್ಯದ ಭಾವನೆ ಒಂದೊಂದು ದೇಶದಲ್ಲಿ ಒಂದೊಂದು ವಿಧ ಇದೆ. ಒಂದು ದೇಶದಲ್ಲಿ ಒಬ್ಬನು ಒಂದು ಕೆಲಸವನ್ನು ಮಾಡದೆ ಇದ್ದರೆ ಅವನು ತಪ್ಪು ಮಾಡಿದ ಎನ್ನುವರು. ಅದೇ ಕೆಲಸವನ್ನು ಇನ್ನೊಂದು ಕಡೆ ಮಾಡಿದರೆ ಅವನು ಮಾಡಿದ್ದು ಸರಿಯಲ್ಲ ಎನ್ನುವರು. ಆದರೂ ಸರ್ವ ಸಾಮಾನ್ಯವಾದ ಕರ್ತವ್ಯವೆಂಬುದೊಂದು ಇದೆ ಎಂದು ನಾವು ಭಾವಿಸುವೆವು. ನೀತಿ ಮತ್ತು ಕರ್ತವ್ಯದಲ್ಲಿ ತರತಮಗಳಿವೆ ಎಂಬುದನ್ನು ನಾವು ಗಮನಿಸಬೇಕು. ಇದು ಬಹಳ ಮುಖ್ಯ. ಯಾರೋ ಒಂದು ಆಶ್ರಮದಲ್ಲಿ ಮತ್ತು ಒಂದು ವಾತಾವರಣದಲ್ಲಿ ಮಾಡಿದ ಕರ್ತವ್ಯವೇ ಎಲ್ಲರಿಗೂ ಸರಿಯಲ್ಲ.

೨. ನಮ್ಮ ಪ್ರಥಮ ಕರ್ತವ್ಯವೇ ನಮ್ಮಲ್ಲಿ ಆತ್ಮನಿಂದನೆ ಇರಕೂಡದು. ನಾವು ಮುಂದುವರಿಯಬೇಕಾದರೆ ಮೊದಲು ನಮ್ಮಲ್ಲಿ ಆತ್ಮಶ್ರದ್ಧೆ ಇರಬೇಕು, ನಂತರ ಭಗವಂತನಲ್ಲಿ ಶ್ರದ್ಧೆ ಇರಬೇಕು. ಯಾರಿಗೆ ಆತ್ಮಶ್ರದ್ಧೆ ಇಲ್ಲವೋ ಅವನಿಗೆ ದೇವರ ಮೇಲೆ ಶ್ರದ್ಧೆಯೂ ಇಲ್ಲ.

೩. ಕರ್ತವ್ಯ ಎಂದರೆ ಏನು ಎಂಬುದನ್ನು ಬಾಹ್ಯವಾಗಿ ವಿವರಿಸುವುದಕ್ಕೆ ಸಾಧ್ಯವೇ ಇಲ್ಲ. ಆದರೂ ವ್ಯಕ್ತಿಯ ದೃಷ್ಟಿಯಿಂದ ಕರ್ತವ್ಯಗಳಿವೆ. ಯಾವುದು ನಮ್ಮನ್ನು ದೇವರ ಕಡೆಗೆ ಹೋಗುವಂತೆ ಮಾಡುವುದೊ ಅದು ಪುಣ್ಯ, ಅದು ನಮ್ಮ ಕರ್ತವ್ಯ. ಯಾವುದು ದೇವರಿಗೆ ವಿರೋಧವಾಗಿ ಹೋಗುವಂತೆ ಮಾಡುವುದೋ ಅದು ಪಾಪ, ಅದು ನಮ್ಮ ಕರ್ತವ್ಯವಲ್ಲ.

೪. ಪ್ರತಿಯೊಬ್ಬನೂ ತನ್ನ ಆದರ್ಶವನ್ನು ಆರಿಸಿಕೊಂಡು ಅದನ್ನು ಸಾಧಿಸುವುದಕ್ಕೆ ಯತ್ನಿಸಬೇಕು. ಇತರರ ಆದರ್ಶವನ್ನು ಅನುಸರಿಸುವುದಕ್ಕಿಂತ ನಮ್ಮ ಆದರ್ಶದ ಮಾರ್ಗದಲ್ಲಿ ಮುಂದುವರಿಯುವುದು ಸುಲಭ. ಇತರರ ಆದರ್ಶವನ್ನು ಸಾಧಿಸುವುದು ಕಷ್ಟ.

೫. ಯಾರೂ ತಮಗೆ ನಿಜವಾಗಿ ತಕ್ಕ ಯೋಗ್ಯತೆ ಇಲ್ಲದೆ ಇದ್ದರೆ ಒಂದು ಸ್ಥಾನದಲ್ಲಿ ಬಹಳ ಕಾಲ ನಿಲ್ಲಲಾರರು. ಪ್ರಕೃತಿ ಯಾರಿಗೆ ಯಾವ ಸ್ಥಾನವನ್ನು ಕೊಟ್ಟಿದೆಯೊ ಅದಕ್ಕಾಗಿ ಗೊಣಗಾಡಿದರೆ ಪ್ರಯೋಜನವಿಲ್ಲ. ಯಾರು ಕೆಳಗಿನ ಕರ್ತವ್ಯವನ್ನು ಮಾಡುವರೊ ಅವರು ಕೀಳು ಮನುಷ್ಯರಲ್ಲ. ಯಾರನ್ನೂ ಅವರು

ಮಾಡುತ್ತಿರುವ ಕೆಲಸದ ದೃಷ್ಟಿಯಿಂದ ಅಳೆಯ ಕೂಡದು. ಅವರು ಆ ಕೆಲಸವನ್ನು ಯಾವ ದೃಷ್ಟಿಯಿಂದ ಮಾಡುತ್ತಿರುವರು ಎಂಬುದನ್ನು ಗಮನಿಸಬೇಕು.

೬. ಯಾವ ಕರ್ತವ್ಯ ನಮಗೆ ಅತ್ಯಂತ ಸಮೀಪದಲ್ಲಿದೆಯೊ, ಯಾವ ಕರ್ತವ್ಯ ಈಗ ನಮ್ಮ ಕೈಯಲ್ಲಿದೆಯೋ, ಅದನ್ನು ನಾವು ಮಾಡಿದರೆ ನಮಗೆ ಶಕ್ತಿ ಬರುವುದು. ಹೀಗೆ ನಾವು ಕ್ರಮೇಣ ನಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದರೆ, ಕೊನೆಗೆ ಜೀವನದಲ್ಲಿ ಅತಿಶ್ರೇಷ್ಠವಾದ ಗೌರವವಾದ ಕರ್ತವ್ಯವನ್ನು ಮಾಡುವ ಭಾಗ್ಯ ನಮ್ಮದಾಗಬಹುದು.

೭. ಪ್ರತಿಯೊಂದು ಕರ್ತವ್ಯವೂ ಪವಿತ್ರವೆ. ಕರ್ತವ್ಯ ಪರಾಯಣತೆಯೆ ಅತಿ ಶ್ರೇಷ್ಠವಾದ ಭಗವಂತನ ಪೂಜೆ.

೮. ನಾವು ಯಾವುದಕ್ಕೆ ಯೋಗ್ಯರೊ ನಮಗೆ ಆ ಸ್ಥಳ ದೊರಕುತ್ತದೆ. ಪ್ರತಿಯೊಂದು ಗೋಲಿಗೂ ಒಂದು ಗುಳಿಯಿದೆ. ಒಬ್ಬನಿಗೆ ಮತ್ತೊಬ್ಬನಿಗಿಂತ ಹೆಚ್ಚು ಯೋಗ್ಯತೆ ಇದ್ದರೆ ಪ್ರಪಂಚ ಅದನ್ನು ಕೂಡ ಕಂಡುಹಿಡಿಯುವುದು. ಯಾವಾಗಲೂ ಅದು ಇದರ ಮೇಲೆ ಕಣ್ಣಿಟ್ಟಿರುವುದು. ಆದಕಾರಣ ಸುಮ್ಮನೆ ಗೊಣಗಾಡಿದರೆ ಪ್ರಯೋಜನವಿಲ್ಲ. ಸುಮ್ಮನೆ ಹೋರಾಡಿ ದೋಷಾರೋಪಣೆ ಮಾಡುತ್ತಿದ್ದರೆ ಏನು ಪ್ರಯೋಜನ? ಯಾರು ತನ್ನ ಪಾಲಿಗೆ ಬಂದ ಸಣ್ಣ ಕೆಲಸಕ್ಕಾಗಿ ಗೊಣಗುತ್ತಾರೆಯೊ ಅವನು ಎಲ್ಲದಕ್ಕೂ ಗೊಣಗುತ್ತಾನೆ. ಎಲ್ಲದಕ್ಕೂ ಗೊಣಗಾಡುತ್ತಾ ಅವನು ದುಃಖದಲ್ಲಿ ಬಾಳುವನು. ಅವನು ಮಾಡಿದ್ದೆಲ್ಲ ಹಾಳು. ಆದರೆ ಯಾರು ತಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಮಾಡುತ್ತಾ ಹೋಗುವರೊ ಅವರಿಗೆ ಗುರಿ ಕಾಣುವುದು. ಇನ್ನೂ ಉತ್ತಮ ಕರ್ತವ್ಯಗಳು ಅವರ ಪಾಲಿಗೆ ಬರುವುದು.

೯. ನೀನು ಯಾವುದಾದರೂ ಕೆಲಸವನ್ನು ಮಾಡುತ್ತಿರುವಾಗ ಅದಲ್ಲದೆ ಬೇರೆ ಯಾವುದನ್ನೂ ಯೋಚಿಸಬೇಡ. ಅದನ್ನು ಒಂದು ಪೂಜೆಯಂತೆ ಮಾಡು, ತತ್ಕಾಲಕ್ಕೆ ನಿನ್ನ ಜೀವನವನ್ನೆಲ್ಲಾ ಅದಕ್ಕೆ ಅರ್ಪಿಸು.

೧೦. ಯಾರು ಫಲಾಪೇಕ್ಷಿಗಳೊ ಅವರೇ ಗೊಣಗಾಡುವುದು ತಮ್ಮ ಪಾಲಿಗೆ ಬಂದ ಕರ್ತವ್ಯಕ್ಕೆ. ಅನಾಸಕ್ತನಿಗೆ ಎಲ್ಲಾ ಕರ್ಮಗಳೂ ಒಂದೇ. ಆದ್ದರಿಂದ ನಮ್ಮ ಸ್ವಾರ್ಥ ಮತ್ತು ಕಾಮವನ್ನು ನಿರ್ಮೂಲಮಾಡಿಕೊಂಡು ಮುಕ್ತಿಯನ್ನು ಪಡೆಯಬಹುದು.

೧೧. ಪ್ರತಿಯೊಬ್ಬರೂ ತಮ್ಮ ಸಮಾನ ಇಲ್ಲ ಎಂದು ಭಾವಿಸುವುದು ಸಾಧಾರಣವಾಗಿದೆ. ಆದರೆ ನಮ್ಮ ಕರ್ತವ್ಯ ನಮ್ಮ ಯೋಗ್ಯತೆಯಿಂದ ನಿರ್ಧರಿಸ

ಲ್ಪಡುವುದು. ನಮ್ಮ ಯೋಗ್ಯತೆ ಇಷ್ಟೇ ಎಂದು ನಾವು ಬಡಪಟ್ಟಿಗೆ ಒಪ್ಪಿಕೊಳ್ಳು ವುದಿಲ್ಲ. ಪೈಪೋಟಿಯಿಂದ ದ್ವೇಷ ಹುಟ್ಟುವುದು. ಅದು ನಮ್ಮ ಹೃದಯದಲ್ಲಿರುವ ದಯೆಯನ್ನು ನಾಶಮಾಡುವುದು. ಗೊಣಗಾಡುವವನಿಗೆ ಎಲ್ಲಾ ಕರ್ತವ್ಯವೂ ಕಹಿಯೇ. ಯಾವುದರಿಂದಲೂ ಅವನಿಗೆ ತೃಪ್ತಿ ಇಲ್ಲ. ಅವನ ಬಾಳೇ ವ್ಯರ್ಥ ವಾಗುವುದು. ಯಾವುದು ನಮ್ಮ ಕರ್ತವ್ಯವೋ ಅದನ್ನು ಮಾಡುತ್ತಾ ಹೋಗೋಣ, ಯಾವಾಗಲೂ ಅದಕ್ಕೆ ಸಿದ್ಧರಾಗಿರೋಣ. ಆಗಲೇ ನಾವು ನಿಜ ವಾಗಿಯೂ ಗುರಿಯನ್ನು ಮುಟ್ಟಬೇಕಾದರೆ.

೧೨. ನಿನ್ನ ಪಾಲಿಗೆ ಬಂದ ಕರ್ತವ್ಯವನ್ನು ನೀನು ಮಾಡಿ ನೀನು ಯೋಗ್ಯ ನಾಗಬೇಕು. ನಮ್ಮ ಕರ್ತವ್ಯವನ್ನು ನಾವು ಮಾಡಿದಮೇಲೆ ಕರ್ತವ್ಯದ ಭಾವನೆ ಯಿಂದ ಪಾರಾಗುವೆವು, ಆಗ ಮಾತ್ರ ದೇವರೇ ಎಲ್ಲವನ್ನೂ ಮಾಡುತ್ತಿರುವವನು ಎಂದು ಗೊತ್ತಾಗುವುದು. ನಾವೆಲ್ಲ ಅವನ ಕೈಯಲ್ಲಿರುವ ಯಂತ್ರ. ಈ ದೇಹ ಗಾಜಿನಂತೆ. ದೇವರೇ ಅದರೊಳಗಿರುವ ದೀಪ. ಯಾವುದು ದೇಹದಿಂದ ಹೊರಗೆ ಹೋಗುತ್ತಿದೆಯೊ ಅದೆಲ್ಲ ದೇವರು. ಅದು ನಿಮಗೆ ಗೊತ್ತಾಗುವುದಿಲ್ಲ. ಇದು ನಾನು ಎಂದು ಭಾವಿಸುವೆ. ಇದೊಂದು ಭ್ರಾಂತಿ. ಭಗವದಿಚ್ಛೆಗೆ ಶಾಂತನಾಗಿ ಶರ ಣಾಗುವುದನ್ನು ನೀನು ಕಲಿಯಬೇಕು. ಕರ್ತವ್ಯವೇ ಅದಕ್ಕೆ ತಕ್ಕ ಶಿಕ್ಷಾಮಂದಿರ. ಈ ಕರ್ತವ್ಯವೇ ನೀತಿ. ಕರ್ತವ್ಯಕ್ಕೆ ಬಾಗುವುದನ್ನು ಚೆನ್ನಾಗಿ ಅಭ್ಯಾಸಮಾಡು. ನಾನೆಂಬ ಭಾವನೆಯಿಂದ ಪಾರಾಗು. ಆಷಾಢಭೂತಿತನ ಬೇಡ. ಆಗ ಮಾತ್ರ ನೀನು ಕರ್ತವ್ಯದ ಭಾವನೆಯಿಂದ ಪಾರಾಗಬಹುದು. ಏಕೆಂದರೆ ಎಲ್ಲಾ ಅವನದೆ. ಆಗ ಮಾತ್ರ ನೀನು ಸ್ವಾಭಾವಿಕವಾಗಿ ಇತರರು ಮಾಡಿದ ಅಪರಾಧವನ್ನು ಕ್ಷಮಿ ಸುತ್ತ ಮರೆಯುತ್ತಾ ಹೋಗುವೆ.

೧೩. ಕರ್ತವ್ಯ ಮಧುರವಾಗಿರುವುದು ಅಪರೂಪ. ಪ್ರೇಮದ ಎಣ್ಣೆಯನ್ನು ಕರ್ತವ್ಯಚಕ್ರಕ್ಕೆ ಲೇಪಿಸಿದಾಗ ಅದು ಸದ್ದಿಲ್ಲದೆ ಹೋಗುತ್ತದೆ. ಇಲ್ಲದೆ ಇದ್ದರೆ ಯಾವಾಗಲೂ ಘರ್ಷಣೆ. ಇಲ್ಲದೆ ಇದ್ದರೆ ತಂದೆತಾಯಿಗಳು ತಮ್ಮ ಮಕ್ಕಳಿಗೆ ಕರ್ತವ್ಯವನ್ನು ಹೇಗೆ ಮಾಡುವರು? ಸತಿ–ಪತಿಗಳು ತಮ್ಮ ಪಾಲಿನ ಕರ್ತವ್ಯವನ್ನು ಹೇಗೆ ಮಾಡುವರು ? ನಮ್ಮ ಜೀವನದಲ್ಲಿ ಪ್ರತಿದಿನ ತಿಕ್ಕಾಟದ ಘರ್ಷಣೆಯನ್ನು ನಾವು ನೋಡುವುದಿಲ್ಲವೆ? ಕರ್ತವ್ಯ ಪ್ರೇಮದಿಂದ ಮಾತ್ರ ಮಧುರವಾಗುವುದು.

೧೪. ದಾಸ್ಯವನ್ನು ಕರ್ತವ್ಯ ಎಂದು ವಿವರಿಸುವುದು ಎಷ್ಟು ಸುಲಭ! ದೇಹಕ್ಕೆ ದೇಹದ ಮೇಲೆ ಇರುವ ಆಕರ್ಷಣೆಯನ್ನು ಕರ್ತವ್ಯ ಎಂದು ವಿವರಿಸು ವುದು ಎಷ್ಟು ಸುಲಭ ! ಜನ ಪ್ರಪಂಚದಲ್ಲಿ ಹೆಣ್ಣಿಗೊ ಹಣಕ್ಕೊ ಹೋರಾಡು

ವರು, ಕಾದಾಡುವರು. ಅನಂತರ ಅದಕ್ಕೆ ಆಸಕ್ತರಾಗುವರು. ನೀವು ಅದನ್ನು ಏತಕ್ಕೆ ಮಾಡುತ್ತೀರಿ ಎಂದು ಕೇಳಿ. ಅವರು ನಮ್ಮ ಕರ್ತವ್ಯ ಎನ್ನುವರು. ಹಣವೊ ಲಾಭವೊ ಇವುಗಳ ಮೇಲಿರುವ ವ್ಯಾಮೋಹ ಜಾಡ್ಯವನ್ನು ಮುಚ್ಚಲು ಮೇಲೆ ಹೂವನ್ನು ಎರಚುವರು.

೧೫. ಕರ್ತವ್ಯ ನಮ್ಮಲ್ಲಿ ಒಂದು ಜಾಡ್ಯವಾಗುವುದು. ಅದು ಯಾವಾಗಲೂ ನಮ್ಮನ್ನು ಮುಂದುಮುಂದಕ್ಕೆ ಸೆಳೆಯುತ್ತಿರುವುದು. ಅದು ನಮ್ಮನ್ನು ಮೆಟ್ಟಿ ಕೊಂಡು ಬಾಳನ್ನೇ ಹಿಂಡುವುದು. ಇದೇ ಮಾನವ ಬಾಳಿನ ಗೋಳು. ಈ ಕರ್ತವ್ಯ ಭಾವನೆ ಉರಿಬೇಸಿಗೆಯ ನಡುಹಗಲಿನಂತೆ. ಮಾನವನ ಅಂತರಾಳವನ್ನು ಸುಟ್ಟು ಹಾಕುವುದು. ಪಾಪ, ಕರ್ತವ್ಯಕ್ಕೆ ದಾಸರಾಗಿರುವವರನ್ನು ನೋಡಿ! ಕರ್ತವ್ಯದಿಂದ ಅವರಿಗೆ ಪ್ರಾರ್ಥನೆ ಮಾಡುವುದಕ್ಕೆ ಕಾಲವಿಲ್ಲ. ಸ್ನಾನ ಮಾಡುವುದಕ್ಕೆ ಕಾಲವಿಲ್ಲ. ಕರ್ತವ್ಯ ಯಾವಾಗಲೂ ಅವರನ್ನು ಮೆಟ್ಟಿಕೊಂಡಿರುವುದು. ಹೊರಗೆ ಹೋಗಿ ಕೆಲಸ ಮಾಡುವರು. ಆಗ ಕರ್ತವ್ಯ ಅವರನ್ನು ಸವಾರಿ ಮಾಡುತ್ತಿರುವುದು. ಮನೆಗೆ ಬಂದು ನಾಳೆ ಮಾಡಬೇಕಾದ ಕರ್ತವ್ಯವನ್ನು ಚಿಂತಿಸುವರು. ಆಗಲೂ ಕರ್ತವ್ಯ ಅವರನ್ನು ಮೆಟ್ಟಿರುವುದು. ಇದು ಗುಲಾಮನ ಬಾಳಿನಂತೆ. ಯಾವಾಗಲೂ ಜೀತಮಾಡುತ್ತಾ ದಾರಿಯಲ್ಲಿ ಸಾಯುವ ಕುದುರೆಯಂತೆ. ಸಾಧಾರಣವಾಗಿ ಭಾವಿಸುವ ಕರ್ತವ್ಯ ಇದು. ಅನಾಸಕ್ತರಾಗಿ ಮಾಡುವುದೇ ನಿಜವಾದ ಕರ್ತವ್ಯ. ನಾವು ಸ್ವತಂತ್ರರಾಗಿ ಕೆಲಸಮಾಡಬೇಕು, ಭಗವಂತನಿಗೆ ಎಲ್ಲವನ್ನೂ ಅರ್ಪಿಸ ಬೇಕು.

೧೦ ಶಿಕ್ಷಣ

೧. ಆಗಲೇ ಇರುವ ಪೂರ್ಣತೆಯನ್ನು ವ್ಯಕ್ತಗೊಳಿಸುವುದೇ ಶಿಕ್ಷಣ.

೨. ಶಿಕ್ಷಣ ಎಂದರೇನು ? ಇದೇನು ಗ್ರಂಥಾಧ್ಯಯನವೆ ? ಅಲ್ಲ. ಇದೇನು ಬೇರೆ ಬೇರೆ ವಿಷಯ ಸಂಗ್ರಹವೊ ? ಅದೂ ಅಲ್ಲ. ಇಚ್ಛಾ ಪ್ರವಾಹ ಮತ್ತು ಅದು ಹೇಗೆ ವ್ಯಕ್ತವಾಗುತ್ತದೆ ಎಂಬುದನ್ನು ಅಭ್ಯಾಸ ಬಲದಿಂದ ನಮ್ಮ ಸ್ವಾಧೀನಕ್ಕೆ ತಂದುಕೊಂಡು ಅದು ಫಲಪ್ರದವಾಗುವಂತೆ ಮಾಡುವುದೇ ವಿದ್ಯಾಭ್ಯಾಸ. ಬಲಾತ್ಕಾರದಿಂದ ಯಾವ ಇಚ್ಛಾ ಪ್ರವಾಹ ತಲೆತಲಾಂತರಗಳಿಂದ ಆತಂಕಕ್ಕೆ ಒಳಗಾಗಿ ಈಗ ಇನ್ನೇನು ಸತ್ತಂತೆ ಇರುವುದೋ ಅದನ್ನು ಶಿಕ್ಷಣ ಎನ್ನುವಿರೇನು? ಇದನ್ನು ಗಮನಿಸಿ. ಆತಂಕಕ್ಕೆ ಒಳಗಾಗಿ ಹೊಸ ಭಾವನೆಗಳು ಮಾತ್ರವಲ್ಲ, ಹಳೆಯ ಭಾವನೆಗಳೂ ಕೂಡ ಮಾಯವಾಗುತ್ತಿವೆ. ಯಾವುದು ಮಾನವನನ್ನು ಕ್ರಮೇಣ ಒಂದು ಯಂತ್ರದಂತೆ ಮಾಡುತ್ತಿರುವುದೋ ಅದು ಶಿಕ್ಷಣವೆ ?

೩. ನಮ್ಮಲ್ಲಿ ಅನೇಕರಿಗೆ ನಿಜವಾದ ಶಿಕ್ಷಣ ಎಂದರೆ ಏನೆಂಬುದೇ ಗೊತ್ತಿಲ್ಲ. ನಾನು ಯಾವುದನ್ನೂ ವಿವರಿಸುವುದಿಲ್ಲ. ಆದರೂ ಅದನ್ನು ನಮ್ಮ ಅಭಿರುಚಿಯ ಪ್ರಕಾಶ ಎನ್ನಬಹುದು. ಅದು ಕೇವಲ ಪದ ಸಂಗ್ರಹವೂ ಅಲ್ಲ, ಅಥವಾ ಪ್ರತಿಯೊಬ್ಬನೂ ಸಾಮರ್ಥ್ಯದಿಂದ ಸರಿಯಾಗಿರುವುದನ್ನು ಇಚ್ಛಿಸುವುದಕ್ಕೆ ಕೊಡುವ ತರಬೇತೂ ಅಲ್ಲ.

೪. ಮಗು ತಾನೇ ಕಲಿಯುವುದು. ಆದರೆ ಅದು ತನ್ನದೇ ರೀತಿಯಲ್ಲಿ ಮುಂದುವರಿಯಲು ನೀವು ಸಹಾಯ ಮಾಡಬಹುದು. ನೀವು ಅದಕ್ಕೆ ಸಕಾರಾತ್ಮಕವಾಗಿ (Positive) ಸಹಾಯ ಮಾಡಲಾರಿರಿ. ನೇತ್ಯಾತ್ಮಕ (Negative) ದೃಷ್ಟಿಯಿಂದ ಸಹಾಯ ಮಾಡಬಹುದು. ಇರುವ ಆತಂಕಗಳನ್ನು ತೆಗೆಯಬಹುದು. ಆಗ ಜ್ಞಾನ ಸ್ವಭಾವತಃ ವಿಕಾಸವಾಗುವುದು. ಸುತ್ತಲೂ ಮಣ್ಣನ್ನು ಸಡಿಲ ಮಾಡಿ, ಆಗ ಬೀಜ ಸುಲಭವಾಗಿ ಬೆಳೆಯುವುದು. ಅದರ ಸುತ್ತಲೂ ಒಂದು ಬೇಲಿ ಹಾಕಿ. ಯಾವುದಾದರೂ ದನಗಳು ಬಂದು ಅದನ್ನು ತಿನ್ನದೆ ಹೋಗಲಿ. ಇಲ್ಲಿಗೆ ನಿಮ್ಮ ಕೆಲಸ ಕೊನೆಗಾಣುವುದು. ನೀವು ಮತ್ತೇನೂ ಮಾಡಲಾರಿರಿ. ಉಳಿದುದೆಲ್ಲಾ ಸ್ವಾಭಾವಿಕವಾಗಿ ಅಂತರಾಳದಿಂದ ವ್ಯಕ್ತವಾಗುವುದು. ಇದರಂತೆಯೇ ಮಗುವಿನ ಶಿಕ್ಷಣ ಕೂಡ. ಮಗು ತನಗೆ ತಾನೇ ಕಲಿಯುವುದು. ನೀವು

ನನ್ನನ್ನು ಕೇಳುವುದಕ್ಕೆ ಬರುತ್ತೀರಿ. ನೀವು ಮನೆಗೆ ಹೋದಮೇಲೆ ನಾನು ಏನು ಹೇಳಿದೆನೊ ಅದನ್ನು ಹೋಲಿಸಿ ನೋಡಿ. ಆಗ ಗೊತ್ತಾಗುವುದು ನೀವು ಅದನ್ನೇ ಆಲೋಚಿಸಿದ್ದಿರಿ ಎಂಬುದು. ನಾನು ಅದನ್ನು ಕೇವಲ ವ್ಯಕ್ತಗೊಳಿಸಿದೆ, ಅಷ್ಟೆ. ನಾನು ನಿಮಗೆ ಏನನ್ನೂ ಬೋಧಿಸಲಾಗುವುದಿಲ್ಲ. ನಿಮಗೆ ನೀವೇ ಕಲಿತುಕೊಳ್ಳ ಬೇಕಾಗಿದೆ. ಆದರೆ ಆ ಭಾವನೆಯನ್ನು ವ್ಯಕ್ತಗೊಳಿಸಿ ನಿಮಗೆ ಬೇಕಾದರೆ ಸಹಾಯ ಮಾಡಬಹುದು.

೫. ಯಾರೂ ಮತ್ತೊಬ್ಬರಿಗೆ ಕಲಿಸಲಾರರು. ಗುರು ತಾನು ಕಲಿಸುತ್ತಿರುವೆ ಎಂದು ಭಾವಿಸುವುದರಿಂದ ಎಲ್ಲರನ್ನೂ ಹಾಳುಮಾಡುವನು. ಪ್ರತಿಯೊಬ್ಬ ನಲ್ಲಿಯೂ, ಒಂದು ಮಗುವಿನಲ್ಲಿ ಕೂಡ ಆಗಲೆ ಜ್ಞಾನವಿದೆ ಎನ್ನುವುದು ವೇದಾಂತ. ಅದು ಕೇವಲ ಜಾಗ್ರತವಾಗಬೇಕಾಗಿದೆ, ಅಷ್ಟೆ. ಇಷ್ಟು ಮಾತ್ರ ಗುರುವಿನ ಕೆಲಸ. ಅವನು ವಿದ್ಯಾರ್ಥಿಗಳಿಗೂ ಇಷ್ಟನ್ನೇ ಮಾಡಬೇಕು. ಮಕ್ಕಳೇ ತಮ್ಮ ಬುದ್ಧಿಯನ್ನು ಉಪಯೋಗಿಸಿ ಅದನ್ನು ಕಾರ್ಯಗತ ಮಾಡುವುದನ್ನು ಕಲಿ ಯಲಿ. ಕೊನೆಗೆ ಎಲ್ಲವೂ ಸುಲಭವಾಗುವುದು.

೬. ನೀವು ಉಪನಿಷತ್ತಿನ ಕಥೆಗಳನ್ನು ಓದಿಲ್ಲವೆ ? ನಾನು ನಿಮಗೊಂದು ಕತೆಯನ್ನು ಹೇಳುತ್ತೇನೆ. ಸತ್ಯಕಾಮ ತನ್ನ ಗುರುವಿನೊಡನೆ ಬ್ರಹ್ಮಚಾರಿಯಾಗಿ ರಲು ಹೋದನು. ಗುರು ಅವನಿಗೆ ನೋಡಿಕೊಳ್ಳುವುದಕ್ಕೆ ಕೆಲವು ಹಸುಗಳನ್ನು ಕೊಟ್ಟು ಕಾಡಿಗೆ ಕಳುಹಿಸಿದನು. ಹಲವು ತಿಂಗಳುಗಳಾದವು. ಮೊದಲಿಗೆ ಎರಡ ರಷ್ಟು ದನಗಳ ಸಂಖ್ಯೆ ಆದದ್ದನ್ನು ಸತ್ಯಕಾಮ ನೋಡಿದ. ಗುರುವಿನ ಬಳಿಗೆ ಹಿಂತಿರುಗೋಣ ಎಂದು ಭಾವಿಸಿದ. ಅವನು ಹಿಂತಿರುಗುತ್ತಿದ್ದಾಗ ಎತ್ತು, ಅಗ್ನಿ ಮತ್ತು ಇನ್ನೂ ಕೆಲವು ಪ್ರಾಣಿಗಳು ಅವನಿಗೆ ಪರಬ್ರಹ್ಮನ ವಿಷಯವನ್ನು ಹೇಳಿ ದವು. ಗುರು ಶಿಷ್ಯನನ್ನು ನೋಡಿದ ತಕ್ಷಣವೆ ಬ್ರಹ್ಮಜ್ಞಾನವನ್ನು ಪಡೆದವನಂತೆ ಶೋಭಿಸುತ್ತಿರುವುದನ್ನು ಕಂಡನು. ಈ ಕಥೆಯಿಂದ ನಾವು ಕಲಿಯುವ ನೀತಿ ಏನೆಂದರೆ, ನಿಸರ್ಗ ಜೀವನದೊಂದಿಗೆ ನಿಕಟಸಂಪರ್ಕವಿದ್ದರೆ ನಿಜವಾದ ವಿದ್ಯೆ ಯನ್ನು ಪಡೆಯಬಹುದು ಎಂಬುದು.

೭. ನನ್ನ ದೃಷ್ಟಿಗೆ ವಿದ್ಯಾಭ್ಯಾಸದ ಸಾರವೆ ಮನಸ್ಸಿನ ಏಕಾಗ್ರತೆಯಲ್ಲಿರು ವುದು ; ವಿಷಯ ಸಂಗ್ರಹದಲ್ಲಿ ಅಲ್ಲ. ನಾನೇನಾದರೂ ಪುನಃ ವಿದ್ಯಾಭ್ಯಾಸವನ್ನು ಕಲಿಯಬೇಕಾದರೆ ಅಲ್ಲಿ ನನಗೇನಾದರೂ ಸ್ವಾತಂತ್ರ್ಯವಿದ್ದರೆ ನಾನು ವಿಷಯ ಗಳನ್ನು ಕಲಿಯುವುದೇ ಇಲ್ಲ. ಮೊದಲು ಏಕಾಗ್ರತೆ ಮತ್ತು ಅನಾಸಕ್ತಿಯ ಶಕ್ತಿ ಯನ್ನು ರೂಢಿಸಿ, ಅನಂತರ ಬೇಕಾದಾಗ ವಿಷಯ ಸಂಗ್ರಹ ಮಾಡುವೆ. ಮಗುವಿ

ಸಲ್ಲಿ ಏಕಾಗ್ರತೆಯೊಡನೆ ಅನಾಸಕ್ತಿಯನ್ನೂ ರೂಢಿಸಿಕೊಳ್ಳುವಂತೆ ಮಾಡಬೇಕು.

೮. ಯಾರಾದರೊಬ್ಬರು ಕೆಲವು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಕೆಲವು ಚೆನ್ನಾದ ಉಪನ್ಯಾಸಗಳನ್ನು ಕೊಟ್ಟರೆ, ಅವನು ತುಂಬಾ ವಿದ್ಯಾವಂತ ಎಂದು ಭಾವಿಸುವಿರಿ. ಜನಸಾಧಾರಣರಿಗೆ ಜೀವನದ ಹೋರಾಟಕ್ಕೆ ಸಹಾಯ ಮಾಡದ, ಚಾರಿತ್ರ ಶುದ್ಧಿಗೆ ಸಹಾಯಮಾಡದ, ಪರೋಪಕಾರ ಬುದ್ಧಿಯನ್ನು ಹುಟ್ಟಿಸದ, ಸಿಂಹಸದೃಶವಾದ ಧೈರ್ಯವನ್ನು ನೀಡದ, ವಿದ್ಯಾಭ್ಯಾಸದಿಂದ ಪ್ರಯೋಜನವೇನು? ನಿಜವಾದ ವಿದ್ಯೆ ಒಬ್ಬನನ್ನು ಸ್ವಾವಲಂಬಿಯಾಗಿ ಮಾಡಬೇಕು. ನಿಮಗೆ ಶಾಲೆ ಕಾಲೇಜುಗಳಲ್ಲಿ ದೊರೆಯುತ್ತಿರುವ ವಿದ್ಯೆಯಿಂದ ಅಜೀರ್ಣರೋಗಗ್ರಸ್ಥರ ಗುಂಪಿಗೆ ಸೇರಿರುವಿರಿ. ನೀವು ಕೇವಲ ಯಂತ್ರದಂತೆ ಕೆಲಸ ಮಾಡುತ್ತ ಶುದ್ಧ ಸೋಮಾರಿಗಳಾಗುವಿರಿ.

೯. ಶಿಕ್ಷಣವೆಂದರೆ ನಿಮ್ಮ ತಲೆಯಲ್ಲಿ ತುಂಬಿಕೊಂಡ ವಿಷಯ ಸಂಗ್ರಹ ವಲ್ಲ, ರಕ್ತಗತವಾಗದೆ ಅದು ಜೀವಾವಧಿ ಚೆಲ್ಲಾಡುತ್ತಿರುವುದು. ಜೀವನ ವಿಕಾಸಕ್ಕೆ ಸಹಾಯಮಾಡುವ, ಪುರುಷಸಿಂಹರನ್ನು ಮಾಡುವ, ಶುದ್ಧ ಚಾರಿತ್ರ ಸಂಪನ್ನರ ನ್ನಾಗಿ ಮಾಡುವ ಭಾವಗಳನ್ನು ರಕ್ತಗತಮಾಡಿಕೊಳ್ಳುವಂತಹ ಶಿಕ್ಷಣವಿರಬೇಕು. ನೀವು ಐದು ಭಾವಗಳನ್ನು ಅರ್ಥಮಾಡಿಕೊಂಡು ಅವನ್ನು ನಿಮ್ಮ ಬಾಳ ಉಸಿರ ನ್ನಾಗಿ ಮಾಡಿಕೊಂಡಿದ್ದರೆ, ನಿಮ್ಮ ಶೀಲದಲ್ಲಿ ಅದು ಅನುರಣಿತವಾಗುತ್ತಿದ್ದರೆ ಇಡೀ ಪುಸ್ತಕ ಭಂಡಾರವನ್ನೇ ಕಂಠಪಾಠ ಮಾಡಿಕೊಂಡವನಿಗಿಂತ ಮೇಲು. ವಿಷಯ ಸಂಗ್ರಹವೇ ವಿದ್ಯಾಭ್ಯಾಸವಾದರೆ ಪುಸ್ತಕಭಂಡಾರಗಳೇ ಶ್ರೇಷ್ಠ ಜ್ಞಾನಿ ಗಳಾಗುತ್ತಿದ್ದವು; ವಿಶ್ವಕೋಶಗಳೇ ಋಷಿಗಳಾಗುತ್ತಿದ್ದವು.

೧೦. ನಿಷೇಧಾತ್ಮಕವಾದ ಭಾವನೆ ಮನುಷ್ಯನನ್ನು ಅಧೋಗತಿಗೆ ತರು ವುದು. ಎಲ್ಲಿ ತಂದೆತಾಯಿಗಳು ಮಕ್ಕಳಿಗೆ ಯಾವಾಗಲೂ ಓದು ಓದು ಎಂದು ಹೇಳುತ್ತಿರುವರೋ, ನಿಮಗೆ ಏನೂ ಹತ್ತುವುದಿಲ್ಲ, ನೀವು ದಡ್ಡರು, ಅಯೋ ಗ್ಯರು ಎಂದು ಹೀಯಾಳಿಸುತ್ತಿರುವರೋ, ಅಂತಹ ಪ್ರಸಂಗಗಳಲ್ಲಿ ಹಲವು ಮಕ್ಕಳು ಹಾಗೆಯೇ ಅಯೋಗ್ಯರಾಗುವುದನ್ನು ನೋಡುತ್ತೇವೆ. ಮಕ್ಕಳಿಗೆ ಒಳ್ಳೆಯ ಮಾತಾಡಿ ಅವರನ್ನು ಪ್ರೋತ್ಸಾಹಿಸಿದರೆ ಅವರು ಕ್ರಮೇಣ ಒಳ್ಳೆಯವ ರಾಗುತ್ತಾರೆ. ಯಾವುದು ಸಣ್ಣ ಮಕ್ಕಳಿಗೆ ಅನ್ವಯಿಸುವುದೋ ಅದೇ ಜೀವನದ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿರುವ ಮಕ್ಕಳಿಗೂ ಅನ್ವಯಿಸುವುದು. ನೀವು ನಿರ್ದಿಷ್ಟ ವಾದ ಭಾವನೆಗಳನ್ನು ಅವರಿಗೆ ಕೊಟ್ಟರೆ ಅವರು ಯೋಗ್ಯರಾಗಿ ಸ್ವಾವಲಂಬಿ ಗಳಾಗುವರು.

೧೧. ಭಾಷೆಯಲ್ಲಿ, ಸಾಹಿತ್ಯದಲ್ಲಿ, ಕಾವ್ಯದಲ್ಲಿ, ಕಲೆಯಲ್ಲಿ ಮತ್ತು ಎಲ್ಲಾ ಕಡೆಗಳಲ್ಲಿಯೂ ಜನರು ತಮ್ಮ ಆಲೋಚನೆ ಮತ್ತು ಕ್ರಿಯೆಯಲ್ಲಿ ಮಾಡು ತ್ತಿರುವ ತಪ್ಪನ್ನು ಎತ್ತಿ ತೋರಕೂಡದು. ಅವರು ಹೇಗೆ ಮತ್ತೂ ಚೆನ್ನಾಗಿ ಮಾಡಬಲ್ಲರೊ ಅದನ್ನು ತೋರಬೇಕು. ಜನರ ತಪ್ಪನ್ನು ಎತ್ತಿ ತೋರಿದರೆ ಅವ ರಿಗೆ ವ್ಯಥೆಯಾಗುವುದು. ನಾವು ಯಾರನ್ನು ಕೆಲಸಕ್ಕೆ ಬಾರದವರೆಂದು ಎಣಿಸಿ ದ್ದೆವೋ ಅವರನ್ನು ಕೂಡ ಪ್ರೋತ್ಸಾಹಿಸಿ ಅವರ ಜೀವನವನ್ನೇ ಸಂಪೂರ್ಣ ಮಾರ್ಪಡಿಸಿದುದನ್ನು ಶ್ರೀರಾಮಕೃಷ್ಣರಲ್ಲಿ ನಾವು ನೋಡುತ್ತೇವೆ. ಅವರು ಬೋಧಿಸುತ್ತಿದ್ದುದು ಒಂದು ಅಪೂರ್ವ ರೀತಿ.

೧೨. ಜ್ಞಾನ ಮಾನವನಲ್ಲಿ ಅಂತರ್ಗತವಾಗಿದೆ. ಯಾವ ಜ್ಞಾನವೂ ಹೊರ ಗಿನಿಂದ ಬರುವುದಿಲ್ಲ. ಅದೆಲ್ಲಾ ಆಗಲೇ ಒಳಗಿದೆ. ಅವನಿಗೆ ಗೊತ್ತಿದೆ ಎಂದರೆ ಮಾನಸಿಕ ಶಾಸ್ತ್ರದ ಭಾಷೆಯಲ್ಲಿ ಸರಿಯಾಗಿ ಹೇಳಬೇಕಾದರೆ ಅದನ್ನು ಆವಿಷ್ಕಾರ ಮಾಡಿದ್ದು ಅಥವಾ ಅನಾವರಣ ಮಾಡಿದ್ದು ಎಂದು ಇರಬೇಕು. ಯಾವುದನ್ನು ಒಬ್ಬ ಕಲಿಯುತ್ತಾನೆಯೋ ಅದು ಅವನ ಆತ್ಮನ ಮೇಲೆ ಇದ್ದ ತೆರೆಯನ್ನು ತೆಗೆ ದಂತೆ. ಅವನಾತ್ಮವೇ ಅನಂತ ಜ್ಞಾನದ ಗಣಿ. ನ್ಯೂಟನ್ ಆಕರ್ಷಣ ಸಿದ್ಧಾಂತ ವನ್ನು ಕಂಡುಹಿಡಿದ ಎನ್ನುವೆವು. ಅದು ಯಾವುದಾದರೂ ಮೂಲೆಯಲ್ಲಿ ನ್ಯೂಟನ್ ತನ್ನನ್ನು ಕಂಡುಹಿಡಿಯಲಿ ಎಂದು ಬಚ್ಚಿಟ್ಟುಕೊಂಡಿತ್ತೇನು ? ಅದು ಅವನ ಮನಸ್ಸಿನಲ್ಲಿಯೇ ಇತ್ತು. ಸಮಯ ಬಂದಾಗ ಅದು ವ್ಯಕ್ತವಾಯಿತು.

೧೩. ಪ್ರಪಂಚಕ್ಕೆ ಬಂದ ಜ್ಞಾನವೆಲ್ಲ ಮಾನವನ ಮನಸ್ಸಿನಿಂದ ಬಂದಿದೆ. ವಿಶ್ವದ ಅನಂತ ಪುಸ್ತಕ ಭಂಡಾರ ನಿಮ್ಮ ಮನಸ್ಸಿನಲ್ಲಿದೆ. ಬಾಹ್ಯ ಪ್ರಪಂಚ ಒಂದು ಸೂಚನೆಯನ್ನು ಮಾತ್ರ ಕೊಡುವುದು, ಅದೊಂದು ನಿಮಿತ್ತ ಮಾತ್ರ. ಅದರಿಂದ ನಿಮ್ಮ ಮನಸ್ಸನ್ನು ಅರಿಯಲು ಸಾಧ್ಯವಾಗುವುದು. ಆದರೆ ನಿಮ್ಮ ಅಧ್ಯಯನದ ಮುಖ್ಯಗುರಿಯೆ ನಿಮ್ಮ ಮನಸ್ಸನ್ನು ಅರಿಯುವುದು. ಸೇಬು ಬಿದ್ದದ್ದು ನ್ಯೂಟನ್ನನಿಗೆ ಒಂದು ಸೂಚನೆಯನ್ನು ಕೊಟ್ಟಿತು. ಇದರಿಂದ ಅವನು ತನ್ನ ಮನಸ್ಸನ್ನು ಅರಿಯತೊಡಗಿದನು. ಹಿಂದಿನಿಂದ ಅಲ್ಲಿದ್ದ ಕೆಲವು ಘಟನೆ ಗಳನ್ನು ಸರಿಯಾಗಿ ಜೋಡಿಸಿ, ಅದರಿಂದ ಹೊಸ ನಿಯಮವನ್ನು ಕಂಡುಹಿಡಿ ದನು. ಇದನ್ನೇ ಆಕರ್ಷಣ ಸಿದ್ಧಾಂತ ಎನ್ನುವುದು.

೧೪. ಲೌಕಿಕ ಮತ್ತು ಆಧ್ಯಾತ್ಮಿಕ ಜ್ಞಾನವೆಲ್ಲ ಮಾನವನ ಮನಸ್ಸಿನಲ್ಲಿದೆ. ಅನೇಕ ವೇಳೆ ಇದು ಕಾಣುವುದಿಲ್ಲ. ಯಾವುದರಿಂದಲೋ ಮುಚ್ಚಿ ಹೋಗಿರು ವುದು. ಆ ಮುಸುಕನ್ನು ತೆರೆದಂತೆ ನಾವು ತಿಳಿಯುತ್ತಿರುವೆವು ಎಂದು ಭಾವಿಸು

ವೆವು. ಅನಾವರಣ ಹೆಚ್ಚಾದಂತೆಲ್ಲಾ ಜ್ಞಾನವು ವಿಕಾಸವಾಗುತ್ತಾ ಬರುವುದು. ಯಾರಲ್ಲಿ ಇನ್ನೂ ಇದು ದಪ್ಪನಾಗಿ ಮುಚ್ಚಿಕೊಂಡಿರುವುದೋ ಅವನು ಅಜ್ಞಾನಿ. ಯಾರಲ್ಲಿ ಈ ತೆರೆ ಸಂಪೂರ್ಣವಾಗಿ ಜಾರಿ ಹೋಗಿರುವುದೋ ಅವನೇ ಸರ್ವಜ್ಞ.

೧೫. ಸೌದೆಯಲ್ಲಿ ಬೆಂಕಿಯಂತೆ ಈ ಜ್ಞಾನ ನಮ್ಮ ಮನಸ್ಸಿನಲ್ಲಿರುವುದು. ಸೂಚನೆಯು ಒಂದು ಘರ್ಷಣೆ. ಇದರಿಂದ ಅಗ್ನಿ ವ್ಯಕ್ತವಾಗುವುದು.

೧೬. ನಿಜವಾಗಿ ಯಾರೂ ಇನ್ನೊಬ್ಬರಿಂದ ಕಲಿಯುಲಿಲ್ಲ. ಪ್ರತಿಯೊಬ್ಬನೂ ತನಗೆ ತಾನೇ ಕಲಿಯಬೇಕಾಗಿದೆ. ಬಾಹ್ಯ ಗುರು ಕೇವಲ ಒಂದು ಸೂಚನೆಯನ್ನು ಮಾತ್ರ ನೀಡುತ್ತಾನೆ. ಇದು ಅಂತರ್ಯದಲ್ಲಿರುವ ನಮ್ಮ ಗುರುವನ್ನು ಜಾಗ್ರತಗೊಳಿಸಿ ಅದನ್ನು ತಿಳಿದುಕೊಳ್ಳುವಂತೆ ಮಾಡುವುದು.

೧೧ ನೀತಿ

೧. ಶ್ರೇಷ್ಠತಮ ಸತ್ಯಗಳು ಯಾವ ಸಮಾಜದಲ್ಲಿ ಅನುಷ್ಠಾನ ಸಾಧ್ಯವಾಗುವುದೋ ಅದೇ ಶ್ರೇಷ್ಠ ಸಮಾಜ. ಇದೇ ನನ್ನ ಅಭಿಪ್ರಾಯ. ಸಮಾಜದಲ್ಲಿ ಶ್ರೇಷ್ಠ ಸತ್ಯವನ್ನು ಅನುಷ್ಠಾನಕ್ಕೆ ತರಲು ಸಾಧ್ಯವಿಲ್ಲದೆ ಇದ್ದರೆ ಸಾಧ್ಯವಾಗುವಂತೆ ಮಾಡಿ. ಎಷ್ಟು ಬೇಗ ಮಾಡಿದರೆ ಅಷ್ಟು ಒಳ್ಳೆಯದು. ಈ ರೀತಿ ಸ್ತ್ರೀಪುರುಷರು ಒಂದು ಆದರ್ಶಕ್ಕೆ ನಿಲ್ಲಬೇಕು. ಸತ್ಯವನ್ನು ನಿರ್ಭಯವಾಗಿ ನಂಬಿ; ನಿರ್ಭಯವಾಗಿ ಅನುಷ್ಠಾನಕ್ಕೆ ತನ್ನಿ.

೨. ಯಾವುದು ಸರಿಯಾದ ಆದರ್ಶವೊ ಯಾರಿಗೆ ಗೊತ್ತು ? ಪಾಶ್ಚಾತ್ಯರ ತಾತ್ಕಾಲಿಕ ಶಕ್ತಿ ಮತ್ತು ಅಧಿಕಾರವೊ ಅಥವಾ ಪೌರಾತ್ಯರ ಸಹಿಷ್ಣುತಾ ಶಕ್ತಿಯೋ ?

ಪಾಶ್ಚಾತ್ಯರು ನಾವು ದೋಷವನ್ನು ಗೆದ್ದು ಕಡಿಮೆ ಮಾಡುವೆವು ಎನ್ನುವರು. ಭಾರತೀಯರು ಅನುಭವಿಸಿ ನಾವು ದೋಷದಿಂದ ಪಾರಾಗುತ್ತೇವೆ, ಅನುಭವದಿಂದ ಅದರ ಅಂಜಿಕೆಯೆ ನಮಗೆ ತೋರುವುದಿಲ್ಲ; ಕ್ರಮೇಣ ತಮಗೆ ಅದರಲ್ಲೇ ಆನಂದವಾಗುವುದು ಎನ್ನುವರು. ಎರಡೂ ಘನವಾದ ಆದರ್ಶಗಳೇ ಸರಿ. ಕೊನೆಗೆ ಯಾವುದು ನಿಲ್ಲುವುದೋ ಯಾರಿಗೆ ಗೊತ್ತು ? ಯಾವ ಆದರ್ಶದಿಂದ ಜಗತ್ತಿಗೆ ಹೆಚ್ಚು ಉಪಕಾರ ಆಗುವುದೋ ಯಾರಿಗೆ ಗೊತ್ತು ? ಯಾವುದು ಮಾನವನ ಮೃಗೀಯ ತೃಷ್ಣೆಯನ್ನು ಗೆಲ್ಲುವುದೋ ಯಾರಿಗೆ ಗೊತ್ತು ? ಅನುಭವಿಸುವುದೆ ಅಥವಾ ಹೋರಾಡುವುದೆ ?

ಅಲ್ಲಿಯ ತನಕ ಒಬ್ಬರು ಮತ್ತೊಬ್ಬರ ಆದರ್ಶವನ್ನು ನಾಶಮಾಡದೆ ಇರೋಣ. ನಾವಿಬ್ಬರೂ ಒಂದೇ ಕೆಲಸದಲ್ಲಿ ನಿರತರಾಗಿರುವೆವು. ಅದೇ ದೋಷ ನಿವೃತ್ತಿ. ನೀವು ನಿಮ್ಮ ಆದರ್ಶವನ್ನು ತೆಗೆದುಕೊಳ್ಳಿ, ನಾವು ನಮ್ಮ ಆದರ್ಶವನ್ನು ತೆಗೆದುಕೊಳ್ಳುವೆವು. ಆದರ್ಶವನ್ನು ನಾಶಮಾಡದೆ ಇರೋಣ. ಪಾಶ್ಚಾತ್ಯರಿಗೆ ನಮ್ಮ ಆದರ್ಶವನ್ನು ತೆಗೆದುಕೊಳ್ಳಿ ಎಂದು ಹೇಳುವುದಿಲ್ಲ, ನಿಜವಾಗಿಯೂ ಹೇಳುವುದಿಲ್ಲ. ಗುರಿ ಒಂದೇ ಆದರೂ ದಾರಿ ಒಂದೇ ಆಗಲಾರದು. ಆದಕಾರಣವೆ, ನೀವು ಭಾರತೀಯ ಆದರ್ಶವನ್ನು ಕೇಳಿದಮೇಲೆ, ನಿಮ್ಮ ಮತ್ತು ನಮ್ಮ ಗುರಿ ಒಂದೇ. ನೀವು ನಿಮ್ಮ ಆದರ್ಶವನ್ನು ನಿಮ್ಮ ರೀತಿಯಲ್ಲಿ ಅನುಸರಿಸಿ. ದೇವರು

ನಿಮಗೆ ಒಳ್ಳೆಯದು ಮಾಡಲಿ ಎಂದು ಹೇಳುವಿರಿ. ಬೇರೆ ಬೇರೆ ಆದರ್ಶಕ್ಕಾಗಿ ಪೌರಾತ್ಯ ಮತ್ತು ಪಾಶ್ಚಾತ್ಯರು ಹೋರಾಡಬೇಕಾಗಿಲ್ಲ. ಪರಸ್ಪರ ವಿರೋಧವಾಗಿ ತೋರಿದರೂ ಇಬ್ಬರ ಗುರಿ ಒಂದೇ ಎಂಬುದನ್ನು ತೋರುವುದೇ ನನ್ನ ಜೀವನದ ಉದ್ದೇಶ. ಈ ಜೀವನದ ಜಟಿಲ ಕಣಿವೆಯೊಳಗೆ ನಾವು ಹೋಗುತ್ತಿರುವಾಗ ಒಬ್ಬರು ಮತ್ತೊಬ್ಬರಿಗೆ "ದೇವರು ನಿಮಗೆ ಒಳ್ಳೆಯದನ್ನು ಮಾಡಲಿ" ಎಂದು ಹರಸುತ್ತಿರೋಣ.

೩. ನೀತಿಯು ಗುರಿ, ಇದುವರೆಗೆ ಇರುವ ಮತ್ತು ಇನ್ನು ಮುಂದೆ ಬರುವ ವೈವಿಧ್ಯತೆಯನ್ನು ನಾಶಮಾಡಿ ಒಂದೇ ಆದರ್ಶವನ್ನು ಪ್ರಪಂಚಕ್ಕೆಲ್ಲಾ ಬೋಧಿಸುವುದಿಲ್ಲ. ಅದು ಎಂದಿಗೂ ಸಾಧ್ಯವೇ ಇಲ್ಲ. ಇದರಿಂದ ಸರ್ವನಾಶವಾಗುವುದು, ಮೃತ್ಯು ಸಂಭವಿಸುವುದು. ವೈವಿಧ್ಯತೆಯ ಹಿಂದೆ ಐಕ್ಯತೆಯನ್ನು ಕಾಣುವುದಾಗಿದೆ ಆದರ್ಶ. ನಮ್ಮನ್ನು ಅಂಜಿಸುತ್ತಿರುವ ಎಲ್ಲಾ ವೇಷಗಳ ಹಿಂದೆಯೂ ದೇವರನ್ನು ಕಾಣುವುದಾಗಿದೆ. ಎಂತಹ ದೌರ್ಬಲ್ಯವಿದ್ದರೂ ತತ್ಕಾಲದಲ್ಲಿ ಎಲ್ಲರಲ್ಲಿಯೂ ಅನಂತಶಕ್ತಿ ಸುಪ್ತವಾಗಿದೆ ಎಂಬುದನ್ನು ಒಪ್ಪಿಕೊಳ್ಳುವುದು; ಈಗ ಬಾಹ್ಯದಲ್ಲಿ ಎಷ್ಟೇ ಅಹಿತವಾಗಿ ತೋರುತ್ತಿದ್ದರೂ ಆಂತರ್ಯದಲ್ಲಿ ನೂತನವಾದ ಅನಂತವಾದ ಪವಿತ್ರತೆ ಎಲ್ಲಾ ಜೀವಿಗಳಲ್ಲಿಯೂ ಅಂತರ್ಗತವಾಗಿದೆ—ಇದೇ ಆದರ್ಶ.

೪. ನಾವು ನೀತಿಶಾಸ್ತ್ರಕ್ಕೆ ಬಂದರೆ ಇದರ ದಾರಿ ಸಂಪೂರ್ಣವಾಗಿ ಬೇರಾಗಿರುವುದನ್ನು ನೋಡುತ್ತೇವೆ. ಹೋರಾಟದಿಂದ ಧೈರ್ಯವಾಗಿ ಪಾರಾದ ಶಾಸ್ತ್ರ ಇದೊಂದೆ. ನೀತಿ ಎಂದರೆ ಐಕ್ಯತೆ. ಪ್ರೀತಿಯೇ ಅದರ ಆಧಾರ. ಅದು ವೈವಿಧ್ಯತೆಯ ಕಡೆ ಕಣ್ಣನ್ನೂ ಹಾಕುವುದಿಲ್ಲ. ಐಕ್ಯತೆಯು, ಸಮತ್ವವೇ ನೀತಿಯ ಏಕಮಾತ್ರ ಗುರಿ. ಇಂದಿನವರೆಗೆ ಮಾನವ ಕಂಡುಹಿಡಿದ ಶ್ರೇಷ್ಠ ನೈತಿಕ ಆದರ್ಶಗಳಲ್ಲಿ ವೈವಿಧ್ಯತೆ ಇಲ್ಲ. ಭಿನ್ನತೆಯ ಕಡೆ ನೋಡುವುದಕ್ಕೆ ಅದಕ್ಕೆ ಸಮಯವಿಲ್ಲ. ಅವುಗಳ ಉದ್ದೇಶವೆ ಸಮತ್ವದ ಕಡೆಗೆ. ವೇದಾಂತದ ದೃಷ್ಟಿ ಹೆಚ್ಚು ವಿಭಜನಾತ್ಮಕವಾದುದರಿಂದ, ವಿಭಜನೆಯಿಂದ ಸಮತ್ವದ ಆದರ್ಶವನ್ನು ಕಂಡುಹಿಡಿಯಿತು. ಪ್ರತಿಯೊಂದು ಆಚರಣೆಯನ್ನೂ ಈ ಸಮತ್ವದ ದೃಷ್ಟಿಯಿಂದ ನೋಡಲುಪಕ್ರಮಿಸಿತು.

೫. ಕರ್ಮಯೋಗವೆಂದರೆ ನೀತಿ ಮತ್ತು ಧರ್ಮದ ನಡವಳಿಕೆ, ಅನಾಸಕ್ತಿ ಮತ್ತು ಸತ್ಕರ್ಮಗಳಿಂದ ಮುಕ್ತಿಯನ್ನು ಪಡೆಯಲೆತ್ನಿಸುವುದು. ಕರ್ಮಯೋಗಿ ಯಾವ ಸಿದ್ಧಾಂತವನ್ನೂ ನಂಬಬೇಕಾಗಿಲ್ಲ. ಆತ್ಮನ ವಿಷಯವಾಗಿ ಅವನಿಗೆ ಏನೂ ಗೊತ್ತಿಲ್ಲದೆ ಇರಬಹುದು. ಯಾವ ತಾತ್ತ್ವಿಕ ಊಹಾಪೋಹಗಳನ್ನೂ ಅವನು

ಮಾಡಿರಬೇಕಾಗಿಲ್ಲ. ಅನಾಸಕ್ತಿಯನ್ನು ರೂಢಿಸುವುದೇ ಅವನ ಮುಖ್ಯ ಉದ್ದೇಶ. ಅವನು ಅದನ್ನು ತನ್ನದೇ ರೀತಿಯಲ್ಲಿ ಸಾಧಿಸುತ್ತಾನೆ. ಅವನು ಪ್ರತಿಯೊಂದು ಕ್ಷಣದಲ್ಲಿಯೂ ಅನಾಸಕ್ತನಾಗಿರಲು ಯತ್ನಿಸಬೇಕು. ಏಕೆಂದರೆ ಜ್ಞಾನಿ ಯಾವುದನ್ನು ವಿಚಾರ ಮತ್ತು ಸ್ಫೂರ್ತಿಯಿಂದ ಬಗೆಹರಿಸಲೆತ್ನಿಸುವನೊ, ಭಕ್ತ ಪ್ರೀತಿಯಿಂದ ಯತ್ನಿಸುವನೋ ಅದನ್ನೇ, ಕರ್ಮಯೋಗಿ ಯಾವ ಸಿದ್ಧಾಂತವೂ ಇಲ್ಲದೆ ಕರ್ಮದ ಮೂಲಕ ಸಾಧಿಸಬೇಕಾಗಿದೆ.

೬. ಆಧುನಿಕ ಕಾಲದಲ್ಲಿ ಈ ಸ್ವರ್ಣಯುಗದ ಭವ್ಯಾದರ್ಶವು ಎಲ್ಲರೂ ಸರಿಸಮಾನ, ಎಲ್ಲರೂ ಸ್ವತಂತ್ರರು ಎಂಬ ಭಾವದಲ್ಲಿ ವ್ಯಕ್ತವಾಗಿದೆ. ಇದೂ ಒಂದು ವಿಧವಾದ ಮತಭ್ರಾಂತಿಯೆ. ಪ್ರಪಂಚದಲ್ಲಿ ಹಿಂದೆ ಎಂದೂ ಸರಿಸಮಾನತೆ ಇರಲಿಲ್ಲ, ಮುಂದೆ ಇರುವಂತೆಯೂ ಇಲ್ಲ. ನಾವೆಲ್ಲರೂ ಇಲ್ಲಿ ಹೇಗೆ ಸರಿಸಮಾನರಾಗಿರಲು ಸಾಧ್ಯ? ಇಂತಹ ಅಸಾಧ್ಯವಾದ ಸರಿಸಮಾನತೆ ಮೃತ್ಯುಸಮಾನ.

ಆದರೂ ಈ ಸ್ವರ್ಣಯುಗದ ಆದರ್ಶವನ್ನು ಕಾರ್ಯಗತಮಾಡಬೇಕೆಂಬುದು ಒಂದು ದೊಡ್ಡ ಕ್ರಿಯೋತ್ತೇಜಕ ಶಕ್ತಿ. ಸೃಷ್ಟಿಯಾಗಬೇಕಾದರೆ ಅಸಮತೆ ಇರಲೇಬೇಕಾಗುವಂತೆ. ಅದನ್ನು ಒಂದು ಮಿತಿಗೊಳಿಸುವ ಹೋರಾಟವೂ ಆವಶ್ಯಕ. ಮುಕ್ತರಾಗಿ ದೇವರ ಸಮೀಪಕ್ಕೆ ಹೋಗಬೇಕೆಂಬ ಹೋರಾಟವಿಲ್ಲದೇ ಇದ್ದರೆ ಸೃಷ್ಟಿಯೇ ನಿಂತುಹೋಗುವುದು. ಈ ಎರಡು ಶಕ್ತಿಗಳ ವ್ಯತ್ಯಾಸವೇ ಮನುಷ್ಯನ ಉದ್ದೇಶದಲ್ಲಿರುವ ವ್ಯತ್ಯಾಸಕ್ಕೆ ಕಾರಣ. ಕೆಲಸ ಮಾಡುವುದಕ್ಕೆ ಯಾವಾಗಲೂ ಈ ಎರಡು ಉದ್ದೇಶಗಳು ಉತ್ತೇಜನಕೊಡುವುವು. ಒಂದು ಬಂಧನಕ್ಕೆ ಒಳಗು ಮಾಡುವುದು, ಮತ್ತೊಂದು ಮುಕ್ತಿಯ ಕಡೆಗೆ ಒಯ್ಯುವುದು.

೭. ಕೆಲವರು ಇತರರಿಗಿಂತ ಬಲಾಢ್ಯರಾಗಿರುವರು. ಅವರು ದುರ್ಬಲರನ್ನು ಸೋಲಿಸುವರೆಂಬುದು ಎಲ್ಲರಿಗೂ ವೇದ್ಯವಾದುದು. ಆದರೆ ಅವರು ಇತರರನ್ನು ಸೋಲಿಸಬಲ್ಲರೆಂದು ಎಲ್ಲಾ ಸುಖವನ್ನೂ ತಾವೇ ಅನುಭವಿಸಬೇಕೆಂಬುದು ಧರ್ಮಕ್ಕೆ ವಿರೋಧವಾಗಿದೆ. ಕೆಲವರಿಗೆ ಇತರರಿಗಿಂತ ಹೆಚ್ಚು ಧನಾರ್ಜನೆ ಮಾಡುವ ಶಕ್ತಿ ಇದೆ ಎಂಬುದು ಸಾಧಾರಣವಾಗಿದೆ. ಆದರೆ ಅವರಿಗೆ ಐಶ್ವರ್ಯವನ್ನು ಸಂಪಾದಿಸುವ ಶಕ್ತಿ ಇದೆ ಎಂದು ಯಾರಿಗೆ ಆ ಶಕ್ತಿ ಇಲ್ಲವೋ ಅವರನ್ನು ತುಳಿಯಲೆತ್ನಿಸುವುದು ಧರ್ಮಕ್ಕೆ ವಿರೋಧ. ಯಾವಾಗಲೂ ಇದಕ್ಕೆ ವಿರೋಧವಾಗಿದೆ ಹೋರಾಟ. ಇತರರಿಗೆ ಇಲ್ಲದ ಒಂದು ಸೌಲಭ್ಯ ನಮಗಿರುವುದು ಒಂದು ಹಕ್ಕು (Privilege). ಅನಾದಿಕಾಲದಿಂದಲೂ ಧರ್ಮ ಇದನ್ನು ಧ್ವಂಸಮಾಡಲೆ

ತ್ತಿಸುವುದು. ವೈವಿಧ್ಯತೆಯನ್ನು ನಾಶಮಾಡದೆ ಸಮಾನತೆಯನ್ನು ತರುವುದೇ ಇದರ ಉದ್ದೇಶ.

೮. ಬದಲಾವಣೆ ಯಾವಾಗಲೂ ವ್ಯಕ್ತಿಯಲ್ಲಿ ಆಗುವುದು. ವಿಕಾಸದಲ್ಲಿ ನೋಡಿದರೆ ಹೊರಗಿನದನ್ನು ಗೆದ್ದದ್ದು ಒಳಗಿನ ಬದಲಾವಣೆಯಿಂದ ಎಂಬುದು ಗೊತ್ತಾಗುವುದು. ಇದನ್ನು ಧರ್ಮ ಮತ್ತು ನೀತಿಗೆ ಅನ್ವಯಿಸಿದರೆ ದೋಷ ವನ್ನು ಜಯಿಸುವುದು ಯಾವಾಗಲೂ ವ್ಯಕ್ತಿಯ ಬದಲಾವಣೆಯಿಂದ ಮಾತ್ರ ಆಗಿದೆ ಎಂಬುದು ಗೊತ್ತಾಗುವುದು. ವ್ಯಕ್ತಿಪ್ರಾಧಾನ್ಯತೆಯನ್ನು ಅದ್ವೈತ ಪ್ರತಿ ಪಾದಿಸುವುದು ಹೀಗೆ. ಪಾಪ ಮತ್ತು ದುಃಖ ಒಂದು ಭ್ರಾಂತಿ ಎನ್ನುವರು. ಏಕೆಂದರೆ ಅವು ಹೊರಗೆ ಇಲ್ಲ. ನಾನು ಕೋಪಗೊಳ್ಳಲು ಸಾಧ್ಯವಿಲ್ಲದೇ ಇದ್ದರೆ ಕೋಪವೇ ಇರುವುದಿಲ್ಲ. ನಾನು ದ್ವೇಷಕ್ಕೆ ಹೊರಗಾಗಿದ್ದರೆ ನನಗೆ ದ್ವೇಷವೇ ಇರುವುದಿಲ್ಲ.

೯. ಒಳ್ಳೆಯದು ಮತ್ತು ಕೆಟ್ಟದ್ದು ಎಂಬುದು ಕೇವಲ ತರತಮದ ಪ್ರಶ್ನೆ. ಒಂದು ಗುಣ ಹೆಚ್ಚಾಗಿದೆಯೆ ಕಡಿಮೆಯಾಗಿದೆಯೆ ಎಂಬುದು ಇದು. ನಮ್ಮ ಜೀವನದ ಉದಾಹರಣೆಯನ್ನೇ ತೆಗೆದುಕೊಳ್ಳಿ. ನಾವು ಹುಡುಗರಾಗಿದ್ದಾಗ ಎಷ್ಟು ವಿಷಯಗಳನ್ನು ಒಳ್ಳೆಯದೆಂದು ಭಾವಿಸಿದ್ದೆವು. ಆದರೆ ನಿಜವಾಗಿ ಅವು ಕೆಟ್ಟವು. ಎಷ್ಟು ಕೆಟ್ಟದೆಂದು ನಮಗೆ ಕಂಡರೂ ಅವು ಒಳ್ಳೆಯವಾಗಿದ್ದವು. ಭಾವನೆಗಳು ಹೇಗೆ ಬದಲಾಯಿಸುತ್ತವೆ? ಹೇಗೆ ಆದರ್ಶ ಬರಬರುತ್ತ ಉತ್ತಮ ವಾಗುತ್ತ ಬರುವುದು? ಯಾವುದನ್ನು ನಾವು ಒಂದು ಕಾಲದಲ್ಲಿ ತುಂಬಾ ಒಳ್ಳೆಯ ದೆಂದು ಭಾವಿಸಿದ್ದೆವೊ ಅವನ್ನು ಈಗ ಒಳ್ಳೆಯದು ಎಂದು ಭಾವಿಸುವುದಿಲ್ಲ. ಆದಕಾರಣವೆ ಒಳ್ಳೆಯದು ಕೆಟ್ಟದ್ದು ಎಂಬುದು ಒಂದು ಭ್ರಾಂತಿ; ಅವು ಹೊರ ಗಡೆ ಇಲ್ಲ. ಒಳ್ಳೆಯದಕ್ಕೂ ಕೆಟ್ಟದ್ದಕ್ಕೂ ವ್ಯತ್ಯಾಸ ಹೆಚ್ಚು ಕಡಿಮೆಯಲ್ಲಿದೆ. ಇವೆಲ್ಲಾ ಒಂದೇ ಆತ್ಮನ ಆವಿರ್ಭಾವ. ಅವನೇ ಪ್ರತಿಯೊಂದರಲ್ಲಿಯೂ ಪ್ರಕಾ ಶಿಸುತ್ತಿರುವವನು. ಆವಿರ್ಭಾವ ಮಂದವಾಗಿದ್ದಾಗ ಅದನ್ನು ಪಾಪ ಎನ್ನುವೆವು, ಅದು ತೆಳ್ಳಗಿದ್ದಾಗ ಅದನ್ನೇ ಪುಣ್ಯ ಎನ್ನುವೆವು.

೧೦. ನೀತಿ ಯಾವಾಗಲೂ "ನಾನಲ್ಲ, ನೀನು" ಎನ್ನುವುದು. ಇದರ ಪಲ್ಲ ವಿಯು "ನಾನಲ್ಲ, ನನ್ನ ತ್ಯಾಗ." ಅನಂತಾನಂದ ಮತ್ತು ಅನಂತ ಶಕ್ತಿಯನ್ನು ಇಂದ್ರಿಯದ ಮೂಲಕ ಅನುಭವಿಸುತ್ತೇನೆ ಎಂಬ ಭ್ರಾಂತಿಯ ವ್ಯಕ್ತಿತ್ವವನ್ನು ಮಾನವ ತ್ಯಜಿಸಬೇಕು ಎನ್ನುವುದು ನೀತಿ. ನೀವು ಮೊದಲು ಇತರರನ್ನು ಚಿಂತಿಸಿ ಕೊನೆಗೆ ನಿಮ್ಮನ್ನು ಯೋಚಿಸಬೇಕಾಗಿದೆ. ಇಂದ್ರಿಯಗಳು ನಾವು ಮೊದಲು,

ಎನ್ನುವವು. ನೀತಿ "ನನ್ನನ್ನು ಹೊರಗೆ ಅಟ್ಟಬೇಕು" ಎನ್ನುವುದು. ನೀತಿ ನಿಯಮಾವಳಿಗಳೆಲ್ಲ ತ್ಯಾಗದ ಮೇಲೆ ನಿಲ್ಲಬೇಕು, ಭೌತಿಕ ಪ್ರಪಂಚದಲ್ಲಿ ಅಹಂಕಾರ ನಿರ್ಮಾಣವಲ್ಲ, ಅದರ ಧ್ವಂಸದ ಮೇಲೆ ನಿಲ್ಲಬೇಕು. ಭೌತಿಕ ಪ್ರಪಂಚದ ಮೂಲಕ ಆ ಅನಂತ ಎಂದಿಗೂ ವ್ಯಕ್ತವಾಗಲಾರದು. ಅದು ಸಾಧ್ಯವೇ ಇಲ್ಲ, ಅದನ್ನು ಯೋಚಿಸುವುದಕ್ಕೂ ಆಗುವುದಿಲ್ಲ.

೧೨ ಆತ್ಮಶ್ರದ್ಧೆ

೧. ನಾವು ಈ ಕೆಲಸವನ್ನು ಮಾಡಬಲ್ಲೆವು, ಮಾಡಲಾರೆವು ಎಂಬುದೆಲ್ಲ ಬರೀ ಮೂಢನಂಬಿಕೆ. ನಾವು ಏನನ್ನು ಬೇಕಾದರೂ ಮಾಡಬಲ್ಲೆವು. ಮೊದಲು ನಿಮ್ಮಲ್ಲಿ ಶ್ರದ್ಧೆ ಇರಲಿ ಎನ್ನುವುದು ವೇದಾಂತ. ಕೆಲವು ಧರ್ಮಗಳು ನಮಗಿಂತ ಹೊರಗೆ ಇರುವ ಸಾಕಾರ ದೇವರಲ್ಲಿ ನಂಬದವರು ನಾಸ್ತಿಕರು ಎನ್ನುವಂತೆ ವೇದಾಂತ ಯಾರಿಗೆ ಆತ್ಮಶ್ರದ್ಧೆ ಇಲ್ಲವೊ ಅವರನ್ನು ನಾಸ್ತಿಕರೆಂದು ಸಾರುವುದು. ನಮ್ಮಾತ್ಮನ ಮಹಿಮೆಯಲ್ಲಿ ನಾವು ಶ್ರದ್ಧೆ ಇಡದೆ ಇರುವುದನ್ನೇ ವೇದಾಂತ ನಾಸ್ತಿಕತೆ ಎನ್ನುವುದು.

೨. ಆತ್ಮಶ್ರದ್ಧೆ ನಮಗೆ ಮಹೋಪಕಾರಿ. ಆತ್ಮಶ್ರದ್ಧೆಯ ತತ್ತ್ವವನ್ನು ಜನರಿಗೆಲ್ಲ ಬೋಧಿಸಿದ್ದರೆ, ಅದನ್ನು ಅವರು ಅನುಷ್ಠಾನದಲ್ಲಿ ತಂದಿದ್ದರೆ, ನಮ್ಮಲ್ಲಿರುವ ಬಹುಪಾಲು ಶೋಕತಾಪಗಳು ಮಾಯವಾಗುತ್ತಿದ್ದವು ಎನ್ನುವುದರಲ್ಲಿ ಸಂದೇಹವಿಲ್ಲ. ಜೀವನದ ಮಹಾಮಹಿಮರಾದ ಸ್ತ್ರೀಪುರುಷರ ಶೀಲಗಳಲ್ಲಿ ಕ್ರಿಯೋತ್ತೇಜಕ ಶಕ್ತಿಗಳಲ್ಲಿ ಅತಿ ಶ್ರೇಷ್ಠವಾದುದೇ ಅವರಲ್ಲಿದ್ದ ಆತ್ಮ ಶ್ರದ್ಧೆ ಎಂಬುದು ನಮಗೆ ಅರಿವಾಗುವುದು. ತಾವು ಮಹಾಪುರುಷರಾಗುವುದಕ್ಕೆ ಜನ್ಮವೆತ್ತಿರುವುದು ಎಂದು ನಂಬಿದ್ದರಿಂದ ಅವರು ಮಹಾಪುರುಷರಾದರು.

೩. ಮನುಷ್ಯ ನರಕದ ಪಾತಾಳಕ್ಕೆ ಹೋಗಬಹುದು. ಆದರೂ ಒಂದು ಸಮಯ ಬರುವುದು, ಆಗ ಇನ್ನೂ ಕೆಳಕ್ಕೆ ಹೋಗುವುದಕ್ಕೆ ಆಗುವುದಿಲ್ಲ. ಆಗ ವಿಧಿಯಿಲ್ಲದೆ ಮೇಲೇಳಬೇಕಾಗುವುದು. ಆಗಲಾದರೂ ಅವನು ಆತ್ಮ ಶ್ರದ್ಧೆಯನ್ನು ಅರಿಯುವನು. ಆದರೆ ನಾವು ಅದನ್ನು ಪ್ರಾರಂಭದಿಂದಲೂ ತಿಳಿದಿರುವುದು ಮೇಲು. ಆತ್ಮಶ್ರದ್ಧೆಯನ್ನು ಪಡೆಯುವುದಕ್ಕಾಗಿ ಇಷ್ಟೊಂದು ಕಷ್ಟವನ್ನು ಏತಕ್ಕೆ ಅನುಭವಿಸಬೇಕು ?

೪. ಒಬ್ಬನಿಗೂ ಮತ್ತೊಬ್ಬನಿಗೂ ಇರುವ ವ್ಯತ್ಯಾಸಕ್ಕೆ ಕಾರಣ ಅವರಲ್ಲಿರುವ ಆತ್ಮ ಶ್ರದ್ಧೆಯ ಹೆಚ್ಚು ಕಡಿಮೆಯಲ್ಲಿದೆ ಎಂಬುದನ್ನು ನಾವು ನೋಡಬಹುದು. ಆತ್ಮಶ್ರದ್ಧೆ ಸರ್ವವನ್ನೂ ಸಾಧಿಸಬಲ್ಲದು. ನಾನು ನನ್ನ ಜೀವನದಲ್ಲೆ ಇದನ್ನು ನೋಡಿರುವೆನು. ಈಗಲೂ ನೋಡುತ್ತಿರುವೆನು. ನನಗೆ ವಯಸ್ಸಾದಂತೆಲ್ಲಾ ಅದು ಜಾಸ್ತಿ ಜಾಸ್ತಿಯಾಗುತ್ತಾ ಬರುತ್ತಿದೆ. ಆತ್ಮಶ್ರದ್ಧೆಯಲ್ಲಿ ನಂಬಿಕೆ

ಇಲ್ಲದವನೇ ನಾಸ್ತಿಕ. ಹಳೆಯ ಧರ್ಮಗಳು ದೇವರಲ್ಲಿ ನಂಬಿಕೆ ಇಲ್ಲದವನನ್ನು ನಾಸ್ತಿಕನೆಂದು ಸಾರುತ್ತಿದ್ದವು. ಆದರೆ ಇದು ಸ್ವಾರ್ಥತೆ ಅಲ್ಲ. ವೇದಾಂತ ಬೋಧಿಸುವುದೇ ಏಕತ್ವವನ್ನು. ನೀವೇ ಎಲ್ಲರೂ ಆಗಿರುವುದರಿಂದ ಎಲ್ಲರಲ್ಲಿಯೂ ನಂಬಿಕೆ ಇಡಬೇಕು ಎಂದು ಇದರ ಅರ್ಥ.

೫. ಮಹಾಶ್ರದ್ಧೆಯೇ ಪ್ರಪಂಚವನ್ನು ಉತ್ತಮಸ್ಥಿತಿಗೆ ತೆಗೆದುಕೊಂಡು ಬರಬೇಕಾದರೆ. ಇದರಲ್ಲಿ ನನಗೆ ಸಂದೇಹವೇ ಇಲ್ಲ. ನನ್ನ ವಿಷಯವಾಗಿ ನನಗೆ ಎಲ್ಲಾ ಗೊತ್ತಿದೆ ಎಂದು ಯಾರು ನಿಜವಾಗಿ ಹೇಳಬಲ್ಲನೊ ಅವನೇ ಶ್ರೇಷ್ಠ ಮಾನವ. ನಿಮ್ಮ ದೇಹದ ಹಿಂದೆ ಎಂತಹ ಶಕ್ತಿ ಸಾಧ್ಯತೆ ಮಹಿಮೆಗಳು ಇವೆ ಎಂಬುದು ನಿಮಗೆ ಗೊತ್ತೆ? ಮನುಷ್ಯನಲ್ಲಿರುವುದೆಲ್ಲ ಯಾವ ವಿಜ್ಞಾನಿಗೆ ಗೊತ್ತಿದೆ? ಮಾನವ ಪ್ರಪಂಚಕ್ಕೆ ಬಂದು ಕೋಟ್ಯಂತರ ವರುಷಗಳಾದುವು. ಆದರೂ ಅವನ ಮಹಾಮಹಿಮೆಯಲ್ಲಿ ಕಿಂಚಿತ್ ಮಾತ್ರ ಪ್ರಕಾಶಿತವಾಗಿದೆ. ಆದಕಾರಣವೆ ನೀವು ದುರ್ಬಲರು ಎಂದು ಹೇಳಕೂಡದು, ನಿಮ್ಮ ತೋರಿಕೆಯ ಅವನತಿಯ ಹಿಂದೆ ಎಂತಹ ಸಾಧ್ಯತೆಗಳು ಹುದುಗಿರುವವೋ ಯಾರಿಗೆ ಗೊತ್ತು ? ನಿನ್ನಲ್ಲಿ ಏನಿರುವುದೋ ಅದರ ಕಿಂಚಿತ್ ಮಾತ್ರ ನಿನಗೆ ಗೊತ್ತಿರುವುದು. ನಿನ್ನ ಹಿಂದೆ ಅನಂತ ಶಕ್ತಿ ಸಾಗರವಿದೆ, ಧನ್ಯತೆ ಇದೆ.

೬. ಶ್ರದ್ಧೆ, ಶ್ರದ್ಧೆ, ಆತ್ಮಶ್ರದ್ಧೆ, ಭಗವಂತನಲ್ಲಿ ಶ್ರದ್ಧೆ, ಇದೇ ಮಹಿಮೆಯ ರಹಸ್ಯ. ನೀವು ನಿಮ್ಮ ಪುರಾಣದಲ್ಲಿ ಬರುವ ಮೂವತ್ತುಮೂರು ಕೋಟಿ ದೇವರನ್ನು ನಂಬಿದ್ದರೂ, ಹೊರಗಡೆಯಿಂದ ಬಂದವರು ಮಧ್ಯೆ ಮಧ್ಯೆ ಜಾರಿಗೆ ತಂದ ಬೇರೆ ಬೇರೆ ದೇವರುಗಳನ್ನು ನಂಬಿದ್ದರೂ, ನಿಮ್ಮಲ್ಲಿ ಆತ್ಮಶ್ರದ್ಧೆ ಇಲ್ಲದೇ ಇದ್ದರೆ ನಿಮಗೆ ಮುಕ್ತಿಯಿಲ್ಲ. ನಿಮ್ಮಲ್ಲಿ ಆತ್ಮಶ್ರದ್ಧೆ ಇರಲಿ. ಅದರ ಆಧಾರದ ಮೇಲೆ ನಿಂತು ಬಲಾಢ್ಯರಾಗಿ. ನಮಗಿಂದು ಬೇಕಾಗಿರುವುದು ಅದು.

೭. ನಾವು ಆತ್ಮಶ್ರದ್ಧೆಯನ್ನು ಕಳೆದುಕೊಂಡಿರುವೆವು. ಜನರನ್ನು ಜಾಗ್ರತಗೊಳಿಸುವುದಕ್ಕೆ, ಅವರಾತ್ಮನ ಮಹಿಮೆಯನ್ನು ತೋರಿಸಿಕೊಡುವುದಕ್ಕೆ, ಅದ್ವೈತ ವೇದಾಂತವನ್ನು ಜನರಿಗೆ ಬೋಧಿಸುವುದು ಅತ್ಯಾವಶ್ಯಕ. ಆದಕಾರಣವೆ ನಾನು ಅದ್ವೈತವನ್ನು ಬೋಧಿಸುವುದು. ನಾನು ಅದನ್ನು ಕೇವಲ ಒಂದು ಮತದ ಸಂಕೋಚದೃಷ್ಟಿಯಿಂದ ಬೋಧಿಸುತ್ತಿಲ್ಲ. ವಿಶ್ವವ್ಯಾಪಕವಾದ ಬಹುಜನರು ಒಪ್ಪಿಕೊಳ್ಳುವಂತಹ ಆಧಾರದ ಮೇಲೆ ನಾನು ಅದನ್ನು ಸಾರುವೆನು.

೮. ದ್ವೈತಿಗಳಾಗಲಿ, ವಿಶಿಷ್ಟಾದ್ವೈತಿಗಳಾಗಲಿ, ಅದ್ವೈತಿಗಳಾಗಲಿ ಅವರೆಲ್ಲರೂ ಆಗಲೆ ಎಲ್ಲವೂ ಆತ್ಮನಲ್ಲಿದೆ. ಅದು ವ್ಯಕ್ತವಾಗಬೇಕಷ್ಟೆ ಎಂದು ನಂಬುವರು. ಆದಕಾರಣ ನನಗಿಂದು ಬೇಕಾಗಿರುವುದು ಮತ್ತು ಎಲ್ಲರಿಗೂ ಬೇಕಾಗಿರು

ವ್ವದು ಈ ಆತ್ಮಶ್ರದ್ಧೆ. ಈ ಆತ್ಮಶ್ರದ್ಧೆಯನ್ನು ಪಡೆಯುವುದೇ ಒಂದು ಮಹತ್ಕಾರ್ಯ ವಾಗಿದೆ. ಪ್ರತಿಯೊಂದನ್ನೂ ಅವಹೇಳನ ಮಾಡುವ, ಯಾವುದನ್ನೂ ಶ್ರದ್ಧೆ ಯಿಂದ ನೋಡದ ಒಂದು ಭಯಂಕರ ರೋಗ ನಮ್ಮ ಜನಾಂಗದ ನಾಡಿಯಲ್ಲಿ ಹರಿಯುತ್ತಿದೆ. ಇದನ್ನು ನಾವು ಹೊರದೂಡಬೇಕಾಗಿದೆ. ಬಲಿಷ್ಠರಾಗಿ ಆತ್ಮ ಶ್ರದ್ಧೆಯನ್ನು ಪಡೆಯಿರಿ. ಅನಂತರ ಎಲ್ಲವೂ ಬರುವುದು.

೯. ಯಾವುದಕ್ಕೂ ಅಂಜಬೇಡಿ. ನೀವು ಅದ್ಭುತವಾದ ಕೆಲಸವನ್ನು ಸಾಧಿಸುವಿರಿ. ಅಂಜಿದೊಡನೆ ನೀವು ಯಾವುದಕ್ಕೂ ಪ್ರಯೋಜನವಿಲ್ಲ. ಪ್ರಪಂಚದ ವ್ಯಥೆಗೆ ದೊಡ್ಡ ಕಾರಣವೇ ಅಂಜಿಕೆ. ಅಂಜಿಕೆಯೇ ಎಲ್ಲದಕ್ಕಿಂತ ದೊಡ್ಡ ಮೂಢ ನಂಬಿಕೆ. ನಮ್ಮ ದುಃಖಕ್ಕೆ ಕಾರಣ ಅಂಜಿಕೆ. ನಿರ್ಭಯಂತೆಯೇ ಈ ಕ್ಷಣದಲ್ಲಿ ನಮಗೆ ಸ್ವರ್ಗವನ್ನು ತರಬಲ್ಲದು. ಆದಕಾರಣವೇ "ಏಳಿ, ಜಾಗ್ರತರಾಗಿ, ಗುರಿ ಸೇರುವವರೆಗೂ ನಿಲ್ಲಬೇಡಿ."

೧೦. ಒಬ್ಬ ಹಗಲು ರಾತ್ರಿ ಅಯ್ಯೋ ನಾನು ದೀನ, ದುಃಖಿ, ಯಾವುದಕ್ಕೂ ಪ್ರಯೋಜನವಿಲ್ಲ ಎಂದು ಭಾವಿಸುತ್ತಿದ್ದರೆ ಅವನು ನಿಷ್ಪ್ರಯೋಜಕನೇ ಆಗು ತ್ತಾನೆ. ನೀವು ಹೌದು, ಹೌದು, ನಾನಿರುವೆ ಎಂದು ಭಾವಿಸಿದರೆ ಹಾಗೆಯೇ ನೀವಾಗುವಿರಿ. ನಾನು ಅಯೋಗ್ಯ ಎಂದು ಭಾವಿಸುತ್ತಿದ್ದರೆ ಅಯೋಗ್ಯರೇ ಆಗುವಿರಿ. ನಾವೆಲ್ಲಾ ಜ್ಞಾಪಕದಲ್ಲಿಡಬೇಕಾದ ಮುಖ್ಯ ವಿಷಯ ಇದು. ನಾವೆಲ್ಲಾ ಭಗವಂತನ ಮಕ್ಕಳು, ಅನಂತಾತ್ಮನ ಪರಂಜ್ಯೋತಿಯ ಕಿಡಿಗಳು. ನಾವು ಹೇಗೆ ಅಯೋಗ್ಯರಾಗುವೆವು ? ನಾವೇ ಎಲ್ಲವನ್ನೂ, ಏನನ್ನು ಬೇಕಾದರೂ ಮಾಡಲು ಸಿದ್ಧ, ಏನನ್ನು ಬೇಕಾದರೂ ಸಾಧಿಸಿಯೇ ಸಾಧಿಸುವೆವು. ಮಾನವ ಏನನ್ನು ಬೇಕಾದರೂ ಸಾಧಿಸಬಲ್ಲ.

೧೧. ನಮ್ಮ ಪೂರ್ವಿಕರಲ್ಲಿ ಆತ್ಮಶ್ರದ್ಧೆ ಇತ್ತು. ನಾಗರಿಕತೆಯ ನಿತ್ಯಯಾತ್ರೆ ಯಲ್ಲಿ ಮುಂದುಮುಂದಕ್ಕೆ ಅವರನ್ನು ತಂದದ್ದು ಆತ್ಮಶ್ರದ್ಧೆ. ನಾವು ಅಧೋಗತಿಗೆ ಬಂದಿದ್ದರೆ, ನಮ್ಮಲ್ಲಿ ನ್ಯೂನತೆಗಳಿದ್ದರೆ, ಅವು ನಾವು ಆತ್ಮಶ್ರದ್ಧೆಯನ್ನು ಕಳೆದು ಕೊಂಡ ದಿನದಿಂದ ಪ್ರಾರಂಭವಾಯಿತು ಎಂದು ಅರಿತುಕೊಳ್ಳಿ.

೧೨. ಆತ್ಮಶ್ರದ್ಧೆಯನ್ನು ಕಳೆದುಕೊಳ್ಳುವುದು ಎಂದರೆ ಭಗವಂತನಲ್ಲಿ ಶ್ರದ್ಧೆಯನ್ನು ಕಳೆದುಕೊಂಡಂತೆ. ನಿನ್ನ ಮೂಲಕ ಆ ಅನಂತ ಆನಂದದಾಯಕ ನಾದ ಭಗವಂತ ಕೆಲಸಮಾಡುತ್ತಿವನು ಎಂದು ನಂಬುವೆಯೇನು ? ಪ್ರತಿ ಯೊಂದು ಕಣದಲ್ಲಿಯೂ, ನಿನ್ನ ದೇಹ ಮನಸ್ಸು ಆತ್ಮನಲ್ಲಿ ಅವನು ಓತಪ್ರೋತ ವಾಗಿರುವಾಗ ನೀನು ಹೇಗೆ ಆತ್ಮಶ್ರದ್ಧೆಯನ್ನು ಕಳೆದುಕೊಳ್ಳುವೆ?

೧೩ ಆಹಾರ

೧. ನಾವು ಪ್ರಾರಂಭದಲ್ಲಿ ಎಂತಹ ಆಹಾರವನ್ನು ಸೇವಿಸುತ್ತೇವೆ ಎಂಬ ವಿಚಾರದಲ್ಲಿ ಬಹಳ ಜಾಗ್ರತರಾಗಿರಬೇಕು. ನಾವು ಬಲಿಷ್ಠರಾದ ಮೇಲೆ, ಸಾಧನೆ ಯಲ್ಲಿ ಮುಂದುವರಿದ ಮೇಲೆ ಇದನ್ನು ಅಷ್ಟು ಗಮನಿಸಬೇಕಾಗಿಲ್ಲ. ಸಸಿ ಇನ್ನೂ ಬೆಳೆಯುತ್ತಿರುವಾಗ ಅದನ್ನು ಬೇಲಿಯ ಸಹಾಯದಿಂದ ರಕ್ಷಿಸಬೇಕು. ಇಲ್ಲದೇ ಇದ್ದರೆ ಅದಕ್ಕೆ ಹಾನಿಯಾಗುವುದು. ಆದರೆ ಸಸಿ ಬೆಳೆದು ದೊಡ್ಡ ಮರವಾದ ಮೇಲೆ ಬೇಲಿಯನ್ನು ತೆಗೆಯುವರು. ಆಗ ಯಾರು ಬಂದು ಏನು ಮಾಡಿದರೂ ಅದು ಸಹಿಸಬಲ್ಲದು.

೨. ಆಹಾರದ ವಿಷಯದಲ್ಲಿ ಕೆಲವು ವಿಧಿ ನಿಷೇಧಗಳು ಆವಶ್ಯಕ. ಯಾವುದು ನಮಗೆ ಸಾತ್ತ್ವಿಕ ಮನಸ್ಸನ್ನು ಕೊಡಬಲ್ಲದೊ ಅಂತಹ ಆಹಾರವನ್ನು ಉಪಯೋಗಿಸಬೇಕು.

೩. ಕೆಲವು ಆಹಾರ ನಮ್ಮ ಮನಸ್ಸಿನ ಮೇಲೆ ಕೆಲವು ಬದಲಾವಣೆಗಳನ್ನು ಮಾಡುವುದು. ನಾವು ಇದನ್ನು ಪ್ರತಿದಿನ ನೋಡುತ್ತೇವೆ. ಮತ್ತೆ ಕೆಲವು ಆಹಾರ ಗಳು ದೇಹದ ಮೇಲೆ ಕೆಲವು ಬದಲಾವಣೆಗಳನ್ನು ತರುತ್ತವೆ. ಕೆಲವು ದಿನಗಳ ನಂತರ ಇವು ನಮ್ಮ ಮನಸ್ಸಿನ ಮೇಲೆಯೂ ತನ್ನ ಪ್ರಭಾವವನ್ನು ಬೀರುವುದು. ನಾವು ಈ ದೊಡ್ಡ ವಿಷಯವನ್ನು ತಿಳಿದುಕೊಳ್ಳಬೇಕು. ನಮ್ಮ ಕಷ್ಟದ ಬಹು ಭಾಗ ನಾವು ತಿನ್ನುವ ಆಹಾರದಿಂದ ಬಂದಿದೆ. ನೀವು ಹೊಟ್ಟೆತುಂಬಾ ಜೀರ್ಣಿಸಿ ಕೊಳ್ಳಲು ಕಷ್ಟವಾದ ಆಹಾರವನ್ನು ತೆಗೆದುಕೊಂಡ ಮೇಲೆ ಮನಸ್ಸನ್ನು ಏಕಾಗ್ರ ಗೊಳಿಸುವುದು ಬಹಳ ಕಷ್ಟ. ಅದು ಯಾವಾಗಲೂ ಚಂಚಲವಾಗಿರುವುದು. ಕೆಲವು ಆಹಾರ ನಮ್ಮನ್ನು ಉದ್ವೇಗಕ್ಕೆ ಒಳಗುಮಾಡುವುದು. ನೀವು ಅಂತಹ ಆಹಾರವನ್ನು ತೆಗೆದುಕೊಂಡರೆ ಮನಸ್ಸನ್ನು ಏಕಾಗ್ರಮಾಡಲು ಸಾಧ್ಯವಾಗು ವುದಿಲ್ಲ ಎಂಬುದು ಗೊತ್ತಾಗುವುದು.

೪. ನಾವೇನು ಬದುಕಿರುವ ಪರಿಯಂತರ ಒಳ್ಳೆಯ ಕೆಟ್ಟ ಆಹಾರವನ್ನೇ ಚರ್ಚಿಸುತ್ತಿರಬೇಕೆ ? ಅಥವಾ ನಮ್ಮ ಇಂದ್ರಿಯಗಳನ್ನು ನಿಗ್ರಹಿಸಲು ಯತ್ನಿಸ ಬೇಕೆ ? ನಿಜ, ಇಂದ್ರಿಯ ನಿಗ್ರಹವೇ ನಮ್ಮ ಗುರಿ. ಒಳ್ಳೆಯ ಕೆಟ್ಟ ಆಹಾರ ವನ್ನು ವಿಮರ್ಶಿಸುವುದರಿಂದ ನಮಗೆ ಆ ನಿಗ್ರಹ ಸಿದ್ಧಿಸಬಹುದು.

Vijaya Evening College Library
Bangalore-560 004
9970

೫. ನಮ್ಮ ಶಾಸ್ತ್ರದ ಪ್ರಕಾರ ಮೂರು ವಸ್ತುಗಳು ಆಹಾರವನ್ನು ಶುದ್ಧ ಮಾಡುವುವು. ಜಾತಿ ದೋಷ ಎಂದರೆ ಪದಾರ್ಥಗಳ ಸ್ವಭಾವದಿಂದಲೇ ಆದುದು, ಈರುಳ್ಳಿ, ಬೆಳ್ಳುಳ್ಳಿ ಮುಂತಾದವು. ನಿಮಿತ್ತ ದೋಷ ಎಂದರೆ ಹೊರಗಿನ ವಸ್ತುಗಳ ಸಂಯೋಗದಿಂದ ದೋಷ ಉಂಟಾಗುವುದು. ಅಂಗಡಿಯಿಂದ ತಂದ ಮಿಠಾಯಿ ಮುಂತಾದವುಗಳಲ್ಲಿರುವ ನೊಣ, ಧೂಳು ಮುಂತಾದವು. ಆಶ್ರಯ ದೋಷ ಎಂದರೆ ಕೆಟ್ಟ ವ್ಯಕ್ತಿಗಳು ಆಹಾರಗಳನ್ನು ತರುವುದರಿಂದ ಆಗುವ ದೋಷ. ಮೊದಲ ಮತ್ತು ಎರಡನೆ ದೋಷದಿಂದ ಪಾರಾಗಲು ಜಾಗರೂಕರಾಗಿರಬಹುದು. ಆದರೆ ಈ ದೇಶದಲ್ಲಿ ಮೊದಲನೆ ಎರಡಕ್ಕೇ ಸಾಕಷ್ಟು ಗಮನ ಕೊಡುವುದಿಲ್ಲ. ಆದರೆ ಮೂರನೆಯದಕ್ಕೆ ಕಾದಾಡುವರು. ಇಲ್ಲಿ ದೋಷವನ್ನು ಕಂಡುಹಿಡಿಯಬೇಕಾದರೆ ಯೋಗಿಗಳಿಗೆ ಮಾತ್ರ ಸಾಧ್ಯ.

೬. ಹಿಂದಿನ ಕಾಲದಿಂದಲೂ ನಮ್ಮ ಹಿರಿಯರು ಯಾವ ಆಹಾರ ಯೋಗ್ಯ ಎಂದು ಹೇಳಿದ್ದರೊ ಅದನ್ನು ಪ್ರಾರಂಭ ದೆಸೆಯಲ್ಲಿರುವವರು ಗಮನಿಸುವುದು ಮೇಲು. ಆದರೆ ಅನೇಕ ಕಡೆ ಇದರ ಮೇಲೆ ಅರ್ಥವಿಲ್ಲದೆ ಎಲ್ಲಕ್ಕಿಂತ ಹೆಚ್ಚಾಗಿ ಪ್ರಾಧಾನ್ಯತೆಯನ್ನು ಕೊಟ್ಟು ಧರ್ಮವನ್ನೆಲ್ಲಾ ಅಡಿಗೆಮನೆಗೆ ಓಡಿಸಿರುವರು. ನಾವು ಇದನ್ನು ಅನೇಕ ಮತಗಳಲ್ಲಿ ನೋಡುತ್ತೇವೆ. ಅವರಲ್ಲಿರುವ ಆಧ್ಯಾತ್ಮಿಕ ತತ್ತ್ವಗಳನ್ನು ಬೆಳಕಿಗೆ ತರುವ ಬದಲು ಆಹಾರವನ್ನೇ ಪ್ರಧಾನ ಮಾಡಿರುವರು. ಇದೊಂದು ವಿಧವಾದ ಚಾರ್ವಾಕ ಮತವೇ ಆಯಿತು.

೭. ನೀವೇನೊ ಮಾಂಸಾಹಾರಿಗಳಾದ ಕ್ಷತ್ರಿಯರನ್ನು ಹಂಗಿಸುತ್ತೀರಿ. ಅವರು ಮಾಂಸ ತಿನ್ನಲಿ ಬಿಡಲಿ. ಅವರೇ ಹಿಂದೂಗಳಲ್ಲಿ ಯಾವುದು ಭವ್ಯವಾಗಿರುವುದೊ, ಸುಂದರವಾಗಿರುವುದೋ ಅವನ್ನೆಲ್ಲಾ ಪ್ರಸಿದ್ಧಿಗೆ ತಂದವರು. ಉಪನಿಷತ್ತುಗಳನ್ನು ಯಾರು ಬರೆದರು ? ರಾಮ ಯಾರು? ಕೃಷ್ಣ ಯಾರು? ಬುದ್ಧ ಯಾರು ? ಜೈನರ ತೀರ್ಥಂಕರರು ಯಾರು ? ಭಗವಂತನ ಕರುಣೆಯ ಮಹಾ ಪ್ರವಾಹ ಒಂದು ಚೂರು ಮಾಂಸಕ್ಕೆ ಅಂಜಿ ಹೆಪ್ಪುಗಟ್ಟಿ ಹೋಗುವುದಕ್ಕೆ ಅವನೇನು ನಿನ್ನಂತಹ ಅಂಜುಬುರುಕನಾದ ಮೂರ್ಖನೆ ? ಅವನೇನಾದರೂ ಹಾಗೆ ಇದ್ದರೆ ಅವನಿಂದ ಏನೂ ಪ್ರಯೋಜನವಿಲ್ಲ.

೮. ಪ್ರಾಣಿವಧೆ ನಿಸ್ಸಂದೇಹವಾಗಿಯೂ ಪಾಪ. ಆದರೆ ವಿಜ್ಞಾನಶಾಸ್ತ್ರ ಪ್ರಗತಿಯಾಗಿ ಶಾಕಾಹಾರ ನಮ್ಮ ದೇಹಕ್ಕೆ ಚೆನ್ನಾಗಿ ಒಗ್ಗುವಂತೆ ಮಾಡಿದ ಹೊರತು ಮಾಂಸಾಹಾರ ಮಾಡದೆ ವಿಧಿಯಿಲ್ಲ. ಈಗಿನಂತೆ ಜನ ರಾಜಸಿಕರಾಗಿರಬೇಕಾಗಿರುವಾಗ ಮಾಂಸಾಹಾರ ತೆಗೆದುಕೊಳ್ಳದೆ ವಿಧಿಯಿಲ್ಲ. ಅಶೋಕ ಚಕ್ರ

ವರ್ತಿ ಕತ್ತಿಯ ಭಯದಿಂದ ಸಾವಿರಾರು ಪ್ರಾಣಿಗಳ ವಧೆಯನ್ನು ನಿಲ್ಲಿಸಿದ ಸರಿ. ಆದರೆ ಸಾವಿರ ವರುಷದ ಗುಲಾಮಗಿರಿ ಇದಕ್ಕಿಂತ ಭೀಕರವಲ್ಲವೆ ? ಕೆಲವು ಕುರಿಗಳನ್ನು ಕೊಲ್ಲುವುದು ಅಥವಾ ತನ್ನ ಹೆಂಡತಿ, ಮಗಳ ಗೌರವವನ್ನು ರಕ್ಷಿಸುವ ಮತ್ತು ತನ್ನ ಆಹಾರವನ್ನೇ ಕದಿಯಲು ಬರುವ ದುರುಳರಿಗೆ ಬುದ್ಧಿ ಕಲಿಸುವ ಸಾಮರ್ಥ್ಯವಿಲ್ಲದೇ ಇರುವದು ಇವುಗಳಲ್ಲಿ ಯಾವುದು ದೊಡ್ಡ ಪಾಪ ? ದೇಹ ಶ್ರಮದಿಂದ ಜೀವನೋಪಾಯವನ್ನು ಸಂಪಾದಿಸದಿರುವ ಕೆಲವರು ಬೇಕಾದರೆ ಮಾಂಸಾಹಾರವನ್ನು ಮಾಡದಿರಲಿ. ಆದರೆ ಯಾರು ಹಗಲು ರಾತ್ರಿ ದುಡಿದು ಜೀವನೋಪಾಯವನ್ನು ಸಂಪಾದಿಸಬೇಕೋ ಅಂತಹವರನ್ನೆಲ್ಲಾ ಸಸ್ಯಾಹಾರಿಯನ್ನಾಗಿ ಮಾಡಿದ್ದು ನಮ್ಮ ಗುಲಾಮಗಿರಿಗೆ ಒಂದು ಕಾರಣವಾಗಿದೆ.

೯. ಯಾರನ್ನು ನೀವು ಸಾತ್ತ್ವಿಕರೆಂದು ಹೇಳುತ್ತಿರೋ ಅವರಲ್ಲಿ ಶೇಕಡ ತೊಂಬತ್ತಕ್ಕಿಂತ ಹೆಚ್ಚು ಮಂದಿ ತಮಸ್ಸಿನಲ್ಲಿ ಮುಳುಗಿ ಹೋಗಿರುವರು, ಅಂತಹವರಲ್ಲಿ ಹದಿನಾರನೆ ಒಂದು ಪಾಲು ಸಾತ್ತ್ವಿಕರಾದರೂ ಆಗಿದ್ದರೆ ! ನಮಗಿಂದು ಬೇಕಾಗಿರುವುದು ಪ್ರಚಂಡ ರಜೋಗುಣ ಜಾಗ್ರತಿ. ದೇಶವೆಲ್ಲಾ ತಮಂದ ನಿದ್ರೆಯಲ್ಲಿ ತಲ್ಲೀನವಾಗಿದೆ. ಈ ದೇಶದ ಜನರಿಗೆ ಊಟ ಕೊಡಬೇಕು, ಬಟ್ಟೆ ಕೊಡಬೇಕು. ಅವರನ್ನು ಜಾಗ್ರತರನ್ನಾಗಿ ಮಾಡಬೇಕು. ಇಲ್ಲದೇ ಇದ್ದರೆ ಅವರು ಜಡವಾಗುವರು. ಕಲ್ಲು ಮರದಂತೆ ನಿಶ್ಚೇಷ್ಟಿತರಾಗುವರು. ಆದಕ್ಕೇ ನಾನು ಹೇಳುವುದು, ಮಕ್ಕಳಿರಾ, ಬೇಕಾದಷ್ಟು ಮೀನು, ಮಾಂಸವನ್ನು ತಿನ್ನಿ.

೧೦. ಮಾಂಸಾಹಾರ ಬಹಳ ಕ್ರೂರವಾದುದು, ಶಾಕಾಹಾರ ನಿಜವಾಗಿಯೂ ಶುದ್ಧವಾದುದು. ಇದನ್ನು ಒಪ್ಪಿಕೊಳ್ಳದವರಾರು ? ಯಾರು ಕೇವಲ ಆಧ್ಯಾತ್ಮಿಕ ಜೀವನವನ್ನೇ ನಡೆಸಬೇಕೆಂದಿರುವರೋ ಅವರು ಕಟ್ಟುನಿಟ್ಟಾಗಿ ಶಾಕಾಹಾರಿಯಾಗಿರಬೇಕು. ಆದರೆ ಯಾರು ಹೋರಾಟ, ಸ್ಪರ್ಧೆಯಿಂದ ತುಂಬಿರುವ ಈ ಪ್ರಪಂಚದಲ್ಲಿ ಜೀವನೋಪಾಯವನ್ನು ಶ್ರಮಪಟ್ಟು ಸಂಪಾದಿಸಬೇಕಾಗಿದೆಯೊ ಅವರು ಮಾಂಸಾಹಾರವನ್ನು ನಿರ್ವಾಹವಿಲ್ಲದೆ ಮಾಡಬೇಕಾಗಿದೆ. ಎಲ್ಲಿಯವರೆಗೆ ನಮ್ಮ ಸಮಾಜದಲ್ಲಿ ಬಲಶಾಲಿಗಳು ದುರ್ಬಲರನ್ನು ಗೆಲ್ಲುವುದು ಇದೆಯೊ ಅಲ್ಲಿಯವರೆಗೆ ಮಾಂಸಾಹಾರ ಅಥವಾ ಅದಕ್ಕೆ ಬದಲು ಯಾವುದನ್ನಾದರೂ ಕಂಡುಹಿಡಿಯಬೇಕು. ಇಲ್ಲದೇಇದ್ದರೆ ಬಡವರು ಬಲಾತ್ಕಾರ ಕೆಳಗೆ ಸಿಕ್ಕಿ ನುಚ್ಚುನೂರಾಗಿ ಹೋಗುವರು. ಎಲ್ಲೊ ಕೆಲವರ ಮೇಲೆ ಶಾಕಾಹಾರ ಒಳ್ಳೆಯ ಪರಿಣಾಮವನ್ನುಂಟುಮಾಡಿದೆ ಎಂದು ತೋರಿದರೆ ಸಾಲದು. ಒಂದು ದೇಶವನ್ನು ಮತ್ತೊಂದು ದೇಶದೊಂದಿಗೆ ಹೋಲಿಸಿ ನಿರ್ಣಯಕ್ಕೆ ಬನ್ನಿ.

೧೪ ಮುಕ್ತಿ

೧. ಮನಸ್ಸನ್ನು ಸುಲಭವಾಗಿ ಜಯಿಸುವುದಕ್ಕೆ ಆಗುವುದಿಲ್ಲ. ಯಾವುದಾದರೂ ಒಂದು ಸಣ್ಣ ಘಟನೆಯಾಗಲಿ, ಯಾರಾದರೂ ಸ್ವಲ್ಪ ರೇಗಿಸಲಿ, ಅಪಾಯದ ಸುಳಿವು ತೋರಲಿ, ಆಗಲೇ ಚಿತ್ತ ಕ್ಷೋಭೆಗೊಳ್ಳಬೇಕಾದರೆ. ಆ ಮನಸ್ಸು ಎಂತಹ ಸ್ಥಿತಿಯಲ್ಲಿರಬಹುದು! ಮನಸ್ಸು ಇಂತಹ ಪ್ರವೃತ್ತಿಗೊಳಗಾದರೆ ಅದರ ಮಹಿಮೆ ಅಥವಾ ಆಧ್ಯಾತ್ಮಿಕತೆಯನ್ನು ಹೊಗಳುವುದೆಂತು ? ಮನಸ್ಸಿನ ಚಾಂಚಲ್ಯವನ್ನು ಸ್ವಹಿತಕ್ಕೆ ತರಬೇಕು. ಬಾಹ್ಯ ವಸ್ತುಗಳು ನಮ್ಮ ಮೇಲೆ ತನ್ನ ಪ್ರಭಾವವನ್ನು ಬೀರಲು ಎಷ್ಟು ಅವಕಾಶ ಕೊಡಬೇಕು, ಎಷ್ಟೇ ಬಾಹ್ಯ ಘಟನೆಗಳಾಗುತ್ತಿದ್ದರೂ ನಾವು ಎಷ್ಟುಮಟ್ಟಿಗೆ ಸ್ವತಂತ್ರರಾಗಿರಬೇಕು ಎಂಬುದನ್ನು ನಾವೇ ನಿಷ್ಕರ್ಷಿಸಬೇಕು. ಬಾಹ್ಯ ಘಟನೆಗಳಾವುವೂ ನಮ್ಮ ಚಿತ್ತದ ಸ್ವಾಸ್ಥ್ಯವನ್ನು ಕೆಡಿಸಲು ಸಾಧ್ಯವಾಗದಾಗ ಮಾತ್ರ ನಾವು ಸ್ವತಂತ್ರರಾದಂತೆ, ಅದಕ್ಕಿಂತ ಮುಂಚೆ ಇಲ್ಲ. ಇದೇ ಮುಕ್ತಿ.

೨. ನಮ್ಮ ಸುತ್ತ ಕಾಣುವ ಪ್ರತಿಯೊಂದೂ ಒಂದು ಕೀಟದಿಂದ ಮಾನವನವರೆಗೆ, ಅಚೇತನವಾದ ಜಡದ್ರವ್ಯದಿಂದ ಹಿಡಿದು ಅತಿಶ್ರೇಷ್ಠವಾದ ಆತ್ಮನವರೆಗೆ ಪ್ರತಿಯೊಂದೂ ಮುಕ್ತಿಗಾಗಿ ಹೋರಾಡುತ್ತಿದೆ. ಇಡೀ ಸೃಷ್ಟಿಯೇ ಮುಕ್ತಿಯನ್ನು ಪಡೆಯಬೇಕೆಂಬ ಹೋರಾಟದ ಪ್ರತಿಫಲ.

೩. ನಾವು ನೋಡುವ ಪ್ರತಿಯೊಂದು ವಸ್ತುವಿನ ಹಿಂದೆಯೂ ಮುಕ್ತಿಯನ್ನು ಪಡೆಯಬೇಕೆಂಬ ಗುರಿ ಇದೆ. ಈ ಸ್ವಭಾವದ ಪ್ರಭಾವದಿಂದಲೇ ಸಾಧು ಪ್ರಾರ್ಥಿಸುವುದು, ಕಳ್ಳ ಕದಿಯುವುದು. ಕರ್ಮ ಅಯೋಗ್ಯದ ದಾರಿಯನ್ನು ಹಿಡಿದಿದ್ದರೆ ಅದನ್ನು ಪಾಪ ಎನ್ನುವೆವು. ಅದು ಉತ್ತಮವಾದ ಯೋಗ್ಯ ಮಾರ್ಗದಲ್ಲಿದ್ದರೆ ಅದನ್ನು ಪುಣ್ಯ ಎನ್ನುವೆವು. ಆದರೆ ಆದರ ಹಿಂದಿರುವ ಪ್ರೇರಣೆ ಮಾತ್ರ ಒಂದೇ. ಮುಕ್ತನಾಗಬೇಕೆಂಬ ಹೋರಾಟ.

೪. ಜಡವಾಗಲಿ ಚೇತನವಾಗಲಿ ಸೃಷ್ಟಿಯ ಒಂದು ಗುರಿಯೇ ಮುಕ್ತಿ. ಪ್ರತಿಯೊಂದೂ ತಿಳಿದೋ ತಿಳಿಯದೆಯೋ ಈ ಗುರಿಯನ್ನು ಸಾಧಿಸುವುದಕ್ಕಾಗಿ ಹೋರಾಡುತ್ತಿದೆ. ಸಾಧು ಇಚ್ಛಿಸುವ ಮುಕ್ತಿ ಬೇರೆ, ಕಳ್ಳ ಇಚ್ಛಿಸುವ ಮುಕ್ತಿ ಬೇರೆ. ಸಾಧು ಇಚ್ಛಿಸುವ ಅನಿರ್ವಚನೀಯ ಆನಂದ, ಭೂಮುಕ್ಕೆ ಒಯ್ಯುವುದು.

ಆದರೆ ಯಾವುದರ ಮೇಲೆ ಕಳ್ಳ ಮನಸ್ಸನ್ನು ಇಟ್ಟಿರುವನೋ ಅದು ಅವನನ್ನು ಇನ್ನೂ ಹೆಚ್ಚು ಬಂಧವಕ್ಕೆ ಒಳಗು ಮಾಡುವುದು.

೫. ನಾವು ಮುಕ್ತಿಯನ್ನು ಪಡೆಯಬೇಕೆಂದು ಇಚ್ಛಿಸುತ್ತೇವೆ. ಆ ಮುಕ್ತಿಯೇ ದೇವರು ಎನ್ನುವವು. ಎಲ್ಲದರ ಹಿಂದೆ ಇರುವ ಆನಂದವೂ ಇದೇ. ಆದರೆ ಮಾನವ ಅಲ್ಪದರಲ್ಲಿ ಅದನ್ನು ಅರಸುವಾಗ ಅವನಿಗೆಲ್ಲೊ ತುಣುಕು ದೊರಕುವುದು. ಭಕ್ತ ದೇವರ ಚಿಂತನೆಯಿಂದ ಯಾವ ಆನಂದವನ್ನು ಪಡೆಯುವನೊ ಅದನ್ನೇ ಕಳ್ಳ ಕದಿಯುವಾಗ ಪಡೆಯುವನು. ಆದರೆ ಕಳ್ಳನಿಗೆ ಸಿಕ್ಕುವುದು ಒಂದು ಕಣ ಆನಂದ, ಜೊತೆಗೆ ಬೇಕಾದಷ್ಟು ದುಃಖ. ದೇವರೇ ನಿಜವಾದ ಸುಖ. ಪ್ರೀತಿಯೇ ನಿಜ ವಾದ ದೇವರು. ಮುಕ್ತಿಯೇ ದೇವರು. ಬಂಧನದಲ್ಲಿರುವುದಾವುದೂ ದೇವರಲ್ಲ.

೬. ಮುಕ್ತಿ ಆಗಲೇ ಮನುಷ್ಯನಲ್ಲಿದೆ. ಆದರೆ ಅವನು ಅದನ್ನು ಅಲ್ಲಿ ಕಂಡು ಹಿಡಿಯಬೇಕಾಗಿದೆ. ಅದಾಗಲೇ ಅವನಲ್ಲಿದೆ. ಆದರೆ ಪ್ರತಿಕ್ಷಣವೂ ಅವನು ಅದನ್ನು ಮರೆಯುವನು. ಪ್ರತಿಯೊಬ್ಬನೂ ಅದನ್ನು ತಿಳಿದೊ ತಿಳಿಯದೆಯೊ ಕಂಡು ಹಿಡಿಯಬೇಕಾಗಿದೆ. ಇದೇ ಎಲ್ಲಾ ಮಾನವರ ಗುರಿ. ಜ್ಞಾನಿಗೂ ಅಜ್ಞಾನಿಗೂ ಇರುವ ವ್ಯತ್ಯಾಸವೆ ಇದು : ಜ್ಞಾನಿ ಇದನ್ನು ತಿಳಿದು ಮಾಡುವನು, ಅಜ್ಞಾನಿ ಇದನ್ನು ತಿಳಿಯದೆ ಮಾಡುವನು.

೭. ಮುಕ್ತಿ ಎಂದರೆ ಸ್ವತಂತ್ರನಾಗುವುದು. ಎಲ್ಲದರಿಂದಲೂ ಸ್ವತಂತ್ರನಾಗ ಬೇಕು. ಸುಖವಾಗಲಿ, ದುಃಖವಾಗಲಿ, ಇಂದ್ರಿಯದ ಯಾವ ವೇದನೆಯಾಗಲಿ, ಪಾಪವಾಗಲಿ, ಪುಣ್ಯವಾಗಲಿ ಎಲ್ಲದರಿಂದಲೂ ಪಾರಾಗಬೇಕು.

ಇದಕ್ಕಿಂತಲೂ ಹೆಚ್ಚು ಆಗಬೇಕು. ನಾವು ಸಾವಿನಿಂದಲೂ ಪಾರಾಗಬೇಕು. ಸಾವಿನಿಂದ ಪಾರಾಗಬೇಕಾದರೆ ಜನನದಿಂದಲೂ ಪಾರಾಗಬೇಕು. ಜೀವನವೇ ಒಂದು ಮೃತ್ಯುಚಿಂತನೆ. ಜೀವನವಿರುವ ಕಡೆ ಮರಣವಿದ್ದೇ ಇರುವುದು. ನೀವು ಮರಣದಿಂದ ಪಾರಾಗಬೇಕಾದರೆ ಜೀವನದಿಂದಲೂ ಪಾರಾಗಬೇಕು.

೮. ನಮಗೆ ಶ್ರದ್ಧೆ ಇದ್ದರೆ ನಾವು ನಿತ್ಯ ಮುಕ್ತರು. ಆದರೆ ಸಾಕಷ್ಟು ಶ್ರದ್ಧೆ ಇರಬೇಕು ಅಷ್ಟೆ. ನೀನು ಆತ್ಮ, ನಿತ್ಯಮುಕ್ತ, ಸನಾತನವಾದವನು, ಧನ್ಯಾತ್ಮ. ಸಾಕಷ್ಟು ಶ್ರದ್ಧೆ ಇರಲಿ. ಇದ್ದರೆ ನೀನು ಈ ಕ್ಷಣದಲ್ಲಿಯೇ ಮುಕ್ತನಾಗುವೆ.

ಕಾಲ ದೇಶ ನಿಮಿತ್ತ ಪ್ರಪಂಚದಲ್ಲಿರುವುದೆಲ್ಲ ಬಂಧನದಲ್ಲಿದೆ. ಆತ್ಮ ಕಾಲ ದೇಶ ನಿಮಿತ್ತಾತೀತ. ಯಾವುದು ಬಂಧನದಲ್ಲಿರುವುದೋ ಅದು ಪ್ರಕೃತಿ, ಆತ್ಮನಲ್ಲ.

ಆದಕಾರಣವೆ ನೀನು ಮುಕ್ತನೆಂದು ಸಾರು. ನಿತ್ಯಮುಕ್ತನಾದ ನಿತ್ಯ ಧನ್ಯ ನಾದ ನಿನ್ನ ನೈಜಸ್ಥಿತಿಯಲ್ಲಿರು.

೯. ನಾವು ಮುಕ್ತರಾಗಬೇಕಾದರೆ ಪ್ರಕೃತಿಯ ಮೇರೆಗೆ ಅತೀತರಾಗಬೇಕು. ಪ್ರಕೃತಿಯಲ್ಲಿ ಅದು ದೊರಕಲಾರದು. ಪೂರ್ಣವಾದ ಸಮತ್ವ ಅಥವಾ ಕ್ರೈಸ್ತರು ಹೇಳುವ ನಮ್ಮ ಅರಿವಿಗೆ ಅತೀತವಾದ ಶಾಂತಿ ಈ ಪ್ರಪಂಚದಲ್ಲಿ ದೊರಕ ಲಾರದು. ಸ್ವರ್ಗದಲ್ಲಿಯೂ ದೊರಕಲಾರದು. ನಮ್ಮ ಮನಸ್ಸು ಮತ್ತು ಆಲೋ ಚನೆ ಸುಳಿಯುವ ಎತ್ತಕಡೆಯೂ ಅದು ದೊರಕದು. ಇಂದ್ರಿಯಗಳು ಗ್ರಹಿಸು ವೆಡೆ, ಕಲ್ಪನೆ ಚಿತ್ರಿಸಿಕೊಳ್ಳುವ ಕಡೆ ಆ ಶಾಂತಿ ದೊರಕಲಾರದು. ಈ ಯಾವ ಸ್ಥಳಗಳೂ ನಮಗೆ ಆ ಮುಕ್ತಿಯನ್ನು ಕೊಡಲಾರವು. ಏಕೆಂದರೆ ಇವುಗಳೆಲ್ಲಾ ನಮ್ಮ ಪ್ರಪಂಚಕ್ಕೆ ಸೇರಿದ್ದು, ದೇಶ ಕಾಲ ನಿಮಿತ್ತದ ಒಳಗೆ ಇರುವುದು.

೧೦. ಈ ಕ್ಷುದ್ರ ಇಂದ್ರಿಯ ಪ್ರಪಂಚ ಅಥವಾ ಮನಸ್ಸಿಗೆ ಸಂಬಂಧಪಟ್ಟ ಪ್ರಪಂಚದ ಮೇಲೆ ನಮ್ಮ ಆಸಕ್ತಿಯನ್ನು ಕಳೆದುಕೊಂಡರೆ ತಕ್ಷಣ ನಾವು ಮುಕ್ತರು. ನಾವು ಬಂಧನದಿಂದ ಪಾರಾಗಲು ಇರುವ ದಾರಿ ಎಂದರೆ ನಿಯಮಕ್ಕೆ ಅತೀತರಾಗಿ ಹೋಗುವುದು, ಕಾರ್ಯಕಾರಣ ಪ್ರಪಂಚಕ್ಕೆ ಅತೀತರಾಗಿ ಹೋಗು ವುದು.

೧೧. ವೇದಾಂತದಲ್ಲಿ ಬರುವ ಶ್ರೇಷ್ಠ ಭಗವದ್ಭಾವನೆಯ ಹಿಂದೆಲ್ಲ ಪೂರ್ಣ ಸ್ವಾತಂತ್ರ್ಯದಿಂದ ಬರುವ ಧನ್ಯತೆ ಮತ್ತು ನಿತ್ಯಶಾಂತಿ ಇದೆ. ನಿರುಪಾಧಿಕವಾದ ಸ್ವಾತಂತ್ರ್ಯ ಯಾವುದರಿಂದಲೂ ಬದ್ಧವಾದುದಲ್ಲ. ಯಾವ ವಿಕಾರವೂ ಇಲ್ಲ, ಯಾವ ಪ್ರಕೃತಿಯ ಛಾಯೆಯೂ ಇಲ್ಲ ಅದರಲ್ಲಿ. ಇವನನ್ನು ವಿಕಾರಕ್ಕೆ ಒಳಗು ಮಾಡುವುದಾವುದೂ ಇಲ್ಲ. ಈ ಸ್ವಾತಂತ್ರ್ಯವೇ ನಿನ್ನಲ್ಲಿ ಮತ್ತು ನನ್ನಲ್ಲಿ ಇರು ವುದು. ಇದೇ ನಿಜವಾದ ಸ್ವಾತಂತ್ರ್ಯ.

೧೨. ಭಗವತ್ ಪೂಜೆ, ಮಹಾತ್ಮರ ಪೂಜೆ, ಏಕಾಗ್ರತೆ ಮತ್ತು ಧ್ಯಾನ, ನಿಸ್ವಾರ್ಥ ಕರ್ಮ ಇವೇ ಮಾಯಾ ಬಂಧನದಿಂದ ಪಾರಾಗಲು ಇರುವ ಮಾರ್ಗ. ಆದರೆ ನಮ್ಮಲ್ಲಿ ಪಾರಾಗಬೇಕೆಂಬ ಇಚ್ಛೆ ಉತ್ಕಟವಾಗಿರಬೇಕು. ಅಂಧಕಾರವನ್ನು ಬೆಳಗುವ ದಿವ್ಯಜ್ಯೋತಿ ನಮ್ಮಲ್ಲಿದೆ. ಜ್ಞಾನವೇ ನಮ್ಮ ಸ್ವಭಾವ. ಆಜನ್ಮಸಿದ್ಧ ಹಕ್ಕಿಲ್ಲ, ಯಾರೂ ಪ್ರಪಂಚದಲ್ಲಿ ಹುಟ್ಟಿಲ್ಲ.

೧೩. ಮುಕ್ತರಾಗಬೇಕೆಂಬ ಹೋರಾಟವನ್ನು ನಾವು ಎಲ್ಲಾ ಧರ್ಮಗಳ ಲ್ಲಿಯೂ ನೋಡುತ್ತೇವೆ. ಇದೇ ಎಲ್ಲಾ ನೀತಿ ಮತ್ತು ನಿಸ್ವಾರ್ಥತೆಗೆ ಆಧಾರ. ಮಾನವರು ತಾವು ಕೇವಲ ದೇಹ ಎಂಬ ಭಾವನೆಯಿಂದ ಪಾರಾಗಬೇಕು.

ಯಾರಾದರೊಬ್ಬರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರೆ, ಮತ್ತೊಬ್ಬರಿಗೆ ಉಪಕಾರವನ್ನು ಮಾಡುತ್ತಿದ್ದರೆ, ಆತ ಕೇವಲ ತಾನು ತನ್ನದು ಎಂಬ ದೃಷ್ಟಿಯಿಂದ ಪಾರಾಗಿಹೋಗಿರುವನು ಎಂದು ಭಾವ. ಸ್ವಾರ್ಥದಿಂದ ಇಷ್ಟೇ ಪಾರಾಗಬೇಕೆಂಬ ಒಂದು ಮಿತಿ ಇಲ್ಲ. ಎಲ್ಲಾ ನೀತಿದರ್ಶನಗಳೂ ಪರಮ ನಿಸ್ವಾರ್ಥವೇ ಗುರಿ ಎಂದು ಸಾರುವುವು. ಯಾರಾದರೊಬ್ಬರು ಇಂತಹ ಪರಮ ಆದರ್ಶವನ್ನು ಮುಟ್ಟಿದರು ಎಂದು ಇಟ್ಟುಕೊಳ್ಳಿ. ಅವನ ಸ್ಥಿತಿ ಏನಾಗುವುದು ? ಅವನ್ನಿನ್ನು ಅಲ್ಪ ವ್ಯಕ್ತಿಯಲ್ಲ. ಅನಂತಾತ್ಮನಾಗಿರುವನು. ಅವನಿಗೆ ಹಿಂದೆ ಇದ್ದ ಅಲ್ಪವ್ಯಕ್ತಿತ್ವ ಇನ್ನು ಎಂದಿಗೂ ಇರುವುದಿಲ್ಲ, ಅವನು ವಿಭುವಾಗಿರುವನು. ಹೀಗೆ ಸರ್ವವ್ಯಾಪಿಯಾದ ಅನಂತಾತ್ಮನಾಗುವುದೆ ಎಲ್ಲಾ ಧರ್ಮನೀತಿ ಮತ್ತು ದರ್ಶನಗಳ ಗುರಿ.

೧೪. ನಮ್ಮ ಪ್ರಯತ್ನದ ಗುರಿಯೆಲ್ಲಾ ಈಗಿರುವುದಕ್ಕಿಂತ ಹೆಚ್ಚಾಗಿ ಸ್ವತಂತ್ರರಾಗುವುದು. ಪೂರ್ಣ ಸ್ವಾತಂತ್ರ್ಯದಲ್ಲಿ ಮಾತ್ರ ಪರಿಪೂರ್ಣತೆ ಇರಬಲ್ಲದು. ನಮಗೆ ತಿಳಿಯಲಿ, ಇಲ್ಲದಿರಲಿ ಎಲ್ಲಾ ಪೂಜೆ ಮತ್ತು ಸಾಧನೆಗಳ ಹಿಂದೆ ಇರುವುದೇ ಮುಕ್ತಿಯ ಇಚ್ಛೆ.

೧೫. ತಾತ್ತ್ವಿಕ ದೃಷ್ಟಿಯಿಂದ ಆಲೋಚಿಸಿದರೆ ನಾವು ಸ್ವತಂತ್ರರಲ್ಲ ಎಂದು ತೋರುವುದು. ಆದರೆ ನಾನು ಸ್ವತಂತ್ರ ಎಂಬ ಭಾವನೆ ಇರುವುದು. ಈ ಭಾವನೆ ಹೇಗೆ ಬಂತು ಎಂಬುದನ್ನು ನಾವು ವಿಚಾರಿಸಬೇಕಾಗಿದೆ. ನಮ್ಮಲ್ಲಿ ಎರಡು ಭಾವನೆಗಳು ಇರುವುದು ಕಾಣುತ್ತಿದೆ. ನಮ್ಮ ಯುಕ್ತಿ ಪ್ರತಿಯೊಂದು ಕ್ರಿಯೆಯೂ ಕಾರ್ಯಕಾರಣಬದ್ಧವೆಂದು ಸಾರುವುದು. ಆದರೆ ಪ್ರತಿಕ್ಷಣದಲ್ಲಿಯೂ ನಾವು ಸ್ವತಂತ್ರರೆಂದು ಪ್ರತಿಪಾದಿಸುತ್ತಿರುವೆವು. ವೇದಾಂತ ಇದನ್ನು ಬಗೆಹರಿಸುವುದು ಹೀಗೆ : ಆತ್ಮ ನಿಜವಾಗಿಯೂ ಸ್ವತಂತ್ರ. ಈ ಸ್ವಾತಂತ್ರ್ಯ ನಮ್ಮಲ್ಲಿರುವುದು. ಆದರೆ ಆತ್ಮನ ಕ್ರಿಯೆ ಸ್ವತಂತ್ರವಲ್ಲದ ಬುದ್ಧಿ ಮತ್ತು ಮನಸ್ಸಿನ ಮೂಲಕ ವ್ಯಕ್ತವಾಗುತ್ತಿದೆ.

೧೬. ವಿಶ್ವದ ಉದ್ದೇಶವೇ ಸ್ವಾತಂತ್ರ್ಯ, ಸ್ವಾತಂತ್ರ್ಯವೇ ಅದರ ಗುರಿ. ಜಗಜ್ಜನನಿಯ ನೇತೃತ್ವದಲ್ಲಿ ಪ್ರಕೃತಿನಿಯಮಗಳ ಮೂಲಕ ನಾವು ಸ್ವತಂತ್ರರಾಗಲು ಯತ್ನಿಸುತ್ತಿರುವೆವು. ವಿಶ್ವದಲ್ಲೆಲ್ಲಾ ಮುಕ್ತರಾಗಬೇಕೆಂಬ ಹೋರಾಟ ಇದೆ. ಮಾನವ ತಾನು ಮುಕ್ತನಾಗಬೇಕೆಂದು ತಿಳಿದು ಸಾಧನೆ ಮಾಡುವುದರಲ್ಲಿ ಅತಿ ಸ್ಪಷ್ಟವಾಗಿ ಮತ್ತು ಶ್ರೇಷ್ಠವಾಗಿ ಅದು ವ್ಯಕ್ತವಾಗಿದೆ.

ಸ್ವಾತಂತ್ರ್ಯವನ್ನು ನಾವು ಕರ್ಮ, ಪೂಜೆ ಮತ್ತು ಜ್ಞಾನದ ಮೂಲಕ ಪಡೆಯಬಹುದು.

(a) ಕರ್ಮ : ಸ್ವಲ್ಪವೂ ಬಿಡದೆ ಸದಾಕಾಲದಲ್ಲಿಯೂ ಇತರರಿಗೆ ಸಹಾಯ ಮಾಡುವುದು ಮತ್ತು ಇತರರನ್ನು ಪ್ರೀತಿಸುವುದು.

(b) ಪೂಜೆ : ಜಪ, ಪ್ರಾರ್ಥನೆ, ಧ್ಯಾನ.

(c) ಜ್ಞಾನ : ಧ್ಯಾನವನ್ನು ಅನುಸರಿಸಿ ಬರುವುದು.

೧೭. ಪ್ರಕೃತಿಯೆಲ್ಲ ನಿಯಮಕ್ಕೆ ಅಧೀನ. ಈ ನಿಯಮವೆಲ್ಲಾ ಕರ್ಮದ ಪರಿಣಾಮ. ಈ ನಿಯಮವನ್ನು ನಾವು ಎಂದಿಗೂ ಕತ್ತರಿಸಿ ಹಾಕುವುದಕ್ಕೆ ಆಗುವುದಿಲ್ಲ. ನೀವು ಪ್ರಕೃತಿಯ ಒಂದು ನಿಯಮವನ್ನು ಭೇದಿಸಲು ಸಾಧ್ಯವಾದರೆ, ಸೃಷ್ಟಿಯೆಲ್ಲ ತಕ್ಷಣ ಕೊನೆಗಾಣುವುದು. ಇನ್ನು ಮೇಲೆ ಸೃಷ್ಟಿಯೇ ಇರುವುದಿಲ್ಲ. ಯಾರು ಮುಕ್ತರಾಗುವರೋ ಅವರು ನಿಯಮವನ್ನು ಭೇದಿಸುವರು. ಪ್ರಕೃತಿ ಅವನಿಗೆ ಮಾಯವಾಗುವುದು. ಅವನ ಮೇಲೆ ಇದಕ್ಕೆ ಇನ್ನು ಯಾವ ಪ್ರಭಾವವೂ ಇರಲಾರದು. ಪ್ರತಿಯೊಬ್ಬನೂ ಒಂದಲ್ಲ ಒಂದು ಸಲ ನಿಯಮ ಶೃಂಖಲೆಯನ್ನು ಭೇದಿಸುವನು. ಅನಂತರ ಅವನು ಪ್ರಕೃತಿಯ ಉಪಟಳಕ್ಕೆ ಸಿಕ್ಕಿ ನರಳಬೇಕಾಗಿಲ್ಲ.

೧೮. ಹಿಂದೂಗಳ ದರ್ಶನದ ಒಂದು ಗುರಿಯೇ ಪರಿಪೂರ್ಣರಾಗುವುದಕ್ಕೆ ಸತತ ಹೋರಾಡುವುದು, ದೇವರನ್ನು ಸೇರುವುದು, ದೇವರನ್ನು ನೋಡುವುದು. ದೇವರನ್ನು ಸೇರುವುದು ಮತ್ತು ನೋಡುವುದು ಎಂದರೆ ವೈಕುಂಠವಾಸಿಯಂತೆ ಪವಿತ್ರಾತ್ಮರಾಗುವುದು. ಇದೇ ಹಿಂದೂಗಳ ಧರ್ಮ.

ಪರಿಪೂರ್ಣನಾದ ಮೇಲೆ ಮಾನವ ಏನಾಗುತ್ತಾನೆ ? ಅವನು ಅನಂತ ಧನ್ಯತೆಯಲ್ಲಿ ತಲ್ಲೀನನಾಗುವನು. ಮಾನವ ನಿಜವಾಗಿ ಯಾವುದರಲ್ಲಿ ಸುಖಿಯಾಗಬೇಕೊ ಅದನ್ನು ಪಡೆದ ಮೇಲೆ, ಎಂದರೆ ಭಗವಂತನನ್ನು ಪಡೆದ ಮೇಲೆ, ಕೇವಲ ಅನಂತಾನಂದವನ್ನು ಭಗವಂತನೊಡನೆ ಅನುಭವಿಸುವನು.

೧೯. ಮುಕ್ತನಾಗಬೇಕೆಂದು ಬಯಸುವ ಪ್ರತಿಯೊಬ್ಬನೂ ಋಷಿಯಾಗಬೇಕು, ಮಂತ್ರದ್ರಷ್ಟನಾಗಬೇಕು, ದೇವರನ್ನು ನೋಡಬೇಕು ಎಂದು ಹಿಂದೂ ಧರ್ಮ ಸಾರುವುದು ಎಂಬುದನ್ನು ನಾವು ಗಮನಿಸಬೇಕು. ಇದೇ ಮುಕ್ತಿ, ನಮ್ಮ ಶಾಸ್ತ್ರ ನಮ್ಮ ಮುಂದೆ ಇಡುವ ನಿಯಮವೇ ಇದು.

೨೦. ಆತ್ಮವನ್ನು ಮಾನಸಿಕ ಮತ್ತು ದೈಹಿಕವಾದ ಎಲ್ಲಾ ವಸ್ತುಗಳಿಂದಲೂ ಪ್ರತ್ಯೇಕವಾಗಿಡಬೇಕು. ಈ ಸ್ಥಿತಿಯನ್ನು ಪಡೆದ ಮೇಲೆ ಆತ್ಮ ಸದಾಕಾಲದಲ್ಲಿಯೂ ಮುಕ್ತವಾಗಿತ್ತು, ಅದನ್ನು ಸುಖಿಯಾಗಿ ಮಾಡಲು ಅನ್ಯರಾರೂ ಬೇಕಾಗಿಲ್ಲ ಎಂಬುದು ಗೊತ್ತಾಗುವುದು. ಎಲ್ಲಿಯವರೆಗೆ ನಮ್ಮನ್ನು ಸುಖಿಗಳ

ನ್ನಾಗಿ ಮಾಡಲು ಇತರರು ಬೇಕೊ ಅಲ್ಲಿಯವರೆಗೆ ನಾವು ಬದ್ಧರು. ಎಂದು ಪುರುಷ ತಾನು ಮುಕ್ತ, ತನ್ನನ್ನು ಪೂರ್ಣ ಮಾಡಲು ಯಾರೂ ಬೇಕಾಗಿಲ್ಲ, ಈ ಪ್ರಕೃತಿ ಇನ್ನು ಅನಾವಶ್ಯಕ ಎಂದು ಭಾವಿಸುವನೊ ಆಗ ಅವನು ಕೈವಲ್ಯವನ್ನು ಪಡೆದಂತೆ.

೨೧. ಇಲ್ಲಿ, ಈ ಕ್ಷಣ ನಿರ್ವಾಣವನ್ನು ಪಡೆಯಬಹುದು ಎಂದು ವೇದಾಂತ ಬೋಧಿಸುವುದು. ಅದನ್ನು ಪಡೆಯುವುದಕ್ಕೆ ಸಾಯುವತನಕ ಕಾಯಬೇಕಾಗಿಲ್ಲ. ನಿರ್ವಾಣ ಎಂದರೆ ಆತ್ಮಸಾಕ್ಷಾತ್ಕಾರ, ಅದನ್ನು ಒಂದು ಕ್ಷಣಕಾಲ ಅನುಭವಿಸಿದರೂ ನಾವು ಪುನಃ ಅಹಂಕಾರದ ಭ್ರಾಂತಿಗೆ ಸಿಲುಕುವುದಿಲ್ಲ. ನಮಗೆ ಕಣ್ಣು ಇರುವುದರಿಂದ ನಾವು ವ್ಯಾವಹಾರಿಕ ಜಗತ್ತನ್ನು ನೋಡಬೇಕಾಗಿದೆ. ಆದರೆ ಯಾವಾಗಲೂ ಅದರ ನೈಜ ಸ್ವಭಾವ ಗೊತ್ತಿರುವುದು. ಅವಿಕಾರಿಯಾದ ಆತ್ಮನನ್ನು ಕಾಣದಂತೆ ಮಾಡುವ ತೆರೆ ಇದು. ತೆರೆ ಸರಿದ ಮೇಲೆ ಹಿಂದಿರುವ ಆತ್ಮ ಪ್ರತ್ಯಕ್ಷವಾಗುವುದು. ಬದಲಾವಣೆಯೆಲ್ಲ ತೆರೆಯಲ್ಲಿರುವುದು. ಪೂರ್ಣಾತ್ಮನಲ್ಲಿ ತೆರೆ ತುಂಬಾ ತೆಳ್ಳಗಿರುವುದು. ಸತ್ಯ ಅದರ ಮೂಲಕ ಚೆನ್ನಾಗಿ ಕಾಣುವಂತಿದೆ. ಪಾಪಿಯಲ್ಲಿ ತೆರೆ ಬಹಳ ದಪ್ಪನಾಗಿದೆ. ಆದರ ಹಿಂದಿರುವ ಆತ್ಮ ನಮಗೆ ಗೋಚರಿಸುವುದೇ ಇಲ್ಲ. ಆದರೂ ಪುಣ್ಯಾತ್ಮನ ಹಿಂದಿರುವಂತೆ ಪಾಪಿಯಲ್ಲಿಯೂ ಆತ್ಮನಿರುವನು. ತೆರೆಯನ್ನು ಸಂಪೂರ್ಣ ಸರಿಸಿ ಆದಮೇಲೆ ಆ ತೆರೆಯೇ ಇದ್ದಂತೆ ತೋರುವುದಿಲ್ಲ. ನಾವು ಯಾವಾಗಲೂ ಆತ್ಮನಾಗಿಯೇ ಇದ್ದೆವು. ಆಗ ತೆರೆಯೂ ಮರೆತು ಹೋಗುವುದು.

೨೨. ಒಬ್ಬ ಮುಕ್ತನಾದರೆ ಅವನು ನಿಶ್ಚೇಷ್ಟಿತನಾಗಿ ಮಣ್ಣಿನ ಹೆಂಟೆಯಂತೆ ಆಗುತ್ತಾನೆ ಎಂದಲ್ಲ. ಅವನು ಇತರರಿಗಿಂತ ಹೆಚ್ಚು ಕರ್ಮದಲ್ಲಿ ನಿರತನಾಗಿರುವನು. ಏಕೆಂದರೆ ಉಳಿದವರೆಲ್ಲ ಬಲಾತ್ಕಾರಕ್ಕೆ ಒಳಗಾಗಿ ಕೆಲಸ ಮಾಡುವರು. ಇವನೊಬ್ಬನೇ ಮುಕ್ತನಾಗಿ ಕೆಲಸಮಾಡುವನು.

೨೩. ಅಜ್ಞಾನವೇ ಮೃತ್ಯು, ಜ್ಞಾನವೇ ಜೀವನ.

೨೪. ಮುಕ್ತಿ ಎಂದರೆ ಸಂಪೂರ್ಣ ಸ್ವಾತಂತ್ರ್ಯ. ಪಾಪದ ಬಂಧನದಿಂದ ಹೇಗೆ ಸ್ವತಂತ್ರನೋ ಹಾಗೆಯೇ ಪುಣ್ಯದ ಬಂಧನದಿಂದಲೂ ಸ್ವತಂತ್ರ. ಚಿನ್ನದ ಸರಪಳಿಯೂ ಕಬ್ಬಿಣದ ಸರಪಳಿಯಂತೆಯೇ.

೧೫ ಭಗವತ್ ಗೀತಾ

೧. ಸಣ್ಣದರ ಮಹತ್ವ, ಗೀತ ಭೋಧಿಸುವುದು ಅದನ್ನು. ಧನ್ಯವಾಗಲಿ ಆ ಪುರಾತನ ಗ್ರಂಥ.

೨. ಸದಾ ಕೆಲಸಮಾಡುತ್ತಿರು. ಆದರೆ ಎಂದಿಗೂ ಆಸಕ್ತನಾಗಬೇಡ ಎಂಬುದೇ ಗೀತೆಯ ಮುಖ್ಯಭಾವನೆ.

೩. ವೇದಾಂತ ದರ್ಶನದ ಮೇಲೆ ಇರುವ ಶ್ರೇಷ್ಠವಾದ ಭಾಷ್ಯವೇ ಭಗವತ್‌ಗೀತಾ. ಈ ದೃಶ್ಯ ಒಂದು ಸಮರಾಂಗಣದಲ್ಲಿರುವುದು. ಇದೊಂದು ವಿಚಿತ್ರ. ಅಲ್ಲಿಯೇ ಶ್ರೀಕೃಷ್ಣ ಈ ಸಂದೇಶವನ್ನು ಬೋಧಿಸುವುದು. ಗೀತೆಯ ಪ್ರತಿಯೊಂದು ಪುಟದಲ್ಲಿಯೂ ನಮಗೆ ತೋರುವ ಸಂದೇಶವೇ ಪ್ರಚಂಡ ಕರ್ಮ. ಆದರೆ ಅದರ ಹಿಂದೆ ಪ್ರಶಾಂತಿ ಇದೆ. ಇದೇ ಕರ್ಮರಹಸ್ಯ. ಇದನ್ನು ಸಾಧಿಸುವುದೇ ವೇದಾಂತದ ಗುರಿ.

೪. ನಾವು ಗೀತೆಯನ್ನು ಒಂದು ದೀಪದ ಬೆಳಕಿನಲ್ಲಿ ಓದುತ್ತಿರುವೆವು. ಆದರೆ ಆ ಬೆಳಕಿನಲ್ಲಿ ಹಲವು ಕ್ರಿಮಿಗಳು ಸಾಯುತ್ತವೆ. ಆದಕಾರಣವೇ ಎಂತಹ ಕರ್ಮವಾಗಲಿ ಅದರೊಡನೆ ಸ್ವಲ್ಪ ದೋಷವಿದ್ದೇ ಇರುವುದು ನಮಗೆ ಕಾಣುವುದು. ಯಾರು ತಮ್ಮ ಕ್ಷುದ್ರ ಅಹಂಕಾರವನ್ನು ಬದಿಗಿರಿಸಿ ಕೆಲಸಮಾಡುವರೋ ಅವರು ದೋಷಕ್ಕೆ ಗುರಿಯಾಗುವುದಿಲ್ಲ. ಏಕೆಂದರೆ ಅವರು ಪ್ರಪಂಚದ ಹಿತಕ್ಕಾಗಿ ಕೆಲಸ ಮಾಡುವರು, ಯಾವ ಫಲಾಪೇಕ್ಷೆಯೂ ಇಲ್ಲದೇ ಯಾವ ಆಸಕ್ತಿಯೂ ಇಲ್ಲದೇ ಕೆಲಸಮಾಡುವುದರಿಂದ ಶ್ರೇಷ್ಠವಾದ ಆನಂದ ಮತ್ತು ಸ್ವಾತಂತ್ರ್ಯ ನಮಗೆ ಲಭಿಸುವುದು. ಈ ಕರ್ಮಯೋಗದ ರಹಸ್ಯವನ್ನು ಭಗವಾನ್ ಶ್ರೀಕೃಷ್ಣ ಗೀತೆಯಲ್ಲಿ ಬೋಧಿಸುವನು.

೫. ಭಗವದ್ಗೀತೆಯನ್ನು ಓದುವಾಗ ಪಾಶ್ಚಾತ್ಯರಲ್ಲಿ ಅನೇಕರಿಗೆ ಆಶ್ಚರ್ಯವಾಗಬಹುದು, ಏಕೆಂದರೆ ಎರಡನೆ ಅಧ್ಯಾಯದಲ್ಲಿ ಶ್ರೀಕೃಷ್ಣ ಅರ್ಜುನ ಯುದ್ಧ ಮಾಡದುದನ್ನು ನೋಡಿದಾಗ ಅವನನ್ನು ಮಿಥ್ಯಾಚಾರಿ, ಹೇಡಿ ಎಂದು ಕರೆಯುವನು. ತನ್ನ ವೈರಿಗಳು ಸ್ನೇಹಿತರು ಮತ್ತು ನೆಂಟರಾದುದರಿಂದ ಯುದ್ಧಮಾಡದಿರುವುದೇ ಪ್ರೀತಿಯ ಶ್ರೇಷ್ಠ ಆದರ್ಶವೆಂದು ಅರ್ಜುನ ಭಾವಿಸುವನು. ನಾವೆಲ್ಲ ಕಲಿಯಬೇಕಾದ ದೊಡ್ಡನೀತಿ ಇಲ್ಲಿದೆ. ಎಲ್ಲಾ ವಿಷಯಗಳಲ್ಲಿಯೂ ಅತಿರೇಕಗಳು

ಒಂದೇ ಸಮನಾಗಿ ತೋರುವುವು. ಏನೂ ಇಲ್ಲದಿರುವುದು, ಎಲ್ಲವನ್ನೂ ಪಡೆದಿರುವುದು ತೋರಿಕೆಗೆ ಒಂದೇ ಸಮನಾಗಿರುವಂತೆ ಕಾಣುವುದು. ಅರ್ಜುನ ತನಗೆ ವಿರೋಧವಾಗಿ ನಿಂತ ಸೈನ್ಯವನ್ನು ನೋಡಿ ಹೇಡಿಯಾಗುವನು. ಅವನು ವ್ಯಾಮೋಹದಿಂದ ದೇಶಕ್ಕೆ ಮತ್ತು ದೊರೆಗೆ ಮಾಡಬೇಕಾದ ಕರ್ತವ್ಯವನ್ನು ಮರೆಯುವನು. ಆದಕಾರಣವೇ ಕೃಷ್ಣ ಅರ್ಜುನನನ್ನು ಮಿಥ್ಯಾಚಾರಿ ಎಂದು ಕರೆಯುವನು. "ನೀನೊಬ್ಬ ಪಂಡಿತನಂತೆ ಮಾತನಾಡುವೆ. ಆದರೆ ನೀನು ಮಾಡುವ ಕೆಲಸ ನಿನ್ನ ಹೇಡಿತನವನ್ನು ಪ್ರದರ್ಶಿಸುತ್ತಿದೆ. ಆದಕಾರಣವೇ ಎದ್ದು ನಿಲ್ಲು, ಹೋರಾಡು."

೬. ನಾವು ಭಗವದ್ಗೀತೆಯಲ್ಲಿ ಪದೇಪದೇ ಎಲ್ಲರೂ ಸದಾ ಕೆಲಸಮಾಡುತ್ತಲೇ ಇರಬೇಕೆಂದು ಓದುತ್ತೇವೆ. ಎಲ್ಲಾ ಕರ್ಮಗಳಲ್ಲಿಯೂ ಸ್ವಭಾವತಃ ಒಳ್ಳೆಯದು ಕೆಟ್ಟದ್ದು ಸೇರಿರುವುದು. ನಾವು ಯಾವ ಕೆಲಸ ಮಾಡಲಿ ಅದರಿಂದ ಯಾರಿಗಾದರೂ ಸ್ವಲ್ಪ ಒಳ್ಳೆಯದು ಆಗುವುದು. ಹಾಗೆಯೇ ಅದರಿಂದ ಎಲ್ಲೊ ಯಾರಿಗೋ ಸ್ವಲ್ಪ ಕೆಟ್ಟದ್ದಾಗೇ ತೀರುವುದು. ಪ್ರತಿಯೊಂದು ಕರ್ಮ ಒಳ್ಳೆಯದು, ಕೆಟ್ಟದ್ದು ಇವುಗಳ ಮಿಶ್ರವಾಗಿಯೇ ತೀರಬೇಕು. ಆದರೂ ಸದಾ ಕೆಲಸ ಮಾಡುತ್ತಿರಿ ಎಂದು ಗೀತೆ ಆಜ್ಞಾಪಿಸುವುದು. ಒಳ್ಳೆಯ ಮತ್ತು ಕೆಟ್ಟ ಕೆಲಸಗಳೆರಡೂ ತಮ್ಮ ಪರಿಣಾಮವಾದ ಕರ್ಮವನ್ನು ಬಿಟ್ಟೇ ಬಿಡುವುವು. ಒಳ್ಳೆಯ ಕೆಲಸದಿಂದ ಒಳ್ಳೆಯ ಪರಿಣಾಮವಾಗುವುದು, ಕೆಟ್ಟ ಕೆಲಸದಿಂದ ಕೆಟ್ಟ ಪರಿಣಾಮವಾಗುವುದು. ಆದರೆ ಇವೆರಡೂ ಆತ್ಮನಿಗೆ ಬಂಧನಗಳೇ. ನಮ್ಮನ್ನು ಕರ್ಮ ಪರಿಣಾಮಕ್ಕೆ ಗುರಿ ಮಾಡುವ ವಿಚಾರದಲ್ಲಿ ಗೀತೆಯು ಅದನ್ನು ಬಗೆಹರಿಸುವುದೇ ಈ ರೀತಿ. ನಾವು ಮಾಡುವ ಕೆಲಸದ ಮೇಲೆ ಆಸಕ್ತಿ ಇಲ್ಲದೇ ಇದ್ದರೆ ಅದು ಯಾವ ಪರಿಣಾಮವನ್ನೂ ಬಿಡಲಾರದು.

೭. ನಮ್ಮ ದುಃಖಕ್ಕೆ ಇದೊಂದೇ ಕಾರಣ, ನಾವು ಆಸಕ್ತರು, ಆದಕ್ಕಾಗಿಯೇ ನಾವು ಬದ್ಧರು. ಸದಾ ಕೆಲಸ ಮಾಡಿ, ಆದರೆ ಆಸಕ್ತರಾಗಬೇಡಿ, ಬದ್ಧರಾಗಬೇಡಿ ಎನ್ನುವುದು ಗೀತಾ. ಪ್ರತಿಯೊಂದರಿಂದಲೂ ಅನಾಸಕ್ತರಾಗುವ ಬುದ್ಧಿಯನ್ನು ನಿಮ್ಮಲ್ಲಿ ಇಟ್ಟುಕೊಂಡಿರಿ, ಅದು ಎಷ್ಟೇ ಪ್ರಿಯವಾಗಿರಲಿ ಮನಸ್ಸು ಅದಕ್ಕೆ ಎಷ್ಟೇ ಹಾತೊರೆಯಲಿ, ಅದರಿಂದ ಎಷ್ಟೇ ದಾರುಣವಾದ ದುಃಖವಾಗಲಿ, ಅದನ್ನು ಯಾವ ಸಮಯದಲ್ಲಿ ಬೇಕಾದರೂ ತ್ಯಜಿಸುವುದಕ್ಕೆ ಸಿದ್ಧರಾಗಿರಿ.

೮. ಹೃದಯದ ಪ್ರೀತಿ ಒಬ್ಬನಿಗೆ ಮಾತ್ರ ಮೀಸಲು. ಆದಾರಿಗೆ? ಯಾರು

ಬದಲಾವಣೆಯಾಗುವುದಿಲ್ಲವೋ ಅವರಿಗೆ. ಶ್ರೀಕೃಷ್ಣ ಗೀತೆಯಲ್ಲಿ ಹೇಳುವುದು ಹೀಗೆ : ದೇವರೊಬ್ಬನೇ ಎಂದಿಗೂ ಬದಲಾಯಿಸದೆ ಇರುವವನು. ಅವನ ಪ್ರೀತಿ ಎಂದಿಗೂ ಬತ್ತುವುದಿಲ್ಲ. ನಾವು ಎಲ್ಲಿಯಾದರೂ ಇರಲಿ, ಏನನ್ನು ಬೇಕಾದರೂ ಮಾಡಲಿ, ಅವನು ಮಾತ್ರ ಎಂದಿನಂತೆಯೇ ದಯಾಮಯ, ಪ್ರೇಮಮಯ. ಅವನೆಂದಿಗೂ ಬದಲಾಯಿಸುವುದಿಲ್ಲ. ನಾವು ಭಗವಂತನನ್ನು ಪ್ರೀತಿಸಬೇಕು. ಪ್ರಪಂಚದಲ್ಲಿರುವ ಸರ್ವರನ್ನೂ ಅವನ ಮೂಲಕ ಪ್ರೀತಿಸಬೇಕು. ಇದೇ ಅತಿ ಮುಖ್ಯವಾಗಿರುವುದು.

೯. ಗೀತೆ ಯೋಗದ ಮೂಲಕ ಎಂದರೆ ಏಕಾಗ್ರತೆಯ ಮೂಲಕ ಕರ್ಮವನ್ನು ಮಾಡಿ ಎನ್ನುವುದು. ಅಂತಹ ಕರ್ಮಯೋಗದ ಏಕಾಗ್ರತೆಯಲ್ಲಿ ನಮ್ಮ ಕ್ಷುದ್ರ ಅಹಂಕಾರದ ಅರಿವೇ ನಮಗೆ ಇರುವುದಿಲ್ಲ. ಕರ್ಮಯೋಗದ ಆದರ್ಶದಂತೆ ಕೆಲಸ ಮಾಡುತ್ತಿದ್ದರೆ, ನಾನು ಈ ಕೆಲಸವನ್ನು ಮಾಡುತ್ತಿರುವೆನು ಎಂಬ ಭಾವನೆ ಇರುವುದಿಲ್ಲ. ಪಾಶ್ಚಾತ್ಯರಿಗೆ ಇದು ಗೊತ್ತಾಗುವುದಿಲ್ಲ. ನಾನೆಂಬುದಿಲ್ಲದೇ ಇದ್ದರೆ, ಅಹಂಕಾರವೇ ಹೊರಟುಹೋದರೆ, ಮನುಷ್ಯ ಕೆಲಸ ಮಾಡುವುದು ಹೇಗೆ ಎಂದು ಅವರು ಕೇಳುವರು. ಆದರೆ ಎಂದು ಒಬ್ಬ ತನ್ನನ್ನೇ ಮರೆತು ಏಕಾಗ್ರತೆಯಿಂದ ಕೆಲಸಮಾಡುತ್ತಾನೆಯೋ ಆಗ ಅವನು ಮಾಡಿದ ಕೆಲಸ ಸರ್ವಶ್ರೇಷ್ಠವಾಗಿರುವುದು. ಇದನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅನುಭವಿಸಿ ಇರಬಹುದು. ಪ್ರತಿಯೊಂದು ಕೆಲಸವನ್ನೂ ಹೀಗೆ ಮಾಡಬೇಕೆನ್ನುವುದು ಗೀತೆ. ಯೋಗದ ಮೂಲಕ ಯಾರು ಭಗವಂತನೊಡನೆ ಐಕ್ಯವಾಗಿರುವರೊ ಅವರು ಎಲ್ಲಾ ಕೆಲಸವನ್ನು ಏಕಾಗ್ರತೆಯಿಂದ ಮಾಡುವರು. ಅವರು ಯಾವ ಸ್ವಾರ್ಥಪ್ರಯೋಜನವನ್ನೂ ಬಯಸುವುದಿಲ್ಲ. ಹೀಗೆ ಕೆಲಸ ಮಾಡಿದರೆ ಇದರಿಂದ ಪ್ರಪಂಚಕ್ಕೆ ಒಳ್ಳೆಯದೇ ಆಗುವುದು. ಇದರಿಂದ ಎಂದಿಗೂ ಕೆಟ್ಟದ್ದು ಆಗುವುದಿಲ್ಲ. ಯಾರು ಹೀಗೆ ಕೆಲಸ ಮಾಡುವರೋ ಅವರು ಸ್ವಾರ್ಥಕ್ಕಾಗಿ ಏನನ್ನೂ ಮಾಡುವುದಿಲ್ಲ.

೧೦. ಗೀತೆಯಲ್ಲಿ ನಾನು ಮೆಚ್ಚುವುದೆಂದರೆ ಮುಂದೆ ಬರುವ ಈ ಎರಡು ಶ್ಲೋಕಗಳು. ಇವು ಶ್ರೀಕೃಷ್ಣನ ಬೋಧನೆಯ ಸಾರದಂತೆ ಇವೆ.

ಸಮಂ ಸರ್ವೇಷು ಭೂತೇಷು ತಿಷ್ಠಂತಂ ಪರಮೇಶ್ವರಮ್ ।
ವಿನಶ್ಯತ್ಸ್ವವಿನಶ್ಯಂತಂ ಯಃ ಪಶ್ಯತಿ ಸ ಪಶ್ಯತಿ ॥
ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಮ್ ।
ನ ಹಿನಸ್ತ್ಯಾತ್ಮನಾತ್ಮಾನಂ ತತೋ ಯಾತಿ ಪರಾಂ ಗತಿಮ್ ॥

ಸಮಸ್ತ ಪ್ರಾಣಿಗಳಲ್ಲಿಯೂ ಸಮನಾಗಿರುವವನೂ, ನಶ್ವರವಸ್ತುವಿನಲ್ಲಿ ಅವಿನಾಶಿಯಾಗಿರುವ ಪರಮೇಶ್ವರನನ್ನು ಯಾವನು ನೋಡುತ್ತಾನೆಯೋ ಅವನೇ ನೋಡುತ್ತಾನೆ.

ಏಕೆಂದರೆ ಎಲ್ಲಾ ಕಡೆಯಲ್ಲಿಯೂ ಸಮನಾಗಿರುವ ಈಶ್ವರನನ್ನು ಸಮವಾಗಿ ನೋಡುತ್ತಿರುವವನು ತನ್ನಿಂದ ತನ್ನನ್ನು ನಾಶಮಾಡಿಕೊಳ್ಳುವುದಿಲ್ಲ.

೧೧. ವೇದಾಂತಕ್ಕೆ ದೊಡ್ಡ ಪ್ರಮಾಣಶಾಸ್ತ್ರವೇ ಗೀತೆ.

೧೨. ಹಿಂದಿನ ಶಾಸ್ತ್ರಕ್ಕೂ ಗೀತೆಗೂ ಇರುವ ವೈಶಿಷ್ಟ್ಯವೇನು ? ಅದೇ ಇದು : ಗೀತೆಗೆ ಮುಂಚೆ ಯೋಗ, ಜ್ಞಾನ, ಭಕ್ತಿ ಮುಂತಾದುವನ್ನು ಉಪಾಸನೆ ಮಾಡುತ್ತಿದ್ದ ಭಕ್ತರಿದ್ದರೂ ಪ್ರತಿಯೊಬ್ಬರೂ ತಮ್ಮ ಪಂಥವೇ ಉಳಿದ ಪಂಥಗಳಿಗಿಂತ ಮೇಲೆಂದು ಕಾದಾಡುತ್ತಿದ್ದರು. ಭಿನ್ನಮತಗಳಲ್ಲಿ ಒಂದು ಸಾಮರಸ್ಯವನ್ನು ತರಲು ಯತ್ನಿಸಲಿಲ್ಲ. ಗೀತಾಚಾರ್ಯ ಪ್ರಥಮ ಬಾರಿ ಇವುಗಳಲ್ಲಿ ಸಾಮರಸ್ಯ ಬರುವಂತೆ ಮಾಡುವನು, ಆಗಿನ ಕಾಲದಲ್ಲಿ ಪ್ರತಿಯೊಂದು ದರ್ಶನಗಳೂ ಹೇಳುವ ಶ್ರೇಷ್ಠಬೋಧನೆಯನ್ನು ತೆಗೆದುಕೊಂಡು ಅದನ್ನೆಲ್ಲಾ ಗೀತೆಯಲ್ಲಿ ಸೇರಿಸಿರುವನು.

೧೩. ಬೇರೆ ಬೇರೆ ಯೋಗಗಳಲ್ಲಿ ಒಂದು ಸೌಹಾರ್ದಭಾವನೆ, ಅನಾಸಕ್ತಿಯಿಂದ ಕೆಲಸ ಮಾಡುವುದು ಇವೆರಡು ಗೀತೆಯ ವೈಶಿಷ್ಟ್ಯ.

೧೪. ಒಬ್ಬ ಕೆಳಗಿನ ಒಂದು ಶ್ಲೋಕವನ್ನು ಓದಿದರೆ ಇಡೀ ಗೀತಾ ಪಾರಾಯಣ ಮಾಡಿದ ಫಲವನ್ನು ಪಡೆಯುವನು. ಈ ಒಂದು ಶ್ಲೋಕದಲ್ಲಿ ಇಡೀ ಗೀತಾ ಸಂದೇಶವೆಲ್ಲಾ ಹುದುಗಿದೆ :

ಕ್ಲೈಬ್ಯಂ ಮಾ ಸ್ಮಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ ।
ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥

ಎಲೈ ಅರ್ಜುನ, ಹೇಡಿಯಾಗಬೇಡ. ಇದು ನಿನಗೆ ಯೋಗ್ಯವಲ್ಲ. ಎಲೈ ಶತ್ರುತಾಪನನೆ, ತುಚ್ಛವಾದ ಮನಸ್ಸಿನ ದೌರ್ಬಲ್ಯವನ್ನು ಬಿಟ್ಟು ಏಳು.

೧೫. ಅನೇಕ ಜನ ಗೀತೆಯನ್ನು ಮಹಾಭಾರತ ಬರೆದ ಕಾಲದಲ್ಲಿ ಬರೆಯಲಿಲ್ಲ, ಅದನ್ನು ನಂತರ ಯಾರೊ ಬರೆದು ಸೇರಿಸಿರಬಹುದೆಂದು ನಂಬುವರು. ಇದು ಸರಿಯಲ್ಲ. ಗೀತಾ ಬೋಧನೆಯ ವೈಶಿಷ್ಟ್ಯವನ್ನೇ ಮಹಾಭಾರತದ ಅನೇಕ ಅಧ್ಯಾಯಗಳಲ್ಲಿ ನೋಡುತ್ತೇವೆ. ಗೀತೆ ಮಹಾಭಾರತದ ಭಾಗವಲ್ಲದೇ ಹೋದರೆ ಇದೇ ಸಂದೇಶವನ್ನು ಸಾರುವ ಇತರ ಅಧ್ಯಾಯಗಳನ್ನೂ ಅದರಿಂದ ಕಳೆಯಬೇಕಾಗುವುದು.

೧೬ ಈಶ್ವರ

೧. ಹಿಂದೂ ಕೇವಲ ಸಿದ್ಧಾಂತ ಮತ್ತು ಪದಗಳ ಆಧಾರದ ಮೇಲೆಯೇ ಜೀವಿಸಲಿಚ್ಛಿಸುವುದಿಲ್ಲ. ಯಾವುದಾದರೂ ಅತೀಂದ್ರಿಯ ಅನುಭವವಿದ್ದರೆ ಅದನ್ನು ಪಡೆಯಲೆತ್ನಿಸುವನು. ಪಂಚಭೌತಿಕವಲ್ಲದ ಆತ್ಮ ಯಾವುದಾದರೂ ತನ್ನಲ್ಲಿದ್ದರೆ. ಸರ್ವವ್ಯಾಪಿಯಾದ ದಯಾಮಯನಾದ ತಂದೆ ಇದ್ದರೆ, ನೇರವಾಗಿ ಅವನ ಬಳಿಗೆ ಹೋಗಲಾಶಿಸುವನು. ಪ್ರತ್ಯಕ್ಷ ಅವನನ್ನು ನೋಡಿದಾಗ ಮಾತ್ರ ಸಂಶಯಗಳೆಲ್ಲಾ ನಾಶವಾಗಬೇಕಾದರೆ. ಆತ್ಮ, ಬ್ರಹ್ಮ ಇವುಗಳ ವಿಷಯದಲ್ಲಿ ಹಿಂದೂ ಕೊಡುವ ವಿವರಣೆಯೇ "ನಾನು ಆತ್ಮನನ್ನು ನೋಡಿರುವೆನು, ದೇವರನ್ನು ನೋಡಿರುವೆನು" ಎಂಬುದು.

೨. ಕ್ರೈಸ್ತನ ನುಡಿಗಳನ್ನು ನೆನಪಿನಲ್ಲಿಡಿ : "ಕೇಳಿ, ಅದು ದೊರಕುವುದು, ಅರಸಿ, ಅದು ಸಿಕ್ಕುವುದು, ಅದಕ್ಕಾಗಿ ಬಾಗಿಲು ತಟ್ಟಿ, ಅದು ತೆಗೆಯುವುದು." ಈ ವಾಕ್ಯ ಅಕ್ಷರಶಃ ಸತ್ಯ. ಕಲ್ಪನೆಯಲ್ಲ, ಮಾತಿನ ಚಮತ್ಕಾರವಲ್ಲ. ಪ್ರಪಂಚಕ್ಕೆ ಬಂದ ಶ್ರೇಷ್ಠವ್ಯಕ್ತಿಯೊಬ್ಬನ ಬಾಳಿನ ಉಸಿರಾಗಿತ್ತು ಇದು. ತಾನೇ ಭಗವಂತನನ್ನು ಅನುಭವಿಸಿ, ಸಾಕ್ಷಾತ್ಕಾರ ಮಾಡಿಕೊಂಡವನು ಇವನು. ನಾವು ನೀವು ಎದುರಿಗಿರುವ ಕಟ್ಟಡವನ್ನು ನೋಡುವುದಕ್ಕಿಂತ ಹೆಚ್ಚಾಗಿ ದೇವರೊಂದಿಗೆ ಬಾಳಿದವನು, ಅವನೊಡನೆ ಮಾತುಕತೆಯಾಡಿದವನು ಇವನು.

೩. ಪ್ರಕೃತಿ ನಿಯಮ ಎಲ್ಲಾ ಕಡೆಗಳಲ್ಲಿಯೂ ಒಂದೇ ಸಮನಾಗಿ ಕೆಲಸ ಮಾಡುತ್ತಿದ್ದರೆ, ಸಮಷ್ಟಿ ಹೇಗೆ ರಚಿತವಾಗಿದೆಯೋ ಅದರಂತೆಯೇ ಅದರ ಭಾಗಗಳೂ ಕೂಡ ರಚಿತವಾಗಿರಬೇಕು. ಇದರಂತೆಯೇ ಯಾವುದನ್ನು ನಮ್ಮ ಸ್ಥೂಲ ಪ್ರಪಂಚವೆಂದು ಕರೆಯುವೆವೋ ಅದರ ಹಿಂದೆ ಸೂಕ್ಷ್ಮ ಪ್ರಪಂಚ ಒಂದು ಇರಬೇಕು. ಅದನ್ನೇ ನಾವು ಆಲೋಚನೆ ಎಂದು ಕರೆಯುವುದು. ಈ ಆಲೋಚನೆಯನ್ನೆಲ್ಲಾ ಮಾಡುವವನು, ಇದನ್ನೆಲ್ಲಾ ಆಳುವವನೊಬ್ಬ ಇರಬೇಕು. ಅವನೇ ವಿಶ್ವೇಶ್ವರ. ಪ್ರತಿಯೊಂದು ಮನಸ್ಸು ಮತ್ತು ದೇಹದ ಹಿಂದೆ ಇರುವುದೇ ಪ್ರತ್ಯಗಾತ್ಮ. ಯಾವುದು ಇಡೀ ವಿಶ್ವದ ಹಿಂದೆ ಇರುವುದೋ, ಅದನ್ನು ನಡೆಸುತ್ತಿರುವುದೋ ಅವನೇ ಈಶ್ವರ.

೪ ತತ್ತ್ವ ಏನಾದರೂ ಹೇಳಲಿ, ದರ್ಶನಗಳು ಏನಾದರೂ ಹೇಳಲಿ,

ಎಲ್ಲಿಯವರೆಗೆ ಮೃತ್ಯು ಎಂಬುದು ಪ್ರಪಂಚದಲ್ಲಿ ಇದೆಯೋ, ಎಲ್ಲಿಯವರೆಗೆ ಮಾನವಹೃದಯದಲ್ಲಿ ದೌರ್ಬಲ್ಯ ಎಂಬುದು ಇದೆಯೋ, ಹತಾಶನಾಗಿ ನಿರುತ್ಸಾಹಿಯಾದಾಗ ನನ್ನನ್ನು ಉದ್ಧರಿಸು ಎಂಬ ಮೊರೆ ಏಳುವುದೋ, ಅಲ್ಲಿಯವರೆಗೆ ಒಬ್ಬ ಭಗವಂತನಲ್ಲಿ ಶ್ರದ್ಧೆ ಇದ್ದೇ ತೀರುವುದು.

೫ ಮಗು ಹುಟ್ಟಿದ ತಕ್ಷಣವೇ ನಿಯಮಕ್ಕೆ ವಿರೋಧವಾಗಿ ದಂಗೆ ಏಳುವುದು. ಅದರ ಮೊದಲ ಮಾತೆ ಅಳು ; ತಾನು ಬಿದ್ದ ಬಂಧನಕ್ಕೆ ವಿರೋಧಿಸುವುದು. ಮುಕ್ತನಾಗಬೇಕೆಂಬ ಹಂಬಲವೇ, ನಿತ್ಯಸ್ವತಂತ್ರನಾದ ಒಬ್ಬ ಪರಮೇಶ್ವರನಲ್ಲಿ ನಂಬಿಕೆಯನ್ನು ಹುಟ್ಟಿಸುವುದು. ಮಾನವ ಸ್ವಭಾವದಲ್ಲಿ ಭಗವದ್ ಭಾವನೆ ಎಂಬುದು ಒಂದು ಮೂಲವಸ್ತು. ವೇದಾಂತದಲ್ಲಿ ಮನಸ್ಸು ಕಲ್ಪಿಸಿಕೊಳ್ಳಬಲ್ಲಂತಹ ಒಂದು ಶ್ರೇಷ್ಠ ಭಗವದ್‌ಭಾವನೆಯೆ ಸಚ್ಚಿದಾನಂದ ಎಂಬುದು. ಇದು ಜ್ಞಾನಸಾರ, ಸ್ವಭಾವತಃ ಆನಂದದ ಸಾರವೂ ಆಗಿದೆ.

೬. ಯಾರಿಂದ ವಿಶ್ವವೆಲ್ಲ ಬಂದಿದೆಯೋ, ಯಾರಲ್ಲಿ ಇದೆಲ್ಲ ಬಾಳುತ್ತಿದೆಯೋ, ಎಲ್ಲಿಗೆ ಇವೆಲ್ಲ ಪುನಃ ಮರಳುವುವೋ ಅದೇ ದೇವರು.

೭. ಇಡೀ ಪ್ರಕೃತಿಯೇ ಭಗವಂತನ ಪೂಜೆಯಂತೆ ಇದೆ. ಎಲ್ಲಿ ಚೇತನವಿದೆಯೋ ಅಲ್ಲಿ ಸ್ವಾತಂತ್ರ್ಯಾನ್ವೇಷಣೆ ಇದೆ. ಆ ಸ್ವಾತಂತ್ರ್ಯವೇ ದೇವರು.

೮. ಪೋಲೀಸಿನವನಿಂದ ಅಟ್ಟಿಸಿಕೊಂಡು ಬಂದ ಕಳ್ಳನಂತೆ ನಾವು ಪ್ರಪಂಚದಲ್ಲಿ ಹೋಗುತ್ತಿರುವೆವು. ಸೌಂದರ್ಯದ ಮಿಂಚುನೋಟವೊಂದೇ ನಮಗೆ ಕಾಣುತ್ತಿರುವುದು. ನಮ್ಮನ್ನು ಬಾಧಿಸುತ್ತಿರುವ ಅಂಜಿಕೆಯೆಲ್ಲ ಬರುವುದು ನಾವು ಜಡವನ್ನು ನಂಬುವುದರಿಂದ. ವಸ್ತುವಿನ ಸತ್ಯತೆ ಇರುವುದು ಅದರ ಹಿಂದೆ ಇರುವ ಮನಸ್ಸಿನಿಂದ. ಪ್ರಕೃತಿಯ ಮೂಲಕ ನಮಗೆ ಕಾಣುತ್ತಿರುವುದೇ ದೇವರು.

೯. ವೇದಾಂತದಲ್ಲಿ ಬರುವ ಭಗವದ್‌ಭಾವನೆಯಲ್ಲೆಲ್ಲಾ ನಿತ್ಯಮುಕ್ತಿಯಿಂದ ಬರುವ ಧನ್ಯತೆ ಅನಂತ ಶಾಂತಿ ಇರುವುದು. ಅದು ಯಾವ ಬಂಧನಕ್ಕೂ ಒಳಗಾಗದ ನಿತ್ಯ ಸ್ವಾತಂತ್ರ್ಯ, ಯಾವ ವಿಕಾರವೂ ಅಲ್ಲಿ ಇಲ್ಲ, ಅಲ್ಲಿ ಬಂಧನಕ್ಕೆ ಗುರಿಮಾಡುವ ಯಾವ ಪ್ರಕೃತಿಯ ಉಪಟಳವೂ ಇಲ್ಲ.

೧೦. ಭಗವಂತ ಅವಿಕಾರವಾದ ತನ್ನಾತ್ಮನ ಮಹಿಮೆಯ ಮೇಲೆ ನೆಲಸಿರುವನು. ನಾವು ನೀವು ಆತನಲ್ಲೊಂದಾಗಲು ಬಯಸುವೆವು. ಆದರೆ ಪ್ರಪಂಚ ನಿತ್ಯಜೀವನದ ಕೆಲಸಕ್ಕೆ ಬಾರದ ವಸ್ತು, ಹಣ, ಕೀರ್ತಿ, ಮಾನವ

ಪ್ರೇಮ ಇವುಗಳನ್ನು ನಾವು ನೆಚ್ಚುವೆವು. ಇವೇ ಬಂಧನಕಾರಿ.

೧೧. ನಾನು ಬೇಕಾದಷ್ಟು ತಪಸ್ಸು ಮಾಡಿದಮೇಲೆ ಇದೇ ಪರಮಸತ್ಯವೆಂದು ಅರಿತಿರುವೆನು : "ದೇವರು ಪ್ರತಿಯೊಂದು ಜೀವದಲ್ಲಿಯೂ ಇರುವನು. ಅವನಲ್ಲದೆ ಬೇರೆ ದೇವನೇ ಇಲ್ಲ. ಯಾರು ಜೀವವನ್ನು ಸೇವಿಸುವರೋ ಅವರು ನಿಜವಾಗಿ ಈಶ್ವರನನ್ನು ಸೇವಿಸುವರು."

೧೨. ಸಣ್ಣದು ದೊಡ್ಡದು ಎಲ್ಲಾ ಭಗವಂತನ ಆವಿರ್ಭಾವವೆ. ಅವುಗಳ ಆವಿರ್ಭಾವದ ತರತಮದಲ್ಲಿ ಮಾತ್ರ ವ್ಯತ್ಯಾಸ.

೧೩. ಈ ವಿಶ್ವದ ಸಮಷ್ಟಿಯೇ ದೇವರು. ಹಾಗಾದರೆ ದೇವರು ಜಡ ವಸ್ತುವೇ ? ಇಲ್ಲ, ನಿಜವಾಗಿಯೂ ಇಲ್ಲ. ಪಂಚೇಂದ್ರಿಯ ಮೂಲಕ ಗ್ರಹಿಸಿದಾಗ ಮನಸ್ಸಿನಂತೆ ತೋರುವುದು, ಆತ್ಮನ ದೃಷ್ಟಿಯಿಂದ ನೋಡಿದಾಗ ಆತ್ಮನಂತೆ ಕಾಣುವನು. ಅವನು ಭೌತಿಕನಲ್ಲ, ಆದರೆ ಭೌತಿಕದಲ್ಲಿ ಯಾವುದು ಸತ್ಯವಾಗಿರುವುದೋ ಅವನೇ ದೇವರು.

೧೪. ನಮ್ಮ ಶಾಸ್ತ್ರದಲ್ಲಿ ಎರಡು ಭಗವಂತನ ಆದರ್ಶಗಳಿವೆ ; ಒಂದು ಸಗುಣ, ಮತ್ತೊಂದು ನಿರ್ಗುಣ. ಸಗುಣ ದೇವರೇ ಸರ್ವವ್ಯಾಪಿಯಾದ ಸೃಷ್ಟಿಕರ್ತ, ಪಾಲಕ ಮತ್ತು ಸಂಹಾರಕ. ಪ್ರಪಂಚದ ನಿತ್ಯ ತಾಯಿತಂದೆ. ಆದರೆ ಅವನು ನಮ್ಮಿಂದ ಎಂದೆಂದಿಗೂ ಬೇರೆಯಾಗಿರುವನು. ಮುಕ್ತಿ ಎಂದರೆ ಅವನ ಸಮೀಪಕ್ಕೆ ಬಂದು ಅವನಲ್ಲಿ ಜೀವಿಸುವುದು. ನಿರ್ಗುಣವೆಂಬ ಮತ್ತೊಂದು ಭಾವನೆ ಇದೆ. ದೇವರಿಗೆ ತೊಡಿಸಿದ ಗುಣವಾಚಕಗಳನ್ನೆಲ್ಲಾ ಅನಾವಶ್ಯಕವೆಂದೂ, ನ್ಯಾಯಸಮ್ಮತವಾದುದಲ್ಲವೆಂದೂ ತೆಗೆದು ಹಾಕುವರು. ಅನಂತರ ಅವ್ಯಕ್ತನಾದ ಸರ್ವವ್ಯಾಪಿಯೊಂದು ಉಳಿಯುವುದು. ಅವನನ್ನು ಜ್ಞಾನ ಎಂದು ಕರೆಯಲಾಗುವುದಿಲ್ಲ. ಏಕೆಂದರೆ ಜ್ಞಾನ ಕೇವಲ ಮನುಷ್ಯನಿಗೆ ಸಂಬಂಧಿಸಿದ್ದು. ಅವನನ್ನು ಆಲೋಚನಾ ಜೀವಿ ಎಂದು ಕರೆಯುವುದಕ್ಕೆ ಆಗುವುದಿಲ್ಲ. ಏಕೆಂದರೆ ಆಲೋಚನೆ ಮಾಡುವುದು ದೌರ್ಬಲ್ಯದ ಚಿಹ್ನೆ. ಅವನನ್ನು ಸೃಷ್ಟಿಕರ್ತನೆಂದೂ ಕರೆಯಲಾಗುವುದಿಲ್ಲ. ಬಂಧನದಲ್ಲಿದ್ದರೆ ಮಾತ್ರ ಸೃಷ್ಟಿ ಸಾಧ್ಯ. ದೇವರಿಗೆ ಯಾವ ಬಂಧನವಿದೆ ? ತಮ್ಮ ಆಸೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಅಲ್ಲದೆ ಹಾಗೇ ಯಾರೂ ಕೆಲಸ ಮಾಡುವುದಿಲ್ಲ. ದೇವರಿಗೆ ಆಸೆ ಯಾವುದಿರುವುದು ? ತಮ್ಮ ಕೊರತೆಯನ್ನು ನೀಗಿಸಿಕೊಳ್ಳುವುದಕ್ಕೆ ಮಾತ್ರ ಎಲ್ಲರೂ ಕೆಲಸ ಮಾಡುವರು. ದೇವರಿಗೆ ಇರುವ ಕೊರತೆ ಯಾವುದು ? ವೇದದಲ್ಲಿ ದೇವರನ್ನು ಅವನು ಎಂದು

ಕರೆಯುದೆ ಅದು ಎನ್ನುವರು. ಏಕೆಂದರೆ ಅವನು ಪುಲ್ಲಿಂಗಕ್ಕೆ ಸೇರಿದವನು ಎಂದು ಭಾವಿಸಿದಂತೆ ಆಗುವುದು.

೧೫. ನಾವು ಹೇಗೆ ಒಂದು ವ್ಯಕ್ತಿಯೋ ಹಾಗೆಯೇ ಈಶ್ವರನೂ ಕೂಡ, ಅದಕ್ಕಿಂತ ಹೆಚ್ಚು ಇಲ್ಲ. ನಮಗೆ ಹೇಗೆ ಒಂದು ಆಕಾರವಿದೆಯೊ ಹಾಗೆಯೆ ದೇವರನ್ನೂ ಒಂದು ಆಕಾರದ ಮೂಲಕ ನೋಡಬಹುದು. ನಾವು ಎಲ್ಲಿಯವರೆಗೆ ಮನುಷ್ಯರಾಗಿರುವೆವೋ ಅಲ್ಲಿಯವರೆಗೆ ನಮಗೆ ಒಬ್ಬ ದೇವರು ಬೇಕು. ಆದಕಾರ ಣವೇ ಶ್ರೀರಾಮಕೃಷ್ಣರು ತಮ್ಮ ಹೃದಯ ಮಂದಿರದಲ್ಲಿ ಜಗತ್ತಿನ ಉಳಿದ ಎಲ್ಲಾ ವಸ್ತುಗಳಿಗಿಂತ ಹೆಚ್ಚಾಗಿ ಜಗನ್ಮಾತೆಯನ್ನು ಸದಾ ತಮ್ಮೊಡನಿರುವಂತೆ ಕಂಡರು. ಆದರೆ ಸಮಾಧಿಯಲ್ಲಿ ಆತ್ಮನು ವಿನಃ ಬೇರೇನೂ ಇರಲಿಲ್ಲ. ಸಾಕಾರ ದೇವರು ಸಮೀಪಿಸುತ್ತ ಬಂದಂತೆಲ್ಲಾ, ನಮ್ಮಲ್ಲಿ ಐಕ್ಯವಾಗಿ ಹೋಗುವನು. ಅನಂತರ ನಾನು ಎಂಬುದು ಇರುವುದಿಲ್ಲ. ದೇವರು ಎಂಬುದು ಇರುವುದಿಲ್ಲ. ಇವೆರಡೂ ಆತ್ಮನಲ್ಲಿ ಮಗ್ನವಾಗಿ ಹೋಗುತ್ತವೆ.

೧೬. ನಿರ್ಗುಣ ದೇವರನ್ನು ನಂಬುವವನು—ಉದಾಹರಣೆಗೆ ಜಾನ್ ಸ್ಟುಯರ್ಟ್ ಮಿಲ್ ತೆಗೆದುಕೊಳ್ಳಿ—ಸಾಕಾರ ದೇವರು ಸಾಧ್ಯವೇ ಇಲ್ಲ, ಅವನನ್ನು ಸಮರ್ಥಿಸುವುದಕ್ಕೆ ಆಗುವುದಿಲ್ಲ ಎನ್ನಬಹುದು. ಸಗುಣ ದೇವರನ್ನು ತೋರುವುದಕ್ಕೆ ಆಗುವುದಿಲ್ಲ ಎಂಬುದನ್ನು ನಾನೂ ಅವನೊಂದಿಗೆ ಒಪ್ಪಿಕೊಳ್ಳು ತ್ತೇನೆ. ಆದರೆ ಸಗುಣ ದೇವರೇ ನಿರ್ಗುಣದ ಶ್ರೇಷ್ಠತಮವಾದ ಪ್ರತಿಬಿಂಬ. ಮಾನವನ ಮನಸ್ಸು ಇದನ್ನು ಮಾತ್ರ ಗ್ರಹಿಸಬಲ್ಲದು. ಈ ಪ್ರಪಂಚ ತಾನೆ ಏನು, ನಿರ್ಗುಣನ ಭಿನ್ನಭಿನ್ನ ಪ್ರತಿಗಳು ತಾನೆ. ಇದೊಂದು ನಮ್ಮೆದುರಿಗೆ ಇರುವ ಗ್ರಂಥದಂತೆ. ಪ್ರತಿಯೊಬ್ಬನೂ ಅದನ್ನು ಓದಲು ತನ್ನ ಬುದ್ಧಿಯನ್ನು ಉಪ ಯೋಗಿಸುವನು. ಪ್ರತಿಯೊಬ್ಬನೂ ಅದನ್ನು ತನಗೆ ತಾನೇ ಓದಬೇಕಾಗಿದೆ.

೧೭. ಸರ್ವವೂ ಬ್ರಹ್ಮ, ಏಕಮೇವ ಅದ್ವಿತೀಯ. ಆದರೆ ಈ ನಿರ್ಗುಣ ಬ್ರಹ್ಮ ಮನಸ್ಸಿಗೆ ಅತೀತವಾಗಿದೆ. ಅದನ್ನು ಪ್ರೀತಿಸಲಾರೆವು, ಪೂಜಿಸಲಾರೆವು. ಆದಕಾರಣವೇ ಭಕ್ತರು ಅವನ ಸಗುಣವಾದ ಈಶ್ವರನ ಭಾವನೆಯನ್ನು ತೆಗೆದು ಕೊಳ್ಳುವರು.

೧೮. ನಿರ್ಗುಣವೇ ಮಾಯೆಯ ಮೂಲಕ ನೋಡಿದಾಗ ಸಗುಣವಾಗಿ (ಈಶ್ವರನಾಗಿ) ಕಾಣುವುದು. ನಾವು ಪಂಚೇಂದ್ರಿಯಗಳ ಮೂಲಕ ಗ್ರಹಿಸಲು ಯತ್ನಿಸಿದರೆ ನಾವು ಅವನನ್ನು ಸಗುಣದಂತೆ ಮಾತ್ರ ಗ್ರಹಿಸಲು ಸಾಧ್ಯ. ಆತ್ಮ ನನ್ನು ವಿಷಯೀಕರಿಸುವುದಕ್ಕೆ (objectify) ಆಗುವುದಿಲ್ಲ. ದೃಗ್ ತನ್ನನ್ನು

ತಾನೇ ಹೇಗೆ ನೋಡಬಲ್ಲ ? ಆದರೆ ಅದರ ನೆರಳನ್ನು ಬೇಕಾದರೆ ನೋಡಿದೆವು ಎನ್ನಬಹುದು. ಅದು ವಿಷಯೀಕರಿಸಿದಂತೆ ತನ್ನನ್ನು ತಾನೇ ನೋಡಲೆತ್ನಿಸಿದ ವಿಷಯೀಕರಣದ ಛಾಯೆಯನ್ನೆ ಸಗುಣ ಬ್ರಹ್ಮ ಎನ್ನಬಹುದು.

೧೯. ಆತ್ಮ ನಿತ್ಯಸಾಕ್ಷಿ. ಅದನ್ನು ನಾವು ವಿಷಯೀಕರಿಸುವುದಕ್ಕೆ ಸದಾ ಪ್ರಯತ್ನಿಸುತ್ತಿರುವೆವು. ಈ ಹೋರಾಟದಿಂದಲೇ ನಮ್ಮೆದುರಿಗೆ ಇರುವ ಪ್ರಪಂಚ ಮುಂತಾದವು ಬಂದಿರುವುದು. ಆದರೆ ಇವೆಲ್ಲ ಅಷ್ಟು ಪ್ರಯೋಜನವಿಲ್ಲದ ಪ್ರಯತ್ನ. ಆತ್ಮನಿಗೆ ಸಾಧ್ಯವಾದ ಶ್ರೇಷ್ಠ ವಿಷಯೀಕರಣವೇ ಸಗುಣ ಬ್ರಹ್ಮ. ಈ ವಿಷಯೀಕರಣ ನಮ್ಮ ಸ್ವಭಾವವನ್ನು ನಮಗೆ ಅರುಹಲು ಮಾಡಿದ ಪ್ರಯತ್ನ.

೨೦. ಮನುಷ್ಯ ಒಂದು ಅನಂತವಾದವೃತ್ತದಂತೆ. ಅದರ ಸುತ್ತಳತೆ ಎಲ್ಲಿಯೂ ಇಲ್ಲ. ಆದರೆ ಅದರ ಕೇಂದ್ರ ಒಂದು ಕಡೆ ಇದೆ. ದೇವರು ಅನಂತ ವೃತ್ತದಂತೆ. ಅವನ ಸುತ್ತಳತೆ ಎಲ್ಲಿಯೂ ಇಲ್ಲ. ಆದರೆ ಕೇಂದ್ರ ಎಲ್ಲೆಲ್ಲಿಯೂ ಇರುವುದು.

೨೧. ಇಂದು ಪ್ರಪಂಚ ದೇವರನ್ನು ತ್ಯಜಿಸಿದಂತೆ ತೋರುತ್ತಿದೆ. ಏಕೆಂದರೆ ಅವನು ಪ್ರಪಂಚಕ್ಕೆ ಅಷ್ಟು ಉಪಕಾರವನ್ನು ಮಾಡುವಂತೆ ತೋರುತ್ತಿಲ್ಲ. ಆದಕಾರಣ ಅವನಿಂದ ಇನ್ನೇನು ಪ್ರಯೋಜನ ಎನ್ನುವರು. ದೇವರನ್ನು ಒಬ್ಬ ಮುನಿಸಿಪಾಲಿಟಿ ಅಧಿಕಾರಿಯಂತೆ ನೋಡಬೇಕೇನು ?

೨೨. ಆಕಾರಗಳು, ಬಾಹ್ಯ ಆಚಾರಗಳು, ಪ್ರಾರ್ಥನೆ, ತೀರ್ಥಯಾತ್ರೆ, ಶಾಸ್ತ್ರ, ಗಂಟೆ, ಧೂಪದೀಪ, ಪೂಜಾರಿ ಇವೆಲ್ಲ ಅಣಿಯಾಗುವುದಕ್ಕೆ. ಇವು ನಮ್ಮ ಚಿತ್ತವನ್ನು ಶುದ್ಧಿ ಮಾಡುವುವು. ಆತ್ಮ ಪರಿಶುದ್ಧವಾದ ಮೇಲೆ ಅದು ಸ್ವಾಭಾವಿಕವಾಗಿ ಪರಿಪೂರ್ಣತೆಯ ಗಣಿಯಾದ ಭಗವಂತನಲ್ಲಿಗೆ ಹೋಗಬಯಸುವುದು.

೨೩. ಪ್ರತಿಯೊಂದು ಧರ್ಮವೂ ಶ್ರದ್ಧೆ ಇರಬೇಕೆಂದು ಸಾರುವುದನ್ನು ನಾವು ಕೇಳಿರುವೆವು. ವಿಚಾರಮಾಡದೆ ಸುಮ್ಮನೆ ನಂಬಿ ಎಂದು ನಮಗೆ ಬೋಧಿಸುರುವರು. ಈ ಮೂಢನಂಬಿಕೆಯೇನೋ ಒಳ್ಳೆಯದಲ್ಲ ನಿಜ. ಆದರೂ ಅದನ್ನು ಪರೀಕ್ಷಿಸಿದರೆ ಅದರಲ್ಲಿ ದೊಡ್ಡದೊಂದು ಸತ್ಯವಿರುವುದು ನಮಗೆ ಗೊತ್ತಾಗುವುದು. ವ್ಯರ್ಥ ವಾದದಿಂದ ಮನಸ್ಸು ಉದ್ವಿಗ್ನಗೊಳ್ಳಕೂಡದು. ವಾದ ಭಗವತ್ ಸಾಕ್ಷಾತ್ಕಾರಕ್ಕೆ ನಮಗೆ ಸಹಾಯಮಾಡಲಾರದು. ಸಾಕ್ಷಾತ್ಕಾರ ಅನುಭವ ವೇದ್ಯ ವಸ್ತುವೇ ಹೊರತು ವಾದಗ್ರಾಹ್ಯವಲ್ಲ.

೨೪. ದೇವರು ಎಂಬ ಪದವನ್ನು ನೀವು ಏತಕ್ಕೆ ಉಪಯೋಗಿಸುವುದು

ಎಂದು ಅನೇಕ ವೇಳೆ ನನ್ನನ್ನು ಕೇಳುವರು, ನಮ್ಮ ಪ್ರಯೋಜನಕ್ಕೆ ಬೇಕಾದ ಶ್ರೇಷ್ಠಪದವೇ ಅದು. ಇದಕ್ಕಿಂತ ಚೆನ್ನಾದ ಪದ ನಿಮಗೆ ಸಿಕ್ಕುವುದಿಲ್ಲ. ಮಾನವ ಕೋಟಿಯ ಭರವಸೆ ಆನಂದವೆಲ್ಲ ಆ ಒಂದು ಪದದಲ್ಲಿ ಅಡಗಿದೆ. ಈಗ ಆ ಪದ ವನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಆದಿಯಲ್ಲಿ ಮಹಾಋಷಿಗಳು ಈ ಪದವನ್ನು ಸೃಷ್ಟಿಸಿದರು. ಅವರಿಗೆ ಈ ಪದದ ಅರ್ಥ ಭಾವನೆ ಗೊತ್ತಿತ್ತು, ಆದರೆ ಈ ಪದಗಳು ಸಮಾಜದಲ್ಲಿ ಬಳಕೆಯಾದ ಮೇಲೆ, ಅಜ್ಞಾನಿಗಳು ಈ ಪದ ವನ್ನು ಉಪಯೋಗಿಸುವರು. ಆಗ ಈ ಪದದ ಮಹಾತ್ಮ್ಯೆ ಅರ್ಥ ಮಾಯವಾಗು ವುದು. ಅನಾದಿಕಾಲದಿಂದಲೂ ದೇವರು ಎಂಬ ಪದವನ್ನು ಉಪಯೋಗಿಸುತ್ತಿರು ವರು. ಪವಿತ್ರವಾಗಿರುವುದು, ಮಹಾಮಹಿಮೆಯುಳ್ಳದ್ದು, ವಿಶ್ವಚೈತನ್ಯ ಮುಂತಾದ ಭಾವನೆಗಳೆಲ್ಲ ಈ ಪದದೊಂದಿಗೆ ಸಂಬಂಧ ಪಡೆದಿವೆ.

೨೫. ಸ್ಪರ್ಧೆ, ಕಾಠಿಣ್ಯ. ಹಗಲು ರಾತ್ರಿ ನಮ್ಮ ಹೃದಯವನ್ನು ಕರಗಿಸು ವಂತಹ ಹಾಹಾಕಾರ ಇವುಗಳಿಂದಲೇ ಪ್ರಪಂಚ ತುಂಬಿತುಳುಕಾಡುವಂತೆ ತೋರು ವುದು. ದೇವರು ಇದನ್ನು ಸೃಷ್ಟಿಸಿದರೆ ಅವನು ಕ್ರೂರಿಗಿಂತಲೂ ಕ್ರೂರನು, ಮಾನವ ಕಲ್ಪಿತ ಸೈತಾನನಿಗಿಂತಲೂ ಭಯಾನಕನಾಗಿರುವನು. ಈ ಸ್ಪರ್ಧೆ ಮತ್ತು ಪಕ್ಷಪಾತಕ್ಕೆ ಕಾರಣ ದೇವರಲ್ಲ ಎನ್ನುವುದು ವೇದಾಂತ. ಹಾಗಾದರೆ ಇದಕ್ಕೆ ಕಾರಣ ಯಾರು ? ನಾವೇ ಅದಕ್ಕೆ ಕಾರಣಕರ್ತರು. ಎಲ್ಲಾ ಕಡೆಯಲ್ಲಿಯೂ ಮಳೆ ಕರೆಯುವಂತಹ ಮೋಡವಿದೆ. ಆದರೆ ಯಾವ ಹೊಲವನ್ನು ಚೆನ್ನಾಗಿ ಉತ್ತಿ ರುವರೋ ಅದು ಹೆಚ್ಚು ಪ್ರಯೋಜನವನ್ನು ಪಡೆಯುತ್ತದೆ. ಯಾವ ಹೊಲ ವನ್ನು ಉತ್ತಿಲ್ಲವೋ ಅದು ಪ್ರಯೋಜನವನ್ನು ಪಡೆಯುವುದಿಲ್ಲ. ಅದು ಮೋಡದ ತಪ್ಪಲ್ಲ. ಭಗವಂತನ ದಯೆ ನಿತ್ಯವಾದುದು, ವ್ಯತ್ಯಾಸಕ್ಕೆ ಕಾರಣ ನಾವೇ. ಆದರೆ ಕೆಲವರು ಜನ್ಮತಃ ಸುಖಿಗಳು, ಕೆಲವರು ಜನ್ಮತಃ ದುಃಖಿಗಳು, ಇದನ್ನು ಹೇಗೆ ವಿವರಿಸುವುದು ? ಅವರು ಈ ಜನ್ಮದಲ್ಲಿ ಏನನ್ನೂ ಮಾಡಿದಂತೆ ಕಾಣುವುದಿಲ್ಲ. ಆದರೆ ಅವರು ಈ ಜನ್ಮದಲ್ಲಿ ಮಾಡದೇ ಇರಬಹುದು, ಹಿಂದಿನ ಜನ್ಮದಲ್ಲಿ ಮಾಡಿರಬೇಕು. ಪೂರ್ವಜನ್ಮದ ಕರ್ಮವೇ ಈ ವ್ಯತ್ಯಾಸಕ್ಕೆ ಕಾರಣ ವನ್ನು ವಿವರಿಸುವುದು.

೨೬. ಪ್ರತಿಯೊಬ್ಬ ಮಾನವನ ಶ್ರೇಷ್ಠ ಆದರ್ಶವನ್ನೇ ದೇವರು ಎಂದು ಕರೆಯುವುದು. ಪಂಡಿತನಾಗಲಿ, ಪಾಮರನಾಗಲಿ, ಪಾಪಿಯಾಗಲಿ, ಯತಿಯಾಗಲಿ, ಸ್ತ್ರೀಪುರುಷರಾಗಲಿ, ವಿದ್ಯಾವಂತನಾಗಲಿ, ನಿರಕ್ಷರಕುಕ್ಷಿಯಾಗಲಿ, ಸುಸಂಸ್ಕೃತನಾಗಲಿ ಅಲ್ಲದಿರಲಿ ಪ್ರತಿಯೊಬ್ಬರಿಗೂ ಶಕ್ತಿ ಸೌಂದರ್ಯ ಮತ್ತು ಪವಿತ್ರತೆಯ ಪರಾ

ಕಾಷ್ಠೆಯೋ ನಮ್ಮನ್ನು ಪ್ರೀತಿಸುವ ಮತ್ತು ನಾವು ಪ್ರೀತಿಸಬಲ್ಲ ದೇವರಾಗಿರುವನು ಪ್ರತಿಯೊಬ್ಬರಲ್ಲಿಯೂ ಸ್ವಾಭಾವಿಕವಾಗಿ ಈ ಆದರ್ಶ ಒಂದಲ್ಲ ಒಂದು ರೀತಿಯಲ್ಲಿ ಇರುವುದು ಅದು ನಮ್ಮ ಜೀವನದ ಅಂಶವಾಗಿದೆ. ಈ ಆದರ್ಶವನ್ನು ನಿತ್ಯ ಜೀವನದಲ್ಲಿ ಮನಗಾಣುವುದಕ್ಕಾಗಿಯೇ ಮಾನವ ಸ್ವಭಾವ ಪ್ರಯತ್ನಿಸುತ್ತಿದೆ.

೨೭. ನಮ್ಮ ಪಾಲಿಗೆ ಮೂರು ಬಹುಮಾನಗಳು ಬಂದಿವೆ. ಮೊದಲನೆಯದು ಮನುಷ್ಯ ಜನ್ಮ (ಭಗವಂತನನ್ನು ಅತಿ ಸ್ಪಷ್ಟವಾಗಿ ಪ್ರತಿಬಿಂಬಿಸಬಲ್ಲದುದೇ ಮಾನವನ ಮನಸ್ಸು. ನಾವೇ ಅವನ ಪ್ರತಿಬಿಂಬ) ಎರಡನೆಯದೇ ಮುಮುಕ್ಷುತ್ವ, ಮುಕ್ತನಾಗಬೇಕೆಂದು ಬಯಸುವುದು. ಮೂರನೆಯದೆ ಸಂಸಾರವನ್ನು ದಾಟಿದ ಪರಮ ಗುರುವಿನ ಅನುಗ್ರಹ. ನಿನಗೆ ಇವು ಮೂರು ದೊರಕಿದರೆ ಭಗವಂತನಿಗೆ ಧನ್ಯವಾದ. ನೀನು ಮುಕ್ತನಾಗುವುದರಲ್ಲಿ ಸಂದೇಹವಿಲ್ಲ.

೨೮. ಭಗವಂತನೊಬ್ಬನೇ ಸತ್ಯ. ಉಳಿದುವೆಲ್ಲ ಮಿಥ್ಯ. ದೇವರಿಗಾಗಿ ಎಲ್ಲವನ್ನೂ ತ್ಯಜಿಸಬೇಕು. ಅವನಲ್ಲದ ಎಲ್ಲವೂ ಅನಿತ್ಯ, ಕ್ಷಣಿಕ. ಭಗವಂತನೊಬ್ಬನನ್ನೇ ಸೇವಿಸು.

೨೯. ಬಲಿಷ್ಠನಾಗಿ ಎದ್ದು ನಿಲ್ಲು. ಪರಮೇಶ್ವರನನ್ನು ಅರಸು. ಅವನೇ ಶ್ರೇಷ್ಠವಾದ ಬಲ. ಪವಿತ್ರದ ಶಕ್ತಿಗಿಂತ ಮೇಲಾಗಿರುವುದಾವುದಿದೆ ? ಪ್ರೇಮ ಮತ್ತು ಪವಿತ್ರತೆ ಇವೆರಡೇ ಪ್ರಪಂಚವನ್ನು ಆಳುವುದು. ಭಗವಂತನ ಪ್ರೇಮವನ್ನು ಬಲಹೀನರು ಪಡೆಯಲಾರರು. ಆದಕಾರಣವೇ ಶಾರೀರಕವಾಗಿ ಆಗಲಿ, ಮಾನಸಿಕವಾಗಿ ಆಗಲಿ, ನೈತಿಕವಾಗಿ ಆಗಲಿ, ಆಧ್ಯಾತ್ಮಿಕವಾಗಿ ಆಗಲಿ ಎಂದಿಗೂ ದುರ್ಬಲರಾಗಬೇಡಿ.

೩೦. ಇಡೀ ವಿಶ್ವವೇ ಭಗವಂತನ ಚಿಹ್ನೆ. ಅವನೇ ಅದರ ಹಿಂದೆ ಇರುವ ಸಾರ.

೩೧. ಇಂದಿನ ಪರ್ವತಗಳು ಒಂದು ಕಾಲದಲ್ಲಿ ಕಡಲತಡಿಗಳಾಗಿದ್ದವು, ಪುನಃ ಮುಂದೆ ಹಾಗೆಯೇ ಆಗುವುದು. ಪ್ರಪಂಚದಲ್ಲಿ ಪ್ರತಿಯೊಂದೂ ಬದಲಾಯಿಸುತ್ತಿದೆ. ಪ್ರಪಂಚವೇ ನಿರಂತರ ಬದಲಾಯಿಸುತ್ತಿದೆ. ಆದರೆ ಬದಲಾವಣೆಯಾಗದ ಒಂದು ವಸ್ತುವಿದೆ. ಅದೇ ದೇವರು.

೩೨. ದೇವರು ಎಂದರೆ ಅನಂತಾತ್ಮನಾದ ಮಾನವ. ಅದು ಹೀಗೆ ಮಾತ್ರ ಸಾಧ್ಯ. ನಾವು ಎಲ್ಲಿಯವರೆಗೆ ಮಾನವರೊ ಅಲ್ಲಿಯವರೆಗೆ ನಮಗೆ ಮಾನವ ದೇವರೇ ಬೇಕು.

೩೩. ದೇವರು ಇರುವನು ಎಂಬುದನ್ನು ನಾವು ಅನುಭವಿಸಬೇಕಾದರೆ ಅವನನ್ನು ನಾವು ಸಾಕ್ಷಾತ್ಕರಿಸಿಕೊಳ್ಳಬೇಕು. ಪಾರಮಾರ್ಥಿಕ ವಿಷಯಗಳು ಸತ್ಯ ವಾಗಬೇಕಾದರೆ ನಾವು ಅವನನ್ನು ಪ್ರತ್ಯಕ್ಷ ಅನುಭವಿಸಬೇಕು. ವಾದವಾಗಲಿ, ಚರ್ಚೆಯಾಗಲಿ ಇವುಗಳಿಂದ ಏನೂ ಪ್ರಯೋಜನವಿಲ್ಲ. ನಮ್ಮ ಪ್ರತ್ಯಕ್ಷ ಅನು ಭವವೊಂದೇ ದೇವರನ್ನು ನಮಗೆ ಸತ್ಯವನ್ನಾಗಿ ಮಾಡಬಲ್ಲದು. ನನ್ನ ನಂಬಿಕೆ ಯನ್ನು ವಜ್ರದಂತೆ ಗಟ್ಟಿ ಮಾಡುವುದು ಈ ಅನುಭವ.

೩೪. ಸತ್ಯಕ್ಕೆ ಅಂತಹ ಮುಖವಿದೆ. ಯಾರು ಅದನ್ನು ನೋಡುವರೊ ಅವ ರಿಗೆ ಇದು ಸತ್ಯ ಎಂದು ನಿರ್ವಿವಾದವಾಗಿ ಗೊತ್ತಾಗುವುದು. ಸೂರ್ಯನನ್ನು ಕಾಣು ವಂತೆ ಮಾಡಬೇಕಾದರೆ ದೀಪಟಿಗೆ ಸಹಾಯ ಬೇಕಿಲ್ಲ. ಸೂರ್ಯನಿಗೆ ಸ್ವಯಂ ಜ್ಯೋತಿ ಇದೆ. ಸತ್ಯಕ್ಕೆ ಯಾವುದಾದರೂ ಸಾಕ್ಷಿ ಬೇಕಾದರೆ, ಆ ಸಾಕ್ಷಿಗೆ ಸಾಕ್ಷಿ ಯಾರು ?

೩೫. ದೇವರಿಗೆ ಪ್ರಮಾಣ ಯಾವುದು ? ಪ್ರತ್ಯಕ್ಷವೇ ಪ್ರಮಾಣ. ಇಲ್ಲಿ ಗೋಡೆ ಇದೆ ಎನ್ನುವುದಕ್ಕೆ ಕಾರಣ ನಾನು ಅದನ್ನು ನೋಡುತ್ತಿರುವುದು. ದೇವ ರನ್ನು ಯಾರು ನೋಡಬೇಕೆಂದು ಬಯಸುವರೋ ಅವರೆಲ್ಲ ನೋಡಿದರು. ಆದರೆ ಹೀಗೆ ನೋಡುವುದು ಸ್ಥೂಲವಾಗಿ ನೋಡುವುದಲ್ಲ. ಇದು ಅತೀಂದ್ರಿಯ ಗ್ರಹಣ.

೩೬. ವಿಶ್ವಚೈತನ್ಯವನ್ನೇ ಜನರು ಈಶ್ವರ, ದೇವರು, ಕ್ರಿಸ್ತ, ಬುದ್ಧ, ಬ್ರಹ್ಮ ಎಂದು ಕರೆಯುವುದು. ಇದನ್ನೇ ನಾಸ್ತಿಕರು ಶಕ್ತಿ ಎನ್ನುವುದು, ಅಜ್ಞೇ ಯವಾದಿಗಳು ವಿವರಿಸಲಾಗದ ಅನಂತ ಎನ್ನುವುದು. ನಾವೆಲ್ಲ ಅದರ ಅಂಶಗಳು.

೧೭ ಗುರು

೧. ಆತ್ಮ ಜಾಗ್ರತವಾದ ಮತ್ತೊಂದು ಆತ್ಮದಿಂದ ಮಾತ್ರ ಜ್ಯೋತಿಯನ್ನು ಪಡೆಯಬಲ್ಲದು. ಮತ್ತೆಲ್ಲಿಂದಲೂ ಅಲ್ಲ. ನಾವು ಬದುಕಿರುವ ತನಕ ಓದುತ್ತಿರಬಹುದು, ನಾವು ಬಹಳ ಬುದ್ಧಿವಂತರಾಗಿರಬಹುದು. ಆದರೆ ಕೊನೆಗೆ ನಮಗೆ ಗೊತ್ತಾಗುವುದು ನಾವು ಆಧ್ಯಾತ್ಮಿಕ ಜೀವನದಲ್ಲಿ ಸ್ವಲ್ಪವೂ ಮುಂದು ವರಿದಿಲ್ಲ ಎಂಬುದು. ಮನುಷ್ಯ ಬುದ್ಧಿವಂತನಾದಂತೆ ಅದೇ ಪ್ರಮಾಣದಲ್ಲಿ ಅವನ ಆಧ್ಯಾತ್ಮಿಕತೆಯೂ ವೃದ್ಧಿಯಾಗುವುದು ಎಂಬುದು ನಿಜವಲ್ಲ. ಗ್ರಂಥಗಳು ನಮ್ಮ ಆಧ್ಯಾತ್ಮಿಕ ಜೀವನವನ್ನು ಪ್ರಚೋದಿಸಲಾರವು ಆದಕಾರಣವೇ ನಮ್ಮಲ್ಲಿ ಹಲವರು ಆಧ್ಯಾತ್ಮಿಕ ವಿಷಯಗಳ ಮೇಲೆ ಅದ್ಭುತವಾಗಿ ಮಾತನಾಡಬಲ್ಲವರಾದರೂ ಕಾರ್ಯತಃ ಬಂದಾಗ ಅದಿನ್ನೂ ಸ್ವಲ್ಪವೂ ಅಂತರಾಳಕ್ಕೆ ತಾಕಿಲ್ಲ ಎನ್ನುವುದು ಗೊತ್ತಾಗುವುದು. ಆಧ್ಯಾತ್ಮಿಕ ಜೀವನ ಜಾಗ್ರತವಾಗಬೇಕಾದರೆ ಅದಕ್ಕೆ ಪ್ರೇರಣೆ ಮತ್ತೊಂದು ಜಾಗ್ರತವಾದ ಜೀವಿಯಿಂದ ಬರಬೇಕು. ಯಾರಿಂದ ಇಂತಹ ಪ್ರೇರಣೆ ಬರುವುದೋ ಅವರೇ ಗುರುಗಳು. ಯಾರಿಗೆ ಇದನ್ನು ಕೊಡುವರೋ ಅವನೇ ಶಿಷ್ಯ.

೨. ಹೀಗಿರುವವನೇ ಗುರು : ಮಹಾಸಂಸಾರ ಸಾಗರವನ್ನು ತಾನೇ ದಾಟಿರುವವನು, ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಇತರರನ್ನು ದಾಟಿಸು ವುದಕ್ಕೆ ಸಿದ್ಧನಾಗಿರುವವನು, ಇಂತಹವರೇ ಗುರುಗಳು, ಇತರರಲ್ಲ.

೩. ಪ್ರಕೃತಿಯಲ್ಲಿ ಒಂದು ರಹಸ್ಯ ನಿಯಮ ಇದೆ. ಕ್ಷೇತ್ರ ಅಣಿಯಾಗಿದ್ದರೆ ಬೀಜ ಬರಲೇಬೇಕು. ಯಾರಿಗಾದರೂ ಧರ್ಮ ಬೇಕಾದರೆ, ಇದನ್ನು ಕೊಡು ವವನೂ ಬರಲೇಬೇಕು. "ಅರಸುತ್ತಿರುವ ಪಾಪಿ, ಅರಸುತ್ತಿರುವ ಉದ್ಧಾರಕನನ್ನು ಕಾಣುವನು." ಬೇಕೆನ್ನುವವನ ಹೃದಯ ಚೆನ್ನಾಗಿ ಮಾಗಿ ಹದವಾದರೆ, ಅದರ ಬಯಕೆಯನ್ನು ತೃಪ್ತಿಪಡಿಸುವವನೂ ಬರಲೇಬೇಕು.

೪. ಯಾರಿಂದ ನಾವು ಆಧ್ಯಾತ್ಮಿಕ ಪೀಳಿಗೆಯನ್ನು ಪಡೆಯುವೆವೋ ಅವರೇ ನಿಜವಾದ ಗುರುಗಳು. ಆಧ್ಯಾತ್ಮಿಕ ಶಕ್ತಿ ಅವರ ಮೂಲಕ ನಮಗೆ ಹರಿದು ಬರುವುದು. ಆಧ್ಯಾತ್ಮಿಕ ಪ್ರಪಂಚಕ್ಕೂ ನಮಗೂ ಸಂಬಂಧವನ್ನು ಕಲ್ಪಿಸುವವನು ಅವನು. ವ್ಯಕ್ತಿಯ ಮೇಲೆ ಇಡುವ ಅತಿಶ್ರದ್ಧೆಯಿಂದ ನಾವು ದುರ್ಬಲ

ರಾಗಬಹುದು, ವ್ಯಕ್ತಿ ಪೂಜೆಯಲ್ಲಿ ಅದು ಪರ್ಯವಸಾನವಾಗಬಹುದು, ಈ ಅಪಾಯ ಇಲ್ಲಿದೆ. ಆದರ ಗುರುವಿನ ಮೇಲಿಡುವ ಪ್ರೇಮಾಧಿಕ್ಯದಿಂದ ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯುವುದಕ್ಕೆ ಸಹಾಯವಾಗುವುದು. ಅವನು ನಮ್ಮ ಅಂತರ್ಯಾಮಿ ಗುರುವಿನೊಡನೆ ಸಂಬಂಧವನ್ನು ಕಲ್ಪಿಸುವನು. ಗುರುವಿನಲ್ಲಿ ಏನಾದರೂ ಸತ್ಯವಿದ್ದರೆ ಅವನನ್ನು ಪೂಜಿಸಿ. ಆ ಗುರುಭಕ್ತಿಯೇ ನಿಮ್ಮನ್ನು ಪರಮಪದಕ್ಕೆ ಒಯ್ಯುವುದು.

೫. ಒಬ್ಬನಲ್ಲಿ ಬ್ರಹ್ಮ ಜಾಗ್ರತನಾದರೆ ಆ ಬೆಳಕಿನ ಸಹಾಯದಿಂದ ಸಾವಿರಾರು ಜನ ಮುಂದುವರಿಯಲು ಸಹಾಯವಾಗುವುದು. ಬ್ರಹ್ಮಜ್ಞಾನಿಗಳು ಮಾತ್ರ ಜಗದ್ಗುರುಗಳು. ಎಲ್ಲಾ ಶಾಸ್ತ್ರ ಮತ್ತು ಯುಕ್ತಿ ಇದನ್ನು ಸಮರ್ಥಿಸುವುದು. ಕುಲಗುರುಗಳ ಸಂಪ್ರದಾಯವನ್ನು ಈ ದೇಶದಲ್ಲಿ ಜಾರಿಗೆ ತಂದದ್ದು ಸ್ವಾರ್ಥರಾದ ಬ್ರಾಹ್ಮಣರು. ಇದು ವೇದ ಶಾಸ್ತ್ರಗಳಿಗೆ ವಿರೋಧ. ಆದಕಾರಣವೇ ಅನೇಕ ಜನ ಸಾಧನೆ ಮಾಡಿದರೂ ಆಧ್ಯಾತ್ಮಿಕ ಜೀವನದಲ್ಲಿ ಯಶಸ್ವಿಗಳಾಗಲಿಲ್ಲ: ಬ್ರಹ್ಮಜ್ಞಾನವನ್ನು ಪಡೆಯಲಿಲ್ಲ.

೬. ಗುರುಗಳ ವಿಷಯದಲ್ಲಿ ಇನ್ನೂ ದೊಡ್ಡ ಅಪಾಯವಿದೆ. ಅನೇಕರು ತಾವೇ ಅಜ್ಞಾನದಲ್ಲಿದ್ದರೂ ಅಹಂಕಾರದಿಂದ ತಮಗೆ ಎಲ್ಲವೂ ಗೊತ್ತಿದೆ ಎಂದು ಭಾವಿಸುವರು. ಇಷ್ಟು ಮಾತ್ರವಲ್ಲ ಇತರರನ್ನೂ ಉದ್ಧಾರ ಮಾಡುವೆವು ಎಂದು ಮುಂದೆ ಬರುವರು. ಹೀಗೆ ಕುರುಡ ಕುರುಡರಿಗೆ ದಾರಿ ತೋರಿದಂತೆ ಇಬ್ಬರೂ ಹಳ್ಳಕ್ಕೆ ಬೀಳುವರು. ಪ್ರಪಂಚದಲ್ಲಿ ಇಂತಹವರು ಬೇಕಾದಷ್ಟು ಜನ ಇರುವರು. ಪ್ರತಿಯೊಬ್ಬನೂ ಗುರುವಾಗಬೇಕೆಂದು ಬಯಸುವನು. ಪ್ರತಿಯೊಬ್ಬ ಭಿಕ್ಷುಕನೂ ಲಕ್ಷಾಂತರ ರೂಪಾಯಿ ದಾನ ಮಾಡಬಯಸುವನು. ಇಂತಹ ಭಿಕ್ಷುಕರು ಹೇಗೆ ಹಾಸ್ಯಾಸ್ಪದರೋ ಹಾಗೆಯೇ ಇಂತಹ ಗುರುಗಳೂ ಕೂಡ.

೭. ಒಬ್ಬ ಆಧ್ಯಾತ್ಮಿಕ ಗುರುವಿನಿಂದ ಪಡೆದ ಜ್ಞಾನಕ್ಕಿಂತ ಮಿಗಿಲಾದುದಿಲ್ಲ, ಪವಿತ್ರವಾದುದಿಲ್ಲ. ಒಬ್ಬ ಪೂರ್ಣಯೋಗಿಯಾಗಿದ್ದರೆ ಆಗ ಅವನಿಗೆ ಈ ಜ್ಞಾನ ತಾನಾಗಿ ಬರುವುದು, ಆದರೆ ಶಾಸ್ತ್ರಗಳಿಂದ ಇದು ದೊರಕಲಾರದು. ಪ್ರಪಂಚದಲ್ಲೆಲ್ಲಾ ಇದಕ್ಕಾಗಿ ಅಲೆದಾಡಬಹುದು. ಹಿಮಾಲಯ, ಆಲ್ಪ್ಸ್, ಕಾಕಸಸ್ ಪರ್ವತಗಳಲ್ಲಿ, ಗೋಬಿ ಸಹರಾ ಮರುಭೂಮಿಗಳಲ್ಲಿ ಹುಡುಕಾಡಬಹುದು. ಸಮುದ್ರದ ತಳದಲ್ಲಿ ಬೇಕಾದರೂ ತಡಕಾಡಬಹುದು, ಒಬ್ಬ ಗುರುಮುಖೇನ ವಿನಃ ಬೇರೆಲ್ಲೂ ಈ ಜ್ಞಾನ ದೊರಕಲಾರದು.

೮. ಭಗವಂತನ ಮತ್ತು ಅವನ ಪರಮಾಪ್ತ ಭಕ್ತರ ಕೃಪೆಯನ್ನು

ಪಡೆಯಿರಿ. ಅವನನ್ನು ಪಡೆಯುವುದಕ್ಕೆ ಇವೆರಡೇ ದಾರಿ. ಪ್ರಪಂಚದಲ್ಲಿ ಇಂತಹ ಭಕ್ತರ ಸಂಗ ಬಹಳ ದುರ್ಲಭ. ಐದು ನಿಮಿಷದ ಅವರ ಸಹವಾಸದಿಂದ ಇಡೀ ಜೀವನವೇ ಬದಲಾಯಿಸುವುದು ನಿಮಗೆ ನಿಜವಾಗಿಯೂ ಅಂತಹ ಅಪೇಕ್ಷೆ ಇದ್ದರೆ ಅಂತಹ ಗುರು ನಿಮ್ಮ ಬಳಿಗೆ ಬರುವನು ಭಗವತ್ ಭಕ್ತರ ಸಾನ್ನಿಧ್ಯದಿಂದ ಆ ಸ್ಥಳ ಪವಿತ್ರವಾಗುವುದು. ಆ ಭಕ್ತರ ಮಹಿಮೆ ಇಂತಹುದು. ಭಕ್ತರೇ ಭಗವಂತ. ಅವರ ಮಾತೇ ಶಾಸ್ತ್ರ. ಅವರು ಹೋದ ಸ್ಥಳವೆಲ್ಲ ಪವಿತ್ರವಾಗುವುದು ಯಾರು ಅಲ್ಲಿಗೆ ಹೋಗುವರೋ ಅವರಿಗೆ ಇದು ವೇದ್ಯವಾಗುವುದು ಅವರು ಪವಿತ್ರರಾಗಲು ಇಚ್ಛೆಪಡುವರು.

೧೮ ಸುಖ

೧. ಮಾನವ ತಾನು ಸೌಖ್ಯವಾಗಿರಬಲ್ಲೆ ಎಂದು ಮೌಢ್ಯದಿಂದ ಭಾವಿಸು ವನು. ಹಲವು ವರುಷಗಳು ಆದಕ್ಕಾಗಿ ಪ್ರಯತ್ನಪಟ್ಟಮೇಲೆ ನಿಜವಾದ ಸುಖ ಸ್ವಾರ್ಥತೆಯ ಅಳಿವಿನಿಂದ ಮಾತ್ರ ಸಾಧ್ಯ, ತಾನಲ್ಲದೆ ಹೊರಗಿನವರಾರೂ ತನ್ನನ್ನು ಸುಖಿಗಳನ್ನಾಗಿ ಮಾಡಲಾರರು ಎಂದು ತಿಳಿಯುವನು.

೨. ಈ ಪ್ರಪಂಚದಲ್ಲಿ ಯಾರೂ ನಿಜವಾಗಿ ಸುಖವಾಗಿಲ್ಲ. ಒಬ್ಬ ಶ್ರೀಮಂತ ನಾಗಿ ಬೇಕಾದಷ್ಟು ತಿನ್ನಲು ಇದ್ದರೆ ಅವನ ಜೀರ್ಣಶಕ್ತಿ ಚೆನ್ನಾಗಿಲ್ಲ, ಅವನು ಏನನ್ನೂ ತಿನ್ನಲಾರ. ಒಬ್ಬನಿಗೆ ಜೀರ್ಣಶಕ್ತಿ ಚೆನ್ನಾಗಿದ್ದು ತೋಳನಂತೆ ತಿನ್ನ ಬಲ್ಲವನಾದರೆ ಅವನಿಗೆ ತಿನ್ನಲು ಏನೂ ಇಲ್ಲ. ಶ್ರೀಮಂತನಾದರೆ ಅವನಿಗೆ ಮಕ್ಕ ಳಿರುವುದಿಲ್ಲ. ಒಬ್ಬ ದರಿದ್ರನಾದರೆ ದೊಡ್ಡದೊಂದು ಮಕ್ಕಳ ಸೇನೆಯೇ ಇರು ವುದು. ಅವರನ್ನು ಏನು ಮಾಡಬೇಕೋ ಅದೇ ಗೊತ್ತಿಲ್ಲ. ಇದು ಏತಕ್ಕೆ ಹೀಗಿರು ವುದು ? ಏಕೆಂದರೆ ಸುಖದುಃಖಗಳು ಒಂದೇ ನಾಣ್ಯದ ಎರಡು ಕಡೆಗಳಂತೆ. ಯಾರು ಸುಖವನ್ನು ಸ್ವೀಕರಿಸುವನೋ ಅವನು ದುಃಖವನ್ನೂ ಸ್ವೀಕರಿಸಬೇಕು. ದುಃಖವಿಲ್ಲದೆ ನಾವು ಸುಖವನ್ನು ಪಡೆಯಬಹುದೆಂಬ ಭ್ರಾಂತಿ ನಮ್ಮಲ್ಲಿದೆ. ಈ ಭಾವನೆ ನಮ್ಮನ್ನು ಮೆಟ್ಟಿಕೊಂಡಿದೆ. ಇದರಿಂದ ನಮಗೆ ಇಂದ್ರಿಯಗಳ ಮೇಲಿನ ಸ್ವಾಧೀನವೇ ತಪ್ಪಿಹೋಗಿದೆ.

೩. ಇಂಡಿಯಾ ದೇಶದಲ್ಲಿ ಎಣ್ಣೆಯ ಗಾಣಕ್ಕೆ ಎತ್ತನ್ನು ಉಪಯೋಗಿಸು ತ್ತಾರೆ. ಎತ್ತಿನ ಹೆಗಲಿನ ಮೇಲೆ ನೊಗ ಇರುವುದು. ಆ ನೊಗದ ಮುಂದಕ್ಕೆ ಕೋಲು ಚಾಚಿಕೊಂಡಿರುವುದು. ಅದಕ್ಕೆ ಸ್ವಲ್ಪ ಹುಲ್ಲನ್ನು ಕಟ್ಟುವರು. ಎತ್ತಿನ ಕಣ್ಣಿನ ಪಕ್ಕವನ್ನು ಮುಚ್ಚಿ ಮುಂದೆ ಮಾತ್ರ ಕಾಣುವಂತೆ ಮಾಡುವರು. ಎತ್ತು ಮುಂದೆ ಕಾಣುವ ಹುಲ್ಲನ್ನು ತಿನ್ನಲು ಮುಂದೆ ಚಾಚುವುದು. ಆಗ ಹುಲ್ಲು ಕೂಡ ಮುಂದೆ ಹೋಗುವುದು; ಪುನಃ ಎತ್ತು ಮುಂದೆ ಸರಿದರೆ ಹುಲ್ಲು ಕೂಡ ಮುಂದೆ ಮುಂದೆ ಹೋಗುತ್ತಿರುವುದು. ಅದಕ್ಕೆ ಹುಲ್ಲು ಸಿಕ್ಕುವಂತೆಯೇ ಇಲ್ಲ. ಹುಲ್ಲನ್ನು ಹಿಂಬಾಲಿಸಿಕೊಂಡು ಹೋಗುತ್ತಾ ಹೋಗುತ್ತಾ ಗಾಣವನ್ನು ಆಡಿಸು ವುದು. ಇದರಂತೆಯೇ ನೀವು ನಾವುಗಳೆಲ್ಲ ಪ್ರಕೃತಿಯ ದಾಸರು. ಯಾವಾಗಲೂ ಮುಂದಿರುವ ಆಸೆಯ ಹುಲ್ಲನ್ನು ಹಿಂಬಾಲಿಸುತ್ತಿರುವೆವು. ಅದೊಂದು ಬರೀ

ಭ್ರಾಂತಿ. ಎಷ್ಟೊಂದು ಜನ್ಮಗಳು ಅದನ್ನು ಬೆಂಬತ್ತಿದ್ದರೂ ಅದು ಸಿಕ್ಕುವಂತೆ ಇಲ್ಲ. ಪ್ರೀತಿಯೇ ದೊಡ್ಡದೊಂದು ಕನಸು. ನಾವೆಲ್ಲಾ ಪ್ರೀತಿಸುವೆವು. ಇತರರು ನಮ್ಮನ್ನು ಪ್ರೀತಿಸಬೇಕೆಂದು ಆಶಿಸುವೆವು. ಸುಖಿಗಳಾಗುವೆವು, ದುಃಖವೇ ಬರುವುದಿಲ್ಲ ಎಂದು ಭಾವಿಸುವೆವು. ಆದರೆ ನಾವು ಸುಖವನ್ನು ಹಿಡಿಯಬೇಕೆಂದು ಮುಂದೆ ಮುಂದೆ ಹೋದಷ್ಟೂ ಸುಖವೂ ನಮ್ಮಿಂದ ದೂರದೂರಕ್ಕೆ ಸರಿಯುವುದು.

೪. ಸುಖ ದೇಹದಲ್ಲಾಗಲಿ ಮನಸ್ಸಿನಲ್ಲಾಗಲಿ ಆತ್ಮನಲ್ಲಾಗಲಿ ಇಲ್ಲ ಎಂಬುದನ್ನು ನೋಡಿದೆವು. ಪ್ರಾಣಿಗಳು ಮತ್ತು ಪ್ರಾಣಿಸಮನಾದ ತುಂಬಾ ಹೀನಮಾನುಜರ ಸುಖವೆಲ್ಲಾ ದೇಹದಲ್ಲಿದೆ. ಹಸಿದ ನಾಯಿ ಅಥವಾ ತೋಳ ಊಟ ಮಾಡುವಷ್ಟು ಸಂತೋಷವಾಗಿ ಯಾವ ಮನುಷ್ಯನೂ ಊಟಮಾಡಲಾರ. ಆದಕಾರಣವೇ ನಾಯಿ ಅಥವಾ ತೋಳದಲ್ಲಿ ಸುಖವೆಲ್ಲಾ ದೇಹದಲ್ಲಿದೆ. ಮನುಷ್ಯನ ಸುಖ ಇನ್ನೂ ಮೇಲಿದೆ. ಅದೇ ಭಾವನಾ ಪ್ರಪಂಚದಲ್ಲಿ. ಜ್ಞಾನಿಗಳಿಗೆ ಎಲ್ಲಕ್ಕಿಂತಲೂ ಮೇಲಿರುವ ಆತ್ಮ ಸುಖ. ತತ್ತ್ವ ಜ್ಞಾನಿಗೆ ಆತ್ಮಜ್ಞಾನವೇ ಹೆಚ್ಚು ಪ್ರಯೋಜನ. ಏಕೆಂದರೆ ಅವನಿಗೆ ಇದೇ ಅತ್ಯಂತ ಶ್ರೇಷ್ಠವಾದ ಸುಖವನ್ನು ಕೊಡಬಲ್ಲದು. ಇಂದ್ರಿಯ ತೃಪ್ತಿಯಾಗಲಿ ಅಥವಾ ಬಾಹ್ಯ ವಸ್ತುಗಳಾಗಲಿ ಇವುಗಳಿಂದ ಅವನಿಗೆ ಪ್ರಯೋಜನವಿಲ್ಲ. ಇದರಿಂದ ಅವನಿಗೆ ಆತ್ಮಜ್ಞಾನದಿಂದ ಸಿಕ್ಕುವ ಸುಖ ಲಭಿಸುವುದಿಲ್ಲ. ಜ್ಞಾನವೇ ಪರಮಗುರಿ. ನಿಜವಾಗಿ ನಮಗೆ ಗೊತ್ತಿರುವ ಶ್ರೇಷ್ಠ ಸುಖವೇ ಅದು.

೫. "ಬಂಧನವೇ ದುಃಖ ಸ್ವಾತಂತ್ರ್ಯವೇ ಸುಖ." ಅದ್ವೈತವೊಂದೇ ಮನುಷ್ಯನಿಗೆ ಸಂಪೂರ್ಣ ಆತ್ಮ ಸ್ವಾತಂತ್ರ್ಯವನ್ನು ಕೊಡಬಲ್ಲದು, ಎಲ್ಲಾ ವಿಧದ ಪಾರತಂತ್ರ್ಯವನ್ನೂ ನಿವಾರಿಸುವುದು, ಮೂಢ ನಂಬಿಕೆಗಳಿಂದ ಪಾರು ಮಾಡುವುದು. ಇದರಿಂದ ನಾವು ಅನುಭವಿಸಲು ಮತ್ತು ಹೊಸದನ್ನು ಸಾಧಿಸಲು ಧೀರರಾಗುತ್ತೇವೆ. ಕೊನೆಗೆ ನಾವು ಕೇವಲ ಮುಕ್ತಿಯನ್ನು ಪಡೆಯುತ್ತೇವೆ.

೬. ಪ್ರಪಂಚಕ್ಕೆ ಯಾವುದಾದರೂ ಸ್ಥಿರವಾದ ಸುಖವನ್ನು ಕೊಡಲು ಸಾಧ್ಯವೆ ? ಸಮುದ್ರದಲ್ಲಿ ಒಂದು ಅಲೆಯನ್ನು ಎಬ್ಬಿಸಬೇಕಾದರೆ ಮತ್ತೆಲ್ಲೊ ತಗ್ಗಬೇಕು. ಇಲ್ಲವೇ ಸಾಧ್ಯವೇ ಇಲ್ಲ. ಮನುಷ್ಯನ ಆವಶ್ಯಕತೆ ಮತ್ತು ಆಸೆಗೆ ತಕ್ಕಂತೆ ಪ್ರಪಂಚದಲ್ಲಿರುವ ಒಳ್ಳೆ ವಸ್ತುಗಳ ಮೊತ್ತ ಯಾವಾಗಲೂ ಒಂದೇ ಸಮನಾಗಿರುತ್ತದೆ. ಇದನ್ನು ಹೆಚ್ಚು ಕಡಮೆ ಮಾಡಲಾಗುವುದಿಲ್ಲ. ನಮಗೆ ಈಗ ಗೊತ್ತಿರುವಂತೆ ಮಾನವ ಇತಿಹಾಸವನ್ನು ತೆಗೆದುಕೊಳ್ಳಿ. ಇದೇ ಸುಖದುಃಖ

ಹಿಂದೆ ಇರಲಿಲ್ಲವೇ ? ಈಗ ಇರುವ ವ್ಯತ್ಯಾಸವೇ ಹಿಂದೆ ಇರಲಿಲ್ಲವೇ ? ಕೆಲವರು ಶ್ರೀಮಂತರು, ಕೆಲವರು ಬಡವರು, ಕೆಲವರು ಕೀಳು, ಕೆಲವರು ರೋಗಿಗಳು, ಕೆಲವರು ಆರೋಗ್ಯವಂತರು ಇರಲಿಲ್ಲವೇ ? ಇವೆಲ್ಲಾ ಈಜಿಪ್ಟ್, ಗ್ರೀಸ್, ಪುರಾತನ ರೋಮ್ ಮತ್ತು ಆಧುನಿಕ ಅಮೆರಿಕದಲ್ಲಿ ಒಂದೇ. ಚಾರಿತ್ರಿಕ ದೃಷ್ಟಿಯಿಂದ ನೋಡಿದರೆ ಯಾವಾಗಲೂ ಒಂದೇ ಸಮನಾಗಿರುವುದು.

೭. ನಾವು ಪ್ರಪಂಚದ ಸುಖವನ್ನು ಹೆಚ್ಚು ಮಾಡಲಾರೆವು: ಅದರಂತೆಯೇ ದುಃಖವನ್ನೂ ಹೆಚ್ಚು ಮಾಡಲಾರೆವು. ಪ್ರಪಂಚದಲ್ಲಿರುವ ಸುಖ ದುಃಖಗಳ ಮೊತ್ತ ಯಾವಾಗಲೂ ಒಂದೇ ಸಮನಾಗಿರುವುದು. ಇಲ್ಲಿಂದ ಅಲ್ಲಿಗೆ ಅಲ್ಲಿಂದ ಇಲ್ಲಿಗೆ ಬೇಕಾದರೆ ಅದನ್ನು ನೂಕಬಹುದು. ಆದರೆ ಅದು ಮಾತ್ರ ಹಾಗೆಯೇ ಇರುವುದು. ಏಕೆಂದರೆ ಹಾಗೆ ಇರುವುದೇ ಅದರ ಧರ್ಮ.

ಉಬ್ಬರವಿಳಿತಗಳು, ಏಳುಬೀಳುಗಳು ಪ್ರಪಂಚದ ಸ್ವಭಾವ. ಹಾಗೆ ಇಲ್ಲದೇ ಇದ್ದರೆ ಮರಣವಿಲ್ಲದೇ ಕೇವಲ ಜನನವನ್ನೇ ಒಪ್ಪಿಕೊಳ್ಳುವಂತಹ ತರ್ಕಕ್ಕೆ ಬರುತ್ತೇವೆ.

೮. ಎಂದಿಗೂ ಬದಲಾಯಿಸದ, ನಿರಪೇಕ್ಷವಾದ ಆನಂದವಿದೆ ಎಂದು ತತ್ತ್ವ ಸಾರುವುದು. ಆ ಆನಂದ ನಮಗೆ ಈ ಪ್ರಪಂಚದಲ್ಲಿ ಸಿಕ್ಕುವ ಸುಖವಾಗಲಿ ಸಂತೋಷವಾಗಲಿ ಅಲ್ಲ. ಆದರೂ ವೇದಾಂತ ಪ್ರಪಂಚದಲ್ಲಿ ಎಲ್ಲೆಲ್ಲಿ ಆನಂದವಿದೆಯೋ ಅದರ ಹಿಂದೆಲ್ಲ ನಿರಪೇಕ್ಷ ಆನಂದದ ಅಂಶವೇ ಇದೆ ಎಂದು ಸಾರುವುದು. ಏಕೆಂದರೆ ಪ್ರಪಂಚದಲ್ಲಿ ಇರಬಹುದಾದ ಆನಂದ ಅದೊಂದೇ. ಪ್ರತಿ ನಿಮಿಷವೂ ನಾವು ಆ ಪರಮಾನಂದವನ್ನೇ ಅನುಭವಿಸುತ್ತಿರುವುದು. ಆದರೆ ಅದನ್ನು ತಪ್ಪು ತಿಳಿದುಕೊಂಡಿರುವೆವು, ಅದರ ಮೇಲೆ ಮತ್ತೇನನ್ನೋ ಆರೋಪಿಸಿರುವೆವು. ಅದನ್ನು ಅಸಹ್ಯವಾಗಿ ಕಾಣುವಂತೆ ಮಾಡಿರುವೆವು. ಎಲ್ಲಿಯಾದರೂ ಒಂದು ಆಶೀರ್ವಾದವಿದ್ದರೆ, ಆನಂದವಿದ್ದರೆ, ಸುಖವಿದ್ದರೆ, ಕದಿಯುವ ಕಳ್ಳನಲ್ಲಿರುವ ಸಂತೋಷ ಕೂಡ, ನಿರಪೇಕ್ಷವಾದ ಆನಂದದಿಂದಲೇ ಬರುವುದು. ಆದರೆ ಅದು ಬೇಕಾದಷ್ಟು ಬಾಹ್ಯವಿಕಾರ ಮತ್ತು ಭ್ರಾಂತಿಯಿಂದ ಕೂಡಿ ಅಸ್ಪಷ್ಟವಾಗಿದೆ.

೯. ಪ್ರತಿಯೊಂದು ಸುಖವಾದ ಮೇಲೂ ದುಃಖ ಬರುವುದು. ಬಹಳ ಬೇಗ ಬರಬಹುದು. ಅಥವಾ ಸ್ವಲ್ಪ ಕಾಲವಾದಮೇಲೆ ಬರಬಹುದು. ಜೀವಿ ಮುಂದುವರಿದಂತೆ ಅವು ಬೇಗ ಬೇಗ ಬರುವುದು. ನಮಗೆ ಬೇಕಾಗಿರುವುದು ಸುಖವೂ ಅಲ್ಲ ದುಃಖವೂ ಅಲ್ಲ. ಎರಡೂ ನಮ್ಮ ನೈಜ ಸ್ವಭಾವವನ್ನು ಮರೆಸು

ವುದು. ಎರಡೂ ಸರಪಳಿಯೇ ; ಒಂದು ಚಿನ್ನದ ಸರಪಳಿ, ಮತ್ತೊಂದು ಕಬ್ಬಿಣದ ಸರಪಳಿ. ಇವುಗಳ ಹಿಂದೆ ಆತ್ಮನಿರುವುದು. ಆವನಿಗೆ ಸುಖವೂ ಗೊತ್ತಿಲ್ಲ, ದುಃಖವೂ ಗೊತ್ತಿಲ್ಲ.

೧೦. ಸುಖ ದುಃಖದ ಕಿರೀಟವನ್ನು ಧರಿಸಿ ಮನುಷ್ಯನ ಎದುರಿಗೆ ಬಂದು ನಿಲ್ಲುವುದು. ಯಾರು ಸುಖವನ್ನು ಸ್ವಾಗತಿಸುವರೋ ಅವರು ದುಃಖವನ್ನು ಸ್ವಾಗತಿಸಲೇಬೇಕು.

೧೧. ನಾನು ಜೀವನದೊಂದಿಗೆ ಏಕವಾದಾಗ ಮಾತ್ರ ಮರಣ ನಿಲ್ಲುವುದು. ನಾನು ಸುಖದೊಂದಿಗೆ ಒಂದಾದಾಗ ಮಾತ್ರ ದುಃಖ ನಿಲ್ಲುವುದು. ಜ್ಞಾನದೊಂದಿಗೆ ನಾನು ಒಂದಾದಾಗ ಮಾತ್ರ ಅಜ್ಞಾನ ನಿಲ್ಲುವುದು.

೧೨. ಪ್ರಪಂಚದ ದುಃಖವನ್ನು ದೈಹಿಕವಾಗಿ ಇತರರಿಗೆ ಏನನ್ನಾದರೂ ಕೊಡುವುದರಿಂದ ತಪ್ಪಿಸುವುದಕ್ಕಾಗುವುದಿಲ್ಲ. ಮನುಷ್ಯನ ಸ್ವಭಾವ ಬದಲಾಯಿಸುವವರೆಗೆ ಅವನಲ್ಲಿ ದೈಹಿಕ ಅವಶ್ಯಕತೆಗಳು ಎದ್ದೇ ಏಳುವುವು. ನೀವು ಎಷ್ಟೇ ಇತರರಿಗೆ ಸ್ಥೂಲವಾಗಿ ಸಹಾಯಮಾಡಿ, ಅವರಿಗೆ ದುಃಖ ತಟ್ಟೇ ತಟ್ಟುವುದು. ಮನುಷ್ಯರಿಗೆ ಜ್ಞಾನ ಬರಲಿ, ಅವರು ಪರಿಶುದ್ಧರಾಗಲಿ, ಉತ್ತಮ ಚಾರಿತ್ರ್ಯದವರಾಗಲಿ, ಆಧ್ಯಾತ್ಮಿಕ ಶಕ್ತಿ ಬರಲಿ, ವಿದ್ಯಾವಂತರಾಗಲಿ. ಆಗ ಮಾತ್ರ, ಪ್ರಪಂಚದಲ್ಲಿ ದುಃಖ ಕೊನೆಗಾಣಬೇಕಾದರೆ; ಇದಕ್ಕೆ ಮುಂಚೆ ಅಲ್ಲ.

೧೩. ಎಲ್ಲಿಯವರೆಗೆ ಮನುಷ್ಯನಲ್ಲಿ ಆಸೆ ಇರುವುದೋ ಅಲ್ಲಿಯವರೆಗೆ ನಿಜವಾದ ಆನಂದ ಬರಲಾರದು. ಯಾರು ಧ್ಯಾನಪ್ರವೃತ್ತಿಯವರಾಗಿರುವರೋ, ಪ್ರಪಂಚವನ್ನು ಸಾಕ್ಷಿಯಂತೆ ಸಮೀಕ್ಷಿಸಬಲ್ಲರೊ ಅವರಿಗೆ ಮಾತ್ರ ನಿಜವಾದ ಆನಂದ ಸುಖ ಸಾಧ್ಯ.

೧೪, ಪ್ರಾಣಿಗಳಿಗೆ ದೇಹದಲ್ಲಿ ಸುಖ, ಮನುಷ್ಯನಿಗೆ ಬುದ್ಧಿಯಲ್ಲಿ ಸುಖ, ದೇವತೆಗಳಿಗೆ ಧ್ಯಾನದಲ್ಲಿ ಸುಖ. ಯಾರಿಗೆ ಧ್ಯಾನ ಜೀವನ ಸಾಧ್ಯವೋ ಅವರಿಗೆ ಮಾತ್ರ ಪ್ರಪಂಚ ನಿಜವಾಗಿಯೂ ಸುಂದರವಾಗಿರುವುದು. ಯಾರು ಏನನ್ನೂ ಆಶಿಸುವುದಿಲ್ಲವೋ ಪ್ರಪಂಚದೊಂದಿಗೆ ಬೆರೆತು ಹೋಗುವುದಿಲ್ಲವೋ ಅವರಿಗೆ ಪ್ರಕೃತಿಯ ಅನಂತ ವಿಕೃತಿಗಳು ಸೌಂದರ್ಯ ಮತ್ತು ಪವಿತ್ರತೆಯ ಅನಂತ ದೃಶ್ಯಗಳಾಗಿವೆ.

೧೯ ಹಿಂದೂಧರ್ಮ

೧. ಹಿಂದೂಧರ್ಮ ಮಾನವನಿಗೆ ಒಂದೇ ಒಂದು ಕರ್ತವ್ಯವನ್ನು ಆಜ್ಞಾಪಿಸುತ್ತದೆ. ಅದೇ ಅನಿತ್ಯದಲ್ಲಿ ನಿತ್ಯವನ್ನು ಅರಸುವುದು. ಇದನ್ನು ಮಾಡುವುದಕ್ಕೆ ಯಾವುದೋ ಒಂದೇ ಮಾರ್ಗ ಹೇಳುವುದಿಲ್ಲ. ಮದುವೆಯಾಗುವುದೋ ಆಗದೇ ಇರುವುದೊ, ಪಾಪವೋ ಪುಣ್ಯವೋ, ಜ್ಞಾನವೋ ಅಜ್ಞಾನವೋ ಯಾವುದನ್ನಾದರೂ ಆಶ್ರಯಿಸಲಿ, ಅಂತೂ ಅದು ಗುರಿ ಎಡೆಗೆ ಒಯ್ದರೆ ಸಾಕು. ಇಲ್ಲೇ ಬೌದ್ಧ ಧರ್ಮಕ್ಕೂ ಹಿಂದೂ ಧರ್ಮಕ್ಕೂ ಇರುವ ವ್ಯತ್ಯಾಸ. ಬೌದ್ಧರು ಪ್ರಪಂಚ ಅನಿತ್ಯ ಎಂದು ಎಲ್ಲರೂ ಅರಿಯಬೇಕೆನ್ನುವರು. ಹೀಗೆ ಅರಿಯಬೇಕಾದರೆ ಒಂದು ಮಾರ್ಗ ಇರುವುದು. ಮಹಾಭಾರತದಲ್ಲಿ ಬರುವ ಯುವಕ ತಪಸ್ವಿಯ ಕಥೆ ನಿಮಗೆ ಜ್ಞಾಪಕವಿದೆಯೆ ? ಅವನು ಕೋಪದಿಂದ ತನ್ನ ತಪೋಬಲದ ಸಹಾಯದಿಂದ ಕಾಗೆ ಮತ್ತು ಬಕವನ್ನು ಕೊಂದನು. ಅವನು ಹತ್ತಿರದ ಹಳ್ಳಿಗೆ ಹೋದಾಗ ಮೊದಲು ಗೃಹಿಣಿಯೊಬ್ಬಳು ತನ್ನ ಖಾಯಿಲೆಯ ಗಂಡನನ್ನು ಉಪಚಾರ ಮಾಡುತ್ತಿದ್ದುದು, ಅನಂತರ ಧರ್ಮವ್ಯಾಧನನ್ನು ಕಂಡದ್ದು ನಿಮಗೆ ಜ್ಞಾಪಕವಿದೆಯೆ ? ಅವರಿಬ್ಬರೂ ತಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಮಾಡಿಯೆ ಜ್ಞಾನವನ್ನು ಪಡೆದಿದ್ದರು.

೨. ಹಿಂದೂಧರ್ಮದಲ್ಲಿ ಹಿಂದೂದರ್ಶನದ ಉತ್ತುಂಗ ಅನುಭವದಿಂದ ಹಿಡಿದು (ಇತ್ತೀಚಿನ ಆಧುನಿಕ ವಿಜ್ಞಾನದ ಆವಿಷ್ಕಾರಗಳು ಅವಗಳ ಪ್ರತಿಧ್ವನಿಯಂತೆ ಇವೆ) ಹಲವು ಪುರಾಣಗಳಿಂದ ಕೂಡಿದ ವಿಗ್ರಹಾರಾಧನೆ, ಬೌದ್ಧರ ಅಜ್ಞೇಯವಾದ, ಜೈನರ ನಾಸ್ತಿಕತೆ ಎಲ್ಲಕ್ಕೂ ಒಂದು ಸ್ಥಳವಿದೆ.

೩. ಹಿಂದೂವಿಗೆ ಇಡೀ ಧಾರ್ಮಿಕ ಪ್ರಪಂಚ, ಒಂದು ಪ್ರಯಾಣದಂತೆ ಇದೆ. ಪ್ರತಿಯೊಬ್ಬರೂ ಬೇರೆ ಬೇರೆ ಕಡೆಯಿಂದ ಒಂದೇ ಗುರಿಯೆಡೆಗೆ ಹೋಗುತ್ತಿರುವರು. ಪ್ರತಿಯೊಂದು ಧರ್ಮವೂ ಮಾನವನ ಅಂತರಾಳದಿಂದಲೇ ಒಂದು ದೇವರನ್ನು ಸೃಷ್ಟಿಸುತ್ತದೆ. ಎಲ್ಲರ ಪ್ರೇರಕನೂ ಒಬ್ಬನೇ. ಹಾಗಾದರೆ ಇಷ್ಟೊಂದು ಭಿನ್ನಾಭಿಪ್ರಾಯಗಳೇಕೆ ? ಅವು ಕೇವಲ ತೋರಿಕೆಗೆ ಮಾತ್ರ ಎನ್ನುವನು ಹಿಂದೂ. ಪ್ರತಿಯೊಬ್ಬರ ಸ್ವಭಾವಕ್ಕೆ ತಕ್ಕಂತೆ ಸತ್ಯ ಅನುಸರಿಸಿಕೊಂಡು ಹೋಗುತ್ತಿರುವುದರಿಂದ ಈ ವ್ಯತ್ಯಾಸ ಕಾಣುವುದು.

೪. ಭಿನ್ನಭಿನ್ನ ಮತಗಳಲ್ಲಿರುವ ವ್ಯತ್ಯಾಸ ಮತ್ತು ವಿರೋಧ ಭಾವನೆಗಳಲ್ಲದೆ ಕೆಲವು ಸಾಮಾನ್ಯ ಅಭಿಪ್ರಾಯಗಳೂ ಇವೆ. ಇವರಲ್ಲಿ ಪ್ರತಿಯೊಬ್ಬರೂ ಜೀವ ಜಗತ್ ಈಶ್ವರನನ್ನು ಒಪ್ಪಿಕೊಳ್ಳುತ್ತಾರೆ. ಈಶ್ವರನೆಂದರೆ ವಿಶ್ವದ ನಿತ್ಯ ಸೃಷ್ಟಿಸ್ಥಿತಿಸಂಹಾರಕ. ಸಾಂಖ್ಯರು (ನಿರೀಶ್ವರ ಸಾಂಖ್ಯರು)ವಿನಃ ಉಳಿದವರೆಲ್ಲರೂ ಇದನ್ನು ಒಪ್ಪಿಕೊಳ್ಳುತ್ತಾರೆ. ಅನಂತರ ಆತ್ಮ ಮತ್ತು ಪುನರ್ಜನ್ಮ ಸಿದ್ಧಾಂತ. ಅನಂತ ಜೀವಿಗಳು ಪುನಃಪುನಃ ದೇಹ ಧರಿಸಿ ತಮ್ಮ ಕರ್ಮಾನುಸಾರ ಜನನ ಮರಣಗಳ ಮೂಲಕ ಸಾಗಿ ಹೋಗುತ್ತಿವೆ. ಇದೇ ಸಂಸಾರವಾದ ಅಥವಾ ಪುನರ್ಜನ್ಮ ಸಿದ್ಧಾಂತ. ಅನಂತರ ಈ ಪ್ರಪಂಚವಿದೆ. ಇದಕ್ಕೆ ಆದಿ ಅಂತ್ಯವಿಲ್ಲ. ಕೆಲವರು ಈ ಮೂರೂ ಒಂದೇ ವಸ್ತುವಿನ ಭಿನ್ನ ರೂಪುಗಳೆಂದು ನಂಬಬಹುದು. ಮತ್ತೆ ಕೆಲವರು ಇವು ಮೂರು ಸಂಪೂರ್ಣ ಬೇರೆ ಎಂದು ನಂಬಬಹುದು. ಮತ್ತೆ ಕೆಲವರು ಇದನ್ನು ಬೇರೆ ಬೇರೆ ದೃಷ್ಟಿಯಿಂದ ನೋಡಬಹುದು. ಅಂತೂ ಎಲ್ಲರೂ ಈ ಮೂರನ್ನೂ ಒಪ್ಪುತ್ತಾರೆ,

೫. ನೀವು ಪ್ರತಿದಿನ ನಮ್ಮ ಧರ್ಮವನ್ನು ಟೀಕಿಸುತ್ತಿರುವವರನ್ನು ಕೇಳುತ್ತಿರುವಿರಿ. ಅವರಿಗೆ ಇನ್ನೂ ಸ್ವಲ್ಪ ಜ್ಞಾನ ಆವಶ್ಯಕ ಎಂದು ನಾನು ವ್ಯಥೆಯಿಂದ ಹೇಳಬೇಕಾಗಿದೆ. ನಮ್ಮ ಧರ್ಮ ಗೆಲ್ಲುವ ಧರ್ಮ ಅಲ್ಲ ಎನ್ನುವರು. ನನ್ನ ದೃಷ್ಟಿಗೆ ಈ ಅಂಶವೇ ಹಿಂದೂಧರ್ಮ ಇತರ ಧರ್ಮಗಳಿಗಿಂತ ಮೇಲು ಎಂಬುದಕ್ಕೆ ಕಾರಣವಾಗಿದೆ. ಹಿಂದೂಧರ್ಮ ಅನ್ಯರನ್ನು ಗೆಲ್ಲಲಿಲ್ಲ. ರಕ್ತದ ಕಾಲುವೆಯನ್ನು ಹರಿಸಲಿಲ್ಲ. ಇದರ ಬಾಯಿಂದ ಎಲ್ಲರಿಗೂ ಆಶೀರ್ವಾದ, ಶಾಂತಿ, ಪ್ರೀತಿ, ಸಹಾನುಭೂತಿಯ ನುಡಿಗಳೇ ಬರುತ್ತಿದ್ದುವು. ಈ ಧರ್ಮದಲ್ಲಿ ಮಾತ್ರ ಅನ್ಯಧರ್ಮಸಹಿಷ್ಣುತೆಯನ್ನು ಮೊದಲು ಪ್ರೀತಿಸಿದ್ದು, ಇಲ್ಲಿ ಮಾತ್ರ ಸಹಿಷ್ಣುತೆ ಮತ್ತು ಸಹಾನುಭೂತಿ ಅನುಷ್ಠಾನ ಸಾಧ್ಯವಾಯಿತು. ಇತರ ದೇಶಗಳಲ್ಲಿ ಇವಿನ್ನೂ ಬಾಯಿ ಮಾತಾಗಿವೆ. ಈ ದೇಶ ಒಂದರಲ್ಲಿ ಮಾತ್ರ ಹಿಂದೂಗಳು ಮಹಮ್ಮದೀಯರಿಗೆ ಮಸೀದಿ ಕಟ್ಟಿ ಕೊಟ್ಟಿರುವರು, ಕ್ರೈಸ್ತರಿಗೆ ಚರ್ಚ ಕಟ್ಟಿಕೊಟ್ಟಿರುವರು.

೬. ಹಿಂದೂಧರ್ಮದ ಮುಖ್ಯ ಸಿದ್ಧಾಂತಗಳು ವೇದಗಳಲ್ಲಿ ಬರುವ ತತ್ತ್ವ ಉಪಾಸನೆ ಮತ್ತು ನೀತಿಯ ಆಧಾರದ ಮೇಲೆ ನಿಂತಿವೆ. ವಿಶ್ವ, ದೇಶದ ದೃಷ್ಟಿಯಿಂದ ಅನಂತವಾದುದು. ಕಾಲದ ದೃಷ್ಟಿಯಿಂದ ಆದಿ ಅಂತ್ಯರಹಿತವಾದುದು ಎಂದು ವೇದ ಸಾರುವುದು. ವಿಶ್ವಕ್ಕೆ ಒಂದು ಆದಿ ಎಂದೂ ಇರಲಿಲ್ಲ, ಅಂತೆಯೇ ಅಂತ್ಯವೂ ಇಲ್ಲ.ನಮ್ಮ ಭೌತಿಕ ಪ್ರಪಂಚದಲ್ಲಿ ಪರಮಾತ್ಮನ ಶಕ್ತಿ ಹಲವು ವಿಷಯಗಳಲ್ಲಿ ವ್ಯಕ್ತವಾಗಿದೆ. ಅನಂತಾತ್ಮ ಸಾಂತ ಪ್ರಪಂಚದ ಮೂಲಕ ವ್ಯಕ್ತವಾಗುತ್ತಿರು

ವನು. ಆದರೆ ಆವನು ಮಾತ್ರ ಸ್ವಯಂಭೂ, ನಿತ್ಯ ನಿರ್ವಿಕಾರ. ಅನಂತಾತ್ಮನ ಮೇಲೆ ಕಾಲ ಚಲನೆ ಯಾವ ಚಿಹ್ನೆಯನ್ನೂ ಬಿಡಲಾರದು. ಮಾನವನಿಗೆ ಅತೀತ ವಾದ ಅತೀಂದ್ರಿಯ ಪ್ರಪಂಚದಲ್ಲಿ ಭೂತ ಭವಿಷ್ಯತ್ ಕಾಲಗಳೇ ಇಲ್ಲ. ಮಾನವ ಅಮೃತಾತ್ಮ ಎಂದು ವೇದ ಸಾರುವುದು. ವೃದ್ಧಿ ಕ್ಷಯದ ಧರ್ಮ ದೇಹಕ್ಕೆ ಅನ್ವ ಯಿಸುವುದು. ಬೆಳೆಯುವುದೆಲ್ಲಾ ನಾಶವಾಗಲೇ ಬೇಕು. ಆದರೆ ಅಂತರ್ಯಾಮಿ ಯಾದ ಆತ್ಮನಾದರೋ ನಿತ್ಯ. ಸನಾತನನಾಗಿರುವವನೊಂದಿಗೆ ಸಂಬಂಧ ಪಡೆದಿರು ವನು. ಅದಕ್ಕೆ ಎಂದಿಗೂ ಒಂದು ಆದಿ ಇರಲಿಲ್ಲ, ಒಂದು ಅಂತ್ಯವೂ ಇರಲಾರದು.

೭. ಯಾರಾದರೂ ಆಗಲಿ, ಶೂದ್ರನಾಗಲಿ, ಚಂಡಾಲನಾಗಲಿ, ತತ್ತ್ವ ವನ್ನು ಬ್ರಾಹ್ಮಣನಿಗೆ ಬೇಕಾದರೂ ಹೇಳಬಹುದು. ಅಧಮಾಧಮನಿಂದಲೂ ಸತ್ಯವನ್ನು ತಿಳಿದುಕೊಳ್ಳಬಹುದು. ಹೇಳುವವನು ಯಾವ ಜಾತಿ ಕುಲಗೋತ್ರಕ್ಕೆ ಸೇರಿದ್ದರೂ ಚಿಂತೆಯಿಲ್ಲ.

೮. ಮೊದಲು ಮಹಮ್ಮದೀಯರು ಇಂಡಿಯಾ ದೇಶಕ್ಕೆ ಬಂದಾಗ ಮಹ ಮ್ಮದೀಯ ಇತಿಹಾಸಕಾರರಲ್ಲಿ ಬಹಳ ಹಳೆಯವನಾದ ಫರಿಷ್ಟನ ಬರಹದ ಆಧಾ ರದ ಮೇಲೆ ಹಿಂದೂಗಳು ಅರವತ್ತು ಕೋಟಿ ಇದ್ದರು. ಈಗ ನಾವು ಇಪ್ಪತ್ತು ಕೋಟಿ ಆಗಿರುವೆವು. ಹಿಂದೂಧರ್ಮದಿಂದ ಹೊರಗೆ ಹೋದ ಪ್ರತಿಯೊಬ್ಬನು, ಹಿಂದೂ ಧರ್ಮಕ್ಕೆ ಒಬ್ಬ ಕಡಮೆ ಮಾತ್ರ ಆಗಲಿಲ್ಲ,ನಮ್ಮ ದ್ವೇಷಿಗಳ ಪೈಕಿ ಒಬ್ಬ ಹೆಚ್ಚಿದನೆಂದು ಭಾವಿಸಬೇಕು.

ಅನೇಕ ಜನ ಕ್ರೈಸ್ತರು ಮಹಮ್ಮದೀಯರು ಹಿಂದೂಗಳೇ ಬಲಾತ್ಕಾರವಾಗಿ ಹೀಗೆ ಆದವರು, ಇಲ್ಲವೇ ಹಾಗೆ ಬಲಾತ್ಕಾರವಾಗಿ ಆದವರ ವಂಶಜರು. ಇಂತ ಹವರನ್ನು ನಾವು ಯಾವ ವಿಧವಾದ ಅನ್ಯಾಯಕ್ಕೂ ಗುರಿಮಾಡಕೂಡದು. ಅನ್ಯ ಧರ್ಮದವರು ಹಿಂದೂಗಳಾಗುವ ಪ್ರಶ್ನೆಯೆ? ಏತಕ್ಕೆ ಹಿಂದಿನ ಕಾಲದಲ್ಲಿ ಎಷ್ಟೋ ಜನ ಇಂತಹವರನ್ನು ಹಿಂದೂಧರ್ಮಕ್ಕೆ ಸೇರಿಸಿರುವರು? ಅದು ಈಗಲೂ ನಡೆ ಯುತ್ತಿದೆ.

ನನ್ನ ಅಭಿಪ್ರಾಯದಲ್ಲಿ ಇದು ನಮ್ಮ ನೆರೆರಾಷ್ಟ್ರವಾಗಿದ್ದ. ಹಿಂದೆ ಸ್ವತಂತ್ರ ವಾಗಿದ್ದ ಪಂಗಡಗಳಿಗೆ ಮಾತ್ರ ಅನ್ವಯಿಸುವುದಲ್ಲ, ಮಹಮ್ಮದೀಯರಿಗೆ ಮುಂಚೆ ನಮ್ಮನ್ನು ಗೆದ್ದವರಿಗೆ ಮಾತ್ರ ಅನ್ವಯಿಸುವುದಲ್ಲ. ಪುರಾಣದಲ್ಲಿ ಬರುವ ಕೆಲವು ಪ್ರತ್ಯೇಕ ಜಾತಿಗಳಿಗೂ ಇದು ಅನ್ವಯಿಸುವುದು. ಇವರೆಲ್ಲ ನಮ್ಮ ಧರ್ಮವನ್ನು ಸ್ವೀಕರಿಸಿದ ಪರದೇಶೀಯರು ಎಂದು ನಾನು ಭಾವಿಸುತ್ತೇನೆ.

ಹಿಂದೂಗಳಾಗಿ ಅನಂತರ ಮತಾಂತರಗೊಂಡು ಪುನಃ ಹಿಂದೂಗಳಾಗಲು ಇಚ್ಛಿಸುವವರಿಗೆ ಪ್ರಾಯಶ್ಚಿತ್ತ ಕರ್ಮಗಳೇನೊ ಯೋಗ್ಯವಾಗಿವೆ. ಆದರೆ ಯಾರು ಇತರರು ಅವರನ್ನು ಹಿಂದೆ ಗೆದ್ದುದರಿಂದ ಬೇರೆ ಬೇರೆ ಧರ್ಮಕ್ಕೆ ಸೇರಬೇಕಾಯಿತೊ (ಕಾಶ್ಮೀರ ಮತ್ತು ನೇಪಾಳ) ಅಂತಹವರು ಮತ್ತು ನಮ್ಮ ಧರ್ಮಕ್ಕೆ ತಾವಾಗಿ ಸೇರಬೇಕೆಂದು ಬಯಸುವ ಅನ್ಯಧರ್ಮೀಯರಿಗೆ ಇದು ಅನ್ವಯಿಸುವುದಿಲ್ಲ.

೨೦ ಹಿಂದೂಗಳು

೧. ಭರತಖಂಡದಲ್ಲಿ ಹಿಂದೂಗಳು ಎಂದಿಗೂ ಅನ್ಯಮತೀಯರನ್ನು ಹಿಂಸಿಸಲಿಲ್ಲ. ಪ್ರಪಂಚದಲ್ಲಿರುವ ಎಲ್ಲಾ ಧರ್ಮಗಳನ್ನೂ ಅದ್ಭುತ ಗೌರವದಿಂದ ನೋಡಿದರು. ಹೀಬ್ರೂಗಳನ್ನು ಅವರ ದೇಶದಿಂದ ಓಡಿಸಿದಾಗ ಅವರಿಗೆ ಭರತಖಂಡದಲ್ಲಿ ಆಶ್ರಯಕೊಟ್ಟರು. ಇದರ ಪರಿಣಾಮವಾಗಿಯೇ ಮಲಬಾರಿನಲ್ಲಿ ಈಗ ಜ್ಯೂಗಳು ಇರುವುದು. ಪಾರ್ಸಿಯವರಿಗೆ ಇನ್ನೊಂದು ಕಾಲದಲ್ಲಿ ಆಶ್ರಯ ಕೊಟ್ಟರು. ಪಾರ್ಸಿಗಳು ನಾಮಾವಶೇಷವಾಗುವುದರಲ್ಲಿದ್ದರು. ಅವರು ಈಗಲೂ ನಮ್ಮಲ್ಲಿ ಒಬ್ಬರಾಗಿ ನಮಗೆಲ್ಲಾ ಬೇಕಾಗಿರುವ ಬೊಂಬಾಯಿ ಪಾರ್ಸಿಯವರಾಗಿರುವರು. ಜೀಸಸ್ ಕ್ರೈಸ್ತನ ಶಿಷ್ಯನಾದ ಸೇಂಟ್ ಥಾಮಸ್‌ನೊಂದಿಗೆ ಬಂದವರು ತಾವೆಂದು ಹೇಳಿಕೊಳ್ಳುವ ಕ್ರೈಸ್ತರಿರುವರು. ಅವರಿಗೆ ಭರತಖಂಡದಲ್ಲಿ ತಂಗಲು ಅವಕಾಶ ಕೊಟ್ಟರು. ತಮ್ಮ ಧರ್ಮದಂತೆ ಅವರಿರುವುದಕ್ಕೆ ಅನುಕೂಲ ಮಾಡಿಕೊಟ್ಟರು. ಈ ವಂಶಕ್ಕೆ ಸೇರಿದ ಕೆಲವರಿನ್ನೂ ಭರತಖಂಡದಲ್ಲಿರುವರು. ಅನ್ಯಧರ್ಮ ಸಹಿಷ್ಣುತೆಯ ಭಾವ ಇನ್ನೂ ಹಿಂದೂಗಳಿಂದ ಮಾಯವಾಗಿಲ್ಲ. ಅದೆಂದಿಗೂ ಇಲ್ಲಿ ನಾಶವಾಗಲಾರದು.

೨. ಒಬ್ಬ ದ್ವೈತಿಯಾಗಿರಬಹುದು, ಮತ್ತೊಬ್ಬ ಅದ್ವೈತಿಯಾಗಿರಬಹುದು, ನೀವು ಎಂದೆಂದಿಗೂ ದೇವರದಾಸನೆಂದು ನಂಬಬಹುದು, ನಾನು ದೇವರು ಒಂದೇ ಎಂದು ಹೇಳಬಹುದು. ಆದರೂ ಇಬ್ಬರೂ ಒಳ್ಳೆಯ ಹಿಂದೂಗಳೇ. ಇದು ಹೇಗೆ ಸಾಧ್ಯ? "ಏಕಂ ಸತ್ ವಿಪ್ರಾ ಬಹುಧಾ ವದಂತಿ"–ಸತ್ಯ ಒಂದು, ತಿಳಿದವರು ಅದನ್ನು ಹಲವು ರೀತಿ ಬಣ್ಣಿಸುವರು.

೩. ಹಿಂದೂಗಳ ಒಂದು ಸ್ವಭಾವವೇ ಕೊನೆಯ ಸಾಮಾನ್ಯೀಕರಣವನ್ನು (Last generalisation) ಅರಸುವುದು. ಚಿಲ್ಲರೆಪಲ್ಲರೆ ವಿಷಯಗಳನ್ನೆಲ್ಲಾ ನಂತರ ಪೂರೈಸಲು ಬಿಡುವರು. "ಯಾವುದನ್ನು ಅರಿತರೆ ಉಳಿದವುಗಳೆಲ್ಲವನ್ನೂ ತಿಳಿಯಬಹುದು" ಎಂಬ ಪ್ರಶ್ನೆಯನ್ನೇ ವೇದದಲ್ಲಿ ಕೇಳುವುದು. ಎಲ್ಲಾ ಗ್ರಂಥಗಳು ತತ್ತ್ವಶಾಸ್ತ್ರಗಳು ಇರುವುದು ಯಾವುದನ್ನು ತಿಳಿದರೆ ಎಲ್ಲವನ್ನೂ ತಿಳಿದುಕೊಳ್ಳಬಹುದೋ ಅದನ್ನು ವಿವರಿಸುವುದಕ್ಕಾಗಿ.

೪. ಹಿಂದೂಗಳು ಬಹಳ ಧೈರ್ಯಶಾಲಿಗಳು. ಇದೇ ಅವರ ಕೀರ್ತಿ. ಧೀರ

ಆಲೋಚನಾಪರರು. ಅವರು ಎಷ್ಟು ಧೈರ್ಯಶಾಲಿಗಳಾಗಿದ್ದರು ಎಂದರೆ ಅವರ ಧೈರ್ಯದ ಒಂದು ಕಿಡಿಯೇ ತಾವು ಧೀರರೆಂದು ಹೆಮ್ಮೆಪಡುವ ಆಧುನಿಕ ಪಾಶ್ಚಾತ್ಯ ವಿದ್ವಾಂಸರನ್ನೇ ಅಂಜಿಕೆಯಿಂದ ಕಂಪಿಸುವಂತೆ ಮಾಡಿರುವುದು. ಪ್ರೊಫೆಸರ್ ಮ್ಯಾಕ್ಸ್‌ಮುಲ್ಲರ್ ಈ ದಾರ್ಶನಿಕರ ವಿಷಯವಾಗಿ ಹೀಗೆ ಹೇಳುವನು : ಅವರು ಎಷ್ಟು ಎತ್ತರಕ್ಕೆ ಹತ್ತಿ ಹೋದರೋ ಅಲ್ಲಿ ಅವರು ಮಾತ್ರ ಉಸಿರಾಡಲು ಸಾಧ್ಯ. ಇತರರ ಶ್ವಾಸಕೋಶಗಳು ನುಚ್ಚುನೂರಾಗಿ ಹೋಗಿಬಿಡುತ್ತಿದ್ದವು. ಈ ಧೀರರು ವಿಚಾರ ಒಯ್ದ ಹಾದಿಯಲ್ಲಿ ಹೋದರು, ಇದರಿಂದ ಏನಾದರೂ ಚಿಂತೆಯಿರಲಿಲ್ಲ. ಸಮಾಜ ತಮ್ಮನ್ನು ಹೇಗೆ ನೋಡುವುದೊ, ತಮ್ಮ ವಿಷಯದಲ್ಲಿ ಏನು ಆಡಿಕೊಳ್ಳುವುದೋ ಅದನ್ನು ಗಮನಿಸುತ್ತಲೇ ಇರಲಿಲ್ಲ. ಆದರೆ ತಾವು ಯಾವುದನ್ನು ಸತ್ಯ, ಸರಿ ಎಂದು ಭಾವಿಸಿದ್ದರೊ ಅದನ್ನು ಇತರರಿಗೆ ಬೋಧಿಸಿದರು.

೫. ಪುರಾತನ ಹಿಂದೂಗಳು ಮಹಾ ವಿದ್ವಾಂಸರಾಗಿದ್ದರು. ಸಚಲ ವಿಶ್ವಕೋಶಗಳಂತೆ ಇದ್ದರು. "ಪುಸ್ತಕದಲ್ಲಿರುವ ವಿದ್ಯೆ, ಇತರರ ಕೈಯಲ್ಲಿರುವ ಕಾಸು ಇವೆರಡೂ ಒಂದೇ. ಇವುಗಳಿಂದ ನಮಗೆ ವಿದ್ಯೆಯೂ ಇಲ್ಲ, ಕಾಸೂ ಇಲ್ಲ" ಎನ್ನುತ್ತಿದ್ದರು.

೬. ಹಿಂದೂಗಳಲ್ಲಿ ಒಂದು ವಿಶೇಷವಾದ ಜನಾಂಗದ ಸ್ವಭಾವವನ್ನು ನೋಡುವಿರಿ. ಅದೇ ಆಧ್ಯಾತ್ಮಿಕತೆ. ಪ್ರಪಂಚದ ಮತ್ಯಾವ ಧರ್ಮವೂ, ಶಾಸ್ತ್ರವೂ ದೇವರ ವಿಷಯವನ್ನು ವಿವರಿಸುವುದಕ್ಕೆ ಇವರಷ್ಟು ಶಕ್ತಿಯನ್ನು ಉಪಯೋಗಿಸಿಲ್ಲ. ಆತ್ಮವೆಂದರೆ ಏನು ಎಂಬುದನ್ನು ವಿವರಿಸುವುದಕ್ಕೆ ಯತ್ನಿಸಿದರು. ಆ ವಿವರಣೆಯಲ್ಲಿ ಯಾವ ಪ್ರಾಪಂಚಿಕ ಚಿಹ್ನೆಯ ಸೋಂಕೂ ಬಾರದಂತೆ ನೋಡಿಕೊಂಡರು. ಆಧ್ಯಾತ್ಮಪರರು ಪವಿತ್ರ ಆಧ್ಯಾತ್ಮವನ್ನು ಆಧ್ಯಾತ್ಮದಂತೆ ತಿಳಿಯಬೇಕು. ಅದನ್ನು ನಮ್ಮ ಮಟ್ಟಕ್ಕೆ ಇಳಿಸಬಾರದು.

೭. ಆರ್ಯರು ಯಾವಾಗಲೂ ತಮ್ಮಲ್ಲಿ ಪವಿತ್ರತೆಯನ್ನು ಅರಸುತ್ತಿದ್ದರು. ಕಾಲಕ್ರಮೇಣ ಇದು ಅವರ ಸ್ವಭಾವವಾಯಿತು. ಇದು ಅವರ ಕಲೆ ಮತ್ತು ನಿತ್ಯ ವ್ಯವಹಾರದಲ್ಲಿಯೂ ವ್ಯಕ್ತವಾಗುವುದು. ಈಗಲೂ ಕೂಡ ಧಾರ್ಮಿಕನನ್ನು ಚಿತ್ರಿಸಲೆತ್ನಿಸುವ ಕಲಾವಿದ, ಅವನು ಏನನ್ನೊ ಮೇಲೆ ನೋಡುತ್ತಿರುವಂತೆ, ದೇವರನ್ನು ಹೊರಗೆ ಹುಡುಕುತ್ತಿರುವಂತೆ ಚಿತ್ರಿಸುವನು. ಆದರೆ ಭರತಖಂಡದಲ್ಲಾದರೊ ಅವನನ್ನು ಅಂತರ್ಮುಖಿಯನ್ನಾಗಿ ಮಾಡುವರು. ಕಣ್ಣನ್ನು ಮುಚ್ಚಿ ಕುಳಿತ ಧ್ಯಾನಸ್ಥ ಸ್ಥಿತಿಯನ್ನು ಚಿತ್ರಿಸುವರು.

೮. ನಾವು ಈಗ ಹಿಂದೂಗಳೆಂದು ಕರೆದುಕೊಳ್ಳುವುದು ರೂಢಿಯಾಗಿ ಹೋಗಿದೆ. ಆದರೆ ಅದಕ್ಕೆ ಹಿಂದೆ ಇದ್ದ ಯಾವ ಅರ್ಥವೂ ಇಲ್ಲ. ಇದಕ್ಕೆ ಹಿಂದೆ ಇದ್ದ ಅರ್ಥ ಸಿಂಧೂನದಿಯ ಇತ್ತಕಡೆ ಇದ್ದವರು ಎಂದು. ಪುರಾತನ ಪಾರ್ಸಿಗಳು ಇದನ್ನು ಹಿಂದೂ ಎಂದು ಅಪಭ್ರಂಶಗೊಳಿಸಿದರು. ಸಿಂಧೂನದಿಯ ಇತ್ತಕಡೆ ಇದ್ದವರನ್ನೆಲ್ಲಾ ಅವರು ಹಿಂದೂಗಳೆಂದು ಕರೆಯತೊಡಗಿದರು. ಈ ಪದ ನಮಗೆ ಬಂದದ್ದು ಹೀಗೆ. ಮುಹಮ್ಮದೀಯರ ಆಳ್ವಿಕೆಯ ಕಾಲದಲ್ಲಿ ನಾವೇ ಆ ಪದವನ್ನು ತೆಗೆದುಕೊಂಡೆವು.

೯. ನೀವು ಹಿಂದೂಗಳು. ಸ್ವಭಾವತಃ ನೀವು ಜೀವನ ಅನಂತ ಎಂದು ನಂಬುವಿರಿ. ಕೆಲವು ವೇಳೆ ಹಿಂದೂ ಯುವಕರು ನನ್ನ ಬಳಿಗೆ ಬಂದಾಗ ನಾಸ್ತಿಕರಂತೆ ಮಾತನಾಡುವರು. ಹಿಂದೂ ನಾಸ್ತಿಕನಾಗಬಲ್ಲ ಎಂಬುದನ್ನು ನಾನು ನಂಬಲಾರೆ. ಅವನು ಐರೋಪ್ಯ ಗ್ರಂಥಗಳನ್ನೋದಿ ತಾನು ನಾಸ್ತಿಕನಾದೆ ಎಂದು ಭಾವಿಸಬಹುದು. ಆದರೆ ಇದು ತಾತ್ಕಾಲಿಕ. ಇದು ನಿಮ್ಮ ರಕ್ತದಲ್ಲಿ ಇಲ್ಲ. ಯಾವುದು ನಿಮ್ಮಲ್ಲಿ ಇಲ್ಲವೋ ಅದನ್ನು ನೀವು ನಂಬಲಾರಿರಿ. ಇದನ್ನು ನೀವು ಪ್ರಯತ್ನಿಸಿದರೆ ವೃಥಾ ಶ್ರಮವಾಗುವುದು. ನೀವು ಇದಕ್ಕೆ ಯತ್ನಿಸಬೇಡಿ. ನಾನು ಹಿಂದೆ ಹುಡುಗನಾಗಿದ್ದಾಗ ಒಮ್ಮೆ ಯತ್ನಿಸಿದೆ. ಆದರೆ ಅದು ಸಾಧ್ಯವಾಗಲಿಲ್ಲ.

೨೧ ಗೃಹಸ್ಥರು ಮತ್ತು ಗೃಹಸ್ಥಧರ್ಮ

೧. ಗೃಹಸ್ಥ ದೇವಭಕ್ತನಾಗಿರಬೇಕು. ಭಗವಂತನನ್ನು ಅರಿಯುವುದೇ ಅವನ ಜೀವನದ ಮುಖ್ಯ ಉದ್ದೇಶವಾಗಿರಬೇಕು. ಆದರೂ ಅವನು ಸದಾ ಕರ್ಮದಲ್ಲಿ ನಿರತನಾಗಿರಬೇಕು. ತನ್ನ ಪಾಲಿನ ಕರ್ತವ್ಯವನ್ನೆಲ್ಲಾ ಮಾಡಬೇಕು. ಬರುವ ಫಲಗಳನ್ನು ಭಗವಂತನಿಗೆ ಅರ್ಪಿಸಬೇಕು.

೨. ನಿಮ್ಮ ಸ್ವಧರ್ಮವನ್ನು ಮಾಡಿ, ಇದೇ ಸತ್ಯ, ಸತ್ಯಸ್ಯ ಸತ್ಯ. ನನ್ನ ಸಹಧರ್ಮಿಗಳೇ, ಇದೇ ನನ್ನ ಬುದ್ಧಿವಾದ ನಿಮಗೆ. ಯಾರಿಗೂ ಅನ್ಯಾಯಮಾಡಬೇಡಿ. ಹಿಂಸೆ ಮಾಡಬೇಡಿ. ಸಾಧ್ಯವಾದಷ್ಟು ಇತರರಿಗೆ ಒಳ್ಳೆಯದನ್ನು ಮಾಡಿ. ಇತರರು ಮಾಡಿದ ಅನ್ಯಾಯವನ್ನು ಮರುಮಾತಾಡದೆ ಸಹಿಸುವುದು ಗೃಹಸ್ಥರಿಗೆ ಪಾಪ. ಮುಯ್ಯಿಗೆ ಮುಯ್ಯಿಯನ್ನು ಅವನು ಕೊಡಬೇಕು.

೩. ಗೃಹಸ್ಥ ಉತ್ಸಾಹದಿಂದ ಕಷ್ಟಪಟ್ಟು ಹಣ ಸಂಪಾದಿಸಬೇಕು. ಅದರಿಂದ ತನ್ನ ಮತ್ತು ಇತರರ ಸಂಸಾರಕ್ಕೆ ನೆಮ್ಮದಿಯನ್ನು ತರಬೇಕು. ಸಾಧ್ಯವಾದಷ್ಟೂ ಪುಣ್ಯಕೆಲಸಗಳನ್ನು ಮಾಡಬೇಕು. ಇದನ್ನು ನೀನು ಮಾಡದೆ ಇದ್ದರೆ ಮನುಷ್ಯ ಎಂದು ಹೇಗೆ ಹೆಮ್ಮೆಪಡಬಲ್ಲೆ ? ನೀನು ಇನ್ನೂ ಗೃಹಸ್ಥನೇ ಆಗಿಲ್ಲ, ಅಂತಹವನಿಗೆ ಮೋಕ್ಷ ಎತ್ತಣದು !

೪. ಗೃಹಸ್ಥ ತಾನು ಸಂಪಾದನೆ ಮಾಡಿದುದನ್ನು ಹೀಗೆ ಹಂಚಬೇಕು : ಕಾಲುಭಾಗ ತನ್ನ ಸಂಸಾರಕ್ಕೆ, ಕಾಲುಭಾಗ ಧರ್ಮಕ್ಕೆ, ಕಾಲುಭಾಗವನ್ನು ಆಪತ್ಕಾಲಕ್ಕೆ ಕೂಡಿಡಬೇಕು. ಮಿಕ್ಕ ಕಾಲುಭಾಗವನ್ನು ತಾನು ಖರ್ಚು ಮಾಡಬೇಕು.

೫. ಒಬ್ಬ ಭಗವಂತನ ಚಿಂತನೆಗೆಂದು ಪ್ರಪಂಚವನ್ನು ಬಿಟ್ಟರೆ ಯಾರು ಪ್ರಪಂಚದಲ್ಲಿ ಜನರ ಮೇಲ್ಮೆಗೆ ಕೆಲಸಮಾಡುತ್ತಿರುವರೋ ಅವರು ಭಗವಂತನನ್ನು ಪೂಜೆ ಮಾಡುತ್ತಿಲ್ಲ ಎಂದು ಭಾವಿಸಬಾರದು. ಯಾರು ಮನೆ ಮಕ್ಕಳಿಗಾಗಿ ಸಂಸಾರದಲ್ಲಿ ಇರುವರೋ ಅವರು ದೇವರಿಗಾಗಿ ಮನೆ ಬಿಟ್ಟು ಹೋದವನನ್ನು ಅಯೋಗ್ಯ ಎಂತಲೂ ಭಾವಿಸಬಾರದು. ಪ್ರತಿಯೊಬ್ಬನೂ ತನ್ನ ಸ್ಥಾನದಲ್ಲಿ ದೊಡ್ಡವನು.

೬. ಪಾಶ್ಚಾತ್ಯರಲ್ಲಿ ಮದುವೆ ಎಂದರೆ ಒಂದು ಧಾರ್ಮಿಕ ಸಂಬಂಧ. ಅದನ್ನು ನ್ಯಾಯಾಲಯ ರದ್ದುಪಡಿಸಲಾರದು ಎಂದು ಭಾವಿಸುವರು. ಆದರೆ ಭರತಖಂಡ

ದಲ್ಲಾದರೋ ಸಮಾಜ ಎಂದೆಂದಿಗೂ ಎರಡು ಜೀವಿಗಳನ್ನು ಜೊತೆಮಾಡಿರುವುದು ಎಂದು ನಂಬುವರು. ಅವರಿಬ್ಬರೂ ಪ್ರತಿಜನ್ಮದಲ್ಲಿಯೂ ತಮಗಿಚ್ಛೆ ಇರಲಿ, ಇಲ್ಲದಿರಲಿ, ಒಬ್ಬರನ್ನೊಬ್ಬರು ಮದುವೆ ಆಗಲೇಬೇಕು. ಪ್ರತಿಯೊಬ್ಬರೂ ಇನ್ನೊಬ್ಬರು ಮಾಡಿದ ಪುಣ್ಯಕ್ಕೆ ಭಾಗಿಗಳು. ಇಬ್ಬರಲ್ಲಿ ಯಾರಾದರೊಬ್ಬರು ಹಿಂದೆ ಬಿದ್ದರೆ ಅವರು ಹಿಂತಿರುಗಿ ಬರುವತನಕ ಇನ್ನೊಬ್ಬರು ಅವರಿಗಾಗಿ ಕಾಯಬೇಕು.

೭. ಪಾತಿವ್ರತ್ಯ (ಅಥವಾ ಸತೀವ್ರತವೇ) ಪ್ರತಿಯೊಬ್ಬ ಸ್ತ್ರೀಪುರುಷರ ಶ್ರೇಷ್ಠ ಗುಣ. ಗಂಡಸು ಎಷ್ಟೇ ಪೋಲಿಯಾಗಿ ಹೋಗಿದ್ದರೂ ಪತಿವ್ರತೆಯಾದ ಪ್ರೀತಿಯಿಂದ ಕೂಡಿದ ಸತಿಯ ಸದ್ವರ್ತನೆಯಿಂದ ಒಳ್ಳೆಯ ದಾರಿಗೆ ಬರದೆ ಇರುವುದಕ್ಕೆ ಆಗುವುದೇ ಇಲ್ಲ. ಇದು ಬಹಳ ಅಪರೂಪ. ಪ್ರಪಂಚ ಇನ್ನೂ ಅಷ್ಟು ಕೆಟ್ಟುಹೋಗಿಲ್ಲ. ಕಟುಕರಾದ ಗಂಡಂದಿರು, ಅಯೋಗ್ಯರಾದ ಗಂಡಂದಿರು ಇವರ ವಿಷಯವನ್ನು ಪ್ರಪಂಚದಲ್ಲಿ ಕೇಳಿರುವೆವು. ಆದರೆ ಅಷ್ಟೇ ಕ್ರೂರಿಗಳೂ, ಅಯೋಗ್ಯರೂ ಆದ ಸ್ತ್ರೀಯರು ಪ್ರಪಂಚದಲ್ಲಿ ಇಲ್ಲವೆ ? ಪ್ರತಿಯೊಬ್ಬ ಸ್ತ್ರೀಯೂ ತಾನು ಹೆಮ್ಮೆ ಕೊಚ್ಚಿಕೊಳ್ಳುವಂತೆ ಸದಾಚಾರಶೀಲಳೂ ಯೋಗ್ಯಳೂ ಆಗಿದ್ದರೆ ಪ್ರಪಂಚದಲ್ಲಿ ಒಬ್ಬ ಅಯೋಗ್ಯ ಗಂಡಸೂ ಇರುತ್ತಿರಲಿಲ್ಲ. ಪಾತಿವ್ರತ್ಯ ಮತ್ತು ಸತ್‌ಶೀಲ ಯಾವ ಕ್ರೂರಿಯನ್ನು ತಾನೆ ಪಳಗಿಸಲಾರದು ? ತನ್ನ ಗಂಡನ ವಿನಃ ಪ್ರತಿಯೊಬ್ಬ ಅನ್ಯಪುರುಷನನ್ನೂ ತನ್ನ ಮಗುವಿನ ಸಮಾನ ಎಂದು ಭಾವಿಸುವ ಸ್ತ್ರೀಯ ಸಾನ್ನಿಧ್ಯದಲ್ಲಿ ಎಂತಹ ಪಾಪಿಯಾದರೂ ಪವಿತ್ರ ಭಾವನೆಗಳನ್ನು ಅವಳ ಸಮೀಪದಲ್ಲಿ ಕಾಣುವನು. ಇದರಂತೆಯೇ ಪ್ರತಿಯೊಬ್ಬ ಪುರುಷನೂ ತನ್ನ ಸತಿಯಲ್ಲದ ಇತರ ಸ್ತ್ರೀಯರನ್ನೆಲ್ಲಾ ತಾಯಿ, ಮಗಳು, ತಂಗಿಗೆ ಸಮಾನ ಎಂದು ಭಾವಿಸಬೇಕು. ಧಾರ್ಮಿಕ ಕ್ಷೇತ್ರದಲ್ಲಿ ಗುರು ಪಾತ್ರವನ್ನು ಯಾರು ವಹಿಸಬೇಕಾಗಿರುವುದೋ ಅವನು ಎಲ್ಲಾ ಸ್ತ್ರೀಯರನ್ನು ಸದಾ ತಾಯಿಯಂತೆ ಭಾವಿಸಬೇಕು.

೮. ಗೃಹಸ್ಥನು ಸಮಾಜ ಮತ್ತು ಜೀವನಕ್ಕೆ ಕೇಂದ್ರ. ಐಶ್ವರ್ಯವನ್ನು ಧಾರ್ಮಿಕವಾಗಿ ಸಂಪಾದಿಸಿ ಅದನ್ನು ಸದ್ವಿನಿಯೋಗ ಮಾಡುವುದು ಪೂಜೆಗೆ ಸಮ. ಒಳ್ಳೆಯ ಮಾರ್ಗದಿಂದ ಒಳ್ಳೆಯದಕ್ಕಾಗಿ ಹಣವನ್ನು ಸಂಪಾದಿಸಿದರೆ ಸಂನ್ಯಾಸಿ ತನ್ನ ಗುಹೆಯಲ್ಲಿ ಮುಕ್ತಿಗಾಗಿ ಪ್ರಾರ್ಥಿಸುವಂತೆಯೇ ಇವನೂ ಮುಕ್ತಿಯನ್ನು ಪಡೆಯುವನು. ಅವರಿಬ್ಬರಲ್ಲಿಯೂ ಶರಣಾಗತಿ ಮತ್ತು ತ್ಯಾಗ, ದೇವರಿಗೆ ಮತ್ತು ಆತನ ಮಕ್ಕಳಿಗೆ ಭಿನ್ನಭಿನ್ನವಾಗಿ ವ್ಯಕ್ತವಾಗುತ್ತಿರುವುದು.

೯. ನೀವು ನಿಮ್ಮ ಮಕ್ಕಳಿಗೆ ಏನಾದರೂ ಕೊಟ್ಟರೆ ಅದಕ್ಕೆ ಪ್ರತಿಯಾಗಿ

ಮತ್ತೇನನ್ನಾದರೂ ಆಶಿಸುವಿರೇನು ? ಅವರಿಗಾಗಿ ಕೆಲಸ ಮಾಡುವುದು ನಿಮ್ಮ ಕರ್ತವ್ಯ, ಅಲ್ಲಿಗೇ ಅದು ಕೊನೆಗಾಣುವುದು. ನೀವು ಜನರಿಗೆ, ಊರಿಗೆ, ದೇಶಕ್ಕೆ ಏನು ಮಾಡಿದರೂ ಈ ದೃಷ್ಟಿಯಿಂದ ನೋಡಿ. ಹಿಂದಿರುಗಿ ಏನನ್ನೂ ನಿರೀಕ್ಷಿಸ ಬೇಡಿ. ನೀವು ಯಾವಾಗಲೂ ಕೊಡುವವನ ಪಾತ್ರದಲ್ಲಿದ್ದರೆ, ನೀವು ಕೊಡುವು ದೆಲ್ಲಾ ಫಲಾಪೇಕ್ಷೆ ಇಲ್ಲದೆ ಇದ್ದರೆ, ಆಗಲೇ ನಿಮ್ಮ ಕೆಲಸದಿಂದ ಯಾವ ಬಂಧ ನವೂ ಬರುವುದಿಲ್ಲ.

೧೦. ನನ್ನ ಗುರುದೇವರು ದಾದಿ ತನ್ನ ಯಜಮಾನನ ಮಗುವನ್ನು ನೋಡುವಂತೆ ಮಕ್ಕಳನ್ನು ನೋಡಿ ಎನ್ನುತ್ತಿದ್ದರು. ದಾದಿ ಯಜಮಾನನ ಮಗು ವನ್ನು ಮುದ್ದಿಡುವಳು, ಅದರೊಂದಿಗೆ ಆಟವಾಡುವಳು, ತನ್ನ ಮಗುವಿನಂತೆಯೇ ಅದರೊಂದಿಗೆ ಮೃದುವಾಗಿ ವರ್ತಿಸುವಳು. ಆದರೆ ನಮ್ಮ ಮನೆಯನ್ನು ಬಿಟ್ಟು ಹೋಗು ಎಂದು ಹೇಳಿದೊಡನೆಯೇ ಅವಳು ಗಂಟುಮೂಟೆ ಕಟ್ಟಿಕೊಂಡು ಹೊರಟುಹೋಗಲು ಸಿದ್ಧಳಾಗುವಳು. ಅದರಂತೆಯೇ ಯಾರು ನಿಮ್ಮವರು ಎಂದು ನೀವು ಈಗ ತಿಳಿದುಕೊಂಡಿರುವಿರೋ ಅವರೊಡನೆ ನೀವು ದಾದಿಯಂತೆ ಇರಬೇಕು. ನೀವು ದೇವರನ್ನು ನಂಬಿದರೆ ಯಾವುದನ್ನು ನಿಮ್ಮದು ಎಂದು ಭಾವಿಸಿ ರುವಿರೋ ಅದೆಲ್ಲಾ ನಿಜವಾಗಿ ಅವನದು.

೧೧. ಗೃಹಸ್ಥ ತನ್ನ ವೈರಿಗಳೊಡನೆ ಧೀರನಾಗಿ ವರ್ತಿಸಬೇಕು. ಅವನು ಶತ್ರುಗಳನ್ನು ನಿಗ್ರಹಿಸಬೇಕು. ಇದು ಗೃಹಸ್ಥನ ಧರ್ಮ. ಅವನೊಂದು ಮೂಲೆ ಯಲ್ಲಿ ಕುಳಿತುಕೊಂಡು ಅಳುತ್ತಾ, ಅಹಿಂಸೆಯ ವಿಷಯವಾಗಿ ಹರಟೆ ಹೊಡೆಯ ಕೂಡದು. ವೈರಿಯೊಂದಿಗೆ ಅವನು ಶೂರನಂತೆ ವ್ಯವಹರಿಸದೆ ಇದ್ದರೆ ಅವನು ತನ್ನ ಕರ್ತವ್ಯದಲ್ಲಿ ಲೋಪಮಾಡಿದಂತೆ. ಅವನು ತನ್ನ ಸ್ನೇಹಿತರು ಮತ್ತು ನೆಂಟ ರಿಷ್ಟರೊಡನೆ ಸಾಧುವಂತೆ ಕುರಿಮರಿಯ ಹಾಗೆ ವರ್ತಿಸಬೇಕು.

೨೨ ವಿಗ್ರಹಾರಾಧನೆ

೧. ಭಗವಂತ ನಿತ್ಯ, ನಿರ್ವಿಕಾರ, ಸರ್ವವ್ಯಾಪ್ತಿ. ಅವನಿಗೆ ಯಾವುದಾದರೂ ಆಕಾರವಿದೆ ಎಂದು ಭಾವಿಸಿದರೆ ಅದು ಈಶ್ವರನಿಂದೆ. ಆದರೆ ವಿಗ್ರಹಾರಾಧನೆಯ ರಹಸ್ಯವೇ ನೀವು ಒಂದು ವಸ್ತುವಿನಲ್ಲಿ ಭಗವಂತನನ್ನು ನೋಡುವುದಕ್ಕೆ ಮನಸ್ಸನ್ನು ಅಣಿಮಾಡುವುದು.

೨. ಪ್ರಪಂಚದ ಧರ್ಮಗಳಲ್ಲಿ ಮುಖ್ಯವಾದ ವೈದಿಕ, ಬೌದ್ಧ ಮತ್ತು ಕೆಲವು ಕ್ರೈಸ್ತ ಪಂಗಡಗಳು ವಿಗ್ರಹವನ್ನು ಧಾರಾಳವಾಗಿ ಉಪಯೋಗಿಸುವರು. ಮುಹಮ್ಮದೀಯರು ಮತ್ತು ಪ್ರಾಟೆಸ್ಟೆಂಟರು ಮಾತ್ರ ಈ ಸಹಾಯವನ್ನು ವಿರೋಧಿಸುವರು. ಆದರೆ ಮುಹಮ್ಮದೀಯರು ವಿಗ್ರಹದ ಬದಲು ಅವರ ಮಹಾತ್ಮರ ಮತ್ತು ಧರ್ಮಕ್ಕಾಗಿ ಪ್ರಾಣತೆತ್ತವರ ಗೋರಿಯನ್ನು ಪೂಜಿಸುವರು. ಸ್ಥೂಲವಾದ ಆಸರೆಗಳನ್ನು ನಿರ್ಲಕ್ಷಿಸಿದ ಪ್ರಾಟೆಸ್ಟೆಂಟರಾದರೂ ಆಧ್ಯಾತ್ಮಿಕದಿಂದ ಕಾಲಕ್ರಮೇಣ ದೂರ ಸರಿಯುತ್ತಿರುವರು.

೩. ಸರ್ವವ್ಯಾಪಿಯಾದ ಭಗವಂತನನ್ನು ನಂಬಬೇಕೆಂದು ನಿಮಗೆಲ್ಲಾ ಬೋಧಿಸಿರುವರು. ಅದನ್ನು ಕುರಿತು ಯೋಚಿಸಿ ನೋಡಿ. ಸರ್ವವ್ಯಾಪಿತ್ವದ ಭಾವನೆ ನಿಮ್ಮಲ್ಲಿ ಎಷ್ಟು ಜನಕ್ಕೆ ಬರಬಹುದು. ನೀವು ತುಂಬಾ ಪ್ರಯತ್ನಪಟ್ಟರೆ ಸಾಗರವೊ, ಆಕಾಶವೋ ಅಥವಾ ದೊಡ್ಡ ಹುಲ್ಲುಗಾವಲೋ ಅಥವಾ ಒಂದು ಮರಳುಕಾಡೋ ಈ ಚಿತ್ರ ನಿಮ್ಮ ಮನಸ್ಸಿಗೆ ಹೊಳೆಯಬಹುದು. ಇವೆಲ್ಲಾ ಸ್ಥೂಲ ಚಿತ್ರಗಳು. ಸೂಕ್ಷ್ಮವನ್ನು ಸೂಕ್ಷ್ಮದಂತೆ, ಆದರ್ಶವನ್ನು ಆದರ್ಶದಂತೆ ಎಲ್ಲಿಯವರೆಗೂ ನಾವು ಭಾವಿಸಿಕೊಳ್ಳಲಾರೆವೋ ಅಲ್ಲಿಯವರೆಗೆ ಈ ಚಿತ್ರಗಳನ್ನು, ಬಾಹ್ಯ ಆಕಾರಗಳನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ಈ ವಿಗ್ರಹ ಮನಸ್ಸಿನ ಒಳಗೆ ಇದೆಯೋ ಹೊರಗೆ ಇದೆಯೋ ಅದರಿಂದ ಏನೂ ಅಷ್ಟು ವ್ಯತ್ಯಾಸವಾಗುವುದಿಲ್ಲ. ನಾವೆಲ್ಲಾ ಹುಟ್ಟು ವಿಗ್ರಹಾರಾಧಕರು. ವಿಗ್ರಹಾರಾಧನೆ ಒಳ್ಳೆಯದು. ಏಕೆಂದರೆ ಇದು ಮನುಷ್ಯನ ಸ್ವಭಾವದಲ್ಲಿದೆ. ಯಾರು ಇದನ್ನು ಮೀರಿ ಹೋಗಬಲ್ಲರು ? ಸಿದ್ಧಪುರುಷ ವಿನಃ ಉಳಿದವರೆಲ್ಲ ವಿಗ್ರಹಾರಾಧಕರೆ. ಎಲ್ಲಿಯವರೆಗೆ ನಾವು ನಾಮರೂಪಗಳಿಂದ ಕೂಡಿದ ಪ್ರಪಂಚವನ್ನು ನೋಡುತ್ತಿರುವೆವೋ ಅಲ್ಲಿಯವರೆಗೆ ನಾವು ವಿಗ್ರಹಾರಾಧಕರು. ನಾವು ಪೂಜಿಸುತ್ತಿರು

ವುದು ಒಂದು ಬೃಹತ್ ಚಿಹ್ನೆ. ಯಾರು ತಾನು ದೇಹ ಎಂದು ಭಾವಿಸುವನೊ ಅವನು ಹುಟ್ಟು ವಿಗ್ರಹಾರಾಧಕ. ನಾವೆಲ್ಲಾ ಆತ್ಮ, ನಾಮರೂಪಗಳಿಗೆ ಅತೀತ ರಾದವರು ; ಅನಂತಾತ್ಮರು ನಾವು, ಪಂಚಭೌತಿಕ ವಸ್ತುವಲ್ಲ. ಯಾರು ಸೂಕ್ಷ್ಮ ವನ್ನು ಗ್ರಹಿಸಲಾರನೊ, ತನ್ನ ನೈಜಸ್ಥಿತಿಗನುಸಾರ ಯೋಚಿಸಲಾರನೋ ಕೇವಲ ದ್ರವ್ಯದ ಮೂಲಕ ತಾನು ದೇಹ ಎಂದು ಭಾವಿಸುವನೋ ಅವನು ವಿಗ್ರಹಾ ರಾಧಕ. ಆದರೂ ಜನ ಹೇಗೆ ಮತ್ತೊಬ್ಬರನ್ನು ವಿಗ್ರಹಾರಾಧಕರು ಎಂದು ಟೀಕಿ ಸುತ್ತಾ ಕಾದಾಡುತ್ತಿರುವರು! ಅದನ್ನು ಬೇರೆ ರೀತಿ ಹೇಳುವುದಾದರೆ ನನ್ನ ವಿಗ್ರ ಹವೇ ಸರಿಯಾದ ವಿಗ್ರಹ, ಉಳಿದವರದಲ್ಲ ಎನ್ನುವಂತೆ.

೪. ಎರಡು ಬಗೆಯ ಮನುಷ್ಯರಿಗೆ ಎಂದಿಗೂ ವಿಗ್ರಹ ಬೇಕಿಲ್ಲ. ಯಾವ ಧರ್ಮವನ್ನೂ ಆಲೋಚಿಸಲಾರದ ಮಾನವ ಮೃಗ ಮತ್ತು ಇವುಗಳನ್ನೆಲ್ಲಾ ದಾಟಿ ಪೂರ್ಣತೆಯನ್ನು ಮುಟ್ಟಿದ ಮುಕ್ತಾತ್ಮ ಇವರಿಗೆ ವಿಗ್ರಹ ಬೇಕಿಲ್ಲ. ಇವರಿಬ್ಬರಿಗೆ ಮಧ್ಯೆ ಇರುವ ನಮಗೆಲ್ಲಾ ಒಳಗೊ ಹೊರಗೊ ಯಾವುದಾದರೂ ವಿಗ್ರಹ ಆವಶ್ಯಕ.

೫. ಸುಮ್ಮನೆ ವ್ಯಕ್ತಿಗೆ ಅಂಟಿಕೊಂಡು ಇರಬೇಡ ಎಂದು ಹೇಳುವುದು ಸುಲಭ. ಆದರೆ ಯಾರು ಹೀಗೆ ಹೇಳುವರೋ ಅವರೇ ಇತರರಿಗಿಂತ ಹೆಚ್ಚು ವ್ಯಕ್ತಿಗೆ ಅಂಟಿಕೊಂಡಿರುವರು. ಅಂತಹವನಿಗೆ ಕೆಲವು ಸ್ತ್ರೀಪುರುಷರ ಮೇಲೆ ತುಂಬಾ ಆಸಕ್ತಿ. ಅವರು ಸತ್ತ ಮೇಲೆಯೂ ಇವರಿಂದ ಆಸಕ್ತಿ ಹೋಗುವುದಿಲ್ಲ. ಮರಣದಾಚೆಯೂ ಇವನು ಅವರನ್ನು ಅನುಸರಿಸಲೆತ್ನಿಸುವನು. ಅದೇ ವಿಗ್ರಹಾ ರಾಧನೆಗೆ ಮೂಲಬೀಜ, ಕಾರಣ ಅಲ್ಲಿರುವಾಗ ಅದು ಯಾವುದಾದರೂ ರೀತಿ ಯಲ್ಲಿ ವ್ಯಕ್ತವಾಗಲೇಬೇಕು. ಸಾಧಾರಣ ಸ್ತ್ರೀಪುರುಷರ ಮೇಲೆ ಆಸಕ್ತರಾಗುವುದ ಕ್ಕಿಂತ ಕ್ರಿಸ್ತ ಅಥವಾ ಬುದ್ಧನ ವಿಗ್ರಹಕ್ಕೆ ಆಸಕ್ತರಾಗುವುದು ಮೇಲಲ್ಲವೆ ?

೬. ವಿಗ್ರಹಾರಾಧನೆ ತಪ್ಪು ಎಂದು ಅನೇಕ ಜನ ಹೇಳುತ್ತಾರೆ. ಈಗಿನ ಕಾಲದಲ್ಲಿ ಎಲ್ಲರೂ ಅದನ್ನು ಪ್ರಶ್ನಿಸದೆ ಒಪ್ಪಿಕೊಳ್ಳುವರು. ನಾನೂ ಹಿಂದೆ ಹಾಗೆ ಆಲೋಚಿಸಿದ್ದೆ.ಅದಕ್ಕೆ ಪ್ರಾಯಶ್ಚಿತ್ತರೂಪವಾಗಿ ಎಲ್ಲವನ್ನೂ ವಿಗ್ರಹದ ಮೂಲಕ ಪಡೆದವರ ಪದತಲದಲ್ಲಿ ಕುಳಿತು ನಾನು ಬುದ್ಧಿ ಕಲಿಯಬೇಕಾಯಿತು. ಅವರೇ ಶ್ರೀರಾಮಕೃಷ್ಣ ಪರಮಹಂಸರು. ವಿಗ್ರಹಾರಾಧನೆಯ ಮೂಲಕ ನೀವು ಶ್ರೀರಾಮ ಕೃಷ್ಣಪರಮಹಂಸರಂತಹ ಒಬ್ಬ ವ್ಯಕ್ತಿಯನ್ನು ತರಬೇತು ಮಾಡುವ ಹಾಗಿದ್ದರೆ ಇನ್ನೂ ಸಾವಿರಾರು ವಿಗ್ರಹಗಳನ್ನು ತೆಗೆದುಕೊಳ್ಳಿ. ದೇವರು ನಿಮ್ಮನ್ನು ಆಶೀರ್ವದಿಸಲಿ.

೭. ಕ್ರೈಸ್ತರು, ದೇವರು ಪಾರಿವಾಳದಂತೆ ಬಂದಾಗ ಅದು ಸರಿ, ಅವನೇನಾದರೂ ಹಿಂದೂಗಳು ಹೇಳುವಂತೆ ಮೀನಾಗಿ ಬಂದರೆ ಅದು ತಪ್ಪು, ಅದು ಮೂಢನಂಬಿಕೆ ಎನ್ನುವರು. ಜ್ಯೂಗಳು, ದೇವರಿಗಾಗಿ ಒಂದು ಮಂದಾಸನ ಮಾಡಿ ಅಲ್ಲಿ ಇಬ್ಬರು ದೇವದೂತರು, ಅವರ ಮಧ್ಯದಲ್ಲಿ ಒಂದು ಪುಸ್ತಕ ಇದ್ದರೆ ಅದು ಸರಿ ಎನ್ನುವರು. ಆದರೆ ಅವನೇನಾದರೂ ಗಂಡಸಿನಂತೆಯೋ ಹೆಂಗಸಿನಂತೆಯೋ ಬಂದರೆ ಅದೊಂದು ಅನಿಷ್ಟ ಎಂದು ಭಾವಿಸುವರು. ಮಹಮ್ಮದೀಯರು, ತಾವು ಪ್ರಾರ್ಥಿಸುವಾಗ ಪಶ್ಚಿಮದ ಕಡೆ ತಿರುಗಿ ಕಾಬಾ ಮತ್ತು ಅಲ್ಲಿರುವ ಕಪ್ಪು ಕಲ್ಲು ಇವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡರೆ ಅದು ಸರಿ ಎನ್ನುವರು. ಆದರೆ ಚರ್ಚಿನಂತೆ ನೀವೇನಾದರೂ ಕಲ್ಪಿಸಿಕೊಂಡರೆ ಅದು ವಿಗ್ರಹಾರಾಧನೆ ಎನ್ನುವರು. ಇದೇ ವಿಗ್ರಹಾರಾಧನೆಯ ದೋಷ.

೮. ನಾವು ಯಾವ ವಸ್ತುವನ್ನಾಗಲಿ ಆದರಲ್ಲಿ ದೇವರನ್ನು ಕಂಡು ಪೂಜಿಸಬಹುದು. ಅಲ್ಲಿ ಆ ವಸ್ತುವನ್ನು ಮರೆತು ದೇವರನ್ನು ಕಂಡರೆ ಸರಿ. ದೇವರಿಗೇ ನಾವು ಯಾವ ಆಕಾರವನ್ನೂ ಆರೋಪಿಸಬಾರದು. ಆದರೆ ಯಾವ ವಿಗ್ರಹದ ಪಾತ್ರೆಯಲ್ಲಿ ಬೇಕಾದರೂ ದೇವರ ಚೈತನ್ಯವನ್ನು ತುಂಬಬಹುದು. ವಿಗ್ರಹವನ್ನು ಮರೆತು ಅವನನ್ನು ಮಾತ್ರ ಧ್ಯಾನಿಸಿದರೆ ಸರಿ. ಅವನಿಂದ ಇವೆಲ್ಲ ಬರುವುದು. ಅವನೇ ಎಲ್ಲವೂ ಆಗಿರುವನು. ಒಂದು ಚಿತ್ರದಲ್ಲಿ ದೇವರನ್ನು ಪೂಜಿಸಬಹುದು, ಆದರೆ ಆ ಚಿತ್ರವನ್ನೇ ದೇವರು ಎಂದು ಭಾವಿಸಬಾರದು. ಚಿತ್ರದಲ್ಲಿ ದೇವರು ಸರಿ, ಆದರೆ ಚಿತ್ರವೇ ದೇವರು ಎನ್ನುವುದು ತಪ್ಪು. ವಿಗ್ರಹದಲ್ಲಿ ದೇವರು ; ಈ ಭಾವಕ್ಕೆ ಯಾವ ದೋಷವೂ ಇಲ್ಲ. ಇಲ್ಲಿ ಯಾವ ದೋಷವೂ ಇಲ್ಲ. ಇಲ್ಲಿ ಯಾವ ಅಪಾಯವೂ ಇಲ್ಲ. ಇದೇ ನಿಜವಾದ ದೇವರ ಪೂಜೆ.

೯. ಬಾಹ್ಯಪೂಜೆ, ವಿಗ್ರಹಾರಾಧನೆ ಇದು ತುಂಬಾ ಕೆಳಗಿನ ಮೆಟ್ಟಿಲು ಎಂದು ವೇದ ಹೇಳುವುದು. ಇದಕ್ಕಿಂತ ಸ್ವಲ್ಪ ಮುಂದುವರಿದರೆ ಮಾನಸಿಕ ಪೂಜೆ ಬರುವುದು. ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಂಡಾಗ ಮಾತ್ರ ಪರಾಪೂಜೆ ಸಾಧ್ಯ. ವಿಗ್ರಹದೆದುರು ಭಕ್ತಿಯಿಂದ ಬಾಗಿರುವ ಭಕ್ತ ಹೇಳುವುದನ್ನು ಗಮನಿಸಿ: "ಅವನನ್ನು ಸೂರ್ಯ ಬೆಳಗಲಾರ, ಚಂದ್ರ ಬೆಳಗಲಾರ, ತಾರಾವಳಿಗಳು ಬೆಳಗಲಾರವು. ಅಥವಾ ಅಗ್ನಿ ಕೂಡ ಅವನನ್ನು ಬೆಳಗಲಾರದು. ಅವನಿಂದ ಇವುಗಳಿಗೆಲ್ಲ ಬೆಳಕು ಬರುವುದು." ಆದರೆ ಅವನು ಇತರರ ವಿಗ್ರಹಗಳನ್ನು ದೂರುವುದಿಲ್ಲ. ಅವರನ್ನು ಪೂಜಿಸುವುದು ಪಾಪ ಎನ್ನುವುದಿಲ್ಲ. ಇದು ಮಾನವನ ವಿಕಾಸದಲ್ಲಿ ಒಂದು ಹಂತ ಎಂಬುದನ್ನು ಅವನು ಅರಿತಿರುವನು. "ಮಗು ಮಾನವನ

ತಂದೆ." ವೃದ್ಧ ಬಾಲ್ಯ ಅಥವಾ ಯೌವನ ಪಾಪ ಎಂದು ಹೇಳುವುದು ಧರ್ಮವೆ?

೧೧. ಪ್ರಕೃತಿಯ ನಿಯಮವೇ ವೈವಿಧ್ಯತೆಯಲ್ಲಿ ಐಕ್ಯತೆ. ಹಿಂದೂ ಇದನ್ನು ಮನಗಂಡಿರುವನು. ಇತರ ಧರ್ಮಗಳೆಲ್ಲ ಕೆಲವು ಮಿತವಾದ ನಂಬಿಕೆಗಳನ್ನು ಇಟ್ಟು ಇದನ್ನು ಸ್ವೀಕರಿಸಬೇಕೆಂದು ಬಲಾತ್ಕರಿಸುವುವು. ಸಮಾಜದ ಮುಂದೆ ಒಂದು ಸೈಜಿನ ಕೋಟನ್ನು ಇಟ್ಟು ಅದೇ ಎಲ್ಲರಿಗೂ ಆಗಬೇಕು ಎನ್ನುವುವು. ಇದು ಯಾರಿಗಾದರೂ ಸರಿಹೋಗದೆ ಇದ್ದರೆ ಅವರು ತೊಡುವುದಕ್ಕೆ ಕೋಟಿಲ್ಲದೆ ಹೋಗಬೇಕು. ಹಿಂದೂಗಳು ನಿರಪೇಕ್ಷವನ್ನು ಸಾಪೇಕ್ಷದ ಮೂಲಕ ಮಾತ್ರ ವಿವರಿಸಲು ಸಾಧ್ಯ ಎಂಬುದನ್ನು ಅರಿತಿರುವರು. ವಿಗ್ರಹ, ಕ್ರಾಸ್, ಅರ್ಧಚಂದ್ರ ಮುಂತಾದುವು ಬರೀ ಚಿಹ್ನೆಗಳು, ಆಧ್ಯಾತ್ಮಿಕ ಭಾವನೆಯನ್ನು ನೇತುಹಾಕಲು ಇರುವ ಗೂಟಗಳು ಮಾತ್ರ. ಇದು ಪ್ರತಿಯೊಬ್ಬರಿಗೂ ಆವಶ್ಯಕ ಎಂದಲ್ಲ, ಆದರೆ ಯಾರಿಗೆ ಇದು ಬೇಡವೊ ಅವರಿಗೆ ಇದು ತಪ್ಪು ಎಂದು ಹೇಳಲು ಅಧಿಕಾರವಿಲ್ಲ. ಹಿಂದೂಧರ್ಮದಲ್ಲಿ ಇದೇನೂ ಎಲ್ಲರಿಗೂ ಆವಶ್ಯಕವಲ್ಲ.

೧೧. ಭರತಖಂಡದಲ್ಲಿ ವಿಗ್ರಹಾರಾಧನೆ ಏನೂ ಒಂದು ಘೋರಪಾಪವಲ್ಲ. ಅದೇನು ವ್ಯಭಿಚಾರಕ್ಕೆ ಮೂಲವಲ್ಲ. ಇನ್ನೂ ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯದೆ ಇರುವವರು ಪರಮಾರ್ಥವನ್ನು ಅರ್ಥಮಾಡಿಕೊಳ್ಳುವುದಕ್ಕೆ ಮಾಡಿದ ಪ್ರಯತ್ನಗಳು ಇವು. ಹಿಂದೂಗಳಲ್ಲಿ ದೋಷವೂ ಇದೆ. ವಿನಾಯಿತಿಯೂ ಇದೆ. ಆದರೆ ಇವರು ಯಾವಾಗಲೂ ತಾವೇ ದೇಹವನ್ನು ದಂಡಿಸಿಕೊಳ್ಳುವರೇ ಹೊರತು ಇತರರನ್ನು ನಾಶಮಾಡುವುದಿಲ್ಲ. ಹಿಂದೂಗಳು ತಮ್ಮನ್ನು ಸುಟ್ಟುಕೊಳ್ಳುವುದಕ್ಕೆ ತಾವೇ ಬೆಂಕಿ ಇಟ್ಟುಕೊಳ್ಳಬಹುದು. ಆದರೆ ಎಂದಿಗೂ ಅನ್ಯ ಧರ್ಮದವರನ್ನು ಸುಡುವುದಕ್ಕೆ ಬೆಂಕಿ ಇಡುವುದಿಲ್ಲ. ಅನ್ಯಧರ್ಮದವರ ವಿಷಯದಲ್ಲಿ ಇದನ್ನೂ ಹೇಳಲಾಗುವುದಿಲ್ಲ. ತಮ್ಮ ಧರ್ಮದವರನ್ನೇ ಮಾಟಗಾತಿಯರೆಂದು ಸುಟ್ಟ ಪಾಪದ ಪ್ರಸಂಗಕ್ಕೆ ಕ್ರೈಸ್ತಧರ್ಮ ಗುರಿಯಾಗಿದೆ.

೧೨. ಮೂಢ ನಂಬಿಕೆ ಮಾನವನ ದೊಡ್ಡ ಶತ್ರು. ಆದರೆ ಅನ್ಯಮತ ಅಸಹಿಷ್ಣುತೆ ಅದಕ್ಕಿಂತಲೂ ಘೋರವಾದುದು. ಕ್ರೈಸ್ತರು ಚರ್ಚಿಗೆ ಯಾತಕ್ಕೆ ಹೋಗುವರು ? ಕ್ರಾಸ್ ಏತಕ್ಕೆ ಪವಿತ್ರ? ಪ್ರಾರ್ಥಿಸುವಾಗ ಮುಖವನ್ನು ಏತಕ್ಕೆ ಆಕಾಶದ ಕಡೆ ತಿರುಗಿಸುವರು ? ಕ್ಯಾಥೋಲಿಕ್ ಚರ್ಚುಗಳಲ್ಲಿ ಏತಕ್ಕೆ ಇಷ್ಟೊಂದು ವಿಗ್ರಹಗಳಿವೆ ? ಪ್ರಾಟೆಸ್ಟೆಂಟರು ಪ್ರಾರ್ಥಿಸುವಾಗ ಏತಕ್ಕೆ ಅವರ ಮನಸ್ಸಿನಲ್ಲಿ ಅಷ್ಟೊಂದು ಚಿತ್ರಗಳು ಇವೆ ? ನನ್ನ ಸಹೋದರರೆ, ನಾವು ಉಸಿರಾಡದೆ ಹೇಗೆ ಬದುಕಿರಲಾರೆವೊ ಹಾಗೆಯೆ ಚಿತ್ರವಿಲ್ಲದೆ ನಾವು ಯೋಚಿಸಲಾರೆವು. ಪರಸ್ಪರ

ಸಂಬಂಧದ ನಿಯಮದ ಪ್ರಕಾರ ಭೌತಿಕಚಿತ್ರಗಳು ಮಾನಸಿಕ ಭಾವನೆಯನ್ನು ಮನಸ್ಸಿನಲ್ಲಿ ಮೂಡುವಂತೆ ಮಾಡುವುವು. ಹಾಗೆಯೆ ಮಾನಸಿಕ ಭಾವನೆಗಳು ಭೌತಿಕ ಚಿತ್ರವನ್ನು ಎದುರಿಗೆ ತರುವುವು. ಅದಕ್ಕಾಗಿಯೇ, ಹಿಂದೂ ಪ್ರಾರ್ಥಿಸು ವಾಗ ಬಾಹ್ಯವಿಗ್ರಹವನ್ನು ಉಪಯೋಗಿಸುವುದು. ಇದರಿಂದ ಪ್ರಾರ್ಥಿಸುವಾಗ ಮನಸ್ಸು ಭಗವಂತನ ಮೇಲೆ ಏಕಾಗ್ರವಾಗುವುದು ಎನ್ನುವನು ಅವನು. ನಿನ್ನಂತೆಯೇ ಅವನಿಗೂ ಗೊತ್ತು ವಿಗ್ರಹವೇ ದೇವರಲ್ಲ, ವಿಗ್ರಹ ಸರ್ವಾಂತ ರ್ಯಾಮಿಯಲ್ಲ ಎಂಬುದು. ಸರ್ವಾಂತರ್ಯಾಮಿ ಎಂದರೆ ಪ್ರಪಂಚದಲ್ಲೆಲ್ಲಾ ಎಷ್ಟು ಜನಕ್ಕೆ ಅದರ ಅರ್ಥ ಗೊತ್ತು ? ಇದು ಬರೀ ಒಂದು ಪದ, ಒಂದು ಚಿಹ್ನೆ ಅಷ್ಟೇ. ದೇವರು ಎಲ್ಲೋ ಒಂದು ಕಡೆ ಇರುವನೆ ? ಇಲ್ಲ. ಆದರೂ ನಾವು ಸರ್ವಾಂತರ್ಯಾಮಿ ಎಂಬುದನ್ನು ಉಚ್ಚರಿಸಿದಾಗ ಆಕಾಶವನ್ನೋ ದೇಶವನ್ನೊ ಭಾವಿಸುವೆವು ಅಷ್ಟೆ.

೧೩. ಮಾನವ ದೇವರನ್ನು ಅರಿತು ದೇವನಾಗಬೇಕಾಗಿದೆ. ಆಧ್ಯಾತ್ಮಿಕ ಶೈಶವಾವಸ್ಥೆಯಲ್ಲಿರುವಾಗ ವಿಗ್ರಹ, ದೇವಸ್ಥಾನ, ಚರ್ಚು, ಗ್ರಂಥಗಳು ಮುಂತಾದವು ಅವನಿಗೆ ಸಹಾಯ ಮಾಡುವುವು. ಆದರೆ ಅವನು ಅಲ್ಲೇ ನಿಲ್ಲ ಕೂಡದು, ಮುಂದೆ ಮುಂದೆ ಹೋಗುತ್ತಿರಬೇಕು.

೧೪. ಆದಕಾರಣವೇ ನಾವು ಬಾಲಭಾವನೆಗಳಿಂದ ಪಾರಾಗಬೇಕು. ಧರ್ಮ ಎಂದರೆ ದೊಡ್ಡ ದೊಡ್ಡ ಪದಗಳನ್ನು ಉಪಯೋಗಿಸಿ ಮಾತನಾಡುವುದಲ್ಲ, ಕೇವಲ ಸಿದ್ಧಾಂತವಲ್ಲ. ಧರ್ಮವೆಂದರೆ ಏನನ್ನೋ ಒಪ್ಪಿಕೊಳ್ಳುವುದು ಅಥವಾ ಬಿಡುವುದಲ್ಲ, ತಮ್ಮ ಪುರೋಹಿತರು ಹೇಳುವ ಕೆಲವನ್ನು ನಂಬುವುದಲ್ಲ. ತಮ್ಮ ಮುತ್ತಾತಂದಿರು ಏನನ್ನು ನಂಬಿದ್ದರೋ ಅದೇ ಧರ್ಮ, ತಮ್ಮ ದೇಶ ಇದುವರೆಗೆ ನಂಬಿಕೊಂಡಿರುವ ಕೆಲವು ಮೂಢ ನಂಬಿಕೆ, ಆಚಾರ ವ್ಯವಹಾರ ಇವನ್ನು ಒಪ್ಪಿಕೊಳ್ಳುವುದು ಧರ್ಮ—ಇವೇ ಮುಂತಾದ ಭಾವನೆಗಳಿಂದ ಪಾರಾಗ ಬೇಕು. ನಾವು ಇವುಗಳಿಂದೆಲ್ಲಾ ಪಾರಾಗಿ, ಮಾನವಕೋಟಿ ಪೂರ್ಣತೆ ಎಡೆಗೆ ಬರುತ್ತಿದೆ ಎಂದು ಭಾವಿಸಬೇಕು. ಇದೊಂದು ಅದ್ಭುತವಾದ ಮರ. ಸತ್ಯವೆಂಬ ಅಮೋಘವಾದ ಫಲವನ್ನು ಬಿಡಲು ಅಣಿಯಾಗುತ್ತಿದೆ. ಇದರ ಪ್ರಾರಂಭ ದೆಸೆಯೆ ಸ್ಥೂಲ ವಿಗ್ರಹಗಳು, ಬಾಹ್ಯಾಚಾರಗಳು.

೨೩ ಅವತಾರ

೧, ಇತರ ಗುರುಗಳಿಗಿಂತ ಉತ್ತಮವಾದ ಶ್ರೇಷ್ಠತರಗತಿಯದೆ ಪ್ರಪಂಚ ದಲ್ಲಿರುವ ಭಗವಂತನ ಅವತಾರ. ಅವರು ಆಧ್ಯಾತ್ಮಿಕತೆಯನ್ನು ಕೇವಲ ಸ್ಪರ್ಶ ಮತ್ತು ದೃಷ್ಟಿಯಿಂದ ಇತರರಿಗೆ ನೀಡಬಲ್ಲರು. ಒಂದು ಕ್ಷಣದಲ್ಲಿ ಅವರ ಇಚ್ಛಾಮಾತ್ರದಿಂದ ಅಧಮಾಧಮರು, ಮಹಾಪಾಪಿಗಳು ಕೂಡ ಮಹಾತ್ಮರಾಗ ಬಲ್ಲರು. ಅವರೇ ಗುರುಗಳ ಗುರುಗಳು, ಮಾನವನ ಮೂಲಕ ವ್ಯಕ್ತವಾಗುವ ಭಗ ವಂತನ ಶ್ರೇಷ್ಠ ಅವತಾರ. ಅದರ ಮೂಲಕ ಅಲ್ಲದೆ ನಾವು ದೇವರನ್ನು–ಬೇರೆ ನೋಡಲಾರೆವು. ನಾವು ಅವರನ್ನು ಪೂಜೆ ಮಾಡದೆ ವಿಧಿಯಿಲ್ಲ. ನಿಜವಾಗಿ ನಾವು ಪೂಜಿಸಬೇಕಾದ ವ್ಯಕ್ತಿಗಳು ಇಂತಹವರು ಮಾತ್ರ.

೨. ದೇವರಿಗೆ ಮಾನವನ ದೌರ್ಬಲ್ಯ ಗೊತ್ತಿದೆ. ಅದಕ್ಕಾಗಿ ಮಾನವನ ಸಹಾಯಕ್ಕೆ ಪ್ರಪಂಚಕ್ಕೆ ಬರುವನು. "ಯಾವಾಗ ಅಧರ್ಮ ಜಾಸ್ತಿಯಾಗು ವುದೋ ಧರ್ಮಗ್ಲಾನಿಯಾಗುವುದೋ ಆಗ ನಾನು ಅವತಾರಮಾಡುತ್ತೇನೆ, ಧರ್ಮಸಂಸ್ಥಾಪನೆಗೆ. ದುಷ್ಟನಿಗ್ರಹ ಶಿಷ್ಟಪರಿಪಾಲನೆಗಾಗಿ ನಾನು ಯುಗ ಯುಗ ದಲ್ಲಿ ಅವತಾರವೆತ್ತುತ್ತೇನೆ." "ಮಾನವಾಕೃತಿಯನ್ನು ಧರಿಸಿದ ನನ್ನನ್ನು ಮೂಢರು ನೋಡಿ ಹಾಸ್ಯಮಾಡುವರು. ನಾನು ಸರ್ವೇಶ್ವರ ಎಂಬುದು ಅವರಿಗೆ ಗೊತ್ತಿಲ್ಲ–" ಶ್ರೀ ಕೃಷ್ಣ ಗೀತೆಯಲ್ಲಿ ಅವತಾರದಬಗ್ಗೆ ಹೀಗೆ ಹೇಳುವನು. ಒಂದು ದೊಡ್ಡ ಅಲೆ ಬಂದಾಗ ಹತ್ತಿರಿದ್ದ ಸಣ್ಣ ಹಳ್ಳಕೊಳ್ಳಗಳೆಲ್ಲಾ ತಾವಿಚ್ಛಿಸದೇ ಇದ್ದರೂ ತುಂಬಿ ತುಳುಕಾಡುವುವು. ಹಾಗೆಯೇ ಒಂದು ಅವತಾರ ಧರೆಗಿಳಿದಾಗ ಜನರಿಗೆ ವಾತವರಣದಲ್ಲೆಲ್ಲಾ ಭಗವದ್ ಭಾವನೆ ತುಂಬಿ ತುಳುಕಾಡುತ್ತಿರುವುದು ವ್ಯಕ್ತ ವಾಗುವುದು ಎಂದು ಶ್ರೀರಾಮಕೃಷ್ಣರು ಹೇಳುವರು.

೩. ಘಟನೆಗಳೆಂಬ ಮಹಾಪ್ರವಾಹದ ಮೇಲೆ ತೇಲುತ್ತಿರುವ ಸಣ್ಣ ಅಲೆ ಗಳಂತೆ ಅಲ್ಲದೆ ಮತ್ತೇನು ನಾವು ? ಯಾವಾಗಲೂ ಮುಂದು ಮುಂದಕ್ಕೆ ನೂಕ ಲ್ಪಡುತ್ತಿರುವೆವು. ವಿಶ್ರಾಂತಿ ಎಂಬುದಕ್ಕೆ ನಮಗೆ ಅವಕಾಶವಿಲ್ಲ. ನೀವು ನಾವುಗ ಳೆಲ್ಲಾ ಸಣ್ಣ ಗುಳ್ಳೆಗಳಂತೆ. ಪ್ರಪಂಚದ ವ್ಯಾಪಾರದಲ್ಲಿ ಯಾವಾಗಲೂ ಕೆಲವು ಅದ್ಭುತ ಅಲೆಗಳು ಇರುವುವು. ನನ್ನಲ್ಲಿ ಮತ್ತು ನಿಮ್ಮಲ್ಲಿ. ಜನಾಂಗದ ಹಿಂದಿನ ಜೀವನ ಎಲ್ಲೋ ಸ್ವಲ್ಪ ವ್ಯಕ್ತವಾಗಿದೆ. ಆದರೆ ಕೆಲವು ವ್ಯಕ್ತಿಗಳಿರುವರು, ಅವರಲ್ಲಿ

ಹಿಂದಿನ ಕಾಲವೆಲ್ಲಾ ವ್ಯಕ್ತವಾಗಿ ಅನಂತ ಭವಿಷ್ಯದವರೆಗೂ ಕೈಗಳನ್ನು ಚಾಚುತ್ತಿರುವ ಕೈಮರಗಳು ಅವರು ; ಮಾನವಕೋಟಿ ಎತ್ತ ಸಾಗುತ್ತಿದೆ ಎಂಬುದನ್ನು ತೋರುವರು. ಇವರು ಮೇರುಸದೃಶ ವ್ಯಕ್ತಿಗಳು. ಅವರ ಛಾಯೆ ಭೂಮಂಡಲವನ್ನೆಲ್ಲಾ ವ್ಯಾಪಿಸುವುದು. ಅವರು ಸನಾತನವಾಗಿ ಕಾಲವನ್ನು ಭಂಗಿಸಿ ನಿಂತಿರುವರು.

೪. "ಮಗನ ಮೂಲಕ ಅಲ್ಲದೆ ಯಾರೂ ದೇವರನ್ನು ಪ್ರತ್ಯಕ್ಷನೋಡಿಲ್ಲ" ಎಂದು ಬೈಬಲಿನಲ್ಲಿ ಹೇಳಿರುವರು. ಅದು ನಿಜ. ಮಗನ ಮೂಲಕ ಅಲ್ಲದೆ ದೇವರನ್ನು ಮತ್ತೆಲ್ಲಿ ನೋಡುವಿರಿ ? ನನ್ನಲ್ಲಿ, ನಿಮ್ಮಲ್ಲಿ, ನಮ್ಮಲ್ಲಿ, ತುಂಬಾ ದರಿದ್ರರಾದವರಲ್ಲಿ ಕೂಡ ದೇವರು ಇರುವನು. ನಾವು ಅವನನ್ನು ಪ್ರತಿಬಿಂಬಿಸುತ್ತಿರುವೆವು. ಬೆಳಕಿನ ಸ್ಪಂದನ ಎಲ್ಲೆಲ್ಲಿಯೂ ಇದೆ. ಆದರೆ ಅದನ್ನು ನಾವು ನೋಡಬೇಕಾದರೆ ಒಂದು ದೀಪವನ್ನು ಹಚ್ಚಬೇಕು. ವಿಶ್ವದ ಸರ್ವವ್ಯಾಪಿಯಾದ ಭಗವಂತನನ್ನು ಇಂತಹ ಅದ್ಭುತ ಜ್ಯೋತಿರಾಲಯದಂತೆ ಇರುವ ವ್ಯಕ್ತಿಗಳ ಮೂಲಕವಾಗಿ ಅಲ್ಲದೆ ಬೇರೆ ನಾವು ಕಾಣುವಂತೆ ಇಲ್ಲ. ಇಂತಹವರೇ ಪ್ರವಾದಿಗಳು, ದೇವದೂತರು, ಅವತಾರಗಳು.

೫. ಸಾಕಾರ ದೇವರು ನಮಗೆ ಆವಶ್ಯಕ. ಆದರೆ ಕಾಲ್ಪನಿಕ ಸಾಕಾರ ದೇವರ ಭಾವನೆಗಳಿಗಿಂತ ಪ್ರಪಂಚದಲ್ಲಿ ಸಚೇತನರಾಗಿ ಕಾಲಕಾಲಕ್ಕೆ ಕೆಲವರು ದೇವರಂತೆ ಸಂಚರಿಸುತ್ತಿರುವರು. ಇಂತಹ ವ್ಯಕ್ತಿಗಳು ನಾವು ಕಲ್ಪಿಸಿಕೊಳ್ಳುವ ಸಾಕಾರ ದೇವರ ರೂಪಕ್ಕಿಂತ ಶ್ರೇಷ್ಠ. ನಾವು ನೀವು ಕಲ್ಪಿಸಿಕೊಳ್ಳುವ ದೇವರ ಭಾವನೆಗಿಂತ ಶ್ರೀಕೃಷ್ಣನ ವ್ಯಕ್ತಿತ್ವ ಎಷ್ಟೋ ಭವ್ಯವಾದುದು. ನಾವು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುವ ಭಾವನೆಗಳಿಗಿಂತಲೂ ಬುದ್ಧ ಎಷ್ಟೋ ಮೇಲಾಗಿರುವನು., ಜೀವಂತನಾಗಿರುವನು. ಆದಕಾರಣವೇ ಮಾನವ ಕೋಟಿಯು ಆದರಕ್ಕೆ ಕಾಲ್ಪನಿಕ ದೇವರುಗಳೆಲ್ಲರಿಗಿಂತಲೂ ಹೆಚ್ಚು ಅವರು ಪಾತ್ರರಾಗಿರುವರು. ಇದು ನಮ್ಮ ಹಿಂದಿನ ಋಷಿಗಳಿಗೆ ಗೊತ್ತಿತ್ತು. ಆದಕಾರಣವೇ ಭಾರತೀಯರು ಪವಿತ್ರವಾದ ವ್ಯಕ್ತಿಗಳನ್ನೂ ಆರಾಧಿಸಲು ಅವಕಾಶ ಕೊಟ್ಟರು.

೬. "ಬಾಹ್ಯದಲ್ಲಿ ಅಸಾಧಾರಣವಾಗಿ ಎಲ್ಲಿಯಾದರೂ ಒಂದು ಅಸಾಧ್ಯವಾದ ಆಧ್ಯಾತ್ಮಿಕ ಶಕ್ತಿ ಒಬ್ಬರಲ್ಲಿ ವ್ಯಕ್ತವಾದರೆ ಅಲ್ಲಿ ನಾನಿರುವೆನೆಂದು ತಿಳಿ. ಅದು ನನ್ನಿಂದಲೇ ಬಂದುದು ಎಂದು ತಿಳಿ." ಇಲ್ಲಿ ಎಲ್ಲಾ ದೇಶದ ಅವತಾರಗಳನ್ನೂ ಆರಾಧಿಸಲು ಹಿಂದೂಗಳಿಗೆ ಅವಕಾಶವನ್ನು ನೀಡುವುದು. ಹಿಂದೂಗಳು ಯಾವುದೋ ದೇಶದ ಯಾವುದೋ ಮಹಾತ್ಮನನ್ನು ಬೇಕಾದರೆ ಪೂಜಿಸಬಹುದು. ನಾವು ಅನೇಕ ವೇಳೆ ಕ್ರೈಸ್ತರ ಚರ್ಚಿಗೆ ಹೋಗುತ್ತೇವೆ, ಮಹಮ್ಮದೀಯರ

ಮಸೀದಿಗೆ ಹೋಗುತ್ತೇವೆ. ಅದು ಒಳ್ಳೆಯದೆ.

೭. ಆದಕಾರಣವೇ ದೇವರನ್ನು ಮಾನವನೆಂದು ಮಾತ್ರ ಪೂಜಿಸಲು ಸಾಧ್ಯ. ಪೂಜಿಸಲು ಇಂತಹ ದೇವಮಾನವರನ್ನು ಉಳ್ಳಂತಹ ದೇಶ, ಜನಾಂಗವೇ ಧನ್ಯ. ಕ್ರೈಸ್ತರಿಗೆ ಇಂತಹ ದೇವಮಾನವ ಕ್ರಿಸ್ತನಲ್ಲಿರುವನು, ದೇವರನ್ನು ನೋಡುವ ಸ್ವಾಭಾವಿಕ ರೀತಿಯೇ ಇದು. ಮಾನವನಲ್ಲಿ ದೇವರನ್ನು ನೋಡಿ. ನಮ್ಮ ದೇವರ ಭಾವನೆಯೆಲ್ಲಾ ಅಲ್ಲಿ ಕೇಂದ್ರೀಕೃತವಾಗಿದೆ.

೮. ನಾವು ಸಿದ್ಧಾಂತ ಮತ್ತು ತತ್ತ್ವಗಳನ್ನು ಕುರಿತು ಮಾತನಾಡುತ್ತೇವೆ. ಅದೇನೊ ಒಳ್ಳೆಯದೆ. ಆದರೆ ನಮ್ಮ ಪ್ರತಿಯೊಂದು ಕೆಲಸ ಮತ್ತು ಆಲೋಚನೆ ಯನ್ನು ನೋಡಿದರೆ ತತ್ತ್ವ ವ್ಯಕ್ತಿಯ ಮೂಲಕ ಬಂದಾಗ ಚೆನ್ನಾಗಿ ಅರ್ಥಮಾಡಿ ಕೊಳ್ಳಬಲ್ಲೆವು ಎಂಬುದನ್ನು ತೋರುವುದು. ಒಬ್ಬ ಆದರ್ಶವ್ಯಕ್ತಿಯ ಮೂಲಕ ಗೋಚರವಾದಾಗ ಭಾವನೆಯನ್ನು ಚೆನ್ನಾಗಿ ತಿಳಿದುಕೊಳ್ಳಬಲ್ಲೆವು. ನೀತಿ ಉದಾ ಹರಣೆ ಮೂಲಕ ನಮಗೆ ಅರ್ಥವಾಗುವುದು. ದೇವರ ದಯೆಯಿಂದ ನಾವೆಲ್ಲಾ ಯಾವ ಉದಾಹರಣೆಯೂ ಇಲ್ಲದೆ, ಯಾವ ವ್ಯಕ್ತಿಯೂ ಇಲ್ಲದೆ ಅರ್ಥಮಾಡಿ ಕೊಳ್ಳುವ ಸ್ಥಿತಿಯಲ್ಲಿದ್ದರೆ ! ಆದರೆ ನಾವು ಹಾಗಿಲ್ಲ. ಆದಕಾರಣವೇ ಮಾನವ ಕೋಟಿಯ ಅಧಿಕಾಂಶ ಅದ್ಭುತ ವ್ಯಕ್ತಿಗಳಾದ ಮಹಾತ್ಮರಲ್ಲಿ ಅವತಾರಗಳಲ್ಲಿ ಶರ ಣಾಗಿರುವರು. ಕ್ರೈಸ್ತರು, ಬೌದ್ಧರು, ಹಿಂದೂಗಳು ಇಂತಹವರನ್ನೇ ಆರಾಧಿಸು ತ್ತಿರುವರು.

೯. ನಿರಾಕಾರವನ್ನು ನಾವು ಪೂಜಿಸಲು ಸಾಧ್ಯವಿಲ್ಲ. ನಮ್ಮಂತೆ ಇರುವ ಮತ್ತೊಂದು ಆಕಾರವನ್ನು ಮಾತ್ರ ನಾವು ಪೂಜಿಸಬಲ್ಲೆವು. ಜೀಸಸ್‌ಗೆ ನಮ್ಮಂತಹ ಸ್ವಭಾವವಿತ್ತು, ಅವನು ಕ್ರಿಸ್ತನಾದನು. ನಾವು ಹೀಗೆ ಇರುವೆವು. ಹೀಗೆ ಮಾತ್ರ ಇರಲು ಸಾಧ್ಯ. ಕ್ರಿಸ್ತ ಮತ್ತು ಬುದ್ಧ ನಾವು ಪಡೆಯುವ ಒಂದು ಸ್ಥಿತಿ. ಜೀಸಸ್ ಮತ್ತು ಗೌತಮನಲ್ಲಿ ಅದು ವ್ಯಕ್ತವಾಗಿತ್ತು.

೧೦. ಹಿಂದಿನಿಂದ ನಮಗೆ ಬಂದಿರುವ ಎಲ್ಲಾ ಮಹಾತ್ಮರಿಗೂ, ಅವರು ಯಾವ ಕಾಲ, ದೇಶ, ಜನಾಂಗಕ್ಕೆ ಸೇರಿರಲಿ ಅವರೆಲ್ಲರಿಗೂ ನಮ್ಮ ನಮಸ್ಕಾರ ಗಳು. ಮಾನವಕೋಟಿಗೆ ಸಹಾಯ ಮಾಡುತ್ತಿರುವ ದೇವರಿಗೆ ಸಮನಾದಂತಹ ಸಕಲ ಸ್ತ್ರೀ ಪುರುಷರಿಗೂ, ಅವರು ಯಾವ ಜಾತಿ, ಬಣ್ಣ, ಜನಾಂಗಕ್ಕೆ ಸೇರಿರಲಿ ಅವರಿಗೆಲ್ಲಾ ನಮ್ಮ ನಮಸ್ಕಾರಗಳು. ಭವಿಷ್ಯದಲ್ಲಿ ನಮ್ಮ ಮುಂದಿನವರಿಗೆ ನಿಃಸ್ವಾ ರ್ಥವಾಗಿ ಕೆಲಸ ಮಾಡಲು ಬರುವ ದೇವ ಮಾನವರಿಗೆಲ್ಲಾ ನಮ್ಮ ನಮಸ್ಕಾರ ಗಳು.

೨೪ ಭಾರತ : ಅದರ ಅವನತಿಗೆ ಕಾರಣ

೧. ಭರತಖಂಡದಲ್ಲಿ ನಮಗೆ ಕಾಣುವಂತೆ ಹಲವು ಅಪಾಯಗಳಿವೆ. ಇವುಗಳಲ್ಲಿ ಎರಡೇ ಇತ್ತ ಹುಲಿ, ಅತ್ತ ಹಳ್ಳ ಎಂಬಂತೆ ಇವೆ. ಅವೇ ನಾಸ್ತಿಕತೆ ಮತ್ತು ಬರೀ ಮೂಢಭಕ್ತಿ. ಇವುಗಳಿಂದ ಪಾರಾಗಿ ಹೋಗಬೇಕಾಗಿದೆ. ಪಾಶ್ಚಾತ್ಯ ವಿದ್ಯೆಯನ್ನು ಸ್ವಲ್ಪ ತಿಳಿದುಕೊಂಡು ತಾವೇ ಸರ್ವಜ್ಞರು ಎಂದು ಮೆರೆಯುತ್ತಿರುವರು ಕೆಲವರು. ಹಿಂದಿನ ಋಷಿಗಳನ್ನು ಅವರು ಅಣಕಿಸುವರು. ಹಿಂದೂಗಳ ಭಾವನೆಯೆಲ್ಲಾ ಕೆಲಸಕ್ಕೆ ಬಾರದ್ದು ಎನ್ನುವರು. ಇಲ್ಲಿಯ ತತ್ತ್ವಗಳನ್ನು ಬಾಲರ ಹರಟೆ ಎನ್ನುವರು, ಧರ್ಮವನ್ನು ಕೆಲವು ಬುದ್ಧಿಹೀನರ ಮೌಢ್ಯ ಎನ್ನುವರು. ಮತ್ತೆ ಕೆಲವರು ಸ್ವಲ್ಪ ವಿದ್ಯಾವಂತರು. ಅವರು ಒಂದು ತರಹ, ಬುದ್ಧಿಸ್ಥಿಮಿತವಿಲ್ಲದವರು. ಅವರು ಇನ್ನೊಂದು ಅತಿರೇಕಕ್ಕೆ ಹೋಗುವರು. ಪ್ರತಿಯೊಂದು ಶಕುನಕ್ಕೂ ವೈಜ್ಞಾನಿಕ ವಿವರಣೆ ಕೊಡಲು ಯತ್ನಿಸುವರು; ತಮ್ಮ ಜನಾಂಗದ ಮೂಢ ನಂಬಿಕೆ, ತಮ್ಮ ದೇಶಕ್ಕೆ ಅಥವಾ ಹಳ್ಳಿಗೆ ಸೇರಿದ ದೇವರು ಇವರ ವಿಷಯದಲ್ಲಿ ತಾತ್ತ್ವಿಕವಾಗಿ, ಯುಕ್ತಿ ಯುಕ್ತವಾದ ವಿವರಣೆಗಳನ್ನು ಕೊಡಲೆತ್ನಿಸುವರು. ಪ್ರತಿಯೊಂದು ಗ್ರಾಮದ ಆಚಾರವೂ ವೇದವಾಕ್ಯದಂತೆ ಅವರಿಗೆ ಪವಿತ್ರ. ಅದರಂತೆ ನಡೆದರೆ ಮಾತ್ರ ಅವರ ದೃಷ್ಟಿಯಲ್ಲಿ ದೇಶ ಉದ್ಧಾರವಾಗಬೇಕಾದರೆ. ನೀವು ಇಂತಹವರಿಂದಲೂ ಜೋಪಾನವಾಗಿರಬೇಕು.

೨. ಮೊದಲು ಅನ್ನ. ಅನಂತರ ಧರ್ಮ. ಹೊಟ್ಟೆಗೆ ಹಿಟ್ಟಿಲ್ಲದೆ ನರಳುತ್ತಿದ್ದರೆ ನಾವು ಅವನಿಗೆ ಸಾಕು ಸಾಕೆನಿಸುವಷ್ಟು ಧರ್ಮವನ್ನು ತುರುಕುತ್ತೇವೆ. ಯಾವ ಸಿದ್ಧಾಂತವೂ ಹಸಿವನ್ನು ಶಮನ ಮಾಡಲಾರದು. ನಮ್ಮಲ್ಲಿ ಎರಡು ಮಹಾ ಪಾಪಗಳಿವೆ. ಮೊದಲನೆಯದು ನಮ್ಮ ದೌರ್ಬಲ್ಯ, ಮತ್ತು ಎರಡನೆಯದು ನಮ್ಮ ಶುಷ್ಕ ಹೃದಯ, ನಮ್ಮ ದ್ವೇಷ. ಬೇಕಾದಷ್ಟು ಸಿದ್ಧಾಂತಗಳನ್ನು ಕುರಿತು ಮಾತನಾಡಬಹುದು, ನೂರಾರು ಜಾತಿಗಳು ನಿಮ್ಮಲ್ಲಿ ಇರಬಹುದು. ಆದರೆ ಇತರರಿಗೆ ಅನುಕಂಪಪಡುವ ಹೃದಯವಿಲ್ಲದೇ ಹೋದರೆ ಪ್ರಯೋಜನವಿಲ್ಲ. ವೇದ ಬೋಧಿಸುವಂತೆ ಅವರಿಗಾಗಿ ಅನುತಾಪಪಡಿ, ಅವರೇ ನಿಮ್ಮ ದೇಹದ ಒಂದು ಭಾಗ ಎಂದು ನೋಡಿ. ದರಿದ್ರರು, ಶ್ರೀಮಂತರು ಪಾಪಿಗಳು, ಯತಿಗಳು ಎಲ್ಲಾ ವಿರಾಟ್ ಬ್ರಹ್ಮನ ಅಂಶವೆಂದು ನೋಡಿ.

೩. ನಮ್ಮ ಜನಾಂಗದ ಒಂದು ಮಹಾಪಾತಕವೇ ಜನಸಾಮಾನ್ಯರನ್ನು ನಿರ್ಲಕ್ಷಿಸಿದ್ದು ಎಂದು ನಾನು ಭಾವಿಸುತ್ತೇನೆ. ನಮ್ಮ ಅವನತಿಗೆ ಒಂದು ಮುಖ್ಯ ಕಾರಣ ಇದು. ಭರತಖಂಡದಲ್ಲಿ ಜನಸಾಮಾನ್ಯರಿಗೆ ಚೆನ್ನಾಗಿ ವಿದ್ಯೆ ಸಿಕ್ಕಿ ಊಟ ಸಿಕ್ಕಿ ಬಲಿಷ್ಠರಾಗುವ ತನಕ ಯಾವ ರಾಜಕಾರಣದಿಂದಲೂ ಪ್ರಯೋಜನವಿಲ್ಲ.

೪. ನಾವು ಅರಗಿಳಿಯಂತೆ ಬೇಕಾದಷ್ಟು ಮಾತನಾಡುತ್ತೇವೆ ; ಎಂದಿಗೂ ಮಾಡುವುದಿಲ್ಲ. ಬರೀ ಮಾತು ಬಾಯಲ್ಲಿ. ಕೈಯಲ್ಲಿ ಏನೂ ಕೆಲಸವಿಲ್ಲ. ಇದು ನಮ್ಮ ಬಾಳ ಚಾಳಿಯಾಗಿದೆ. ಇದಕ್ಕೆ ಕಾರಣವೇನು ? ಶಾರೀರಕ ದೌರ್ಬಲ್ಯ.

೫. ಸಂಘಶಕ್ತಿಯ ಅಭಾವ ನಮ್ಮ ಜನಾಂಗದಲ್ಲಿ. ಈ ಒಂದು ಅಭಾವವೇ ನಮ್ಮ ಎಲ್ಲಾ ನ್ಯೂನತೆಗೂ ಕಾರಣ. ಯಾವುದನ್ನಾಗಲಿ ಇದು ಎಲ್ಲರಿಗೂ ಅನ್ವಯಿಸುವ ಸಮಸ್ಯೆ ಎಂದು ನೋಡುವುದೇ ಇಲ್ಲ. ಸಂಘಶಕ್ತಿಗೆ ಮೊದಲು ಬೇಕಾಗಿರುವುದು ವಿಧೇಯತೆ.

೬. ನಾವೇ ಏನನ್ನೂ ಮಾಡುವುದಿಲ್ಲ. ಯಾರಾದರೂ ಮಾಡಿದರೆ ಅವರಲ್ಲಿ ತಪ್ಪು ಕಂಡುಹಿಡಿಯುತ್ತೇವೆ. ಇದೇ ನಮ್ಮ ಜನಾಂಗದ ಅವನತಿಗೆ ಕಾರಣ. ಶಕ್ತಿ ಮತ್ತು ಅನುಕಂಪಹೀನರು ನಾವು. ಇದೇ ನಮ್ಮ ದುಃಖಕ್ಕೆ ಮೂಲ. ಇವೆರಡನ್ನೂ ತ್ಯಜಿಸಬೇಕು. ಯಾವ ಯಾವ ವ್ಯಕ್ತಿಯಲ್ಲಿ ಯಾವ ಶಕ್ತಿ ಸಾಮರ್ಥ್ಯ ಹುದುಗಿಕೊಂಡಿದೆ ಎಂಬುದು ಪರಮೇಶ್ವರನೊಬ್ಬನಿಗೇ ಗೊತ್ತು. ಎಲ್ಲರಿಗೂ ಅವಕಾಶವಿರಲಿ. ಉಳಿದುದನ್ನು ಭಗವಂತನ ಇಚ್ಛೆಗೆ ಬಿಡಿ.

೭. ಈಗಿನ ಕಾಲದಲ್ಲಿ ಪದೇಪದೇ ಗತವೈಭವವನ್ನು ಚಿಂತಿಸುವವರನ್ನು ಅನೇಕರು ಹಳಿಯುವರು. ಇಷ್ಟೊಂದು ಗತವೈಭವದ ಚಿಂತನೆಯೇ ನಮ್ಮ ಈಗಿನ ಅಧೋಗತಿಗೆ ಕಾರಣ ಎನ್ನುವರು. ಆದರೆ ನನಗಾದರೊ ಸತ್ಯ ಇದಕ್ಕೆ ವಿರೋಧವಾಗಿದೆ. ತಮ್ಮ ಹಿಂದಿನದು ಎಲ್ಲಿಯವರೆಗೆ ಭಾರತೀಯರ ಜ್ಞಾಪಕಕ್ಕೆ ಬರಲಿಲ್ಲವೊ ಅವರು ಸ್ತಬ್ಧರಾಗಿದ್ದರು. ಅವರು ಹಿಂದಿನದನ್ನು ಕುರಿತು ಯೋಚಿಸಲು ಪ್ರಾರಂಭ ಮಾಡಿದಂದಿನಿಂದ ಜೀವನದ ಎಲ್ಲಾ ಕಾರ್ಯಕ್ಷೇತ್ರದಲ್ಲಿಯೂ ಹೊಸ ಜಾಗೃತಿ ಉಂಟಾಗುತ್ತಿದೆ. ನಮ್ಮ ಹಿಂದಿನದರಿಂದ ಮುಂದಿನದನ್ನು ಸೃಷ್ಟಿಸಬೇಕಾಗಿದೆ. ಹಿಂದಿನದೇ ಮುಂದಿನದಾಗಬೇಕಾದರೆ.

೮. ಹಿಂದೂಗಳು ತಮ್ಮ ಹಿಂದಿನದನ್ನು ಚೆನ್ನಾಗಿ ತಿಳಿದಷ್ಟೂ ಅವರ ಭವಿಷ್ಯ ಅಷ್ಟು ಮಹಿಮಾನ್ವಿತವಾಗುವುದು. ಎಲ್ಲರಿಗೂ ಅವರ ಗತಕಾಲದ ವೈಭವವನ್ನು ಅರಿಯುವಂತೆ ಮಾಡುವ ಪ್ರತಿಯೊಬ್ಬನೂ ನಮ್ಮ ಜನಾಂಗಕ್ಕೆ ಮಹದುಪಕಾರವನ್ನು ಮಾಡುತ್ತಿರುವನು. ಹಿಂದಿನ ಕಾಲದ ಆಚಾರ ವ್ಯವಹಾರ

ಲೋಪದೋಷಗಳಿಂದ ಕೂಡಿದ್ದರಿಂದ ನಮ್ಮ ದೇಶ ಅಧೋಗತಿಗೆ ಬರಲಿಲ್ಲ. ಆದರೆ ಅದನ್ನು ಪೂರ್ಣವಾಗಿ ಸಾಧಿಸಲು ಅವಕಾಶ ಸಿಕ್ಕದೇ ಇದ್ದುದೇ ಕಾರಣ.

೯. ನಾನು ನಿಮ್ಮನ್ನು ಈ ಪ್ರಶ್ನೆ ಕೇಳುತ್ತೇನೆ. ನೀವು ಅದಕ್ಕೆ ಸಾವಧಾನ ದಿಂದ ಉತ್ತರ ಕೊಡಿ : ನಾವು ಸುಖದುಃಖಗಳಾಚೆ, ಎಲ್ಲಾ ಕರ್ಮವ್ಯಾಪಾರ ಗಳಿಂದಲೂ ದೂರವಾದ ಸಾತ್ತ್ವಿಕ ಸ್ಥಿತಿಯಲ್ಲಿರುವೆವೊ ? ಅಥವಾ ನಿರ್ಜೀವಿ ಗಳಾಗಿ, ಸೋಮಾರಿಗಳಾಗಿ, ಯಾವ ಚಟುವಟಿಕೆಯೂ ಇಲ್ಲದೆ, ಮಣ್ಣಿನ ಹೆಂಟೆಯಂತೆ ಜಡವಾಗಿ ಯಾವ ಕಾರ್ಯವನ್ನೂ ಮಾಡದೇ ಇರುವಂತಹ ತಾಮ ಸಿಕ ಕೂಪದಲ್ಲಿ ಬಿದ್ದಿರುವೆವೊ ? ಕೆಲಸವನ್ನು ಮಾಡುವುದಕ್ಕೆ ಚೈತನ್ಯವಿಲ್ಲದೆ, ಸದ್ದಿಲ್ಲದೆ ಕ್ರಮೇಣ ನಾಶವಾಗುತ್ತಿರುವ ಸ್ಥಿತಿಯಲ್ಲಿರುವೆವೊ ? ಈ ಪ್ರಶ್ನೆಯನ್ನು ನಿಮಗೆ ನೀವೇ ಹಾಕಿಕೊಳ್ಳಿ. ಆಗ ಸತ್ಯ ಏನೆಂಬುದು ಗೊತ್ತಾಗುವುದು.

೧೦. ನನ್ನ ಮಗು, ಇತರರನ್ನು ದ್ವೇಷಿಸಿ ಯಾವ ವ್ಯಕ್ತಿಯಾಗಲಿ, ಜನಾಂಗವಾಗಲಿ ಬಾಳಲಾರದು. ಎಂದು ಭಾರತೀಯರು ಮ್ಲೇಚ್ಛ ಎಂಬ ಪದ ವನ್ನು ಸೃಷ್ಟಿಸಿ ಇತರರೊಂದಿಗೆ ಸಂಪರ್ಕವನ್ನು ತ್ಯಜಿಸಿದರೊ ಅಂದಿನಿಂದಲೇ ಭಾರತಭಾಗ್ಯದೇವತೆ ಮಾಯವಾದಳು. ಆ ಭಾವನೆ ಮತ್ತೆ ಬಾರದಂತೆ ನೋಡಿಕೊಳ್ಳಿ. ವೇದಾಂತದ ವಿಷಯವಾಗಿ ಮಾತನಾಡುವುದು ಬಹಳ ಸುಲಭ. ಆದರೆ ಅದರ ಒಂದು ಸ್ವಲ್ಪವನ್ನಾದರೂ ಅನುಷ್ಠಾನಕ್ಕೆ ತರುವುದು ಎಷ್ಟು ಕಷ್ಟ.

೧೧. ಹಿಂದೂಧರ್ಮ ಮಾನವ ಕೋಟಿಯನ್ನು ಗೌರವದಿಂದ ನೋಡು ವಷ್ಟು ಮತ್ತಾವ ಧರ್ಮವೂ ನೋಡುವುದಿಲ್ಲ. ಆದರೆ ಹಿಂದೂಗಳಷ್ಟು ಪ್ರಪಂಚದಲ್ಲಿ ಮತ್ತಾರೂ ದೀನದಲಿತರನ್ನು ತುಳಿಯುವುದಿಲ್ಲ. ತಪ್ಪು ಧರ್ಮ ದ್ದಲ್ಲ ಎಂಬುದನ್ನು ದೇವರು ನನಗೆ ತೋರಿರುವನು. ಹಿಂದೂಧರ್ಮದಲ್ಲಿ ರುವ ಕಪಟಿಗಳು, ಆಷಾಢಭೂತಿಗಳು ಇದಕ್ಕೆ ಕಾರಣ. ಇವರೇ ಪಾರಮಾರ್ಥಿಕ ವ್ಯಾವಹಾರಿಕ ಮುಂತಾದ ಹಲವು ಬಗೆಯ ಚಿತ್ರಹಿಂಸೆಯನ್ನು ಕೊಡುವ ಮಂತ್ರ ಗಳನ್ನು ಕಂಡುಹಿಡಿದರು.

೨೫ ಭಾರತ : ಅದರ ಸ್ವಭಾವ

೧. ನಮ್ಮ ಮಾತೃಭೂಮಿಗೆ ಪ್ರಪಂಚದ ಋಣ ಮಹತ್ತರವಾದುದು. ನೀವು ಪ್ರತಿಯೊಂದು ದೇಶವನ್ನು ತೆಗೆದುಕೊಂಡರೆ ಸಾಧು ಹಿಂದೂ, ತಾಳ್ಮೆಯ ಹಿಂದೂವಿಗೆ ಅನ್ಯ ಜನಾಂಗಗಳ ಋಣ ಮಹತ್ತರವಾದುದು.

೨. ಯಾರು ತಮ್ಮ ಕಣ್ಣುಗಳನ್ನು ತೆರೆದಿರುವರೋ, ಪಾಶ್ಚಾತ್ಯ ಜನಾಂಗ ಹೇಗೆ ಕೆಲಸ ಮಾಡುತ್ತಿದೆ ಎಂದು ಯಾರಿಗೆ ಪರಿಚಯವಾಗಿದೆಯೋ, ಯಾರು ಮೇಧಾವಿಗಳೋ, ಅನ್ಯಜನಾಂಗಗಳನ್ನು ಚೆನ್ನಾಗಿ ವಿಮರ್ಶಿಸಿ ನೋಡಿರುವರೋ, ಅವರಿಗೆ ಭಾರತೀಯ ಭಾವನೆಯ ಪ್ರಭಾವ, ಹೇಗೆ ಪಾಶ್ಚಾತ್ಯರ ರೀತಿನೀತಿಯಲ್ಲಿ ಮತ್ತು ವಿಶ್ವ ಸಾಹಿತ್ಯದಲ್ಲಿ ಎಂದಿಗೂ ನಿಲ್ಲದೆ ನಿಧಾನವಾಗಿ ವಿಸ್ತರಿಸುತ್ತಿದೆ, ಎಂಬುದು ಗೊತ್ತಾಗುವುದು.

೩. ಪ್ರತಿಯೊಂದು ಜನಾಂಗಕ್ಕೂ ಒಂದು ಸ್ವಭಾವ ಇದೆ. ಆಲೋಚಿಸುವ ರೀತಿ ಇದೆ. ಪ್ರತಿಯೊಂದು ಜನಾಂಗವೂ ಪ್ರಪಂಚದಲ್ಲಿ ತನ್ನ ಪಾಲಿನ ಕರ್ತವ್ಯ ವನ್ನು ನೆರವೇರಿಸಬೇಕಾಗಿದೆ. ರಾಜಕೀಯ ಅಥವಾ ಮಿಲಿಟರಿ ಶಕ್ತಿ ನಮ್ಮ ಜನಾಂಗದ ಉದ್ದೇಶ ಎಂದಿಗೂ ಆಗಿರಲಿಲ್ಲ. ಇದನ್ನು ಗಮನಿಸಿ. ಹಿಂದೆ ಎಂದೂ ಇದು ಆಗಿರಲಿಲ್ಲ. ಮುಂದೆ ಎಂದಿಗೂ ಅದು ಆಗುವಂತೆ ಇಲ್ಲ. ನಮ್ಮ ಪಾಲಿಗೆ ಬೇರೊಂದು ಕರ್ತವ್ಯ ಒದಗಿದೆ. ಅದೇ ಜನಾಂಗದ ಆಧ್ಯಾತ್ಮಿಕ ಶಕ್ತಿಯನ್ನೆಲ್ಲಾ ಒಂದೆಡೆ ಸಂಗ್ರಹಿಸುವುದು, ಕೇಂದ್ರೀಕರಿಸುವುದು. ಯಾವಾಗ ಅವಕಾಶ ಒದಗು ವುದೋ ಆಗ ಕೇಂದ್ರೀಕೃತ ಶಕ್ತಿಯನ್ನೆಲ್ಲಾ ಪ್ರಪಂಚವನ್ನು ತೋಯಿಸುವುದಕ್ಕೆ ಮಳೆಗರೆಯಬೇಕು.

೪. ಭರತಖಂಡ ಪ್ರಪಂಚಕ್ಕೆ ನೀಡುವ ದಾನವೆ ಆಧ್ಯಾತ್ಮ ವಿದ್ಯೆ.

೫. ಧಾರ್ಮಿಕ ಸಂಶೋಧನೆ ಮುಂದಿನ ವಿಷಯವನ್ನು ಸ್ಪಷ್ಟಪಡಿಸುವುದು. ಅದೇ ಯಾವ ದೇಶದಲ್ಲಿ ಒಳ್ಳೆಯ ನೀತಿ ನಿಯಮಾವಳಿ ಜಾರಿಯಲ್ಲಿದೆಯೋ ಅವರೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಭರತಖಂಡಕ್ಕೆ ಋಣಿಗಳು. ಯಾವ ಧರ್ಮ ದಲ್ಲಿ ಜೀವಿಗಳ ಪುನರ್ಜನ್ಮ ಸಿದ್ಧಾಂತ ಇದೆಯೋ ಅದು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಹಿಂದೂ ಧರ್ಮಕ್ಕೆ ಋಣಿ.

೬. ರಾಜಕೀಯ ವಿದ್ಯೆಯನ್ನು ತುತೂರಿಯೂದಿ ಸೇನೆಗಳ ಚಲನಗಳ

ಮೂಲಕ ಸಾರಬಹುದು. ಆರ್ಥಿಕ ಮತ್ತು ಸಾಮಾಜಿಕ ವಿಷಯಗಳನ್ನು ಕತ್ತಿ ಹಿಡಿದು ಬೆಂಕಿ ಹಚ್ಚಿ ಬೋಧಿಸಬಹುದು. ಆದರೆ ಧರ್ಮಬೋಧೆ ನೀರವವಾಗಿ ನಡೆಯಬೇಕು—ಹೊತ್ತಾರೆ ಅರಳುವ ಗುಲಾಬಿ ಮೊಗ್ಗುಗಳ ಮೇಲೆ ಬೀಳುವ ಇಬ್ಬನಿಯಂತೆ. ಜಗತ್ತಿಗೆ ಧರ್ಮವನ್ನೇ ಭಾರತ ಪುನಃ ಪುನಃ ನೀಡುವ ಕಾಣಿಕೆ.

೭. ಯಾವಾಗಲಾದರೂ ದೊಡ್ಡ ವಿಜಯಶಾಲಿ ಜನಾಂಗ ಅನ್ಯರಾಷ್ಟ್ರಗಳನ್ನು ಗೆದ್ದು ಅದನ್ನು ಒಂದುಗೂಡಿಸಿ ಅದಕ್ಕೆ ರಾಜಮಾರ್ಗಗಳು ಮುಂತಾದುವನ್ನು ಮಾಡಿದಾಗಲೆಲ್ಲ ಪ್ರಪಂಚದ ಪುರೋಗಮನದ ಸಮಷ್ಟಿಗೆ ತಕ್ಷಣವೇ ಭಾರತ ಜಾಗ್ರತವಾಗಿ ತನ್ನ ಪಾಲಿನ ಅಧ್ಯಾತ್ಮವನ್ನು ಧಾರೆಯೆರೆದಿದೆ.

೮. ಪ್ರಪಂಚದ ಭಾವನಾವಿಕಾಸಕ್ಕೆ ಭಾರತೀಯರ ಪ್ರಭಾವ ಯಾರಿಗೂ ಕಾಣದೆ ಕೇಳದೆ ಬೀಳುವ ಹಿಮಮಣಿಯಂತೆ ಇದೆ. ಆದರೂ ಅದು ಅತಿ ಸುಂದರವಾದ ಗುಲಾಬಿಯನ್ನು ಅರಳುವಂತೆ ಮಾಡುವುದು. ಭಾರತೀಯರ ಪ್ರಭಾವ ಮೌನವಾಗಿದೆ, ಅಗೋಚಾರವಾಗಿದೆ, ಆದರೂ ಅದ್ಭುತ ಪರಿಣಾಮಕಾರಿಯಾಗಿದೆ. ಇದು ಪ್ರಪಂಚದ ಭಾವನೆಯನ್ನೇ ಕ್ರಾಂತಿಗೊಳಿಸಿದೆ. ಆದರೂ ಎಂದು ಇದನ್ನು ಮಾಡಿತು ಎಂದು ಯಾರಿಗೂ ಗೊತ್ತಿಲ್ಲ.

೯. ಭಾರತೀಯ ಭಾವನೆಯ ಒಂದು ವೈಶಿಷ್ಟ್ಯವೇ ಅದರ ಶಾಂತಿ ಮತ್ತು ಮೌನ. ಅದರ ಹಿಂದೆ ಇರುವ ಅದ್ಭುತ ಶಕ್ತಿ ಎಂದಿಗೂ ಬಲತ್ಕಾರವಾಗಿ ಪ್ರದರ್ಶನವಾಗಲಿಲ್ಲ.

೧೦. ಭರತಖಂಡದಲ್ಲಿ ಎಂದಾದರೂ ಪ್ರಪಂಚವನ್ನು ಮುನ್ನಡೆಸಬಲ್ಲ ಆಧ್ಯಾತ್ಮಿಕ ವೀರರ ಅಭಾವವಾಗಿರುವುದನ್ನು ತೋರಿ ಎಂದು ನಾನು ಸವಾಲು ಹಾಕುತ್ತೇನೆ.

೧೧ ಈ ದೇಶದಲ್ಲಿ ಮಾತ್ರ ಧರ್ಮ ಮತ್ತು ಆಧ್ಯಾತ್ಮಿಕತೆ ಸಜೀವದಿಂದಿವೆ. ಇಲ್ಲಿಂದಲೇ ತುಂಬಿ ಹರಿದು ಪ್ರಪಂಚಕ್ಕೆಲ್ಲಾ ಅದು ಹರಡಬೇಕಾಗಿದೆ. ಸಾಮಾಜಿಕ ಅನ್ಯಾಯಕತೆ ಮತ್ತು ರಾಜಕೀಯ ಒಳತಂತ್ರಗಳ ಭಾರಕ್ಕೆ ಕುಸಿದು ಹೋಗಿ ಅರೆಜೀವವಾಗಿರುವ ಪಾಶ್ಚಾತ್ಯ ಮತ್ತು ಅನ್ಯಜನಾಂಗಗಳಿಗೆ ನವಚೇತನವನ್ನು, ನವಜ್ಯೋತಿಯನ್ನು ನೀಡಬೇಕಾಗಿದೆ.

೧೨. ಭರತಖಂಡ ನಾಶವಾಗುವುದೇ ? ಆಗ ಪ್ರಪಂಚದಿಂದ ಆಧ್ಯಾತ್ಮಿಕತೆಯೆಲ್ಲ ಮಾಯವಾಗುವುದು. ಧಾರ್ಮಿಕ ಭಾವನೆಗಳಿಗೆ ತೋರುವ ಹೃತ್ಪೂರ್ವಕ ಸಹಾನುಭೂತಿ ಮಾಯವಾಗುವುದು. ಎಲ್ಲಾ ಭವ್ಯ ಉದ್ದೇಶಗಳೂ ಮಾಯವಾಗುವುವು. ಅದರ ಸ್ಥಳದಲ್ಲಿ ಕಾಮ ಮತ್ತು ಭೋಗವೆಂಬ ಗಂಡು ಮತ್ತು

ಹೆಣ್ಣು ದೇವತೆಗಳು ಆಳುವರು. ಅಲ್ಲಿ ಹಣವೇ ಪುರೋಹಿತ, ಮೋಸ ಬಲಾತ್ಕಾರ ಸ್ಪರ್ಧೆಯೇ ಆಚಾರಗಳು, ಜೀವಾತ್ಮನೇ ಯಜ್ಞಪಶುವಲ್ಲಿ. ಇಂತಹ ಪ್ರಸಂಗ ಎಂದಿಗೂ ಬರಲಾರದು. ಕೆಲಸ ಮಾಡುವ ಶಕ್ತಿಗಿಂತ ಅನುಭವಿಸುವ ಶಕ್ತಿ ಹೆಚ್ಚಿನದು, ಕೋಟಿಪಾಲು ಹೆಚ್ಚಿನದು. ದ್ವೇಷಕ್ಕಿಂತ ಪ್ರೀತಿಯೆ ದೊಡ್ಡ ಶಕ್ತಿ, ಅದ್ಭುತ ಪರಿಣಾಮಕಾರಿ.

೧೩. ಪಾಶ್ಚಾತ್ಯರ ಭೋಗಭಾವನೆಗಳಿಂದ ಉನ್ಮತ್ತರಾದವರು ಕೆಲವರು ಇರಬಹುದು. ಸಾವಿರಾರು ಜನ ಇಂದ್ರಿಯ ಭೋಗದಲ್ಲಿ ಓಲಾಡುತ್ತಿರಬಹುದು. ಇದೇ ಪಾಶ್ಚಾತ್ಯ ಜನಾಂಗದ ಒಂದು ಮಹಾ ಉತ್ಪಾತ. ಇಂದ್ರಿಯಲಾಲಸೆಯೇ ಪ್ರಪಂಚವನ್ನು ಅಧೋಗತಿಗೆ ಒಯ್ಯುತ್ತಿರುವುದು. ಆದರೂ ನಮ್ಮ ಭರತಖಂಡ ದಲ್ಲಿ ಇತರ ಸಹಸ್ರಾರು ಜನರಿರುವರು. ಅವರಿಗೆ ಧರ್ಮವೇ ಸತ್ಯವಾಗಿರುವುದು. ಅದಕ್ಕಾಗಿ ಏನನ್ನು ಬೇಕಾದರೂ ತ್ಯಜಿಸಲು ಅವರು ಸಿದ್ಧರಾಗಿರುವರು.

೧೪. ಮಾನವಕೋಟಿಗೆ ಆಧ್ಯಾತ್ಮಿಕ ಜ್ಯೋತಿಯನ್ನು ದಾನ ಮಾಡುವುದೇ ಭರತಖಂಡದ ಮುಖ್ಯ ಕರ್ತವ್ಯ, ಅವರ ಶಾಸ್ತ್ರದ ಪಲ್ಲವಿಯೇ ಇದು. ಭರತ ಖಂಡ ಬದುಕಿರುವುದೇ ಇದಕ್ಕೆ. ಟಾರ್ಟರ್ ಅವರನ್ನು ಆಳಲಿ, ತುರ್ಕಿಯವರು ಅವರನ್ನು ಆಳಲಿ. ಭರತಖಂಡ ಮಾತ್ರ ತನ್ನ ಗುರಿಯಿಂದ ಸ್ವಲ್ಪವೂ ಅತ್ತ ಸರಿದಿಲ್ಲ.

೧೫. ನಮ್ಮ ಮಾರ್ಗವನ್ನು ಅತಿ ಸುಲಭವಾಗಿ ವಿವರಿಸಬಹುದು. ಅದೇ ನಮ್ಮ ಜನಾಂಗದ ಉದ್ದೇಶವನ್ನು ಪುನಃ ಒತ್ತಿ ಹೇಳಬೇಕಾಗಿರುವುದು. ಬುದ್ಧ ತ್ಯಾಗವನ್ನು ಬೋಧಿಸಿದ, ಭರತಖಂಡ ಅದನ್ನು ಆಲಿಸಿತು. ಆದರೂ ಅಂದಿನಿಂದ ಆರು ಶತಮಾನಗಳಲ್ಲಿ, ಭರತಖಂಡ ಅತಿ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿತು. ರಹಸ್ಯ ಇಲ್ಲಿದೆ. ಭರತಖಂಡದ ಜನಾಂಗದ ಆದರ್ಶವೇ ತ್ಯಾಗ ಮತ್ತು ಸೇವೆ. ಈ ಮಾರ್ಗದಲ್ಲಿ ಭರತಖಂಡ ಪರಿಪುಷ್ಟವಾಗಿ ಬೆಳೆಯಲಿ. ಉಳಿದವುಗಳೆಲ್ಲಾ ತಾವಾಗಿ ಅಣಿಯಾಗುವುವು. ಈ ದೇಶದಲ್ಲಿ ಆಧ್ಯಾತ್ಮಿಕ ಆದರ್ಶವೇ ಪರಮೋತ್ಕೃಷ್ಟ, ಅದನ್ನು ಎಂದಿಗೂ ಕೆಳಗಿಳಿಸಲಾಗದು. ಇಲ್ಲೇ ಭರತಖಂಡದ ಕಲ್ಯಾಣವಿರುವುದು.

೨೬ ಭಾರತ : ಉದ್ಧಾರ ಮಾರ್ಗ

೧, ನೀವೇನೊ ಪ್ರಾಪಂಚಿಕ ನಾಗರಿಕತೆಗೆ ವಿರೋಧವಾಗಿ ಮಾತನಾಡುವಿರಿ. ಕೈಗೆ ಎಟುಕದ ದ್ರಾಕ್ಷಿ ಹುಳಿಯೇ ಸರಿ ! ಒಂದು ವೇಳೆ ನೀವು ಹೇಳುವ ಮೌಢ್ಯ ವನ್ನೆಲ್ಲಾ ಸರಿ ಎಂದರೂ ಭರತಖಂಡದಲ್ಲಿ ಒಂದು ಲಕ್ಷ ಜನ ಆಧ್ಯಾತ್ಮಿಕ ಸ್ತ್ರೀ ಪುರುಷರಿರುವರು ಎಂದು ಒಪ್ಪಿಕೊಳ್ಳೋಣ. ಇಷ್ಟು ಜನ ಆಧ್ಯಾತ್ಮಿಕ ಪ್ರವೃತ್ತಿ ಯುಳ್ಳವರಾಗಲು ಮುವತ್ತು ಕೋಟಿ ಜನ ಅನಾಗರೀಕರಾಗಿ ಉಪವಾಸದಿಂದ ಏಕೆ ನರಳಬೇಕು ? ಮುಹಮ್ಮದೀಯರು ಹಿಂದೂಗಳನ್ನು ಹೇಗೆ ಜಯಿಸಲು ಸಾಧ್ಯವಾಯಿತು ? ಹಿಂದೂಗಳಿಗೆ ಭೌತವಿದ್ಯೆಯ ಅಭಾವ. ಭೌತವಿದ್ಯೆಯಷ್ಟೆ ಅಲ್ಲ, ಭೋಗವೂ ಕೂಡ ಒಡಜನರಿಗೆ ಕೆಲಸವನ್ನು ಒದಗಿಸಲು ಬೇಕು. ಅನ್ನ ಅನ್ನ ! ಬದುಕಿರುವಾಗ ಹೊಟ್ಟೆಗೆ ಒಂದು ತುತ್ತು ಕೂಳನ್ನು ಕೊಡದ ದೇವರು ನಾವು ಸತ್ತಮೇಲೆ ನಿತ್ಯಾನಂದವನ್ನು ಕೊಡುತ್ತಾನೆ ಎಂಬುದನ್ನು ನಾನು ನಂಬಲಾರೆ. ಭರತಖಂಡವನ್ನು ಮೇಲೆತ್ತಬೇಕಾಗಿದೆ ; ದೀನರಿಗೆ ಅನ್ನವನ್ನು ಒದಗಿಸ ಬೇಕಾಗಿದೆ; ಎಲ್ಲರಲ್ಲಿಯೂ ವಿದ್ಯೆಯನ್ನು ಪ್ರಚಾರಮಾಡಬೇಕಾಗಿದೆ; ಪೂಜಾರಿಗಳ ಉಪಟಳವನ್ನು ನಿವಾರಿಸಬೇಕಾಗಿದೆ. ಪುರೋಹಿತರ ಹಾವಳಿ ಇರಕೂಡದು. ಸಮಾಜದಲ್ಲಿ ಯಾವ ವಿಧವಾದ ಅನ್ಯಾಯವೂ ಇರಕೂಡದು. ಎಲ್ಲರಿಗೂ ಹೆಚ್ಚು ಅನ್ನ, ಹೆಚ್ಚು ಅವಕಾಶಗಳು ದೊರಕಬೇಕು.

ಇದನ್ನು ನಾವು ಕ್ರಮೇಣ ಸಾಧಿಸಬೇಕಾಗಿದೆ. ಇದನ್ನು ನಮ್ಮ ಧರ್ಮದ ಮೂಲಕ ಸಮಾಜಕ್ಕೆ ಸ್ವಾತಂತ್ರ್ಯವನ್ನು ನೀಡಿ ಸಾಧಿಸಬೇಕಾಗಿದೆ. ನಿಮ್ಮ ಹಳೆಯ ಧರ್ಮದಲ್ಲಿರುವ ಪುರೋಹಿತರ ಹಾವಳಿಯನ್ನು ನಿರ್ಮೂಲ ಮಾಡಿ. ಆಗ ಪ್ರಪಂಚದಲ್ಲೇ ಶ್ರೇಷ್ಠಧರ್ಮ ನಿಮಗೆ ದೊರಕುವುದು. ನಾನು ಹೇಳುವುದು ಗೊತ್ತಾಗುವುದೆ ? ಭಾರತೀಯರ ಧರ್ಮವನ್ನು ಇಟ್ಟುಕೊಂಡು ಐರೋಪ್ಯರ ಸಮಾಜವನ್ನು ನಿರ್ಮಿಸಬಲ್ಲಿರಾ ? ಇದು ಸಾಧ್ಯ ಆಗೇ ತೀರಬೇಕು ಎಂದು ನಾನು ನಂಬುತ್ತೇನೆ.

೨. ನಿಸ್ಸಂಶಯವಾಗಿ ಭರತಖಂಡ ಅವನತಿಗೆ ಇಳಿದಿದೆ. ಅವಳು ಪುನಃ ಮೇಲೇಳುವುದರಲ್ಲಿಯೂ ಸಂದೇಹವಿಲ್ಲ. ಈ ಜಾಗ್ರತಿ ಪ್ರಪಂಚವನ್ನೇ ಬೆರಗು ಗೊಳಿಸುವುದು. ಅಲೆ ಎಷ್ಟು ಆಳಕ್ಕೆ ಇಳಿದಿದ್ದರೆ ಅಷ್ಟೇ ಮೇಲಕ್ಕೆ ಏಳುವುದು.

೩. ನೀವೆಲ್ಲಾ ಕೆಲಸಕ್ಕೆ ಕೈಹಾಕಿ. ಸದ್ಯಕ್ಕೆ ನಿಮ್ಮ ಈಗಿನ ಕರ್ತವ್ಯ: ಹಳ್ಳಿಯಿಂದ ಹಳ್ಳಿಗೆ, ದೇಶದಿಂದ ದೇಶಕ್ಕೆ ನೀವು ಹೋಗಿ, ಜನರಿಗೆ ಈಗ ನೀವು ಸುಮ್ಮನೆ ಕುಳಿತರೆ ಪ್ರಯೋಜನವಿಲ್ಲವೆಂದು ಹೇಳಿ. ಜನರಿಗೆ ಅವರ ಸ್ಥಿತಿ ಚೆನ್ನಾಗಿ ತಿಳಿಯುವಂತೆ ಮಾಡಿ. ಅವರಿಗೆ "ಸಹೋದರರೇ, ನೀವೆಲ್ಲ ಏಳಿ, ಜಾಗ್ರತರಾಗಿ, ನೀವು ಇನ್ನೆಷ್ಟು ಕಾಲ ನಿದ್ರಿಸುವಿರಿ ?" ಎಂದು ಬೋಧಿಸಿ, ಅವರಿಗೆ ತಮ್ಮ ಸ್ಥಿತಿಗಳನ್ನು ಹೇಗೆ ಉತ್ತಮಗೊಳಿಸಿಕೊಳ್ಳಬೇಕು ಎಂಬುದನ್ನು ಹೇಳಿ. ಅವರ ಶಾಸ್ತ್ರಗಳ ಅದ್ಭುತ ಸತ್ಯಗಳನ್ನು ಅವರು ತಿಳಿದುಕೊಳ್ಳಬಲ್ಲಂತಹ ಸುಲಭರೀತಿಯಲ್ಲಿ ವಿವರಿಸಿ. ಜೀವನಕ್ಕೆ ಆವಶ್ಯಕವಾಗಿ ಬೇಕಾಗುವ ವಿಷಯ ಗಳು, ವ್ಯಾಪಾರ, ಬೇಸಾಯ, ಮಾರಾಟ ಮುಂತಾದವುಗಳ ಮೇಲೆಯೂ ಅವರಿಗೆ ತಿಳಿಸಿ. ನೀವು ಇದನ್ನು ಮಾಡದೇ ಇದ್ದರೆ ನಿಮ್ಮ ವಿದ್ಯಾಭ್ಯಾಸ, ಸಂಸ್ಕೃತಿಯನ್ನು ಸುಡಿ. ನೀವು ವೇದವೇದಾಂತಗಳನ್ನು ಓದಿ ಹಾಳಾಯಿತು !

೪. ಭರತಖಂಡದಲ್ಲಿ ಬಹಳ ಕಾಲದಿಂದಲೂ ಧರ್ಮ ಜಡವಾಗಿದೆ. ಅದನ್ನು ಜಾಗೃತಗೊಳಿಸಬೇಕಾಗಿದೆ. ಧರ್ಮ ನಿತ್ಯಜೀವನಕ್ಕೆ ಇಳಿದು ಬರುವಂತೆ ಮಾಡಬೇಕು. ಧರ್ಮ ಹಿಂದಿನಂತೆಯೇ ಮುಂದೆಯೂ ರಾಜರ ಅರಮನೆಗಳಿಗೂ ಬಡವರ ಜೋಪಡಿಗಳಿಗೂ ಪ್ರವೇಶಿಸಬೇಕು. ಧರ್ಮ ಪ್ರತಿಯೊಬ್ಬರ ಆಸ್ತಿ, ಇದನ್ನು ಪಡೆಯುವುದು ಇಡೀ ಜನಾಂಗದ ಆಜನ್ಮಸಿದ್ಧ ಹಕ್ಕು. ಇದನ್ನು ಪ್ರತಿ ಯೊಬ್ಬರ ಮನೆ ಬಾಗಿಲಿಗೂ ಉಚಿತವಾಗಿ ತರಬೇಕು. ಭಗವಂತನ ಗಾಳಿಯಂತೆ ಯಾರಿಗೆ ಬೇಕಾದರೂ ಉಚಿತವಾಗಿ ಸುಲಭವಾಗಿ ಸಿಕ್ಕಬೇಕು. ಭರತಖಂಡದಲ್ಲಿ ನಾವು ಸಾಧಿಸಬೇಕಾದ ಕೆಲಸ ಇದು. ಸಣ್ಣ ಸಣ್ಣ ಪಂಗಡಗಳನ್ನು ಮಾಡಿಕೊಂಡು ಭಿನ್ನಾಭಿಪ್ರಾಯಗಳ ಮೇಲೆ ಕಚ್ಚಾಡುವುದಲ್ಲ. ನಾವೆಲ್ಲಾ ಯಾವುದನ್ನು ಸಮ್ಮತಿ ಸುವೆವೋ ಅದನ್ನು ಬೋಧಿಸೋಣ. ಭಿನ್ನಾಭಿಪ್ರಾಯಗಳು ತಮಗೆ ತಾವೇ ಮಾಯವಾಗಲಿ. ನಾನು ಪದೇಪದೇ ಹೇಳುವಂತೆ ಕೋಣೆಯಲ್ಲಿ ಹಲವು ಶತ ಮಾನಗಳಿಂದ ಕತ್ತಲೆ ಕವಿದಿದ್ದರೆ ನಾವು ಸುಮ್ಮನೆ ಕತ್ತಲೆ ಕತ್ತಲೆ ಎನ್ನುತ್ತಿದ್ದರೆ ಕತ್ತಲೆ ಹೋಗುವುದೇನು ? ಬೆಳಕನ್ನು ತನ್ನಿ, ಕತ್ತಲೆ ತಕ್ಷಣವೇ ಹೋಗುವುದು.

೫. ಯಾವಾಗಲೂ ಈ ಎರಡರ ಬಲೆಗೆ ಬೀಳದಂತೆ ನೋಡಿಕೊಳ್ಳಿ. ಅಧಿಕಾರಲಾಲಸೆ ಮತ್ತು ಅಸೂಯೆ. ಅನವರತ ಆತ್ಮಶ್ರದ್ಧೆಯನ್ನು ರೂಢಿಸಿ.

೬. ಮೊದಲು ಅನ್ಯದೇಶಗಳಿಗೆ ಹೋಗಿ ನೀವೇ ಪ್ರತ್ಯಕ್ಷವಾಗಿ ಅವರ ನಡೆನುಡಿಯನ್ನು ಗಮನಿಸಿ. ಇನ್ನೊಬ್ಬರ ಮೂಲಕ ನೋಡಬೇಡಿ. ಅದನ್ನು ನೋಡಿ, ಮನನ ಮಾಡಿ. ಅನಂತರ ನಿಮ್ಮ ಶಾಸ್ತ್ರಗಳನ್ನು ಓದಿ ; ಹಿಂದಿನ

ಸಾಹಿತ್ಯವನ್ನು ಓದಿ. ಭರತಖಂಡದಲ್ಲೆಲ್ಲಾ ಸಂಚರಿಸಿ, ಬೇರೆ ಬೇರೆ ಕಡೆ ಜನ ಹೇಗಿರುವರು ಎಂಬುದನ್ನು ನೀವೇ ಸೂಕ್ಷ್ಮವಾಗಿ ಜೋಪಾನವಾಗಿ ಗಮನಿಸಿ. ಆಗ ನಿಮಗೆ ಹಗಲಿನಂತೆ ವೇದ್ಯವಾಗುವುದು, ನಮ್ಮ ರಾಷ್ಟ್ರ ಜೀವಂತವಾಗಿದೆ, ಆದರ ಬೂದಿಯ ಅಡಿಯಲ್ಲಿ ರಾಷ್ಟ್ರಜೀವನದ ಕಿಡಿ ಹೊಗೆಯಾಡುತ್ತಿದೆ. ಈ ಜನಾಂಗದ ಜೀವನವೇ ಧರ್ಮ ; ಇದರ ಭಾಷೆ ಧರ್ಮ, ಇದರ ಭಾವನೆ ಧರ್ಮ. ನಿಮ್ಮ ರಾಜಕೀಯ, ಸಾಮಾಜಿಕ, ಮುನಿಸಿಪಾಲಿಟಿ, ಪ್ಲೇಗನ್ನು ತಡೆ ಗಟ್ಟುವ ಕೆಲಸ, ಬರಗಾಲ ಪರಿಹಾರ ಮುಂತಾದ ಕಾರ್ಯಗಳೆಲ್ಲ ಹಿಂದಿನಂತೆಯೇ ಧರ್ಮದ ಮೂಲಕ ಆಗುವುದು. ಇಲ್ಲದೇ ಇದ್ದರೆ ನಿಮ್ಮ ಕಿರುಚಾಟ ಕೂಗಾಟ ಗಳೆಲ್ಲ ಬರೀ ವ್ಯರ್ಥ, ನನ್ನ ಸೋದರರೆ.

೭. ಅನ್ಯರಾಷ್ಟ್ರಗಳ ಸಹಾಯವಿಲ್ಲದೆ ಭರತಖಂಡ ಇರಲಾರದು. ನಾವು ಹಾಗೆ ಇರಬಲ್ಲೆವು ಎಂದು ಭಾವಿಸಿದ್ದು ನಮ್ಮ ಮೌಢ್ಯ. ಇದಕ್ಕೆ ಪ್ರಾಯಶ್ಚಿತ್ತ ರೂಪವಾಗಿ ಒಂದು ಸಾವಿರ ವರುಷಗಳ ಗುಲಾಮಗಿರಿಯಲ್ಲಿ ನರಳಿದ್ದಾಯಿತು. ನಾವು ಹೊರಗೆ ಹೋಲಿಸಿ ನೋಡಲಿಲ್ಲ, ಸುತ್ತಲೂ ಹೇಗೆ ಅವರು ಕೆಲಸ ಮಾಡುತ್ತಿರುವರು ಎಂಬುದನ್ನು ಗಮನಿಸಲಿಲ್ಲ. ಭರತಖಂಡದ ಅವನತಿಗೆ ಇವು ಮುಖ್ಯ ಕಾರಣ. ನಾವು ಇದಕ್ಕಾಗಿ ಅನುಭವಿಸಿ ಆಗಿದೆ. ಪುನಃ ಇದನ್ನು ಮಾಡದೇ ಇರುವ.

೮. ನಾವು ಇತರರಿಂದ ಕಲಿಯಬೇಕಾಗಿದೆ. ನೀವು ಬೀಜವನ್ನು ನೆಲದಲ್ಲಿ ಹಾಕಿ ಬೇಕಾದಷ್ಟು ನೀರು ಗೊಬ್ಬರ ಗಾಳಿ ಕೊಡಿ. ಅದು ಮೊಳೆತು ಸಸಿಯಾಗಿ ಭೀಮವೃಕ್ಷವಾಗುವುದು. ಆಗ ಅದು ನೆಲವಾಗುವುದೆ, ಗಾಳಿಯಾಗುವುದೆ, ನೀರಾಗುವುದೆ ? ಇಲ್ಲ, ಅದಕ್ಕೆ ಕೊಟ್ಟ ಎಲ್ಲವನ್ನೂ ಅಗಿರಸಿಕೊಂಡು ಅದೊಂದು ದೊಡ್ಡ ಮರವಾಗುವುದು. ನಿಮ್ಮದು ಆ ದೃಷ್ಟಿಯಾಗಲಿ. ನಾವು ಇತರರಿಂದ ಕಲಿಯುವುದು ಬೇಕಾದಷ್ಟು ಇದೆ, ಯಾರು ಕಲಿತುಕೊಳ್ಳುವುದಕ್ಕೆ ಇಚ್ಛಿಸುವು ದಿಲ್ಲವೋ ಅವನಾಗಲೇ ಸತ್ತಂತೆ.

೯. ಒಂದು ಲಕ್ಷ ಸ್ತ್ರೀಪುರುಷರು ಪವಿತ್ರತೆಯ ಉತ್ಸಾಹದಿಂದ ತುಂಬಿ ಭಗವಂತನ ಮೇಲಿರುವ ಶ್ರದ್ಧೆಯಿಂದ ರಕ್ಷಿತರಾಗಿ, ದೀನರು ದಲಿತರು ಇವರ ಮೇಲೆ ಅನುಕಂಪಹೃದಯದಿಂದ ಸಿಂಹಪರಾಕ್ರಮ ತಾಳಿ, ಭರತಖಂಡದಲ್ಲೆಲ್ಲಾ ಮುಕ್ತಿ, ಸೇವೆ, ಸಾಧಾರಣ ಜನರನ್ನು ಮೇಲೆತ್ತುವ ವಿಧಾನ, ಸರಿಸಮಾನತೆಯ ಸಂದೇಶವನ್ನು ಬೀರಲಿ.

೧೦. ಭರವಸೆ ನಿಮ್ಮ ಮೇಲಿದೆ, ಯಾರು ದೀನರೋ ಸಾಧುಸ್ವಭಾವ

ದವರೊ ಆದರೂ ಶ್ರದ್ಧಾಳುಗಳೋ ಅವರ ಮೇಲಿದೆ. ಭಗವಂತನನ್ನು ನಂಬಿ. ಯಾವ ಯೋಜನೆಯೂ ಬೇಡ. ಅದರಿಂದ ಏನೂ ಪ್ರಯೋಜನವಿಲ್ಲ. ದೀನರಿಗೆ ಮರುಗಿ ಅವರನ್ನು ಮೇಲೆತ್ತಲು ಸಹಾಯಕ್ಕಾಗಿ ಕಾದು ನಿಲ್ಲಿ. ಸಹಾಯ ಬಂದೇ ಬರುವುದು. ನಾನು ಹನ್ನೆರಡು ವರ್ಷ ಈ ಯಾತನೆಯನ್ನು ಹೃದಯದಲ್ಲಿ ಹೊತ್ತು ಈ ಭಾವನೆಯನ್ನು ತಲೆಯಲ್ಲಿ ತುಂಬಿಕೊಂಡು ಸಂಚರಿಸುತ್ತಿರುವೆನು. ಯಾರು ಶ್ರೀಮಂತರು, ಪ್ರಖ್ಯಾತರು ಎಂದು ಕರೆಸಿಕೊಳ್ಳುವರೋ ಅವರ ಮನೆ ಬಾಗಿಲನ್ನು ಅಲೆದದ್ದಾಯಿತು. ದಾರುಣ ವ್ಯಥೆಯಿಂದ ಅರ್ಧ ಪ್ರಪಂಚವನ್ನು ಸುತ್ತಿ ಈ ಪರದೇಶಕ್ಕೆ ಸಹಾಯಕ್ಕಾಗಿ ಬಂದಿರುವೆನು. ಭಗವಂತ ದೊಡ್ಡವನು, ಅವನು ನನಗೆ ಸಹಾಯ ಮಾಡುತ್ತಾನೆಂಬುದು ಗೊತ್ತಿದೆ. ನಾನು ಈ ಪರದೇಶ ದಲ್ಲಿ ಛಳಿ ಅಥವಾ ಹೊಟ್ಟೆ ಹಸಿವಿನಿಂದ ನರಳಿ ಸಾಯಬಹುದು. ಆದರೆ ನನ್ನ ಯುವಕರೆ, ನಿಮಗೆ, ದೀನರು ದಲಿತರು ಅಜ್ಞಾನಿಗಳು ಇವರಿಗೆ ಮರುಗುವ ಹೃದಯವನ್ನು ಬಿಟ್ಟು ಹೋಗುತ್ತೇನೆ. ಈ ಕ್ಷಣ ಪಾರ್ಥಸಾರಥಿಯ ದೇವಸ್ಥಾನಕ್ಕೆ ಹೋಗಿ, ಯಾರು (ಕೃಷ್ಣಾವತಾರದಲ್ಲಿ) ಗೋಕುಲದ ದೀನ ಗೋಪಿಯರಿಗೆ ಸ್ನೇಹಿತನಾಗಿದ್ದನೋ, (ರಾಮಾವತಾರದಲ್ಲಿ) ಪರೆಯ ಗುಹಕನನ್ನು ಬಿಗಿದಪ್ಪಲು ಯಾರು ಅನುಮಾನಿಸಲಿಲ್ಲವೋ, (ಬುದ್ಧಾವತಾರದಲ್ಲಿ) ರಾಜಕುಮಾರನ ಔತಣದ ಬದಲು ವೇಶ್ಯಾಂಗನೆಯ ಮನೆಯ ಊಟವನ್ನು ಸ್ವೀಕರಿಸಿದನೋ, ಅವನೆದುರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಒಂದು ಮಹಾತ್ಯಾಗವನ್ನು ಮಾಡಿ. ಯಾರಿಗಾಗಿ ಭಗವಂತ ಪುನಃ ಪುನಃ ಅವತಾರವೆತ್ತುತ್ತಾನೆಯೋ, ಎಲ್ಲರಿಗಿಂತ ಹೆಚ್ಚಾಗಿ ಯಾರು ದೀನರು, ದಲಿತರು, ಸಾಧುಗಳನ್ನು ಪ್ರೀತಿಸುವನೋ ಅಂತಹ ಭಗವಂತ ನಿಗೆ ನಿಮ್ಮ ಇಡೀ ಬಾಳನ್ನು ಅರ್ಪಿಸಿ. ದಿನದಿನವೂ ಆಳ ಆಳಕ್ಕೆ ಮುಳುಗು ತ್ತಿರುವ ಮೂವತ್ತು ಕೋಟಿ ಭಾರತೀಯರ ಉದ್ಧಾರಕ್ಕಾಗಿ ನಿಮ್ಮ ಪ್ರಾಣವನ್ನು ಧಾರೆ ಎರೆಯಿರಿ.

೧೧. ಎಂದು ನೂರಾರು ಜನ ಉದಾರ ಹೃದಯಿಗಳಾದ ನರನಾರಿಯರು ಪ್ರಪಂಚದ ಭೋಗಲಾಲಸೆಯನ್ನು ತೊರೆದು, ದಾರಿದ್ರ್ಯ ಮತ್ತು ಅಜ್ಞಾನದಲ್ಲಿ ಆಳ ಆಳಕ್ಕೆ ಮುಳುಗುತ್ತಿರುವ ಮೂವತ್ತು ಕೋಟಿ ಭಾರತೀಯರ ಮೇಲ್ಮೆಗಾಗಿ ತಮ್ಮ ಶಕ್ತಿ ಮೀರಿ ದುಡಿಯುವರೋ ಅಂದು ನಮ್ಮ ದೇಶ ಉದ್ಧಾರವಾಗು ವುದು. ನನ್ನ ಅಲ್ಪ ಜೀವನದಲ್ಲೇ ಸದುದ್ದೇಶ, ನಿಃಸ್ವಾರ್ಥತೆ ಮತ್ತು ಅಪರಿಮಿತ ಪ್ರೀತಿ ಪ್ರಪಂಚವನ್ನೇ ಗೆಲ್ಲಬಲ್ಲುದೆಂದು ಕಂಡಿರುವೆನು. ಇಂತಹ ಶೀಲಗಳಿಂದ ಸುಸಜ್ಜಿತನಾದ ಒಬ್ಬ, ಲಕ್ಷಾಂತರ ಜನ ನೀಚರು ಮತ್ತು ಕಪಟಿಗಳು ಮಾಡುತ್ತಿ

ರುವ ಅನಾಚಾರವನ್ನು ತುಳಿಯಬಲ್ಲ.

೧೨. ನೀವು ಶೂನ್ಯದಲ್ಲಿ ಶೂನ್ಯವಾಗಿ, ಮಾಯವಾಗಿ. ನಿಮ್ಮ ಸ್ಥಾನದಲ್ಲಿ ಭವಿಷ್ಯ ಭಾರತವೇಳಲಿ. ಕೃಷಿಕನ ದಾರಿದ್ರ್ಯದ ನಿವಾಸದಿಂದ ಹಲಪಸ್ತೆ ಯಾಗಿ ನವೀನ ಭಾರತಾಂಬೆ ವ್ಯಕ್ತದೋರಲಿ. ಬೆಸ್ತನ ಜೋಪಡಿಯಿಂದಾಕೆ ಮೂಡಲಿ. ಚಮ್ಮಾರ ಜಾಡಮಾಲಿಗಳ ಬಡಗುಡಿಸಲುಗಳಿಂದಾಕೆ ಹೊರ ಹೊಮ್ಮಲಿ. ಮಳಿಗೆಗಳಿಂದ ಕಾರ್ಖಾನೆಗಳಿಂದ, ಅಂಗಡಿಗಳಿಂದ, ಸಂತೆಗಳಿಂದ ಆಕೆ ಪ್ರತ್ಯಕ್ಷವಾಗಲಿ. ಪರ್ವತಕಾನನಗಳಿಂದ, ಕಂದರವನಗಳಿಂದ, ಆಕೆಯ ಮೂರ್ತಿ ರೂಪುಗೊಳ್ಳಲಿ. ಸಾಮಾನ್ಯ ಜನರು ಸಹಸ್ರಾರು ವರುಷಗಳಿಂದ ಪದದಲಿತರಾಗಿ ರುವರು. ಉಚ್ಚವರ್ಗದವರ ಕ್ರೂರ ಪದಾಘಾತವನ್ನು ಗೊಣಗಾಡದೆ ಸಹಿಸಿ ಅವರಲ್ಲಿ ಒಂದು ಅದ್ಭುತ ಸಹಿಷ್ಣುತೆ ವ್ಯಕ್ತದೋರಿದೆ. ಅನಂತದುಃಖಭಾಜನ ರಾದುದರಿಂದ ಅವಿಂತ ಶಕ್ತಿಶಾಲಿಗಳಾಗಿರುವರು. ಬೊಗಸೆ ಗಂಜಿ ಕುಡಿದು ಜೀವಿ ಸುತ್ತಿದ್ದರೂ ಅವರು ಲೋಕವನ್ನೇ ಅಲುಗಿಸಲು ಸಮರ್ಥರಾಗಿರುವರು. ಇನ್ನೊಂದು ಮುಷ್ಟಿ ಅನ್ನವನ್ನು ಅವರಿಗೆ ನೀಡಿ. ಅವರ ಶಕ್ತಿಯನ್ನೊಳಗೊಳ್ಳಲು ಜಗತ್ತು ಸಾಲದಾಗುತ್ತದೆ. ರಕ್ತಬೀಜನಿಗೆ ಇದ್ದಂತಹ ಅಕ್ಷಯ ವೀರ್ಯ ಅವರ ಲ್ಲಿದೆ. ಅದೂ ಅಲ್ಲದೆ ನಿರ್ಮಲ ಜೀವನದಿಂದ ಮಾತ್ರ ಸಾಧ್ಯವಾಗುವ ಅದ್ಭುತ ಓಜಸ್ಸು ಅವರಲ್ಲಿದೆ. ಅಂತಹ ಓಜಸ್ಸು ಪ್ರಪಂಚದ ಬೇರಾವ ಭಾಗದಲ್ಲಿಯೂ ಅಲಭ್ಯ. ಅಂತಹ ಶಾಂತಿ, ಅಂತಹ ಪ್ರೀತಿ, ಅಂತಹ ಮೌನ, ನಿರಂತರ ಕಾರ್ಯ ನಿರ್ವಾಹಕ ಸಮಯಗಳಲ್ಲಿ ಆವಶ್ಯಕವಾದ ಸಿಂಹಸದೃಶವಾದ ಸಬಲತೆ ಇವನ್ನೆಲ್ಲಾ ಇನ್ನೆಲ್ಲಿ ಕಾಣುವಿರಿ ? ಗತಕಾಲದ ಅಸ್ಥಿಪಂಜರಗಳಿರಾ, ನಿಮ್ಮ ಮುಂದೆ ನಿಂತಿರು ವರು ನಿಮ್ಮ ಸಂತಾನರು, ಆವಿರ್ಭವಿಸಲಿರುವ ಭಾರತವರ್ಷದೋಪಾದಿಯಲ್ಲಿ. ನಿಮ್ಮ ಐಶ್ವರ್ಯ ಮಂಜೂಷೆಗಳನ್ನೂ, ನಿಮ್ಮ ರತ್ನದುಂಗುರಗಳನ್ನೂ ಆದಷ್ಟು ಬೇಗನೆ ಅವರಿಗೆ ದಾನಮಾಡಿ. ತರುವಾಯ ನೀವು ಗಾಳಿಯಲ್ಲಿ ಗಾಳಿಯಾಗಿ ಮಾಯವಾಗಿ. ಕಿವಿಗೊಟ್ಟು ಮಾತ್ರ ಆಲಿಸುತ್ತಿರಿ: ನೀವು ಮಾಯವಾದ ಕೂಡಲೆ ಸದ್ಯಃಪ್ರಸೂತ ನವಭಾರತದ ಮಹಾಪ್ರಾರಂಭಗಾನ ಮೇಘ ಗಂಭೀರಧ್ವನಿಯಂತೆ ವಿಶ್ವದ ದಿಕ್ತಟಗಳಿಂದ ಅನುರಣಿತವಾಗುವುದು. ಜೈ ಗುರುದೇವ್.

೧೩. ನಮಗಿಂದು ಬೇಕಾಗಿರುವುದು ಶ್ರೀ ಕೃಷ್ಣ ಗೀತೆಯಲ್ಲಿ ಹೇಳುವಂತೆ ಅತಿ ತೀವ್ರವಾದ ಕರ್ಮಯೋಗ, ಅಸೀಮ ಧೈರ್ಯ, ಅದಮ್ಯಶಕ್ತಿ. ಆಗ ಮಾತ್ರ ಈ ದೇಶದ ಜನ ಜಾಗ್ರತರಾಗಬೇಕಾದರೆ. ಇಲ್ಲದೇ ಇದ್ದರೆ ಈಗಿನಂತೆಯೇ ಅವರು ಎಂದೆಂದಿಗೂ ಅಜ್ಞಾನದಲ್ಲಿ ಉಳಿಯುವರು.

೧೪. ನನ್ನ ಯೋಜನೆ ನಿಮಗೆ ಏನು ಗೊತ್ತೆ ? ಪಾಶ್ಚಾತ್ಯ ದೇಶಗಳಿಗೆ ಅತಿಗಹನವಾದ ವೇದಾಂತ ತತ್ತ್ವಗಳನ್ನು ಬೋಧಿಸಿ ಆ ಬಲಾಢ್ಯ ರಾಷ್ಟ್ರಗಳ ಸಹಾನುಭೂತಿ ಮತ್ತು ಗೌರವವನ್ನು ಗಳಿಸಬೇಕು. ಎಂದೆಂದಿಗೂ ಆಧ್ಯಾತ್ಮಿಕ ವಿಷಯಗಳಲ್ಲಿ ನಾವು ಅವರ ಗುರುಗಳಾಗಿರಬೇಕು. ಭೌತಿಕ ವಿಷಯಗಳಲ್ಲಿ ಅವರು ನಮ್ಮ ಗುರುಗಳಾಗಿ ಉಳಿಯುವರು. ನೀವು ಇದು ಕೊಡಿ, ಅದು ಕೊಡಿ ಎಂದು ಹಗಲು ರಾತ್ರಿ ಗೋಗರೆಯುತ್ತಿದ್ದರೆ ಏನೂ ಪ್ರಯೋಜನವಿಲ್ಲ. ಹೀಗೆ ಪರಸ್ಪರ ಕೊಟ್ಟು ತೆಗೆದುಕೊಳ್ಳುವುದರಿಂದ ಅನ್ಯೋನ್ಯರಾಷ್ಟ್ರಗಳಲ್ಲಿ ಸಹಾನುಭೂತಿ ಮತ್ತು ಗೌರವ ಬಂದ ಮೇಲೆ ನಾವು ಕೂಗಾಡಬೇಕಾಗಿಲ್ಲ. ಅವರು ತಾವೇ ಮಾಡಬೇಕಾದುದನ್ನೆಲ್ಲಾ ಮಾಡುವರು. ನಾವು ನಮ್ಮ ಧರ್ಮವನ್ನು ಅನುಷ್ಠಾನಕ್ಕೆ ತಂದು ನೆರೆಹೊರೆಯವರಿಗೆ ವೇದಾಂತ ತತ್ತ್ವವನ್ನು ಬೋಧಿಸಿದರೆ ಪೌರಾತ್ಯ ಮತ್ತು ಪಾಶ್ಚಾತ್ಯ ದೇಶಗಳೆರಡೂ ಹೇರಳವಾಗಿ ಲಾಭವನ್ನು ಪಡೆಯುವುವು. ಇದರೊಂದಿಗೆ ಹೋಲಿಸಿದರೆ ರಾಜಕೀಯ ಚಟುವಟಿಕೆ ನನಗೆ ಗೌಣವಾಗಿ ಕಾಣುವುದು. ನಾನು ಇದನ್ನು ಅನುಷ್ಠಾನಕ್ಕೆ ತರಲು ನನ್ನ ಜೀವನವನ್ನೇ ಮುಡಿಪಾಗಿಡುವೆ. ನಿಮಗೆ ಇನ್ನಾವುದಾದರೂ ಬೇರೇ ಮಾರ್ಗ ಭರತ ಖಂಡದ ಉದ್ಧಾರಕ್ಕೆ ಗೊತ್ತಿದ್ದರೆ ಒಳ್ಳೆಯದು. ನಿಮಗೆ ತೋರಿದ ರೀತಿಯಲ್ಲಿ ಅದನ್ನು ಮಾಡುತ್ತಾ ಹೋಗಿ.

೧೫. ನಮಗಿಂದು ಬೇಕಾಗಿರುವುದು ಗೀತೆಯನ್ನು ಮೊಳಗುತ್ತಿರುವ ಶ್ರೀ ಕೃಷ್ಣನ ಆರಾಧನೆ, ಕೋದಂಡ ಬಾಣಗಳನ್ನು ಧರಿಸಿರುವ ಶ್ರೀರಾಮನ ಆರಾಧನೆ, ಮಹಾವೀರನ ಆರಾಧನೆ, ಮಹಾಕಾಳಿಯ ಆರಾಧನೆ. ಪ್ರಚಂಡ ಸ್ಫೂರ್ತಿ ಮತ್ತು ಇಚ್ಛೆಗಳಿಂದ ಕೆಲಸಮಾಡಿದರೇ ಜನ ಬಲಾಢ್ಯರಾಗಬೇಕಾದರೆ. ನಾನು ಪರಿಸ್ಥಿತಿಯನ್ನು ಕೂಲಂಕಷವಾಗಿ ವಿಚಾರಿಸಿ ಈ ನಿರ್ಣಯಕ್ಕೆ ಬಂದಿರುವೆನು. ನಮ್ಮ ದೇಶದಲ್ಲಿ ಈಗ ಧರ್ಮದ ವಿಷಯವಾಗಿ ಮಾತನಾಡುತ್ತಿರುವವರಲ್ಲಿ ಮುಕ್ಕಾಲು ಪಾಲು ಜನ ತಮೋಗುಣಿಗಳು, ಮೆದುಳು ಕೆಟ್ಟವರು ಅಥವಾ ಸ್ವಮತ ಭ್ರಾಂತರು. ನೀವು ಸಾಕಾದಷ್ಟು ರಜೋಗುಣಿಗಳಾಗದಿದ್ದರೆ ನಿಮಗೆ ಇಹಪರಗಳೆರಡರಲ್ಲಿಯೂ ಭರವಸೆ ಇಲ್ಲ. ಭರತಖಂಡವೆಲ್ಲಾ ಘೋರತಮದಿಂದಾವೃತವಾಗಿದೆ. ಸ್ವಾಭಾವಿಕವಾಗಿ ಇದರ ಪರಿಣಾಮವೆ ಇಹದಲ್ಲಿ ಗುಲಾಮಗಿರಿ, ಪರದಲ್ಲಿ ನರಕವಾಸ.

೨೭ ಕರ್ಮಯೋಗ

೧. ಪ್ರಪಂಚದಲ್ಲಿ ಪ್ರತಿಯೊಬ್ಬರೂ ಕೆಲಸ ಮಾಡಬೇಕಾಗಿದೆ. ಯಾರು ಆತ್ಮತೃಪ್ತರಾಗಿರುವರೋ, ಆತ್ಮಾರಾಮರಾಗಿರುವರೋ, ಆತ್ಮನ ವಿನಃ ಯಾರು ಮತ್ತೇನನ್ನೂ ಚಿಂತಿಸುವುದಿಲ್ಲವೊ, ಯಾರಿಗೆ ಆತ್ಮವೇ ಸರ್ವಸ್ವವೋ ಅವರು ಮಾತ್ರ ಕೆಲಸ ಮಾಡುವುದಿಲ್ಲ. ಉಳಿದವರು ಕೆಲಸ ಮಾಡಲೇ ಬೇಕು.

೨. ಒಬ್ಬನಿಗೆ ತತ್ತ್ವಗಂಧವೇ ಇಲ್ಲದಿದ್ದರೂ. ಈಗ ದೇವರಲ್ಲಿ ನಂಬದೇ ಇದ್ದರೂ, ಹಿಂದೆ ಎಂದೂ ನಂಬದೇ ಇದ್ದರೂ, ಒಂದು ದಿನವೂ ಅವನು ಪ್ರಾರ್ಥನೆ ಮಾಡದೇ ಇದ್ದರೂ, ಕೇವಲ ಸತ್ಕರ್ಮಗಳ ಸಹಾಯದಿಂದ ತಾನು ತನ್ನ ಪ್ರಾಣ ಮತ್ತು ಸರ್ವವನ್ನೂ ಇತರರಿಗೆ ಧಾರೆ ಎರೆಯಬಲ್ಲಂತಹ ಸ್ಥಿತಿಗೆ ಬಂದಿರುವನೋ ಅವನು ಜ್ಞಾನಿ. ತತ್ತ್ವದ ಮೂಲಕ ಯಾವ ಗುರಿಗೆ ಬರುವನೋ ಅವನೂ ಅದೇ ಗುರಿಗೆ ಬರುವನು. ಜ್ಞಾನಿ, ಕರ್ಮಿ, ಭಕ್ತ ಎಲ್ಲರೂ ಒಂದೆಡೆ ಸಂಧಿಸುವರು. ಆ ಸ್ಥಳವೇ ಅಹಂಕಾರಶೂನ್ಯತೆ. ಜನರಿಗೆ ತಮ್ಮ ತಮ್ಮ ಧರ್ಮ ಮತ್ತು ತತ್ತ್ವಗಳಲ್ಲಿ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ಯಾರು ಇತರರಿಗಾಗಿ ತನ್ನ ಸರ್ವಸ್ವವನ್ನೂ ಧಾರೆ ಎರೆಯಬಲ್ಲನೋ ಅವನನ್ನು ಭಕ್ತಿ ಗೌರವಗಳಿಂದ ಪುರಸ್ಕರಿಸುವರು.

೩. ಕರ್ಮಯೋಗದ ಪ್ರಕಾರ ಯಾವ ಕರ್ಮವಾದರೂ ಆಗಲಿ ಅದು ತನ್ನ ಫಲವನ್ನು ಕೊಟ್ಟಲ್ಲದೆ ನಾಶವಾಗುವುದಿಲ್ಲ. ಪ್ರಪಂಚದಲ್ಲಿ ಯಾವ ಶಕ್ತಿಯೂ ಅದರ ಫಲವನ್ನು ತಡೆಗಟ್ಟಲಾರದು. ನಾನೊಂದು ಪಾಪಕಾರ್ಯವನ್ನು ಮಾಡಿದರೆ ಅದಕ್ಕಾಗಿ ನಾನು ಅನುಭವಿಸಬೇಕು. ಅದನ್ನು ತಡೆಯಲು ನಿಲ್ಲಿಸಲು ಯಾರಿಗೂ ಶಕ್ತಿ ಇಲ್ಲ. ಇದರಂತೆಯೇ ನಾನೊಂದು ಪುಣ್ಯ ಕೆಲಸವನ್ನು ಮಾಡಿದರೆ ಅದರ ಸತ್ ಫಲವನ್ನು ಕೂಡ ಯಾರಿಗೂ ತಡೆಯಲು ಶಕ್ತಿ ಇಲ್ಲ. ಕಾರ್ಯ ತನ್ನ ಪರಿಣಾಮವನ್ನು ಬೀರಲೇಬೇಕು. ಯಾವುದೂ ಅದನ್ನು ತಡೆಯಲಾರದು ; ಯಾವುದೂ ಅದನ್ನು ನಿಗ್ರಹಿಸಲಾರದು.

೪. ಹಲವು ಘಟನೆಗಳನ್ನು ಒಂದು ರೀತಿಯಲ್ಲಿ ಮನಸ್ಸು ತಿಳಿದುಕೊಳ್ಳುವುದೇ ನಿಯಮ. ಇದೆಲ್ಲಾ ಮನಸ್ಸಿನಲ್ಲಿರುವುದು. ಕೆಲವು ಘಟನೆಗಳು ಒಂದಾಗುತ್ತಲೂ ಒಂದೋ ಅಥವಾ ಒಂದೇ ಸಮನಾಗಿ ಆಗಿಯೊ, ಅವು ಮುಂದೆಯೂ

ಕೂಡ ಹಾಗೆಯೇ ಆಗುತ್ತದೆ ಎಂದು ರೂಢಿಯ ಮೇಲೆ ಮನಸ್ಸು ಇದನ್ನೆಲ್ಲಾ ಗ್ರಹಿಸುವುದು. ಇದನ್ನೆ ನಿಯಮ ಎನ್ನುವುದು.

೫. ಯಾರು ಮೌನದಾಳದಲ್ಲಿ ಮತ್ತು ಏಕಾಂತವಾಸದಲ್ಲಿ ಅತಿ ಪ್ರಚಂಡ ವಾದ ಕರ್ಮವನ್ನು ನೋಡಬಲ್ಲರೋ ಮತ್ತು ಪ್ರಚಂಡ ಕರ್ಮದಲ್ಲಿರುವಾಗಲೂ ಮರಳು ಕಾಡಿನ ಮೌನ ಮತ್ತು ಏಕಾಂತವನ್ನು ಅನುಭವಿಸಬಲ್ಲರೋ ಅವರೇ ಆದರ್ಶ ಮನುಷ್ಯರು. ಅವನಿಗೆ ನಿಗ್ರಹದ ರಹಸ್ಯ ಗೊತ್ತಿದೆ. ಅವನು ಇಂದ್ರಿಯ ಗೆದ್ದವನು. ಜನಭರಿತವಾದ ನಗರಿಯಲ್ಲಿ ಹೋಗುತ್ತಿದ್ದರೂ ಅವನ ಮನಸ್ಸು ಗುಹೆಯಲ್ಲಿ ಇದ್ದಂತೆ ಮೌನವಾಗಿರುವುದು. ಅವನಿಗೆ ಯಾವ ಶಬ್ದವೂ ಕೇಳು ವಂತೆ ಇಲ್ಲ. ಆದರೂ ಅವನು ಪ್ರಚಂಡವಾಗಿ ಕರ್ಮದಲ್ಲಿ ನಿರತನಾಗಿರುವನು. ಇದೇ ಕರ್ಮಯೋಗದ ಆದರ್ಶ. ನೀವು ಈ ಸ್ಥಿತಿಗೆ ಬಂದಿದ್ದರೆ ನಿಮಗೆ ಕರ್ಮ ರಹಸ್ಯ ಗೊತ್ತಿದೆ.

೬. ಕರ್ಮಯೋಗವೆಂದರೆ ಏನೆಂಬುದು ನಿಮಗೆ ಈಗ ಗೊತ್ತಾಗುವುದು. ಪ್ರಾಣ ಹೋದರೂ ಸರಿಯೇ, ಮರುಪ್ರಶ್ನೆ ಇಲ್ಲದೆ ಇತರರಿಗೆ ಸಹಾಯಮಾಡು ವುದು. ಸಾವಿರಾರು ವೇಳೆ ಮೋಸಹೋದರೂ ಸರಿಯೆ ಆದರೂ ಮರು ಪ್ರಶ್ನೆ ಹಾಕುವುದಿಲ್ಲ; ನೀನು ಮಾಡುತ್ತಿರುವುದು ಸರಿಯೇ ಎಂದು ಕುರಿತು ಆಲೋಚಿಸು ವುದಿಲ್ಲ. ಬಡವರಿಗೆ ನಿನ್ನ ಬಹುಮಾನವನ್ನು 'ತಗೊ' ಎಂದು ಎಸೆಯುವುದಲ್ಲ ಅಥವಾ ಅವರು ನಿಮಗೆ ಋಣಿಗಳಾಗಬೇಕು ಎಂದು ಭಾವಿಸುವುದೂ ಅಲ್ಲ. ಅದ ಕ್ಕಿಂತ ಹೆಚ್ಚಾಗಿ ದಾನ ಮಾಡುವುದಕ್ಕೆ ನಿನಗೊಂದು ಅವಕಾಶವನ್ನು ಕೊಟ್ಟರಲ್ಲ ಎಂದು ನೀವು ಅವರಿಗೆ ಋಣಿಗಳಾಗಬೇಕು.

೭. ಕರ್ಮಯೋಗವೆಂದರೇನು? ಕರ್ಮ ರಹಸ್ಯದ ಪರಿಜ್ಞಾನ. ಪ್ರಪಂಚದ ಘಟನೆಗಳಿಗೆ ಸಿಕ್ಕಿ ಜರ್ಝರಿತರಾದ ಮೇಲೆ, ಬೇಕಾದಷ್ಟು ಪೆಟ್ಟುತಿಂದು ಅನುಭವಿ ಸಿದ ಮೇಲೆ, ಪ್ರಪಂಚ ಎಂದರೆ ಏನು ಎಂಬುದನ್ನು ಅರಿಯುವುದಲ್ಲ. ಕರ್ಮ ಯೋಗ, ಕರ್ಮರಹಸ್ಯವನ್ನು ಕರ್ಮ ಮಾಡುವ ರೀತಿಯನ್ನು ಸಾಮರ್ಥ್ಯವನ್ನು ಬೋಧಿಸುವುದು.

೮. "ಅನವರತ ಕರ್ಮದಲ್ಲಿ ನಿರತನಾಗಿರು. ಆದರೆ ಕರ್ಮದಲ್ಲಿ ಆಸಕ್ತ ನಾಗಿರಕೂಡದು." ಯಾವುದರೊಂದಿಗೂ ತಾದಾತ್ಮ್ಯಭಾವವನ್ನು ತಾಳಬೇಡಿ. ನಿಮ್ಮ ಮನಸ್ಸು ಯಾವಾಗಲೂ ಸ್ವತಂತ್ರವಾಗಿರಲಿ. ನೀವು ನೋಡುವ ದುಃಖ ಯಾತನೆಗಳೆಲ್ಲ ಪ್ರಪಂಚದಲ್ಲಿ ಆವಶ್ಯಕವಾಗಿ ಇರಬೇಕಾದ ಸ್ಥಿತಿ. ದಾರಿದ್ರ್ಯ ಶ್ರೀಮಂತಿಕೆ ಮತ್ತು ದುಃಖಗಳೆಲ್ಲ ಕ್ಷಣಿಕ. ಅವೆಂದಿಗೂ ನಮ್ಮ ನೈಜ ಸ್ಥಿತಿಗೆ

ಸಂಬಂಧಿಸಿದುವಲ್ಲ. ನಮ್ಮ ಸ್ಥಿತಿ ಸುಖದುಃಖಗಳಾಚೆ ಇದೆ ; ಇಂದ್ರಿಯಕ್ಕೆ ಸಂಬಂಧಪಟ್ಟ ವಿಷಯಗಳಾಚೆ ಇದೆ, ಎಲ್ಲಾ ಬಗೆಯ ಕಲ್ಪನೆಗೂ ಅತೀತವಾಗಿದೆ. ಆದರೂ ನಾವು ಅನವರತ ಕರ್ಮದಲ್ಲಿ ನಿರತರಾಗಿರಬೇಕು. "ದುಃಖ ಬರುವುದು ಕರ್ಮದಿಂದಲ್ಲ, ಆಸಕ್ತಿಯಿಂದ." ನಾವು ಮಾಡುತ್ತಿರುವ ಕರ್ಮದೊಂದಿಗೆ ಆಸಕ್ತರಾದೊಡನೆ ನಾವು ದುಃಖಿಗಳಾಗುವೆವು. ನಾವು ಆಸಕ್ತರಾಗದೆ ಇದ್ದರೆ ದುಃಖಿಗಳಾಗುವುದಿಲ್ಲ.

೯. ನಾನು, ನನ್ನದು ಎಂಬುದೇ ದುಃಖಕ್ಕೆಲ್ಲಾ ಮೂಲಕಾರಣ. ಇದು ನನ್ನದು ಎಂದು ಭಾವಿಸಿದೊಡನೆ ಸ್ವಾರ್ಥತೆ ಬರುವುದು, ಸ್ವಾರ್ಥತೆ ದುಃಖವನ್ನು ತರುವುದು. ಪ್ರತಿಯೊಂದು ಸ್ವಾರ್ಥ ಆಲೋಚನೆ ಮತ್ತು ಕೆಲಸ ನಮ್ಮನ್ನು ಯಾವುದಕ್ಕೊ ಆಸಕ್ತರನ್ನಾಗಿ ಮಾಡುವುದು. ತಕ್ಷಣವೇ ನಾವು ಅದಕ್ಕೆ ಗುಲಾಮರಾಗುವೆವು. ನಾನು, ನನ್ನದು ಎಂದು ನನ್ನ ಚಿತ್ತದಲ್ಲಿ ಏಳುವ ಪ್ರತಿಯೊಂದು ಆಲೋಚನೆಯೂ ನಮ್ಮ ಕುತ್ತಿಗೆಗೆ ಕಟ್ಟುಹಾಕಿ ನಮ್ಮನ್ನು ಬಂಧಿಸುವುದು. ನಾವು ಹೆಚ್ಚು ಸ್ವಾರ್ಥಿಗಳಾದಷ್ಟೂ ನಮ್ಮ ದಾಸ್ಯ ಹೆಚ್ಚುವುದು. ಪ್ರಪಂಚದ ದೃಶ್ಯದ ಸೌಂದರ್ಯವನ್ನೆಲ್ಲಾ ಅನುಭವಿಸಿ, ಆದರೆ ಯಾವುದರೊಂದಿಗೂ ಇದು ನನ್ನದು ಎಂದು ಹೇಳಬೇಡಿ ಎಂದು ಕರ್ಮಯೋಗ ಬೋಧಿಸುವುದು.

೧೦. ಕರ್ಮಯೋಗ ಹೇಳುವುದೆ, ಮೊದಲು ಸ್ವಾರ್ಥಪ್ರವೃತ್ತಿಯನ್ನು ನಿಗ್ರಹಿಸಿ, ಅದರ ನಿಗ್ರಹ ನಿಮಗೆ ಸಾಧ್ಯವಾದ ಮೇಲೆ ಪುನಃ ಅದು ಸ್ವಾರ್ಥತೆಗೆ ಹೋಗದಂತೆ ನೋಡಿಕೊಳ್ಳಿ ಎಂಬುದನ್ನು. ಅನಂತರ ನೀವು ಎಷ್ಟು ಕೆಲಸ ಮಾಡಿದರೂ ಚಿಂತೆಯಿಲ್ಲ. ಯಾರೊಂದಿಗೆ ಬೇಕಾದರೂ ಬೆರೆಯಿರಿ, ಎಲ್ಲಿಗೆ ಬೇಕಾದರೂ ಹೋಗಿ. ಅದರ ದೋಷಕ್ಕೆ ನೀವು ಒಳಗಾಗುವುದಿಲ್ಲ. ಕಮಲದೆಲೆ ನೀರಿನ ಮೇಲೆ ಇದೆ. ನೀರು ಅದಕ್ಕೆ ಅಂಟಿಕೊಳ್ಳಲಾರದು, ನೀವೂ ಕೂಡ ಹಾಗೆಯೇ ಪ್ರಪಂಚದಲ್ಲಿ ಇರುವಿರಿ.

೧೧. ಅನಾಸಕ್ತಿ ಎಂದರೆ ನಮ್ಮ ದೇಹದ ಹೊರಗಡೆ ನಾವು ಏನನ್ನೊ ಬಳಿದುಕೊಳ್ಳಬೇಕೆಂದು ಅಲ್ಲ. ಅದೆಲ್ಲ ಮನಸ್ಸಿನಲ್ಲಿದೆ. ದೇಹ ಮತ್ತು ಇಂದ್ರಿಯಗಳಿಗೆ ನಮ್ಮಲ್ಲಿ ಆಸಕ್ತಿ ಇಲ್ಲದೆ ಇದ್ದರೆ ನಾವು ಎಲ್ಲಿದ್ದರೂ ಚಿಂತೆಯಿಲ್ಲ, ಏನು ಮಾಡಿದರೂ ಚಿಂತೆಯಿಲ್ಲ. ಒಬ್ಬ ಸಿಂಹಾಸನದ ಮೇಲಿದ್ದರೂ ಅನಾಸಕ್ತನಾಗಿರಬಲ್ಲ. ಮತ್ತೊಬ್ಬ ಹರಕಲು ಬಟ್ಟೆ ಹೊಂದಿದ್ದರೂ ಆಸಕ್ತನಾಗಿರಬಲ್ಲ. ಮೊದಲು ನಾವು ಅನಾಸಕ್ತಿಯನ್ನು ರೂಢಿಸಬೇಕು. ಅನಂತರ ಅನವರತ ಕೆಲಸದಲ್ಲಿ ತಲ್ಲೀನರಾಗಿರಬೇಕು. ಆಸಕ್ತಿಯನ್ನು ಹೇಗೆ ಕಳೆದುಕೊಳ್ಳಬಹುದು ಎಂಬುದನ್ನು ಕರ್ಮಯೋಗ ಬೋಧಿಸುವುದು. ಇದೇನೊ ಕಷ್ಟ.

೧೨. ಆಸಕ್ತಿಯನ್ನು ತ್ಯಜಿಸುವುದಕ್ಕೆ ಎರಡು ಮಾರ್ಗಗಳಿವೆ : ಒಂದು ಮಾರ್ಗವೇ ದೇವರು ಮತ್ತು ಬಾಹ್ಯ ಸಹಾಯವನ್ನು ನೆಚ್ಚದವರಿಗೆ. ಅವರು ತಮ್ಮ ಶಕ್ತಿ ಸಾಹಸದ ಮೇಲೆಯೇ ನಿಲ್ಲಬೇಕು. ಅವರು ತಮ್ಮ ಇಚ್ಛಾಶಕ್ತಿ, ವಿಮರ್ಶಾತ್ಮಕಶಕ್ತಿ ಇವುಗಳ ಸಹಾಯದಿಂದ "ನಾನು ಅನಾಸಕ್ತನಾಗಿರಬೇಕು" ಎಂದು ಸಂಕಲ್ಪ ತೊಡಬೇಕು. ಯಾರು ದೇವರನ್ನು ನಂಬುವರೋ ಅವರಿಗೆ ಬೇರೊಂದು ಮಾರ್ಗವಿದೆ. ಅದು ಸುಲಭ. ಅವರು ಫಲವನ್ನು ಭಗವಂತನಿಗೆ ಅರ್ಪಣೆ ಮಾಡುವರು. ಆವರು ಕೆಲಸ ಮಾಡಿದರೂ ಅನಾಸಕ್ತರು. ನಾನು ಏನು ನೋಡಲಿ, ಅನುಭವಿಸಲಿ, ಕೇಳಲಿ, ಮಾಡಲಿ ಎಲ್ಲಾ ಅವನಿಗಾಗಿ. ತಾನು ಯಾವ ಒಂದು ಒಳ್ಳೆಯ ಕೆಲಸವನ್ನು ಮಾಡಿದರೂ ಅದರಿಂದ ಯಾವ ಪ್ರಯೋಜನ ವನ್ನೂ ಹೊಗಳಿಕೆಯನ್ನೂ ನಿರೀಕ್ಷಿಸದೆ ಇರುವನು. ಇದೆಲ್ಲ ದೇವರ ಕೆಲಸ. ಫಲವನ್ನು ಅವನಿಗೆ ಅರ್ಪಿಸಿ.

೧೩. ಯಜ್ಞದ ಅಗ್ನಿಗೆ ಏನನ್ನೊ ಹಾಕುವ ಬದಲು ಹಗಲು ರಾತ್ರಿ ಈ ಮಹಾಯಜ್ಞವನ್ನು ಮಾಡಿ. ಅದೇ ನಿಮ್ಮ ಅಲ್ಪಾತ್ಮನ ಬಲಿ. "ಪ್ರಪಂಚದಲ್ಲಿ ನಾನು ಐಶ್ವರ್ಯವನ್ನು ಹುಡುಕುತ್ತಿದ್ದಾಗ ನನಗೆ ಸಿಕ್ಕಿದ ಏಕಮಾತ್ರ ಐಶ್ವರ್ಯವೇ ನೀನು. ನಾನು ನಿನಗೆ ನನ್ನ ಸರ್ವಸ್ವವನ್ನೂ ಅರ್ಪಿಸುವೆನು." ಹಗಲು ರಾತ್ರಿ ನಾವು ಇದನ್ನು ಮಾತ್ರ ಉಚ್ಚರಿಸೋಣ. "ನನಗೆ ಯಾವುದೂ ಬೇಡ. ಅದು ಒಳ್ಳೆಯದೊ ಕೆಟ್ಟದ್ದೊ ಅಥವಾ ಮಧ್ಯಸ್ಥಿಕೆಯದೊ, ನಾನು ಅದನ್ನು ಗಣನೆಗೇ ತರುವುದಿಲ್ಲ. ಅದನ್ನೆಲ್ಲಾ ನಿನಗೆ ಅರ್ಪಿಸುತ್ತೇನೆ." ಹಗಲು ರಾತ್ರಿ ನಮ್ಮ ತೋರಿಕೆಯ ಅಹಂಕಾರವನ್ನು ತ್ಯಜಿಸುವ. ಹೀಗೆ ಮಾಡುವುದು ನಮ್ಮ ಸ್ವಭಾವ ವಾಗಿ ಇದು ನಮ್ಮ ರಕ್ತ ನರ ಮತ್ತು ಮೆದುಳಿಗೆ ಸೇರಿ ನಮ್ಮ ದೇಹವನ್ನೆಲ್ಲಾ ಈ ಆತ್ಮತ್ಯಾಗಕ್ಕೆ ಸಿದ್ಧರಾಗುವ ತನಕ ಇದನ್ನು ಮಾಡೋಣ. ಅನಂತರ ನೀವು ಯುದ್ಧರಂಗಕ್ಕೆ ಬೇಕಾದರೂ ಹೋಗಬಹುದು. ಗುಂಡಿನ ಮಳೆ ಕರೆಯುತ್ತಿರಲಿ, ಯುದ್ಧದ ಗಲಿಬಿಲಿ ಎಷ್ಟೇ ಇರಲಿ. ಆದರೂ ನೀವು ಸ್ವತಂತ್ರರಾಗಿ ಶಾಂತ ರಾಗಿರುವಿರಿ.

೧೪. ನಾನು ಕರ್ಮ ಮಾಡಬೇಕೆಂದು ಬಯಸುವೆನು. ನಾನು ಒಬ್ಬನಿಗೆ ಒಳ್ಳೆಯದನ್ನು ಮಾಡಬೇಕೆಂದು ಬಯಸುತ್ತೇನೆ. ತೊಂಬತ್ತರಲ್ಲಿ ಒಬ್ಬ ನನಗೆ ಕೃತಜ್ಞತೆಯನ್ನೇ ತೋರುವುದಿಲ್ಲ. ಇದರಿಂದ ನನಗೆ ದುಃಖವಾಗುವುದು. ಇದ ರಿಂದ ಮಾನವರಲ್ಲಿ ಒಳ್ಳೆಯ ಕೆಲಸವನ್ನು ಮಾಡುವ ಉತ್ಸಾಹವೇ ಬತ್ತಿಹೋಗು ವುದು. ಈ ದುಃಖ ಮತ್ತು ಯಾತನೆಯ ಅಂಜಿಕೆ ನಮ್ಮ ಕೆಲಸದ ಬಹುಭಾಗ

ವನ್ನು ನಾಶಮಾಡುವುದು. ಕರ್ಮಕ್ಕಾಗಿ ಕರ್ಮವನ್ನು ಅನಾಸಕ್ತರಾಗಿ, ಯಾರಿಗೆ ಏತಕ್ಕೆ ಸಹಾಯವಾಯಿತೊ ಆದೊಂದನ್ನೂ ಗಮನಿಸದೆ ಕೆಲಸ ಮಾಡುವುದನ್ನು ಕರ್ಮಯೋಗ ಬೋಧಿಸುವುದು. ಕರ್ಮಯೋಗಿ ಕೆಲಸ ಮಾಡುತ್ತಾನೆ. ಏಕೆಂದರೆ ಇದು ಅವನ ಸ್ವಭಾವ. ಹಾಗೆ ಕೆಲಸ ಮಾಡುವುದರಿಂದ ತನಗೆ ಒಳ್ಳೆಯದಾಗು ವುದೆಂದು ಭಾವಿಸುತ್ತಾನೆ. ಇದಕ್ಕಿಂತ ಬೇರೆ ಏನನ್ನೂ ಅವನು ಆಶಿಸುವುದಿಲ್ಲ. ಅವನ ಸ್ವಭಾವ ದಾನಿಯದು. ಅವನು ಯಾವುದಕ್ಕೂ ಕೈ ಒಡ್ಡುವುದಿಲ್ಲ. ತಾನು ಕೊಡುತ್ತಿರುವೆನು ಎಂದು ತಿಳಿಯುತ್ತಾನೆ. ಅದಕ್ಕೆ ಪ್ರತಿಯಾಗಿ ಏನನ್ನೂ ಅವನು ಆಶಿಸುವುದಿಲ್ಲ. ಆದಕಾರಣ ಅವನು ದುಃಖದಿಂದ ಪಾರಾಗುತ್ತಾನೆ.

೧೫. ಕರ್ಮಯೋಗಿಯ ಗುರಿಯೇ ಎಲ್ಲಾ ಜೀವಿಗಳ ಗುರಿಯಂತೆಯೇ ಮುಕ್ತನಾಗುವುದು. ಅವನು ಇದನ್ನು ನಿಃಸ್ವಾರ್ಥ ಕರ್ಮದ ಮೂಲಕ ಸಾಧಿಸು ತ್ತಾನೆ. ನಾವು ಮಾಡಿದ ಪ್ರತಿಯೊಂದು ಸ್ವಾರ್ಥ ಕರ್ಮವೂ ನಮಗೆ ಆತಂಕವಾಗಿ ಗುರಿಸೇರುವುದು ತಡವಾಗುವುದು. ಪ್ರತಿಯೊಂದು ನಿಃಸ್ವಾರ್ಥ ಕರ್ಮವೂ ನಮ್ಮನ್ನು ಗುರಿಯೆಡೆಗೆ ಬೇಗ ಒಯ್ಯಲು ಸಹಾಯ ಮಾಡುವುದು. ಆದ ಕಾರಣವೇ ಧರ್ಮಕ್ಕೆ ನಾವು ಕೊಡುವ ಏಕಮಾತ್ರ ವಿವರಣೆಯೇ, "ಯಾವುದು ಸ್ವಾರ್ಥವೋ ಅದು ಅಧರ್ಮ, ಯಾವುದು ನಿಃಸ್ವಾರ್ಥವೋ ಅದು ಧರ್ಮ."

೧೬. ಕರ್ಮಯೋಗಿ ಯಾವ ಸಿದ್ಧಾಂತವನ್ನೂ ನಂಬಬೇಕಾಗಿಲ್ಲ. ಅವನು ದೇವರನ್ನೂ ನಂಬಬೇಕಾಗಿಲ್ಲ. ಅವನು ತನ್ನಾತ್ಮನ ವಿಚಾರವಾಗಿ ಆಗಲಿ ಯಾವ ತಾತ್ತ್ವಿಕ ಊಹಾಪೋಹಗಳನ್ನಾಗಲಿ ಮಾಡಬೇಕಾಗಿಲ್ಲ. ನಿಃಸ್ವಾರ್ಥನಾಗುವುದಕ್ಕೆ ಅವನಿಗೇ ಒಂದು ದಾರಿ ಇದೆ. ಅವನು ಅದನ್ನು ಸಾಧಿಸ ಬೇಕಾಗಿದೆ. ಅವನು ಪ್ರತಿಯೊಂದು ಕ್ಷಣದಲ್ಲಿಯೂ ಈ ಸಾಕ್ಷಾತ್ಕಾರವನ್ನು ಅನುಭವಿಸಬೇಕು. ಏಕೆಂದರೆ ಅವನು ಯಾವ ಸಿದ್ಧಾಂತದ ಸಹಾಯವೂ ಇಲ್ಲದೆ, ಜ್ಞಾನಿ ತನ್ನ ವಿಚಾರ ಮತ್ತು ಸ್ಫೂರ್ತಿ ಮೂಲಕ, ಭಕ್ತ ತನ್ನ ಭಕ್ತಿಯ ಮೂಲಕ ಏನನ್ನು ಸಾಧಿಸುತ್ತಾನೋ ಅದನ್ನು ಸಾಧಿಸಬೇಕಾಗಿದೆ.

೧೭. ಕರ್ಮಕ್ಷೇತ್ರಕ್ಕೆ ಧುಮುಕಿ ಅಲ್ಲಿ ಕರ್ಮರಹಸ್ಯವನ್ನು ಕಲಿಯಿರಿ. ಇದೇ ಕರ್ಮಯೋಗದ ಮಾರ್ಗ. ಕರ್ಮದ ಮಹಾಯಂತ್ರದ ಗಾಲಿಗಳಿಂದ ಓಡಿಹೋಗ ಬೇಡಿ, ಆದರ ಒಳಗೆ ಪ್ರವೇಶಿಸಿ ಕರ್ಮರಹಸ್ಯವನ್ನು ಅರಿಯಿರಿ. ಸರಿಯಾಗಿ ಒಳಗೆ ಕೆಲಸವನ್ನು ಮಾಡಿದರೆ ಆದರಿಂದ ಪಾರಾಗಲು ಸಾಧ್ಯ. ಈ ಯಂತ್ರದ ಮೂಲಕ ವಾಗಿಯೇ ನಾವು ಹೊರಗೆ ಬರಬಹುದು.

೧೮. ಕರ್ಮದ ಮೇಲೆ ಆಸಕ್ತಿ ಇಲ್ಲದೆ ಇದ್ದರೆ ನಾವು ಕೆಲಸ ಹೇಗೆ

ಮಾಡುವುದು ಎಂದು ಅನೇಕ ವೇಳೆ ನನ್ನನ್ನು ಕೇಳಿರುವರು. ನಾನೂ ಕೂಡ ಕೆಲವು ವರ್ಷಗಳ ಹಿಂದೆ ಹಾಗೆಯೇ ಭಾವಿಸಿದ್ದೆ. ಆದರೆ ನನಗೆ ವಯಸ್ಸಾದಂತೆಲ್ಲ ಅನುಭವವನ್ನು ಪಡೆದಂತೆಲ್ಲಾ, ಆದು ನಿಜವಲ್ಲ ಎಂದು ಗೊತ್ತಾಗುತ್ತಿದೆ. ಉದ್ವೇಗ ಎಷ್ಟು ಕಡಮೆ ಇದ್ದರೆ ನಾವು ಅಷ್ಟು ಚೆನ್ನಾಗಿ ಕೆಲಸ ಮಾಡಬಹುದು. ನಾವು ಉದ್ವೇಗಪರರಾದರೆ ಅಷ್ಟು ಶಕ್ತಿಯನ್ನೂ ವ್ಯಯಮಾಡಿಕೊಳ್ಳುವೆವು, ನಮ್ಮ ನರಗಳು ಶಿಥಿಲವಾಗುವುವು ; ಚಿತ್ತದ ಸ್ವಾಸ್ಥ್ಯಕ್ಕೆ ಭಂಗವುಂಟಾಗುವುದು, ಕೊನೆಗೆ ನಾವು ಸಾಧಿಸುವುದೋ ಅತ್ಯಲ್ಪ. ಯಾವ ಶಕ್ತಿ ಕರ್ಮದಲ್ಲಿ ವ್ಯಕ್ತವಾಗ ಬೇಕಿತ್ತೋ ಅದು ಉದ್ವೇಗದಲ್ಲಿ ನಷ್ಟವಾಗುವುದು. ಇದರಿಂದ ಏನೂ ಪ್ರಯೋ ಜನವಿಲ್ಲ. ಮನಸ್ಸು ಶಾಂತವಾಗಿ ಏಕಾಗ್ರವಾದಾಗ ಮಾತ್ರ ಅದರ ಶಕ್ತಿಯನ್ನೆಲ್ಲಾ ಸತ್ಕಾರ್ಯದಲ್ಲಿ ವ್ಯಕ್ತಗೊಳಿಸಬಹುದು. ಪ್ರಪಂಚದ ಪ್ರಚಂಡ ಕರ್ಮಯೋಗಿಗಳ ಜೀವನವನ್ನು ನೋಡಿದರೆ, ಅವರು ಅಸಾಧಾರಣವಾಗಿ ಶಾಂತಚಿತ್ತರಾಗಿ ದ್ದುದು ವ್ಯಕ್ತವಾಗುವುದು. ಯಾವುದೂ ಅವರ ಚಿತ್ತಸ್ವಾಸ್ಥ್ಯಕ್ಕೆ ಭಂಗ ತರಲಾರ ದಾಗಿತ್ತು. ಯಾರು ಕೋಪಿಷ್ಠರೋ ಅವರು ಹೆಚ್ಚು ಕೆಲಸವನ್ನು ಮಾಡಲಾರರು; ಯಾರು ಏನಾದರೂ ಉದ್ವಿಗ್ನರಾಗುವುದಿಲ್ಲವೋ ಅವರು ಬೇಕಾದಷ್ಟು ಕರ್ಮ ವನ್ನು ಮಾಡಬಲ್ಲರು. ಯಾರು ಕೋಪ, ದ್ವೇಷ ಅಥವಾ ಮತ್ತಾವುದಾದರೂ ಉದ್ವೇಗಕ್ಕೆ ವಶರಾಗುವರೊ ಅವರು ಕೆಲಸ ಮಾಡಲಾರರು. ಅವರು ಕರ್ಮದ ಭಾರಕ್ಕೆ ಕುಗ್ಗಿ ಹೋಗಿ ನುಚ್ಚು ನೂರಾಗುವರು. ಅನುಷ್ಠಾನದಲ್ಲಿ ಏನನ್ನೂ ಸಾಧಿಸಲಾರರು. ಯಾರು ಪ್ರಶಾಂತ ಚಿತ್ತರೋ, ಕ್ಷಮಾಗುಣಿಗಳೋ, ಸಮತ್ವ ದಲ್ಲಿ ನೆಲಸಿರುವರೋ, ಅಂತಹವರೇ ಅಪರಿಮಿತವಾದ ಕರ್ಮಗಳನ್ನು ಮಾಡ ಬಲ್ಲರು.

೧೯. ಪ್ರಪಂಚದಲ್ಲಿ ಒಂದು ಕಮಲ ಪತ್ರದಂತೆ ಇರಬೇಕು. ಅದು ನೀರಿ ನಲ್ಲಿ ಬೆಳೆದರೂ ನೀರಿಗೆ ಅಂಟಿಕೊಂಡಿರುವುದಿಲ್ಲ. ಹಾಗೆಯೇ ಮನುಷ್ಯ ಪ್ರಪಂಚ ದಲ್ಲಿ ಬಾಳಬೇಕು. ಅವನು ಹೃದಯವನ್ನು ಭಗವಂತನಿಗೆ ಅರ್ಪಿಸಿರಬೇಕು. ಕೈಗಳಲ್ಲಿ ಕರ್ಮ ಮಾಡುತ್ತಿರಬೇಕು.

೨೦. ಮಾತಿನಿಂದ ಏನೂ ಪ್ರಯೋಜನವಿಲ್ಲ. ಅರಗಿಳಿಗಳು ಬೇಕಾದರೆ ಅವನ್ನು ಮಾಡುತ್ತವೆ. ಅನಾಸಕ್ತರಾಗಿ ಕರ್ಮವನ್ನು ಮಾಡುವುದರ ಮೂಲಕ ಮಾತ್ರ ಮುಕ್ತಿಯನ್ನು ಪಡೆಯಬಹುದು.

೨೧. ಸ್ವಾಮೀಜಿ : ನಿಜ, ತಪಸ್ಸಿನಿಂದ ಶಕ್ತಿ ಬರುವುದು. ಆದರೆ ಇತರರಿಗೆ ಕರ್ಮಮಾಡುವುದೂ ಕೂಡ ತಪಸ್ಸೇ. ಕರ್ಮಯೋಗಿಗಳು ಕರ್ಮವನ್ನೇ

ತಪಸ್ಸೆಂದು ಭಾವಿಸುವರು. ಹೇಗೆ ಒಬ್ಬ ತಪಸ್ಸನ್ನು ಮಾಡಿದರೆ ಅವನ ಹೃದಯದಲ್ಲಿ ಅನುಕಂಪದ ಭಾವನೆ ಹುಟ್ಟಿ ಅವನು ಅನಾಸಕ್ತವಾದ ಕರ್ಮವನ್ನು ಮಾಡಲು ಪ್ರಚೋದಿಸುವುದೋ, ಹಾಗೆಯೇ ಇತರರಿಗೆ ಮಾಡಿದ ಕರ್ಮವೂ ತಪಸ್ಸಿನ ಫಲವಾದ ಚಿತ್ತಶುದ್ಧಿಯನ್ನೂ ಪರಮಾತ್ಮನ ಸಾಕ್ಷಾತ್ಕಾರವನ್ನೂ ನೀಡುವುದು.

ಶಿಷ್ಯ : ಆದರೆ ನಮ್ಮಲ್ಲಿ ಎಷ್ಟು ಜನ ಹಾಗೆ ಪ್ರಾರಂಭದಿಂದಲೂ ಹೃತ್ಪೂರ್ವಕವಾಗಿ ಇತರರ ಶ್ರೇಯಸ್ಸಿಗಾಗಿ ತಮ್ಮ ಪ್ರಾಣವನ್ನು ಅರ್ಪಿಸಬಲ್ಲಂತಹ ಉದಾರ ಹೃದಯಿಗಳು ಇರಬಹುದು ?

ಸ್ವಾಮೀಜಿ : ಎಷ್ಟು ಜನರ ಮನಸ್ಸು ತಪಸ್ಸಿನ ಕಡೆ ಇದೆ ? ಕಾಮ ಕಾಂಚನದ ಆಸೆಗಳು ಹೃದಯದಲ್ಲಿ ಅವಿತಿರುವಾಗ ಎಷ್ಟು ಜನರಿಗೆ ದೇವರು ಬೇಕು? ನಿಜವಾಗಿ ಅನಾಸಕ್ತರಾಗಿ ಕೆಲಸಮಾಡುವುದು ತಪಸ್ಸನ್ನು ಮಾಡುವಷ್ಟೇ ಕಷ್ಟ. ಆದಕಾರಣ ಯಾರು ಇತರರಿಗಾಗಿ ಕರ್ಮ ಮಾರ್ಗವನ್ನು ಹಿಡಿದಿರುವರೋ ಅವರಿಗೆ ವಿರೋಧವಾಗಿ ನಿನಗೆ ಏನನ್ನೂ ಟೀಕಿಸಲು ಅವಕಾಶವಿಲ್ಲ. ನಿನಗೆ ತಪಸ್ಸಿನಮೇಲೆ ಆಸೆಯಿದ್ದರೆ ಅದನ್ನೇ ಅನುಸರಿಸು. ಮತ್ತೊಬ್ಬನಿಗೆ ಕರ್ಮ ಸರಿಯಾಗಿ ತೋರುವುದು. ಅವನಿಗೆ ಕರ್ಮ ಮಾಡಬೇಡ ಎಂದು ಹೇಳಲು ನಿನಗೆ ಅಧಿಕಾರವಿಲ್ಲ. ಕರ್ಮ ತಪಸ್ಸಲ್ಲ ಎಂಬ ಭಾವನೆ ನಿನ್ನನ್ನು ಮೆಟ್ಟಿಕೊಂಡಿರುವಂತೆ ಕಾಣುವುದು,

ಶಿಷ್ಯ : ಹೌದು ಸ್ವಾಮೀಜಿ, ಇದಕ್ಕೆ ಮುಂಚೆ ನಾನು ಕರ್ಮವೆಂದರೆ ಮತ್ತೇನೋ ತಿಳಿದುಕೊಂಡಿದ್ದೆ.

ಸ್ವಾಮೀಜಿ : ನಾವು ಸಾಧನೆ ಭಜನೆಯನ್ನು ಪ್ರತಿದಿನವೂ ತಪ್ಪದೇ ಮಾಡಿದರೆ ಅದರ ಮೇಲೆ ಕ್ರಮೇಣ ನಮಗೊಂದು ಅಭಿರುಚಿ ಹುಟ್ಟುವುದು. ಹಾಗೆಯೇ ನಮಗೆ ಮುಂಚೆ ಇಚ್ಛೆ ಇಲ್ಲದೇ ಇದ್ದರೂ ಅನಾಸಕ್ತಿಯಿಂದ ಕೆಲಸವನ್ನು ಬಿಡದೆ ಮಾಡುತ್ತಿದ್ದರೆ ಅದರ ಮೇಲೆ ಒಂದು ಅಭಿರುಚಿ ಹುಟ್ಟುವುದು. ಇತರರಿಗೆ ಸೇವೆ ಮಾಡುವ ಅಭಿರುಚಿಯೂ ಹೀಗೆ ಹುಟ್ಟುವುದು ಗೊತ್ತಾಯಿತೆ? ನಿನಗೆ ಇಚ್ಛೆ ಇಲ್ಲದೇ ಇದ್ದರೂ ಹೀಗೆ ಸ್ವಲ್ಪ ಕೆಲಸಮಾಡು. ಅನಂತರ ನಿಜವಾಗಿ ತಪಸ್ಸು ಸಿದ್ಧಿಸಿದೆಯೋ ಇಲ್ಲವೆ ಎಂಬುದನ್ನು ನೋಡು. ಇತರರಿಗೆ ನಾವು ಮಾಡುವ ಕೆಲಸದಿಂದ ನಮ್ಮ ಮನೋವಕ್ರತೆಗಳೆಲ್ಲ ಮಾಯವಾಗುವುವು. ಕ್ರಮೇಣ ಇತರರಿಗೆ ಅನಾಸಕ್ತಿಯಿಂದ ಕೆಲಸ ಮಾಡಲು ಶಕ್ತರಾಗುವೆವು.

ಶಿಷ್ಯ: ಇತರರಿಗೆ ಒಳ್ಳೆಯದನ್ನು ತಾನೇ ಏತಕ್ಕೆ ಮಾಡಬೇಕು ಸ್ವಾಮೀಜಿ?

ಸ್ವಾಮೀಜಿ : ಇದು ಆತ್ಮೋದ್ಧಾರಕ್ಕಾದರೂ ಆವಶ್ಯಕ. ದೇಹ ಇತರರ

ಸೇವೆಗೆ ಮುಂಡುಂಪಾಗಿದೆ ಎಂದು ಭಾವಿಸಿದಾಗ ನಮ್ಮ ಅಹಂಕಾರವನ್ನು ನಾವು ಮರೆಯುವೆವು. ಅಹಂಕಾರ ಎಂದರೆ ಆದು ದೇಹ ಎಂಬ ಭಾವನೆ ಸಾಮಾನ್ಯವಾಗಿ ಬಂದು ಹೋಗಿದೆ. ಅನಂತರ ನಮ್ಮಲ್ಲಿ ದೇಹಾಭಿಮಾನ ಶೂನ್ಯವಾಗುವುದು. ನೀನು ಎಷ್ಟು ಜಾಸ್ತಿ ಇತರರ ಹಿತವನ್ನು ಕುರಿತು ಆಲೋಚಿಸುವೆಯೋ ಅಷ್ಟು ಹೆಚ್ಚು ನೀನು ನಿನ್ನ ಸ್ವಾರ್ಥವನ್ನು ಮರೆಯುವೆ. ಹೀಗೆ ಕ್ರಮೇಣ ಕರ್ಮದಿಂದ ನಿನ್ನ ಹೃದಯ ಪರಿಶುದ್ಧವಾದ ಮೇಲೆ ನಿನ್ನಾತ್ಮವೇ ಎಲ್ಲರಲ್ಲಿಯೂ ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿದೆ ಎನ್ನುವುದು ಗೊತ್ತಾಗುವುದು. ಇತರರಿಗೆ ಹಿತವನ್ನು ಮಾಡುವುದು ಒಬ್ಬನ ಆತ್ಮಸಾಕ್ಷಾತ್ಕಾರಕ್ಕೆ ಮಾರ್ಗ ಎಂಬುದು ಗೊತ್ತಾಗುವುದು. ಭಗವಂತನ ಸಾಕ್ಷಾತ್ಕಾರಕ್ಕೆ ಕರ್ಮ ಕೂಡ ಒಂದು ಮಾರ್ಗ ಎಂಬುದನ್ನು ಅರಿ. ಕರ್ಮದ ಗುರಿ ಕೂಡ ಆತ್ಮಸಾಕ್ಷಾತ್ಕಾರವೆ. ಹೇಗೆ ಅದನ್ನು ಜ್ಞಾನ ಮತ್ತು ಭಕ್ತಿಗಳ ಮೂಲಕ ಪಡೆದುಕೊಳ್ಳುವೆವೋ ಹಾಗೆಯೇ ಕರ್ಮದ ಮೂಲಕವೂ ಪಡೆದುಕೊಳ್ಳುವೆವು.

೨೨. ಪ್ರಪಂಚವನ್ನು ತ್ಯಜಿಸುವುದು ಎಂಬುದನ್ನು ಹಿಂದಿನ ದೃಷ್ಟಿಯಲ್ಲಿ ನೋಡಿದರೆ ಅದು ಹೀಗಾಗುವುದು: ನಾವು ಕೆಲಸಮಾಡಕೂಡದು, ಸೋಮಾರಿಗಳಾಗಿರಬೇಕು, ಒಂದು ಮಣ್ಣು ಮುದ್ದೆಯಂತೆ ಏನನ್ನೂ ಮಾಡದೆ, ಏನನ್ನೂ ಯೋಚಿಸದೆ ಇರಬೇಕು. ಪ್ರಕೃತಿಯ ಪಾಶಕ್ಕೆ ಸಿಕ್ಕಿ ಅದು ಹೇಳಿದಂತೆ ಕೇಳುತ್ತಾ ಇರಬೇಕು. ಇದೇ ಅದರ ಪರಿಣಾಮವಾಗುವುದು. ಆದರೆ ನಮಗೆ ಬೇಕಾಗಿರುವುದು ಅದಲ್ಲ. ನಾವು ಕೆಲಸ ಮಾಡಬೇಕು. ಎಲ್ಲೆಡೆಯೂ ಹೀನ ಆಸೆಗಳಿಂದ ಪ್ರೇರೇಪಿತನಾದ ಸಾಧಾರಣ ಮಾನವನಿಗೆ ಕರ್ಮ ಮಾಡುವುದಕ್ಕೆ ಏನು ಗೊತ್ತು? ಯಾರಿಗೆ ತನ್ನ ಸ್ವಂತ ಆಸೆ ಇಲ್ಲವೋ, ಯಾವ ವಿಧವಾದ ಸ್ವಾರ್ಥಭಾವನೆಯೂ ಇಲ್ಲವೋ, ಅವನು ಮಾತ್ರ ಕರ್ಮ ಮಾಡಬಲ್ಲ. ಯಾರಿಗೆ ಪ್ರಾಪಂಚಿಕ ಉದ್ದೇಶಗಳಿಲ್ಲವೊ ಅವನು ಕರ್ಮ ಮಾಡಬಲ್ಲ. ಯಾರಿಗೆ ಕರ್ಮದಿಂದ ಏನೂ ಪ್ರಯೋಜನವಿಲ್ಲವೋ ಅವನು ಕರ್ಮಮಾಡಬಲ್ಲ.

೨೮ ಜ್ಞಾನ ಮತ್ತು ಅಜ್ಞಾನ

೧. ನೀನಾಗಲೇ ಶುದ್ಧ, ನೀನಾಗಲೇ ಮುಕ್ತ. ನೀನು ಮುಕ್ತನೆಂದು ಭಾವಿಸಿದರೆ ಈ ಕ್ಷಣವೇ ಮುಕ್ತ. ನೀನು ಬದ್ಧನೆಂದು ಭಾವಿಸಿದರೆ ಬದ್ಧ. ಧೀರವಾದ ನುಡಿಗಳಿವು. ಇದು ನಮ್ಮನ್ನು ಈಗ ಅಂಜಿಸಬಹುದು, ಆದರೆ ಇದನ್ನು ನೀವು ಕುರಿತು ಆಲೋಚಿಸಿದರೆ, ಇದನ್ನು ನಿಮ್ಮ ಜೀವನದಲ್ಲೇ ತಿಳಿದುಕೊಂಡರೆ, ಆಗ ನಾನು ಹೇಳಿರುವುದು ಗೊತ್ತಾಗುವುದು. ಮುಕ್ತಿ ನಿಮ್ಮ ಸ್ವಭಾವವಲ್ಲದೆ ಇದ್ದರೆ, ನೀವೆಂದಿಗೂ ಮುಕ್ತರಾಗಲಾರಿರಿ. ನೀವು ಮುಂಚೆ ಮುಕ್ತರಾಗಿದ್ದು ಹೇಗೋ ಅದನ್ನು ಕಳೆದುಕೊಂಡಿದ್ದರೆ ನೀವು ಮುಕ್ತರಾಗಿಯೇ ಇರಲಿಲ್ಲ ಎಂದು ತೋರುವುದು. ನೀವು ಮುಕ್ತರಾಗಿದ್ದರೆ ಏತರಿಂದ ನೀವು ಅದನ್ನು ಕಳೆದುಕೊಳ್ಳುತ್ತಿದ್ದಿರಿ ?

೨. ನಾನಾ ಬಣ್ಣದ ಮುಗಿಲುಗಳು ಆಕಾಶದಲ್ಲಿ ಏಳುತ್ತವೆ. ಅವು ಕೆಲವು ಕಾಲ ಅಲ್ಲಿದ್ದು ಅನಂತರ ಮಾಯವಾಗಿ ಹೋಗುತ್ತವೆ. ಬದಲಾಯಿಸುತ್ತಿರುವುದು ಮೋಡ. ಆದಕಾರಣ ನೀವು ಯಾವಾಗಲೂ ಮುಕ್ತರೇ, ನಿತ್ಯ ಮುಕ್ತರೆ. ಯಾವುದೂ ನಿಮ್ಮ ಸ್ವಭಾವವನ್ನು ಬದಲಾಯಿಸಲಾರದು. ನಾನು ಬದ್ಧ, ನಾನು ಬದ್ಧ, ನಾನು ಪುರುಷ ಅಥವಾ ಸ್ತ್ರೀ, ಅಥವಾ ನಾನು ಪಾಪಿ, ನನಗೆ ಮನಸ್ಸಿದೆ, ಆಲೋಚನೆ ಇದೆ, ಆಲೋಚಿಸುತ್ತೇನೆ, ಇವುಗಳೆಲ್ಲಾ ಒಂದು ಭ್ರಾಂತಿ. ನೀವು ಎಂದಿಗೂ ಆಲೋಚಿಸುವುದಿಲ್ಲ. ನಿಮಗೆ ಎಂದಿಗೂ ದೇಹವಿರಲಿಲ್ಲ, ನೀವೆಂದಿಗೂ ಬದ್ಧರಲ್ಲ,

೩. ನೀನೇ ಎಲ್ಲರಲ್ಲಿಯೂ ಇರುವೆ ; ನೀನೇ ಎಲ್ಲವೂ ಆಗಿರುವೆ. ಯಾರನ್ನು ಬಿಡುವುದು ಯಾರನ್ನು ತೆಗೆದುಕೊಳ್ಳುವುದು ? ನೀನೇ ಸರ್ವವೂ ಆಗಿರುವೆ. ಈ ಜ್ಞಾನ ಬಂದೊಡನೆಯೇ ಅಜ್ಞಾನ ತೊಲಗುವುದು.

೪. ಕಾಲದೇಶ ನಿಮಿತ್ತಗಳೆಲ್ಲ ಒಂದು ಭ್ರಾಂತಿ. ನಾನು ಬದ್ಧ ಮತ್ತು ಮುಕ್ತನಾಗಬೇಕು ಎಂದು ಬಯಸುವುದು ನಿನ್ನ ಒಂದು ಜಾಡ್ಯ, ಅಷ್ಟೆ. ನೀನು ನಿರ್ವಿಕಾರಿ. ಮಾತನಾಡದೆ ಕುಳಿತುಕೊ. ಎಲ್ಲಾ ಮಾಯವಾಗಿ ಹೋಗಲಿ. ಇವೆಲ್ಲಾ ಕನಸುಗಳು ಮಾತ್ರ, ಭೇದಭಾವವಿಲ್ಲ, ವ್ಯತ್ಯಾಸವಿಲ್ಲ. ಇದೆಲ್ಲಾ ಒಂದು ಭ್ರಾಂತಿ. ಆದಕಾರಣ ಮೌನವಾಗಿರು. ನೀನಾರು ಎಂಬುದನ್ನು ಅರಿ.

೫. ಅಂಜದಿರು: ನೀನೇ ಅಸ್ತಿತ್ವದ ಸಾರ. ಶಾಂತನಾಗು, ಉದ್ವಿಗ್ನತೆಗೆ ಅವಕಾಶ ಕೊಡಬೇಡ. ನೀನೆಂದಿಗೂ ಬಂಧನದಲ್ಲಿರಲಿಲ್ಲ. ನೀನೆಂದಿಗೂ ಪಾಪಿಯಾಗಲಿ ಪುಣ್ಯವಂತನಾಗಲಿ ಆಗಿರಲಿಲ್ಲ. ಈ ಭ್ರಾಂತಿಯಿಂದ ಪಾರಾಗಿ ಶಾಂತನಾಗು. ಎಲ್ಲಾ ಆತ್ಮಮಯ. ಮಾತನಾಡುವುದೇ, ಆಲೋಚಿಸುವುದೇ ಮೌಢ್ಯ. ಪದೇ ಪದೇ ನಾನೇ ಆತ್ಮ, ನಾನೇ ಆತ್ಮ ಎಂದು ಸಾರು. ಉಳಿದುದೆಲ್ಲಾ ತೊಲಗಲಿ.

೬. ಅಜ್ಞಾನವೇ ಎಲ್ಲಾ ಬಂಧನದ ಮೂಲ. ಅಜ್ಞಾನದಿಂದ ನಾವು ಬದ್ಧರಾಗಿರುವೆವು. ನಮ್ಮನ್ನು ಅಜ್ಞಾನದಿಂದ ಪಾರುಮಾಡಿ ಮುಕ್ತರನ್ನಾಗಿ ಮಾಡುವುದು ಜ್ಞಾನ. ಈ ಜ್ಞಾನ ಹೇಗೆ ಬರುವುದು ? ಭಕ್ತಿಯ ಮೂಲಕ ಭಗವಂತನ ಪೂಜೆಯಿಂದ, ಪ್ರತಿಯೊಬ್ಬರೂ ಭಗವಂತನ ಆಲಯ, ಅವನು ಅಲ್ಲಿ ವಾಸಿಸುವನು ಎಂದು ತಿಳಿಯುವುದರ ಮೂಲಕ ಭಕ್ತಿ ಬರುವುದು. ಪರಮಪ್ರೇಮದಿಂದ ಜ್ಞಾನ ಪ್ರಾಪ್ತವಾಗುವುದು, ಅಜ್ಞಾನ ಮಾಯವಾಗುವುದು, ಬಂಧನಗಳು ಕಳಚಿ ಬೀಳುವುವು ಮತ್ತು ಆತ್ಮ ಮುಕ್ತನಾಗುವನು.

೭. ಮಾನವ ಜೀವನವೆಂಬ ದೊಡ್ಡ ಗೊಂದಲದಲ್ಲಿ ನಾವೇನಾದರೂ ಯುಕ್ತಿಯುಕ್ತತೆಯನ್ನು ನೋಡಬೇಕಾದರೆ, ವಿಚಾರಕ್ಕೆ ಅತೀತರಾಗಿ ಹೋಗಬೇಕಾಗಿದೆ. ನಾವಿದನ್ನು ವೈಜ್ಞಾನಿಕವಾಗಿ, ನಿಧಾನವಾಗಿ, ದಿನನಿತ್ಯವೂ ಅದನ್ನು ಅಭ್ಯಾಸ ಮಾಡುತ್ತಾ, ಸಾಧಿಸಬೇಕು. ನಾವು ಎಲ್ಲಾ ಮೂಢ ಭಾವನೆಗಳನ್ನೂ ಕಿತ್ತೊಗೆಯಬೇಕು. ನಾವು ಇತರ ವಿಜ್ಞಾನಗಳನ್ನು ಅಧ್ಯಯನ ಮಾಡುವಂತೆಯೇ ಅತೀಂದ್ರಿಯ ಜ್ಞಾನವನ್ನೂ ಅಭ್ಯಾಸ ಮಾಡಬೇಕು. ನಾವು ವಿಚಾರದ ಮೇಲೆ ತಳಹದಿಯನ್ನು ಹಾಕಿ ಅದು ಎಲ್ಲಿಯವರೆಗೆ ನಮ್ಮನ್ನು ಕರೆದುಕೊಂಡು ಹೋಗುವುದೋ ಅಲ್ಲಿಯವರೆಗೆ ಅದನ್ನು ಅನುಸರಿಸಬೇಕು. ಯುಕ್ತಿ ಎಲ್ಲಿ ಸೋಲುವುದೋ ಅಲ್ಲಿ ಯುಕ್ತಿಯೇ ತನಗೆ ಅತೀತವಾದ ಅವಸ್ಥೆಯನ್ನು ತೋರುವುದು.

೮. ಇಂದು ಪ್ರಶ್ನೆಗಳ ಪ್ರಶ್ನೆಯೇ ಇದು: ಗೊತ್ತಿರುವುದು ಮತ್ತು ಗೊತ್ತಾಗಲು ಸಾಧ್ಯವಾಗಿರುವುದು ಇವುಗಳೆರಡನ್ನೂ, ಅಜ್ಞೇಯ ಮತ್ತು ಅನಂತ ಅಜ್ಞಾತ ಆವರಿಸಿರುವುದರಿಂದ ಅನಂತ ಅಜ್ಞೇಯವನ್ನು ಅರಿಯಬೇಕೆಂದು ಏಕೆ ಯತ್ನಿಸುವುದು ? ನಮಗೆ ತಿಳಿದಿರುವುದರಲ್ಲೇ ಏತಕ್ಕೆ ತೃಪ್ತರಾಗಬಾರದು ? ತಿನ್ನುವುದು, ಕುಡಿಯುವುದು ಮತ್ತು ಸಮಾಜಕ್ಕೆ ಸ್ವಲ್ಪ ಒಳ್ಳೆಯದನ್ನು ಮಾಡುವುದರಲ್ಲೆ ನಾವೇಕೆ ತೃಪ್ತರಾಗಬಾರದು ? ಈ ಭಾವನೆ ಈಗ ಇದೆ. ದೊಡ್ಡ ಪಂಡಿತನಿಂದ ಹಿಡಿದು ಹುಡುಗನವರೆಗೆ ಎಲ್ಲರೂ ಪ್ರಪಂಚಕ್ಕೆ ಒಳ್ಳೆಯದನ್ನು

ಮಾಡಿ ಎಂದು ಹೇಳುತ್ತಿರುವರು. ಒಂದು ಅತೀತವಾದ ವಸ್ತು ಇದೆ ಎಂದು ತಿಳಿಯಲೆತ್ನಿಸುವುದು ಬರೀ ವ್ಯರ್ಥ ಎನ್ನುವರು. ಇದು ಎಷ್ಟು ವ್ಯಾಪಿಸಿದೆ ಎಂದರೆ ಇದೇ ಸ್ವತಃಸಿದ್ಧ ಸತ್ಯವಾಗಿ ಕಾಣುತ್ತಿದೆ.

ಆದರೆ ದೇವರ ದಯೆಯಿಂದ ನಾವು ಅತೀತದ ವಿಷಯವಾಗಿ ವಿಚಾರ ಮಾಡಬೇಕಾಗಿದೆ. ಈ ವರ್ತಮಾನಕಾಲ, ಈಗ ವ್ಯಕ್ತವಾಗಿರುವುದು, ಅವ್ಯಕ್ತದ ಯಾವುದೋ ಒಂದು ಅಂಶ, ಅನಂತ ಆಧ್ಯಾತ್ಮಿಕದ ಯಾವುದೋ ಅಂಶ. ಒಂದು ಚೂರು ಮಾತ್ರ ಇಂದ್ರಿಯ ಗ್ರಾಹ್ಯ ಪ್ರಪಂಚವಾಗಿದೆ. ನಮ್ಮೆದುರಿಗೆ ಇರುವುದನ್ನು, ಇದಕ್ಕೆ ಅತೀತವಾದ ವಸ್ತುವನ್ನು ತಿಳಿದುಕೊಳ್ಳಲಾರದೆ ವಿವರಿಸುವುದು ಹೇಗೆ ? ತಿಳಿದುಕೊಳ್ಳುವುದು ಹೇಗೆ ?

೯. ಕ್ಯಾಂಟ್ ನಿಸ್ಸಂದೇಹವಾಗಿ ಯುಕ್ತಿ ಎಂಬ ವಜ್ರಕೋಟೆಯನ್ನು ಯಾರೂ ಭೇದಿಸಿ ಹೋಗಲಾರರೆಂದು ತೋರಿರುವನು. ಆದರೆ ಮಾನವ ಭಾವನೆಯೆಲ್ಲ ಪ್ರಾರಂಭಿಸುವುದೇ ಇಲ್ಲಿ. ಯುಕ್ತಿಗೆ ಅತೀತವಾಗಿರುವುದನ್ನು ಅರಸಲು ಸಾಹಸಪಟ್ಟು, ಅದನ್ನು ಕಂಡುಹಿಡಿಯುವುದರಲ್ಲಿ ಭಾರತ ಜಯಶೀಲವಾಗಿದೆ. ಅಲ್ಲಿಂದ ಮಾತ್ರ ಈಗಿನ ಸ್ಥಿತಿಗೆ ವಿವರಣೆಯನ್ನು ಕೊಡುವುದು ಸಾಧ್ಯ. ಪ್ರಪಂಚಕ್ಕೆ ಅತೀತವಾದ ಅವಸ್ಥೆಗೆ ನಮ್ಮನ್ನು ಒಯ್ಯುವುದರ ಪ್ರಯೋಜನ ಇದು. "ನೀನು ನಮ್ಮ ತಂದೆ, ಅಜ್ಞಾನಸಾಗರದಿಂದ ನಮ್ಮನ್ನು ಪಾರುಮಾಡು." ಇದೇ ಧರ್ಮದ ವಿಜ್ಞಾನ, ಇನ್ನಾವುದೂ ಅಲ್ಲ.

೧೦. ಯುಕ್ತಿಯ ಶಿಸ್ತಿಗೆ ತಾವು ಬದ್ಧರಲ್ಲ ಎಂದು ಧರ್ಮಗಳು ಏತಕ್ಕೆ ತಿಳಿಯಬೇಕೊ ಯಾರಿಗೂ ಗೊತ್ತಿಲ್ಲ. ಯುಕ್ತಿಯ ನೆಲೆ ಇಲ್ಲದೇ ಇದ್ದರೆ ಧರ್ಮದ ವಿಷಯದಲ್ಲಿ ಕೂಡ ಯಾವ ನಿಜವಾದ ತೀರ್ಪನ್ನೂ ಕೊಡಲು ಆಗುವುದಿಲ್ಲ. ಒಂದು ಧರ್ಮ ಯಾವುದೋ ಅತಿಹೀನವಾದುದನ್ನು ಮಾಡಿ ಎಂದು ಹೇಳಬಹುದು. ಉದಾಹರಣೆಗೆ ಮಹಮ್ಮದೀಯ ಧರ್ಮ ಅನ್ಯಧರ್ಮದವರನ್ನು ಕೊಲ್ಲುವುದಕ್ಕೆ ಅವಕಾಶಕೊಡುವುದು. ಖೊರಾನಿನಲ್ಲೆ ಕಾಫಿರರು ಮಹಮ್ಮದೀಯರಾಗದೇ ಇದ್ದರೆ ಕೊಲ್ಲಿ ಎಂದು ಹೇಳಿದೆ. ಅವರನ್ನು ಬೇಕಾದರೆ ಕೊಲ್ಲಬಹುದು, ಸುಡಬಹುದು. ನೀವು ಅವನಿಗೆ ಇದು ತಪ್ಪು ಎಂದು ಹೇಳಿದರೆ, ಅವನು "ನಿಮಗೆ ಇದು ತಪ್ಪು, ಒಳ್ಳೆಯದಲ್ಲ ಎಂದು ಹೇಗೆ ಗೊತ್ತು ? ಇದು ಒಳ್ಳೆಯದು ಎಂದು ನಮ್ಮ ಶಾಸ್ತ್ರ ಹೇಳುವುದು" ಎನ್ನುತ್ತಾನೆ. ನಿಮ್ಮ ಗ್ರಂಥ ಬಹಳ ಪುರಾತನ ಎಂದರೆ ಬೌದ್ಧರು ಬಂದು ತಮ್ಮ ಗ್ರಂಥ ಅದಕ್ಕಿಂತಲೂ ಹಳೆಯದು ಎನ್ನುವರು. ಕೊನೆಗೆ ಹಿಂದೂ ಬಂದು ತಮ್ಮದೇ ಎಲ್ಲರ ಗ್ರಂಥಕ್ಕಿಂತಲೂ ಅತ್ಯಂತ ಹಳೆಯದು

ಎನ್ನುವನು. ಆದಕಾರಣ ಕೇವಲ ಗ್ರಂಥಗಳನ್ನು ಕುರಿತು ಹೇಳಿದರೆ ಸಾಲದು. ಇದನ್ನೆಲ್ಲಾ ಹೋಲಿಸುವುದಕ್ಕೆ ಒಂದು ನಿಲುವಾದರೂ ಯಾವುದು ? ನೀವು ಬೈಬಲಿನಲ್ಲಿ ಬರುವ ಗುಡ್ಡದ ಮೇಲಿನ ಉಪದೇಶವನ್ನು ನೋಡಿ ಎಂದರೆ ಮುಹಮ್ಮದೀಯರು, ಖೊರಾನಿನಲ್ಲಿ ಬರುವ ನೀತಿಯನ್ನು ನೋಡಿ ಎನ್ನುವರು. ಇವುಗಳೆರಡರಲ್ಲಿ ಯಾವುದು ಮೇಲು ಎಂದು ನಿಷ್ಕರ್ಷಿಸುವವನು ಯಾರು ಎಂದು ಮುಹಮ್ಮದಿಯರು ಕೇಳುವರು. ಇವರಿಬ್ಬರಿಗೆ ಜಗಳವಿರುವಾಗ ನ್ಯೂಟೆಸ್ಟ ಮೆಂಟಾಗಲಿ ಖೊರಾನಾಗಲಿ ಯಾವುದೋ ಒಂದು ಇದನ್ನು ತೀರ್ಮಾನಿಸುವ ಹಾಗಿಲ್ಲ. ಯಾವುದಾದರೊಂದು ಸ್ವತಂತ್ರವಾದ ಪ್ರಮಾಣ ಇರಬೇಕು. ಅದು ಯಾವುದೋ ಗ್ರಂಥ ಆಗಲಾರದು, ಅದು ಎಲ್ಲರಿಗೂ ಅನ್ವಯಿಸುವುದಾಗಿರಬೇಕು. ಯುಕ್ತಿಗಿಂತ ಎಲ್ಲರಿಗೂ ಅನ್ವಯಿಸುವುದು ಬೇರಾವುದಿದೆ ? ಯುಕ್ತಿ ಏನೂ ಅಷ್ಟು ಬಲವಾದುದಲ್ಲ, ಇದು ಯಾವಾಗಲೂ ನಮಗೆ ಸತ್ಯವನ್ನು ತೋರಲಾರದು. ಅನೇಕ ವೇಳೆ ಇದು ತಪ್ಪು ಮಾಡುವುದು ಎಂದು ಹೇಳುವರು. ಆದಕಾರಣ ನಿರ್ಣಯವೇ ಚರ್ಚಿನ ಪ್ರಮಾಣವನ್ನು ಒಪ್ಪಬೇಕು ಎಂದು ನಿರ್ಣಯಿಸುವರು. ನನಗೆ ರೋಮನ್ ಕ್ಯಾಥೋಲಿಕ್ ಒಬ್ಬರು ಇದನ್ನು ಹೇಳಿದರು. ಆದರೆ ಇವರ ತರ್ಕ ನನಗೆ ಚೆನ್ನಾಗಿ ಅರ್ಥವಾಗಲಿಲ್ಲ. ಅದರ ಬದಲು ನಾನು ಹೇಳುವುದೇನೆಂದರೆ, ಯುಕ್ತಿ ಅಷ್ಟು ದುರ್ಬಲವಾದರೆ. ಪಾದ್ರಿಗಳ ತಂಡ ಅದಕ್ಕಿಂತಲೂ ದುರ್ಬಲ. ಆದಕಾರಣ ನಾನು ಅವರ ತೀರ್ಪನ್ನು ಒಪ್ಪುವುದಿಲ್ಲ. ಯುಕ್ತಿ ಹೇಳುವುದನ್ನು ನಾನು ಕೇಳುತ್ತೇನೆ. ಯುಕ್ತಿಯಲ್ಲಿ ಎಷ್ಟೇ ಲೋಪದೋಷಗಳಿದ್ದರೂ ಇವುಗಳ ಮೂಲಕ ಒಂದಲ್ಲ ಒಂದು ದಿನ ಸತ್ಯದ ಕಡೆ ಹೋಗಲು ಭರವಸೆ ಇದೆ. ಆದರೆ ಬೇರೆ ಮಾರ್ಗದಲ್ಲಾದರೊ ಈ ಭರವಸೆಯೇ ಇಲ್ಲ.

೧೧. ಸತ್ಯಕ್ಕೆ ಅಂತಹ ಕಾಂತಿ ಇದೆ. ಯಾರು ಅದನ್ನು ನೋಡುವರೋ ಅವರಿಗೆ ಇದು ಸತ್ಯ ಎಂದು ಸ್ಪಷ್ಟವಾಗಿ ಗೊತ್ತಾಗುವುದು. ಸೂರ್ಯನನ್ನು ನೋಡ ಬೇಕಾದರೆ ಯಾವ ದೀವಟಿಗೆಯೂ ಬೇಕಾಗಿಲ್ಲ. ಸೂರ್ಯ ಸ್ವಯಂ ಪ್ರಕಾಶಮಾನ. ಸತ್ಯಕ್ಕೆ ಯಾವುದಾದರೂ ಒಂದು ಪ್ರಮಾಣ ಬೇಕಾದರೆ ಆ ಪ್ರಮಾಣಕ್ಕೆ ಪ್ರಮಾಣ ಯಾವುದು ? ಸತ್ಯಕ್ಕೆ ಯಾರಾದರೊಬ್ಬರು ಸಾಕ್ಷಿಗಳು ಬೇಕಾದರೆ, ಆ ಸಾಕ್ಷಿಗೆ ಸಾಕ್ಷಿ ಯಾರು ?

೧೨. ಹಾಗಾದರೆ ವಿವಿಧ ಧರ್ಮಗಳೆಲ್ಲ ಹೇಗೆ ಸತ್ಯವಾಗಿರಬಲ್ಲದು ಎಂಬ ಪ್ರಶ್ನೆ ಏಳುವುದು. ಒಂದು ಸತ್ಯವಾದರೆ ಅದನ್ನು ಅಲ್ಲಗಳೆಯುವುದು ಸುಳ್ಳಾಗಿರ ಬೇಕು. ವಿರೋಧ ಅಭಿಪ್ರಾಯಗಳು ಏಕಕಾಲದಲ್ಲೆ ಹೇಗೆ ಸತ್ಯವಾಗಿರಬಲ್ಲವು ?

ಈ ಪ್ರಶ್ನೆಗೇ ನಾನು ಉತ್ತರ ಹೇಳಬೇಕೆಂದಿರುವುದು. ನಾನು ಮೊದಲು ಕೇಳುವುದೇ ಪ್ರಪಂಚದಲ್ಲಿ ಧರ್ಮಗಳು ನಿಜವಾಗಿ ಪರಸ್ಪರ ವಿರೋಧವಾಗಿವೆಯೆ ಎಂಬುದು. ಭವ್ಯ ಭಾವನೆಗಳಿಂದ ಕೂಡಿರುವ ಬಾಹ್ಯಾಚಾರಗಳನ್ನು ಕುರಿತು ನಾನು ಹೇಳುವುದಿಲ್ಲ. ಬೇರೆ ಬೇರೆ ಧರ್ಮದಲ್ಲಿ ಉಪಯೋಗಿಸುವ, ಕಟ್ಟಡ ಭಾಷೆ ಆಚಾರ ಗ್ರಂಥ ಇವುಗಳ ವಿಷಯವಾಗಿ ನಾನು ಹೇಳುವುದಿಲ್ಲ. ಆದರೆ ಪ್ರತಿಯೊಂದು ಧರ್ಮದ ಸಾರದಲ್ಲಿಯೂ ನಿಜವಾಗಿ ಪರಸ್ಪರ ವಿರೋಧವಿದೆಯೆ ? ಅವು ಪರಸ್ಪರ ವಿರೋಧವಾಗಿವೆಯೆ ಅಥವಾ ಪರಸ್ಪರ ಪೂರಕವಾಗಿವೆಯೆ ಅದೇ ಪ್ರಶ್ನೆ. ನಾನು ಸಣ್ಣ ಹುಡುಗನಾದಾಗ ಈ ಸಮಸ್ಯೆಯನ್ನು ತೆಗೆದುಕೊಂಡೆ. ನಾನು ಇದುವರೆಗೂ ಅದನ್ನು ಪರಿಶೀಲಿಸುತ್ತಲೇ ಇರುವೆನು. ನನ್ನ ನಿರ್ಣಯಗಳು ನಿಮಗೆ ಸಹಾಯವಾದರೂ ಆಗಬಹುದೆಂದು ಅದನ್ನು ನಿಮಗೆ ಹೇಳುತ್ತೇನೆ. ಧರ್ಮಗಳು ಪರಸ್ಪರ ವಿರೋಧವಾಗಿಲ್ಲ ; ಪರಸ್ಪರ ಪೂರಕವಾಗಿವೆ ಎಂದು ನಾನು ನಂಬುತ್ತೇನೆ. ಪ್ರತಿಯೊಂದು ಧರ್ಮವೂ ವಿಶ್ವಸತ್ಯದ ಒಂದು ಭಾಗವನ್ನು ತೆಗೆದುಕೊಂಡು ಅದಕ್ಕೆ ತನ್ನ ಶಕ್ತಿಯನ್ನೆಲ್ಲಾ ಧಾರೆಯೆರೆದು ಅದನ್ನು ಪ್ರಪಂಚಕ್ಕೆ ಕೊಡಲು ಯತ್ನಿಸುವುದು. ಆದಕಾರಣ ಇವು ಒಂದು ಮತ್ತೊಂದಕ್ಕೆ ಪೂರಕವಾಗಿವೆಯೇ ಹೊರತು ವಿರೋಧವಾಗಿಲ್ಲ. ಇದೇ ನನ್ನ ಭಾವನೆ. ಧರ್ಮವಾದ ಮೇಲೆ ಧರ್ಮಗಳು ಏಳುತ್ತವೆ. ಪ್ರತಿಯೊಂದರಲ್ಲಿಯೂ ಒಂದೊಂದು ಭವ್ಯ ಭಾವನೆ ಇದೆ. ಭಾವನೆಗೆ ಭಾವನೆ ಸೇರಬೇಕು. ಮಾನವಕೋಟಿ ಮುಂದುವರಿಯುವುದೇ ಹೀಗೆ. ಮಾನವ ಎಂದಿಗೂ ಅಸತ್ಯದಿಂದ ಸತ್ಯಕ್ಕೆ ಪ್ರಯಾಣ ಮಾಡುತ್ತಿಲ್ಲ. ಸಣ್ಣ ಸತ್ಯದಿಂದ ದೊಡ್ಡ ಸತ್ಯದ ಕಡೆಗೆ ಪ್ರಯಾಣ ಮಾಡುತ್ತಿರುವನು. ಆದರೆ ಎಂದಿಗೂ ಅಸತ್ಯದಿಂದ ಸತ್ಯಕ್ಕೆ ಅಲ್ಲ.

೨೯ ಮಾನವ

೧. ಈ ಮಾನವ ದೇಹವೇ ಪ್ರಪಂಚದಲ್ಲೆಲ್ಲಾ ಸರ್ವಶ್ರೇಷ್ಠವಾದುದು. ಮಾನವ ಜೀವಿಯೇ ಸರ್ವಶ್ರೇಷ್ಠವಾದ ಜೀವಿ. ಮಾನವ ಪ್ರಾಣಿಗಳೆಲ್ಲಕ್ಕಿಂತಲೂ ಶ್ರೇಷ್ಠ. ದೇವದೂತರಿಗಿಂತಲೂ ಶ್ರೇಷ್ಠ. ಮನುಷ್ಯನಿಗಿಂತ ಶ್ರೇಷ್ಠರಾದವರು ಯಾರೂ ಇಲ್ಲ. ದೇವತೆಗಳು ಕೂಡ ಮಾನವರಾಗಿ ಹುಟ್ಟಿ ಅನಂತರ ಪೂರ್ಣತೆಯನ್ನು ಪಡೆಯಬೇಕಾಗಿದೆ. ಮಾನವಮಾತ್ರ ಪೂರ್ಣಾತ್ಮನಾಗಬಲ್ಲ. ದೇವತೆಗಳು ಕೂಡ ಅಲ್ಲ. ಯಹೂದ್ಯ ಮತ್ತು ಮಹಮ್ಮದೀಯರ ಧರ್ಮದ ಪ್ರಕಾರ ದೇವರು ದೇವದೂತರು ಮುಂತಾದವರನ್ನೆಲ್ಲ ಸೃಷ್ಟಿಸಿ ಆದಮೇಲೆ ಕೊನೆಗೆ ಮನುಷ್ಯನನ್ನು ಸೃಷ್ಟಿಸಿದ. ಅನಂತರ ದೇವತೆಗಳಿಗೆ ಮನುಷ್ಯನಿಗೆ ನಮಸ್ಕಾರ ಮಾಡಿ ಎಂದ. ಎಲ್ಲರೂ ಅವನಿಗೆ ಗೌರವ ತೋರಿದರು. ಆದರೆ ಇಬ್ಲಿಸ್ ಮಾತ್ರ ತೋರಲಿಲ್ಲ. ಅದಕ್ಕೇ ದೇವರು ಅವನನ್ನು ಶಪಿಸಿದನು. ಅಂದಿನಿಂದ ಇಬ್ಲಿಸ್ ಸೈತಾನನಾದನು. ಈ ಕಥೆಯಲ್ಲಿ ಒಂದು ಅದ್ಭುತ ಸತ್ಯ ಅಂತರ್ಗತವಾಗಿದೆ. ಅದೇ ಪ್ರಪಂಚದಲ್ಲಿ ಮಾನವ ಜನ್ಮವೇ ಸರ್ವಶ್ರೇಷ್ಠ ಎಂಬುದು.

೨. ವಿನಾಯಿತಿ ಇಲ್ಲದೆ ಎಲ್ಲಾ ಧರ್ಮಗಳೂ ಮಾನವ ತನ್ನ ಪೂರ್ವಸ್ಥಿತಿಯಿಂದ ಈಗ ಅಧೋಗತಿಗೆ ಬಂದವನು ಎಂದು ನಂಬುತ್ತವೆ. ಕೆಲವು ವೇಳೆ ಈ ಸತ್ಯವನ್ನು ಪುರಾಣದ ಮೂಲಕ ವಿವರಿಸಬಹುದು, ಕೆಲವು ವೇಳೆ ಸ್ಪಷ್ಟವಾದ ತಾತ್ತ್ವಿಕ ಭಾಷೆಯಲ್ಲಿ ಹೇಳಬಹುದು, ಅಥವಾ ಸುಂದರ ಕಾವ್ಯಮಯವಾದ ಭಾಷೆಯಲ್ಲಿ ಇಡಬಹುದು.

೩. ನಿಜವಾದ ಮನುಷ್ಯ ಒಬ್ಬನೇ. ಅವನು ಅನಂತಾತ್ಮ, ಸರ್ವವ್ಯಾಪಿ. ತಾತ್ಕಾಲಿಕ ತೋರಿಕೆಯ ಮನುಷ್ಯ ಎಷ್ಟೇ ದೊಡ್ಡವನಾಗಿ ಕಂಡರೂ ಅವ್ಯಕ್ತವಾಗಿರುವ ನಿಜವಾದ ಮನುಷ್ಯನ ಒಂದು ಅಸ್ಪಷ್ಟವಾದ ಪ್ರತಿಬಿಂಬ. ನಿಜವಾದ ಮನುಷ್ಯ ಆತ್ಮ. ಅವನು ಕಾರ್ಯಕಾರಣಗಳ ಆಚೆ, ಕಾಲ ದೇಶಗಳ ಆಚೆ ಇರುವನು. ಆದಕಾರಣ ಅವನು ಮುಕ್ತಾತ್ಮನೇ ಆಗಿರಬೇಕು. ತೋರಿಕೆಯಲ್ಲಿ ಮನುಷ್ಯ ಒಂದು ಪ್ರತಿಬಿಂಬ. ಕಾಲ, ದೇಶ ನಿಮಿತ್ತದಿಂದ ಇದು ಮಿತಿಗೊಳಪಟ್ಟಿದೆ. ಆದಕಾರಣ ಇದು ಬದ್ಧ ; ಅಥವಾ ನಮ್ಮ ದಾರ್ಶನಿಕರ ಭಾಷೆಯಲ್ಲಿ ಅವನು ಬದ್ಧನಂತೆ ತೋರಿದರೂ ನಿಜವಾಗಿ ಅವನು ಮುಕ್ತ.

೪. ಮಾನವನಂತೆ ವ್ಯಕ್ತವಾಗಿರುವ ಆತ್ಮ ಪ್ರಪಂಚದಲ್ಲಿರುವ ಸರ್ವ ಶ್ರೇಷ್ಠವಾದ ದೇವರು. ಹಿಂದೆ ಇದ್ದ ಮತ್ತು ಮುಂದೆ ಇರಬಲ್ಲ ದೇವರು ಇವ ನೊಬ್ಬನೇ. ಇವನ ಮಹಿಮೆಯನ್ನು ಯಾವ ಶಾಸ್ತ್ರವೂ, ವಿಜ್ಞಾನವೂ ಕಲ್ಪಿಸಿ ಕೊಳ್ಳಲು ಸಾಧ್ಯವಿಲ್ಲ.

೫. ಮಾನವ ತನ್ನಿಂದ ಬಾಹ್ಯದಲ್ಲಿರುವ ಹಲವು ದೇವರುಗಳನ್ನು ಹುಡುಕಿದ ಮೇಲೆ ಎಲ್ಲಿಂದ ಹೊರಟನೋ ಅಲ್ಲಿಗೆ ಎಂದರೆ ತನ್ನಲ್ಲಿಗೆ ಪುನಃ ಬಂದು ವೃತ್ತವನ್ನು ಪೂರೈಸುವನು. ಯಾವ ದೇವರನ್ನು ಅದ್ರಿಕಣಿವೆಗಳಲ್ಲಿ ಅರಸುತ್ತಿದ್ದನೋ, ಹೊಳೆನದಿಗಳಲ್ಲಿ ಹುಡುಕುತ್ತಿದ್ದನೋ, ದೇವಾಲಯ ಚರ್ಚ್ ಕೈಲಾಸ ವೈಕುಂಠಗಳಲ್ಲಿ ಹುಡುಕುತ್ತಿದ್ದನೋ, ಯಾವ ದೇವರು ಸ್ವರ್ಗದಲ್ಲಿ ಕುಳಿತುಕೊಂಡು ಭೂಲೋಕವನ್ನು ಆಳುತ್ತಿರುವನು ಎಂದು ಭಾವಿಸಿದ್ದನೋ, ಆ ದೇವರು ಅವನಾತ್ಮವೇ ಆಗಿತ್ತು. ನಾನೇ ಅವನು ಮತ್ತು ಅವನೇ ನಾನು; ನಾನ ಲ್ಲದೇ ಅನ್ಯರಾರೂ ದೇವರಾಗಿರಲಿಲ್ಲ. ಈ ಅಲ್ಪ ಅಹಂಕಾರ ಎಂದಿಗೂ ಇರಲಿಲ್ಲ.

೬. ದೇವರನ್ನು ಪೂಜಿಸುವುದಕ್ಕಾಗಿ ನೀನೊಂದು ವಿಗ್ರಹವನ್ನು ಮಾಡ ಬಹುದು. ಆದರೆ ಅದಕ್ಕಿಂತ ಮಿಗಿಲಾದ ವಿಗ್ರಹವಾಗಲೇ ಇದೆ. ಅದೇ ಮಾನವ. ನೀನು ದೇವರನ್ನು ಪೂಜಿಸಲು ಒಂದು ದೇವಾಲಯವನ್ನು ಕಟ್ಟಬಹುದು. ಅದೇನೋ ಒಳ್ಳೆಯದೇ ಇರಬಹುದು. ಆದರೆ ಅದಕ್ಕಿಂತ ಚೆನ್ನಾದ ಮಿಗಿಲಾದ ದೇವಾಲಯವಿದೆ. ಅದೇ ಮಾನವ ದೇಹ.

೭. ಯಾವ ಮಾನವನಲ್ಲಿ ಅಹಂಕಾರ ಸಂಪೂರ್ಣ ನಾಶವಾಗಿದೆಯೋ, ಯಾವ ಆಸ್ತಿಪಾಸ್ತಿಗಳೂ ಇಲ್ಲವೊ, ನಾನು ನನ್ನದು ಎಂದು ಹೇಳಿಕೊಳ್ಳುವು ದಿಲ್ಲವೋ, ಯಾರು ಸಂಪೂರ್ಣ ತನ್ನನ್ನು ತೆತ್ತಿರುವನೋ, ತನ್ನನ್ನೇ ಬಲಿಪೀಠದ ಮೇಲೆ ಇಟ್ಟು ಆಹುತಿಯಾಗಿ ಕೊಟ್ಟಿರುವನೋ, ಅಂತಹವನಲ್ಲಿ ದೇವನೊಬ್ಬನೇ ಇರುವನು. ಅವನಲ್ಲಿ ಸ್ವಪ್ರಯತ್ನ ಎಂಬುದಿಲ್ಲ. ಅದು ನಾಶವಾಗಿದೆ, ನಿರ್ಮೂಲವಾಗಿದೆ. ಇವನೇ ಆದರ್ಶ ಮಾನವ.

೮. ಮಾನವ ಎಷ್ಟುಮಟ್ಟಿಗೆ ಮುಂದಿರುವನು ಎಂಬುದನ್ನು ಅವನು ಎಂತಹ ಉತ್ತಮ ಜೀವನ ನಡೆಸುತ್ತಿರುವನು ಎಂಬುದರಿಂದ ನಿಷ್ಕರ್ಷಿಸ ಬೇಕಾಗಿದೆ. ಅವನು ಇಂದ್ರಿಯ ವಸ್ತುಗಳನ್ನೆಲ್ಲಾ ಕೆಳಗೆ ಬಿಟ್ಟು ಮೇಲೇರಿ, ಶುದ್ಧ ಭಾವನೆಗಳೆಂಬ ಆಮ್ಲಜನಕವನ್ನು (oxygen) ಹೀರಬಲ್ಲ, ಆ ಮೇಲಿನ ಮಟ್ಟದ ಜೀವನದಲ್ಲಿ ಎಷ್ಟು ಕಾಲ ಇರಬಲ್ಲ ಎಂಬುದರ ಮೇಲೆ ನಿರ್ಧರಿಸಬೇಕಾಗಿದೆ.

೯. ಮೊದಲು ನಾವು ದೇವರಾಗೋಣ. ಅನಂತರ ಇತರರನ್ನು ದೇವರ

ನ್ನಾಗಿ ಮಾಡೋಣ. "ಆಗಿ, ಮಾಡಿ" ಇದೇ ನಮ್ಮ ಗುರಿಯಾಗಲಿ. ಮಾನವನನ್ನು ಪಾಪಿ ಎಂದು ಕರೆಯಬೇಡಿ. ಅವನನ್ನು ದೇವರು ಎಂದು ಕರೆಯಿರಿ. ಒಂದು ಪಿಶಾಚಿಯೇ ಇದ್ದರೂ ಅಲ್ಲಿ ಯಾವಾಗಲೂ ದೇವರನ್ನು ನೋಡುವುದು ನಮ್ಮ ಕರ್ತವ್ಯವಾಗಬೇಕು.

೧೦. ನೀನು ದೇಹವೆಂದು ಭಾವಿಸಿದಾಗ ಪ್ರಪಂಚದಿಂದ ಬೇರೆ. ನೀನು ಜೀವ ಎಂದು ಭಾವಿಸಿದಾಗ ನೀನು ಆ ಸನಾತನ ಜ್ಯೋತಿಯ ಕಿಡಿ, ನೀನು ಆತ್ಮವೆಂದು ಭಾವಿಸಿದಾಗ ನೀನೇ ಸರ್ವವೂ ಆಗಿರುವೆ.

೧೧. ಕಪಟದಿಂದ ಯಾವ ಮಹಾ ಕಾರ್ಯವನ್ನು ಸಾಧಿಸಲೂ ಸಾಧ್ಯವಿಲ್ಲ. ಪ್ರೀತಿ, ಸತ್ಯನಿಷ್ಠೆ, ಅದ್ಭುತ ಉತ್ಸಾಹ, ಇವುಗಳಿಂದ ಮಾತ್ರ ಮಹಾಕಾರ್ಯವನ್ನು ಸಾಧಿಸಬಹುದು. ಆದಕಾರಣ ಪೌರುಷವನ್ನು ತೋರು, "ತತ್ ಕುರು ಪೌರುಷಂ."

೧೨. ನಮಗೆ ಬೇಕಾಗಿರುವುದು ನಿಯಮವಲ್ಲ. ನಿಯಮವನ್ನು ಭಂಗಿಸ ಬೇಕು ನಾವು. ನಾವು ನಿಯಮಾತೀತರಾಗಬೇಕು. ನೀನು ನಿಯಮಕ್ಕೆ ಬಾಗಿದರೆ ಒಂದು ಮಣ್ಣಿನ ಮುದ್ದೆಯಾಗುವೆ. ನೀನು ನಿಯಮಾತೀತನೆ ಅಲ್ಲವೆ ಎಂಬುದಲ್ಲ ಪ್ರಶ್ನೆ. ಆದರೆ ನಾವು ನಿಯಮಾತೀತರು ಎಂಬುದರ ಮೇಲೆ ಮಾನವ ಕೋಟಿಯ ಇತಿಹಾಸವೆಲ್ಲ ನಿಂತಿದೆ.

೧೩. ಪ್ರತಿಯೊಬ್ಬನೂ ಆಗಲೇ ಅನಂತಾತ್ಮ. ಬಾಗಿಲು, ಸಲಾಕಿ ಮತ್ತು ಬಗೆಬಗೆಯ ಸನ್ನಿವೇಶಗಳು ಅವನನ್ನು ಬಂಧಿಸಿವೆ. ಅವುಗಳನ್ನು ತೆಗೆದೊಡನೆಯೇ ಅವನು ಧಾವಿಸಿ ಹೊರಗೆ ಬಂದು ತನ್ನ ಸ್ವಾತಂತ್ರ್ಯವನ್ನು ವ್ಯಕ್ತಗೊಳಿಸುವನು.

೧೪. ಯೋಗಿ ವಿನಃ ಎಲ್ಲರೂ ಗುಲಾಮರು. ಊಟಕ್ಕೆ, ಬಟ್ಟೆಗೆ ಹೆಂಡತಿ ಮಕ್ಕಳಿಗೆ, ಹಣಕ್ಕೆ, ದೇಶಕ್ಕೆ, ಕೀರ್ತಿ ಗೌರವ ಮತ್ತು ಸಹಸ್ರಾರು ವಸ್ತುಗಳಿಗೆ ಗುಲಾಮರು. ಯಾರು ಇವುಗಳಾವುದಕ್ಕೂ ಬದ್ಧರಾಗಿಲ್ಲವೋ ಅವರೇ ನಿಜವಾದ ಯೋಗಿಗಳು.

೧೫. ಪ್ರತಿಯೊಬ್ಬನಿಗೂ ಈಗಿರುವ ಸನ್ನಿವೇಶದಲ್ಲಿ ತಾನು ಉತ್ತಮ ಸ್ಥಿತಿಗೆ ಬರಲು ಅವಕಾಶವಿದೆ. ನಾವು ಸಂಪೂರ್ಣ ಬೇರೆ ಮನುಷ್ಯರಾಗಲು ಸಾಧ್ಯ ವಿಲ್ಲದೇ ಇರಬಹುದು. ನಮ್ಮಲ್ಲಿರುವ ಸಂಸ್ಕಾರಗಳನ್ನೆಲ್ಲಾ ನಾಶ ಮಾಡುವ ಸ್ಥಿತಿ ಯಲ್ಲಿ ಇಲ್ಲದೆ ಇರಬಹುದು. ಆದರೆ ನಮ್ಮ ಜೀವನಗತಿಯನ್ನು ಬೇರೆ ಮಾರ್ಗ ದಲ್ಲಿ ಹರಿಸುವ ಸ್ವಾತಂತ್ರ್ಯವಿದೆ.

೧೬. ವ್ಯವಹಾರಚತುರರಾಗಲು, ದೃಢಕಾಯರಾಗಲು ಜನರಿಗೆ ಬೋಧಿಸ ಬೇಕು. ಇಂತಹ ಒಂದು ಹತ್ತು ಜನ ಪ್ರಪಂಚವನ್ನು ಗೆಲ್ಲಬಲ್ಲರೆ ಹೊರತು ಕುರಿ

ಗಳಂತಹ ಸಹಸ್ರಾರು ಜನ ಅಲ್ಲ. ಎರಡನೆಯದಾಗಿ ಒಬ್ಬ ಮನುಷ್ಯ ಒಂದು ವ್ಯಕ್ತಿಗೆ ಅಂಟಿಕೊಂಡಿರದಂತೆ ಬೋಧಿಸಬೇಕು. ಆ ವ್ಯಕ್ತಿ ಎಷ್ಟೇ ಶ್ರೇಷ್ಠವಾಗಿರಲಿ ಚಿಂತೆಯಿಲ್ಲ.

೧೭. ಮಾನವ ಒಂದು ಸಣ್ಣ ಪೆಟ್ಟಿಗೆಯಲ್ಲಿ ಮುದುರಿಕೊಂಡಿರುವ ಅನಂತವಾದ ಸ್ಪ್ರಿಂಗ್‌ನಂತೆ. ಇದು ಕ್ರಮೇಣ ವಿಕಾಸವಾಗಲು ಯತ್ನಿಸುತ್ತಿದೆ. ಜನಜಾಗ್ರತಿಗಳೆಲ್ಲ ಇದರ ವಿಕಾಸದ ಪರಿಣಾಮ.

೧೮. ನೀವು ಭಗವಂತನ ಸಂತಾನರು, ಅನಂತಾನಂದದ ಹಕ್ಕುದಾರರು, ಪೂರ್ಣರು, ಶುದ್ಧರು. ನೀವೇ ಪ್ರಪಂಚದಲ್ಲಿರುವ ಪುಣ್ಯಾತ್ಮರು. ನೀವು ಪಾಪಿಗಳೆ! ಮಾನವನನ್ನು ಹೀಗೆ ಕರೆಯುವುದೇ ಮಹಾ ಪಾಪ, ಮಾನವ ಸ್ವಭಾವಕ್ಕೇ ಅಪಮಾನಮಾಡಿದಂತೆ.

೩೦ ಮಾಯೆ

೧. ಹಿಂದೂಗಳು ಪ್ರಪಂಚವನ್ನು ಮಾಯೆ ಎಂದೊಡನೆಯೆ ಇದೊಂದು ಭ್ರಾಂತಿ ಎಂಬ ಭಾವನೆ ಬರುವುದು. ಈ ಭಾವನೆಗೆ ಬೌದ್ಧ ತತ್ತ್ವದ ಆಧಾರ ಇದೆ. ಬೌದ್ಧರಲ್ಲಿ ಒಂದು ಪಂಗಡದವರು ಬಾಹ್ಯ ಪ್ರಪಂಚವನ್ನು ನಂಬುತ್ತಲೇ ಇರಲಿಲ್ಲ. ಆದರೆ ಚೆನ್ನಾಗಿ ಸ್ಪಷ್ಟವಾಗಿ ಅಭಿವೃದ್ಧಿಯಾದಮೇಲೆ ವೇದಾಂತದಲ್ಲಿ ಬರುವ ಮಾಯೆ ಎಂಬುದು ಭಾವಸತ್ತಾವಾದ(Idealism) ಅಥವಾ ಪ್ರಪಂಚ ಸತ್ತಾವಾದ(Realism)ವಲ್ಲ. ಅಥವಾ ಇದೊಂದು ಸಿದ್ಧಾಂತವೂ ಅಲ್ಲ. ಆದರೆ ಇದು ಕೇವಲ ನಮ್ಮ ತಾತ್ಕಾಲಿಕ ಸ್ಥಿತಿಯನ್ನು, ನಾವು ಯಾರು, ನಾವು ಸುತ್ತಲೂ ನೋಡುವುದು ಏನು ಎಂಬುದನ್ನು ಮಾತ್ರ ವಿವರಿಸುವುದು.

೨. ಕಾಲದೇಶ ನಿಮಿತ್ತದೊಳಗೆ ಇರುವ ವಸ್ತುವಿನ ಸ್ವಭಾವವೇನೆಂದರೆ ಇತರ ವಸ್ತುಗಳ ಆಶ್ರಯವಿಲ್ಲದೆ ನಿರಪೇಕ್ಷವಾಗಿ ಯಾವುದೂ ಇರಲಾರದು. ಯಾವ ಬಣ್ಣ ಅಥವಾ ಅಂತರವೂ ಇಲ್ಲದ, ಸುತ್ತಲಿರುವ ಯಾವ ವಸ್ತುವಿನ ಸಂಬಂಧವೂ ಇಲ್ಲದ ಅವಕಾಶವನ್ನು ಕುರಿತು ಯೋಚಿಸಿ ನೋಡಿ. ಇದು ಸಾಧ್ಯವೇ ಇಲ್ಲ. ಎರಡು ವಸ್ತುಗಳ ಅಂತರದಲ್ಲಿರುವುದನ್ನೊ, ಮೂರು ವಸ್ತುಗಳ ಮಧ್ಯದಲ್ಲಿರುವುದನ್ನೊ ಆಕಾಶ ಎಂದು ಭಾವಿಸಬಹುದು. ಆಕಾಶ ಇರಬೇಕಾದರೆ ಯಾವುದಾದರೂ ವಸ್ತುವಿನೊಂದಿಗೆ ಸಂಬಂಧ ಪಡೆದಿರಬೇಕು. ಇದರಂತೆಯೇ ಕಾಲ ಕೂಡ. ನಿರಪೇಕ್ಷವಾದ ಕಾಲದ ಭಾವನೆ ನಿಮಗೆ ಬರಲು ಸಾಧ್ಯವೇ ಇಲ್ಲ. ಯಾವಾಗಲೂ ಎರಡು ಘಟನೆಗಳು ಇರಬೇಕು—ಹಿಂದೆ ಆಗಿ ಹೋದುದೊಂದು, ಆಗಲಿರುವುದೊಂದು. ಇವೆರಡನ್ನೂ ಒಂದಾದ ಮೇಲೊಂದು ಬರುತ್ತದೆ ಎಂಬ ಭಾವನೆಯಿಂದ ಜೋಡಿಸಬೇಕಾಗಿದೆ. ಹೇಗೆ ದೇಶಕ್ಕೆ ಬಾಹ್ಯವಸ್ತುವಿನ ಆಸರೆ ಬೇಕೋ ಹಾಗೆಯೇ ಕಾಲಕ್ಕೆ ಎರಡು ಘಟನೆಗಳ ಆಸರೆ ಬೇಕು. ದೇಶಕಾಲದಿಂದ ನಿಮಿತ್ತವನ್ನು ಎಂದಿಗೂ ಬೇರ್ಪಡಿಸಲಾಗುವುದಿಲ್ಲ. ಇವು ತಾವೇ ಪ್ರತ್ಯೇಕವಾಗಿರಲಾರವು. ಇದೇ ಇದರ ವೈಶಿಷ್ಟ್ಯ.

೩. ಹೇಗೆ ಒಬ್ಬ ತನ್ನಿಂದಲೇ ತಾನು ನೆಗೆದು ಹೋಗಲಾರನೋ ಹಾಗೆಯೇ ಕಾಲದೇಶದ ನಿಯಮದಿಂದ ಯಾರೂ ಪಾರಾಗಲಾರರು. ದೇಶಕಾಲನಿಮಿತ್ತದ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನವೆಲ್ಲಾ ವ್ಯರ್ಥವಾಗುವುದು. ನಾವು

ಪ್ರಯತ್ನ ಮಾಡಬೇಕಾದರೂ ಈ ಮೂರರ ಕಾರ್ಯಕ್ಷೇತ್ರದಲ್ಲಿ ಮಾತ್ರ ಸಾಧ್ಯ. ಆಗ ಪ್ರಪಂಚವಿದೆ ಎಂದರೆ ಅರ್ಥವೇನು ? ಈ ಪ್ರಪಂಚವಿಲ್ಲ ಎಂದರೆ ಅರ್ಥ ವೇನು ? ಅಂದರೆ ಇದು ನಿರಪೇಕ್ಷವಾಗಿ ಇಲ್ಲ ಎಂದು ಅರ್ಥ. ನನ್ನ, ನಿಮ್ಮ ಮತ್ತು ಇತರರೆಲ್ಲರ ಮನಸ್ಸಿನ ದೃಷ್ಟಿಯಿಂದ ಈ ಪ್ರಪಂಚ ಇದೆ. ನಾವು ಪಂಚೇಂದ್ರಿಯಗಳ ಮೂಲಕ ಈ ಪ್ರಪಂಚವನ್ನು ನೋಡುತ್ತೇವೆ. ನಮಗೆ ಮತ್ತೊಂದು ಇಂದ್ರಿಯ ಹೆಚ್ಚಾಗಿದ್ದರೆ ಇನ್ನೂ ಹೆಚ್ಚಾಗಿ ಪ್ರಪಂಚದಲ್ಲಿ ನೋಡು ತ್ತೇವೆ. ಆದಕಾರಣ ಇದು ನಿಜವಾಗಿ ಇಲ್ಲ. ಇದು ಬದಲಾಯಿಸದೆ, ಚಲಿಸದೆ, ಅನಂತವಾಗಿಲ್ಲ. ಆದರೆ ಈ ಪ್ರಪಂಚ ಇಲ್ಲವೇ ಇಲ್ಲ ಎಂತಲೂ ಹೇಳುವ ಹಾಗಿಲ್ಲ. ಏಕೆಂದರೆ ನಾವು ಈಗ ಇದನ್ನು ನೋಡುತ್ತಿರುವೆವು. ಇದು ಇದೆ ಇಲ್ಲ ಎನ್ನುವು ದರ ಒಂದು ಮಿಶ್ರದಂತೆ ತೋರುತ್ತಿದೆ. ನಾವು ಇವುಗಳ ಮೂಲಕ ಮಾತ್ರ ಕೆಲಸ ಮಾಡಬೇಕಾಗಿದೆ.

೪. ನೀವು ಯಾವುದನ್ನು ದ್ರವ್ಯ, ಮನಸ್ಸು, ಆತ್ಮ ಅಥವಾ ಇನ್ನ ಯಾವುದಾದರೂ ಬೇರೆ ಹೆಸರಿನಿಂದ ಕರೆದರೂ ಆ ವಸ್ತು ಮಾತ್ರ ಹಾಗೆಯೇ ಇರುವುದು. ಅದು ಇದೆ ಎಂತಲೂ ಹೇಳುವ ಹಾಗೆ ಇಲ್ಲ, ಇಲ್ಲ ಎಂತಲೂ ಹೇಳುವ ಹಾಗೆ ಇಲ್ಲ. ಅಸ್ಪಷ್ಟವಾದ, ಅಜ್ಞಾತವಾದ, ಬೇರ್ಪಡಿಸಲಾಗದ ಅದು ಯಾವಾಗಲೂ ಇರುವುದು. ಇದೊಂದು ನಿತ್ಯ ಸಮಸ್ಯೆ, ಇದೆ ಎಂತಲೂ ಹೇಳುವ ಹಾಗಿಲ್ಲ, ಇಲ್ಲ ಎಂತಲೂ ಹೇಳುವ ಹಾಗಿಲ್ಲ. ಅದು ನಿಜ, ಆದರೂ ಅಲ್ಲ; ಜಾಗ್ರತ, ಆದರೂ ನಿದ್ರಾಸ್ಥಿತಿಯಲ್ಲಿದೆ. ಇದು ವಸ್ತು ಇರುವ ರೀತಿ. ಇದನ್ನೇ ಮಾಯೆ ಎನ್ನುವುದು. ನಾವು ಮಾಯೆಯಲ್ಲಿ ಹುಟ್ಟಿರುವೆವು, ಅಲ್ಲೆ ಆಲೋಚಿಸು ವೆವು, ಅಲ್ಲೆ ಕನಸು ಕಾಣುವೆವು. ನಾವು ಮಾಯೆಯಲ್ಲಿರುವಾಗಲೇ ದಾರ್ಶನಿಕರು ಮತ್ತು ಆಧ್ಯಾತ್ಮಿಕ ಜೀವಿಗಳು ; ನಾವು ಇಲ್ಲಿರುವಾಗಲೇ ಸೈತಾನರು ಮತ್ತು ದೇವತೆಗಳು ಆಗಿರುವೆವು. ಸಾಧ್ಯವಾದಷ್ಟು ನಿಮ್ಮ ಭಾವನೆಯನ್ನು ವಿಸ್ತರಿಸಿ ; ಅದನ್ನು ಮೇಲೆ ಮೇಲಕ್ಕೆ ಕೊಂಡೊಯ್ಯಿರಿ. ಅದನ್ನು ಅನಂತವೆಂತಲೋ ಅಥವಾ ಮತ್ತಾವುದಾದರೂ ಹೆಸರಿನಿಂದಲಾದರೂ ಕರೆಯಿರಿ. ಇವೆಲ್ಲ ಮಾಯೆ ಯೊಳಗೆ ಇರುವುದು. ಅದು ಅನ್ಯಥಾ ಆಗಲೇ ಆರದು. ಜ್ಞಾನವೆಲ್ಲಾ ಮಾಯೆ ಯಲ್ಲಿರುವುದನ್ನು ಒಂದು ಸಾಮಾನ್ಯ ವರ್ಗೀಕರಣ ಮಾಡುವುದು. ಅದು ಹೇಗೆ ನಮಗೆ ಕಾಣುವುದೋ ಹಾಗೇ ತಿಳಿಯಲೆತ್ನಿಸುವುದು ಆಗಿದೆ. ಇದೇ ನಾಮ ರೂಪದ ಕೆಲಸ. ರೂಪವಿರುವ ಯಾವ ವಸ್ತುವಾದರೂ ಆಗಲಿ, ನಮ್ಮ ಮನಸ್ಸಿ ನಲ್ಲಿ ಒಂದು ಭಾವನೆ ಏಳುವಂತೆ ಮಾಡುವುದೆಲ್ಲ ಮಾಯಾಕ್ಷೇತ್ರದೊಳಗೆ ಇದೆ.

ದೇಶಕಾಲನಿಮಿತ್ತದೊಳಗೆ ಬದ್ಧವಾಗಿರುವುದೆಲ್ಲ ಮಾಯಾವರಣದೊಳಗೆ ಇದೆ.

೫. ಹಿಂದಿನಿಂದಲೂ ಈ ಮಾಯಾ ಸಿದ್ಧಾಂತವನ್ನು ತಿಳಿದುಕೊಳ್ಳುವುದು ಬಹಳ ಕಷ್ಟವಾಗಿದೆ. ನಾನು ಇದನ್ನು ಆದಷ್ಟು ಸಂಕ್ಷೇಪವಾಗಿ ಹೇಳುತ್ತೇನೆ. ಇದು ನಿಜವಾದ ಒಂದು ಸಿದ್ಧಾಂತವೇನೂ ಅಲ್ಲ. ಇದು ದೇಶಕಾಲನಿಮಿತ್ತ ವೆಂಬ ಮೂರು ಭಾವನೆಗಳ ಮಿಶ್ರ. ಇದನ್ನೆ ನಾಮರೂಪ ಎಂಬ ಎರಡು ಭಾವನೆ ಗಳೊಳಗೆ ಅಡಗಿಸುವರು. ಸಾಗರದಲ್ಲಿ ಒಂದು ಅಲೆ ಇದೆ ಎಂದು ಭಾವಿಸಿ. ನಾಮ ರೂಪಗಳ ದೃಷ್ಟಿಯಿಂದ ಮಾತ್ರ ಅಲೆ ಸಾಗರದಿಂದ ಬೇರೆ. ಮತ್ತು ಅಲೆ ಇಲ್ಲದೆ ಈ ನಾಮರೂಪಗಳು ಪ್ರತ್ಯೇಕವಾಗಿ ಇರಲಾರವು. ಅಲೆಯೊಂದಿಗೆ ಮಾತ್ರ ಅವು ಇರಬಲ್ಲವು. ಅಲೆ ಇಳಿದು ಹೋಗಬಹುದು, ಅಲೆಯ ನಾಮರೂಪಗಳು ಹೋದರೂ ಅಲೆಯಲ್ಲಿದ್ದ ನೀರು ಎಲ್ಲಿಯೂ ಹೋಗುವುದಿಲ್ಲ. ನನಗೂ ನಿಮಗೂ ವ್ಯತ್ಯಾಸ ತರುವುದು ಈ ಮಾಯೆ. ಅನಂತ ಜೀವಿಗಳು ಬಂಧನಕ್ಕೆ ಸಿಕ್ಕಿರುವಂತೆ ತೋರುವುದನ್ನು ಕೂಡ ಮಾಡಿರುವುದು ಈ ಮಾಯೆ. ಇವುಗಳನ್ನು ನಾಮರೂಪ ಗಳಿಂದ ಮಾತ್ರ ಪ್ರತ್ಯೇಕಗೊಳಿಸಬಹುದು. ನೀನು ನಾಮರೂಪಗಳನ್ನು ತ್ಯಜಿಸಿದರೆ ಈ ವೈವಿಧ್ಯತೆಯೆಲ್ಲ ಎಂದೆಂದಿಗೂ ಮಾಯವಾಗುವುದು. ನೀನು ನಿಜ ವಾಗಿ ಏನೋ ಅದೇ ಆಗಿರುವೆ. ಇದೇ ಮಾಯೆ.

೬. ಶಂಕರಾಚಾರ್ಯರ ಅನುಯಾಯಿಗಳಾದ ನಿಜವಾದ ಅದ್ವೈತಿಗಳ ದೃಷ್ಟಿ ಯಲ್ಲಿ ಬ್ರಹ್ಮಾಂಡವೆಲ್ಲ ಬ್ರಹ್ಮನ ಒಂದು ತೋರಿಕೆಯ ವಿಕಸನ. ದೇವರೇ ಈ ಪ್ರಪಂಚದ ಉಪಾದಾನ ಕಾರಣ ; ಆದರೆ ನಿಜವಾಗಿಯೂ ಅಲ್ಲ, ಕೇವಲ ತೋರಿಕೆಯ ದೃಷ್ಟಿಯಿಂದ. ಇದನ್ನು ವಿವರಿಸಲು ಕೊಡುವ ಉದಾಹರಣೆಯೆ ಪ್ರಖ್ಯಾತವಾದ ರಜ್ಜುಸರ್ಪಭ್ರಮೆ. ಹಗ್ಗ ಹಾವಿನಂತೆ ಕಂಡಿತು. ಆದರೆ ನಿಜವಾಗಿ ಹಾವಾಗಿರಲಿಲ್ಲ. ಹಗ್ಗ ಹಾವಾಗಿ ಬದಲಾವಣೆ ಹೊಂದಲಿಲ್ಲ. ಹಾಗೆಯೇ ಇಡೀ ಬ್ರಹ್ಮಾಂಡವೂ ಕೂಡ ಆ ಬ್ರಹ್ಮವೆ. ಇದು ನಿರ್ವಿಕಾರವಾದುದು. ನಾವು ನೋಡುವ ಬದಲಾವಣೆಯೆಲ್ಲ, ಕೇವಲ ತೋರಿಕೆಗೆ ಮಾತ್ರ. ಈ ಬದಲಾವಣೆ ದೇಶ ಕಾಲ ನಿಮಿತ್ತದಿಂದ ಆಗಿದೆ. ಅಥವಾ ಮಾನಸಿಕ ಶಾಸ್ತ್ರದ ಉತ್ತಮ ವರ್ಗೀ ಕರಣದ ದೃಷ್ಟಿಯಿಂದ ನಾಮರೂಪದಿಂದ ಆಗಿದೆ. ನಾಮರೂಪಗಳ ಸಹಾಯದಿಂದ ಮಾತ್ರ ಒಂದನ್ನು ಮತ್ತೊಂದರಿಂದ ಪ್ರತ್ಯೇಕಿಸಬಲ್ಲೆವು. ನಿಜವಾಗಿ ಗುಣ ಮತ್ತು ಗುಣಿ ಬೇರೆ ಬೇರೆ ಎಂದು ವೇದಾಂತ ಹೇಳುವುದಿಲ್ಲ. ಕೇವಲ ತೋರಿಕೆಗೆ ಮಾತ್ರ ಹಗ್ಗ ಹಾವಿನಂತೆ ಕಂಡಿತು. ಭ್ರಾಂತಿ ಅಳಿದ ಮೇಲೆ ಹಾವು ಮಾಯವಾಗುವುದು. ಒಬ್ಬ ಅಜ್ಞಾನದಲ್ಲಿರುವಾಗ ಅವನು ಕೇವಲ ಪ್ರಪಂಚವನ್ನು ನೋಡುತ್ತಾನೆ ;

ದೇವರನ್ನು ನೋಡುವುದಿಲ್ಲ. ಎಂದು ಒಬ್ಬ ದೇವರನ್ನು ನೋಡುವನೋ ಆಗ ಪ್ರಪಂಚ ಸಂಪೂರ್ಣ ಅವನಿಗೆ ಮಾಯವಾಗುವುದು. ಈ ದೃಶ್ಯಕ್ಕೆಲ್ಲಾ ಕಾರಣ ಅಜ್ಞಾನ ಅಥವಾ ಮಾಯೆ. ನಿರ್ವಿಕಾರವಾದ ನಿರಪೇಕ್ಷವಾದ ಬ್ರಹ್ಮ ಪ್ರಪಂಚ ವಾಗಿರುವನು ಎಂದು ಭಾವಿಸುತ್ತೇವೆ. ಮಾಯೆಯನ್ನು ಇದೆ ಎಂತಲೂ ಹೇಳು ವುದಕ್ಕೆ ಆಗುವುದಿಲ್ಲ. ಇಲ್ಲ ಎಂತಲೂ ಹೇಳುವುದಕ್ಕೆ ಆಗುವುದಿಲ್ಲ. ನಿರ್ವಿಕಾರಿ ಯಾದ ನಿರಪೇಕ್ಷವಾದ ಬ್ರಹ್ಮನನ್ನು ಮಾತ್ರ ನಾವು ಇದೆ ಎಂದು ಹೇಳಬಹುದು. ಈ ದೃಷ್ಟಿಯಲ್ಲಿ ಮಾಯೆ ಇಲ್ಲ. ಆದರೂ ಮಾಯೆ ಇಲ್ಲ ಎನ್ನಲಾಗುವುದಿಲ್ಲ. ಏಕೆಂದರೆ ಅದಿಲ್ಲದೇ ಇದ್ದರೆ ಈ ಪ್ರಪಂಚವೇ ಸೃಷ್ಟಿಯಾಗುತ್ತಿರಲಿಲ್ಲ. ಆದ ಕಾರಣ ಇದು ಎರಡೂ ಅಲ್ಲ. ವೇದಾಂತದ ದೃಷ್ಟಿಯಲ್ಲಿ ಇದನ್ನು ಅನಿರ್ವಚನೀಯ ಎಂದು ಹೇಳುವರು.

೭. ನಾರದ ಒಂದು ಸಲ ಕೃಷ್ಣನನ್ನು ನನಗೆ ಮಾಯೆ ಎಂದರೆ ಏನು ಎಂಬುದನ್ನು ತೋರು ಎಂದು ಕೇಳಿದ ಕಥೆ ಇದೆ. ಕೆಲವು ದಿನಗಳಾದ ಮೇಲೆ ಕೃಷ್ಣ ನಾರದನನ್ನು ತನ್ನೊಡನೆ ಒಂದು ಮರಳು ಕಾಡಿಗೆ ಬಾ ಎಂದು ಕರೆದನು. ಕೆಲವು ಮೈಲಿ ನಡೆದಾದ ಮೇಲೆ ಕೃಷ್ಣ ನಾರದನಿಗೆ "ನನಗೆ ಬಾಯಾರಿಕೆ, ನೀನು ಸ್ವಲ್ಪ ನೀರನ್ನು ತೆಗೆದುಕೊಂಡು ಬರುತ್ತೀಯ ?" ಎಂದು ಕೇಳಿದನು. "ನಾನು ತಕ್ಷಣ ಹೋಗಿ ನೀರನ್ನು ತೆಗೆದುಕೊಂಡು ಬರುತ್ತೇನೆ, ಸ್ವಾಮಿ"ಎಂದನು ನಾರದ. ಹಾಗೆಯೇ ನೀರು ತರಲು ಹೊರಟನು. ಸ್ವಲ್ಪ ದೂರದಲ್ಲಿ ಒಂದು ಹಳ್ಳಿ ಸಿಕ್ಕಿತು. ನೀರನ್ನು ಹುಡುಕಿಕೊಂಡು ನಾರದ ಆ ಹಳ್ಳಿಯನ್ನು ಪ್ರವೇಶಿಸಿದ. ಒಂದು ಮನೆ ಬಾಗಿಲನ್ನು ತಟ್ಟಿದ. ಒಬ್ಬ ಅತಿ ಸುಂದರ ಯುವತಿ ಬಾಗಿಲನ್ನು ತೆರೆದಳು. ನಾರದ ಅವಳನ್ನು ನೋಡಿದೊಡನೆಯೆ, ತನ್ನ ಸ್ವಾಮಿ ನೀರಿಗೆ ಕಾಯುತ್ತಿರುವನು, ಬಹುಶಃ ಅವನು ಬಾಯಾರಿಕೆಯಿಂದ ಪ್ರಾಣಬಿಡುತ್ತಿರುವನು ಎಂಬುದನ್ನು ಕೂಡ ಮರೆತುಬಿಟ್ಟನು. ನಾರದ ಎಲ್ಲವನ್ನೂ ಬಿಟ್ಟು ಅವಳೊಡನೆ ಮಾತ ನಾಡುತ್ತಿದ್ದ. ಮಾರನೇ ದಿನವೂ ಆ ಹುಡುಗಿಯೊಡನೆ ಅದೇ ಮನೆಯಲ್ಲಿ ಮಾತ ನಾಡುತ್ತಿದ್ದ. ಮಾತು ಕ್ರಮೇಣ ಮಾಗಿ ಪ್ರೀತಿಯ ರೂಪಕ್ಕೆ ತಿರುಗಿತು. ಆ ಹುಡುಗಿಯ ತಂದೆಯನ್ನು ಮಗಳನ್ನು ತನಗೆ ಮದುವೆ ಮಾಡಿಕೊಡುವಂತೆ ಕೇಳಿ ದನು. ಅವರಿಗೆ ಮದುವೆ ಆಯಿತು. ಅವರಿಬ್ಬರೂ ಅಲ್ಲೇ ವಾಸವಾಗಿದ್ದರು. ಅವರಿಗೆ ಕ್ರಮೇಣ ಮಕ್ಕಳಾದವು. ಹೀಗೆ ಹನ್ನೆರಡು ವರುಷ ಕಳೆಯಿತು. ಇವರ ಮಾವ ಕಾಲವಾದ. ಅವನ ಆಸ್ತಿಯೆಲ್ಲ ಅಳಿಯನಿಗೆ ಬಂದಿತು. ತಾನು ಹೆಂಡತಿ ಮಕ್ಕಳು, ಆಳುಕಾಳು, ಬಂಧು ಬಾಂಧವರೊಡನೆ ಸುಖಿಯಾಗಿರುವೆ ಎಂದು

ಭಾವಿಸಿದನು. ಒಂದು ದಿನ ಒಂದು ಪ್ರವಾಹ ಬಂದಿತು. ಒಂದು ದಿನ ರಾತ್ರಿ ನದಿಯಲ್ಲಿ ಪ್ರವಾಹ ಹೆಚ್ಚಾಗಿ ದಡಗಳನ್ನು ಕಿತ್ತುಕೊಂಡು ನೀರು ಗ್ರಾಮದೊಳಕ್ಕೆ ನುಗ್ಗಿತು. ಮನೆಗಳು ಬಿದ್ದವು. ದನ ಮತ್ತು ಜನಗಳು ಕೊಚ್ಚಿ ಮುಳುಗಿ ಹೋದುವು. ಎಲ್ಲಾ ಪ್ರವಾಹದಲ್ಲಿ ತೇಲಿ ಹೋಗುತ್ತಿದ್ದುವು. ನಾರದ ಕೂಡ ತಪ್ಪಿಸಿಕೊಂಡು ಹೋಗಬೇಕಾಯಿತು. ತನ್ನ ಒಂದು ಕೈಯಿಂದ ಹೆಂಡತಿಯನ್ನು ಹಿಡಿದುಕೊಂಡನು. ಇನ್ನೊಂದು ಕೈಯಲ್ಲಿ ಒಬ್ಬ ಮಗನನ್ನು ಹಿಡಿದುಕೊಂಡನು. ಮತ್ತೊಂದು ಮಗು ಅವನ ಭುಜದ ಮೇಲೆ ಇತ್ತು. ಇವರ ಸಹಿತ ಆ ಪ್ರಚಂಡ ಪ್ರವಾಹವನ್ನು ನಾರದ ದಾಟಲು ಯತ್ನಿಸಿದನು. ಸ್ವಲ್ಪದೂರ ಹೋಗುವುದರೊಳಗಾಗಿ ಪ್ರವಾಹದ ವೇಗ ಬಹಳವಾಯಿತು. ಭುಜದ ಮೇಲಿದ್ದ ಮಗು ಪ್ರವಾಹಕ್ಕೆ ಸಿಕ್ಕಿ ಕೊಚ್ಚಿಕೊಂಡು ಹೋಯಿತು. ನಾರದ ವ್ಯಥೆಯಿಂದ ಗೋಳಿಟ್ಟ. ಅದನ್ನು ರಕ್ಷಿಸಲು ಪ್ರಯತ್ನಮಾಡಿದಾಗ ಮತ್ತೊಂದು ಮಗುವನ್ನು ಹಿಡಿದುಕೊಂಡ ಕೈ ಸಡಿಲವಾಗಲು ಅದೂ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಯಿತು. ಕೊನೆಗೆ ಭದ್ರವಾಗಿ ತಾನು ಅಪ್ಪಿಹಿಡಿದುಕೊಂಡಿದ್ದ ಹೆಂಡತಿಯೂ ಪ್ರವಾಹದಲ್ಲಿ ಕೊಚ್ಚಿ ಹೋದಳು. ಕೊನೆಗೆ ನಾರದನನ್ನು ಪ್ರವಾಹ ದಡಕ್ಕೆ ನೂಕಿತು. ನಾರದ ತುಂಬಾ ದುಃಖದಿಂದ ವ್ಯಥೆಪಡುತ್ತಿದ್ದ. ಅವನ ಹಿಂದೆ ಒಂದು ಮೆಲುಧ್ವನಿ "ಮಗು, ನೀರೆಲ್ಲಿ ? ನೀನು ಒಂದು ತಂಬಿಗೆ ನೀರು ತರಲು ಹೋದೆ, ನಾನು ನಿನಗಾಗಿ ಕಾಯುತ್ತಿರುವೆ. ನೀನು ಹೋಗಿ ಆಗಲೇ ಅರ್ಧಗಂಟೆ ಆಯಿತು" ಎಂದು ಕೇಳಿ ಬಂತು. ಆಗ ನಾರದ "ಅರ್ಧಗಂಟೆಯೋ ಆಗಿರುವುದು ! " ಎಂದು ವಿಸ್ಮಿತನಾದ. ಅವನ ಮನಸ್ಸಿನಲ್ಲಿ ಹನ್ನೆರಡು ವರುಷಗಳು ಆಗಿದ್ದವು. ಈ ಘಟನೆಗಳೆಲ್ಲಾ ಅರ್ಧಗಂಟೆಯಲ್ಲಿ ಆಗಿತ್ತು. ಇದೇ ಮಾಯೆ.

೩೧ ಧ್ಯಾನ

೧. ಮನಸ್ಸು ಯಾವುದೋ ಒಂದು ವಸ್ತುವನ್ನು ಕುರಿತು ಚಿಂತಿಸಲು ಯತ್ನಿಸುವುದು, ಯಾವುದೋ ಒಂದು ಸ್ಥಳದಲ್ಲಿ ಅದನ್ನು ಕೇಂದ್ರೀಕರಿಸಲು ಯತ್ನಿಸುವುದು—ಉದಾಹರಣೆಗೆ ಶಿರದ ಮೇಲುಭಾಗ, ಹೃದಯ ಇತ್ಯಾದಿ—ಈ ಕೇಂದ್ರಗಳಿಂದ ಮಾತ್ರ ಅದಕ್ಕೆ ವೇದನೆಗಳು ಬಂದು ಬೇರೆ ಕಡೆಯಿಂದ ಬರದೇ ಹೋದರೆ ಇದನ್ನೇ ಧಾರಣ ಎನ್ನುವುದು. ಈ ಧಾರಣ ಕೆಲವು ಕಾಲ ಇದ್ದರೆ ಅದಕ್ಕೆ ಧ್ಯಾನ ಎಂದು ಹೆಸರು.

೨. ಧ್ಯಾನಾವಸ್ಥೆಯೆ ನಮ್ಮ ಅತಿ ಶ್ರೇಷ್ಠವಾದ ಸ್ಥಿತಿ. ಎಲ್ಲಿಯವರೆಗೆ ಆಸೆ ಇರುವುದೋ ಅಲ್ಲಿಯವರೆಗೆ ಯಾವ ನಿಜವಾದ ಸುಖವೂ ದೊರಕುವುದಿಲ್ಲ. ಕೇವಲ ಸಾಕ್ಷಿಯಂತೆ ಧ್ಯಾನಪರವಾಗಿ ಯಾವಾಗ ನಾವೊಂದು ವಸ್ತುವನ್ನು ನೋಡಬಲ್ಲೆವೋ ಆಗಲೇ ನಿಜವಾದ ಸುಖ ಮತ್ತು ಆನಂದವನ್ನು ಅನುಭವಿಸ ಬಲ್ಲೆವು. ಪ್ರಾಣಿಗಳ ಸುಖ ಇಂದ್ರಿಯಗಳಲ್ಲಿದೆ, ಮನುಷ್ಯನ ಸುಖ ಅವನ ಬುದ್ಧಿ ಯಲ್ಲಿದೆ, ದೇವತೆಗಳ ಸುಖ ಧ್ಯಾನಸ್ಥಿತಿಯಲ್ಲಿದೆ. ಯಾರು ಈ ಧ್ಯಾನ ಸ್ಥಿತಿಗೆ ಹೋಗಿರುವರೋ ಅವರಿಗೆ ಮಾತ್ರ ಪ್ರಪಂಚ ಸುಂದರವಾಗಿ ಕಾಣಬಲ್ಲದು. ಯಾರು ಏನನ್ನೂ ಆಶಿಸುವುದಿಲ್ಲವೋ, ಯಾವುದರೊಂದಿಗೂ ಬೆರೆತು ಹೋಗುವು ದಿಲ್ಲವೋ, ಅವರಿಗೆ ಪ್ರಕೃತಿಯ ಬಹುವಿಧದ ಬದಲಾವಣೆಗಳು ಭವ್ಯವಾದ, ಸುಂದರವಾದ ಬದಲಾವಣೆಗಳಾಗಿವೆ.

೩. ಧ್ಯಾನ ಎಂದರೆ ಯಾವುದಾದರೂ ಒಂದು ವಸ್ತುವಿನ ಮೇಲೆ ಮನಸ್ಸನ್ನು ಕೇಂದ್ರೀಕರಿಸುವುದು. ಮನಸ್ಸಿಗೆ ಒಂದು ವಸ್ತುವಿನ ಮೇಲೆ ಏಕಾಗ್ರ ಮಾಡುವುದು ಬಂದರೆ ಅನಂತರ ಯಾವ ವಸ್ತುವಿನ ಮೇಲಾದರೂ ಅದು ಏಕಾಗ್ರ ಮಾಡಬಲ್ಲದು.

೪. ಮೊದಲು ಧ್ಯಾನ ನಮ್ಮೆದುರಿಗೆ ಇರುವ ಯಾವುದಾದರೂ ಒಂದು ವಸ್ತುವಿನಿಂದ ಪ್ರಾರಂಭವಾಗಬೇಕು. ಒಂದು ಸಲ ನಾನು ಒಂದು ಕಪ್ಪು ಚುಕ್ಕೆಯ ಮೇಲೆ ಏಕಾಗ್ರ ಮಾಡುತ್ತಿದ್ದೆ. ಕೊನೆಗೆ ನನಗೆ ಯಾವ ಚುಕ್ಕೆಯೂ ಕಾಣುತ್ತಿರ ಲಿಲ್ಲ. ಚುಕ್ಕೆ ಕಣ್ಣೆದುರಿಗೆ ಇದ್ದರೂ ಕಾಣುತ್ತಿರಲಿಲ್ಲ. ಆಗ ಮನಸ್ಸೇ ಇರಲಿಲ್ಲ. ಯಾವ ವೃತ್ತಿಯೂ ಏಳುತ್ತಿರಲಿಲ್ಲ. ಸ್ವಲ್ಪವೂ ಕದಲದೆ ಶಾಂತವಾಗಿರುವ ಸಾಗರ

ದಂತೆ ಇತ್ತು. ಆ ಸ್ಥಿತಿಯಲ್ಲಿ ನನಗೆ ಅತೀಂದ್ರಿಯ ಅನುಭವದ ವಿಹಂಗಮ ದೃಷ್ಟಿ ಸಿಕ್ಕುತ್ತಿತ್ತು. ಯಾವುದಾದರೊಂದು ಕೆಲಸಕ್ಕೆ ಬಾರದ ಬಾಹ್ಯವಸ್ತುವಿನಮೇಲೆ ಧ್ಯಾನಮಾಡಿದರೂ ಮನಸ್ಸನ್ನು ಏಕಾಗ್ರ ಮಾಡಬಹುದು. ಆದರೆ ಮನಸ್ಸಿಗೆ ಯಾವ ವಸ್ತುವಿನ ಮೇಲೆ ಪ್ರೀತಿ ಇದೆಯೋ ಅದರ ಮೇಲೆ ಧ್ಯಾನ ಮಾಡಿದರೆ ಸುಲಭವಾಗಿ ಶಾಂತಿಯನ್ನು ಪಡೆಯಬಹುದು. ಆದಕಾರಣವೆ ನಮ್ಮ ದೇಶದಲ್ಲಿ ಇಷ್ಟೊಂದು ದೇವದೇವಿಯರ ವಿಗ್ರಹಗಳು ಇರುವುದು. ಇಂತಹ ಪೂಜೆಯಿಂದ ಎಂತಹ ಅದ್ಭುತವಾದ ಕಲೆ ವೃದ್ಧಿಯಾಯಿತು ! ಆದರೆ ಈಗಿನ ಕಾಲದಲ್ಲಿ ಅದೇನೂ ಇಲ್ಲ. ಆದರೆ ಎಲ್ಲರಿಗೂ ಒಂದೇ ಧ್ಯಾನ ವಿಗ್ರಹಗಳು ಇರಲಾರವು. ತಾವು ಸಿದ್ಧರಾಗುವುದಕ್ಕೆ ಯಾವ ವಿಗ್ರಹವನ್ನು ಕುರಿತು ಧ್ಯಾನಿಸುತ್ತಿದ್ದರೋ ಅದನ್ನೇ ಅವರು ಇತರರಿಗೆ ಬೇಕಾದಷ್ಟು ಬೋಧಿಸಿರುವರು. ಇದು ನಾವು ಧ್ಯಾನಸ್ಥಿತಿಯನ್ನು ಪಡೆಯುವುದಕ್ಕೆ ಒಂದು ಸಹಾಯ ಎಂಬುದನ್ನು ಮರೆತು ಇದೇ ಸರ್ವಸ್ವ ಎಂದು ಬೋಧಿಸಿರುವರು. ಕೇವಲ ದಾರಿಯಲ್ಲೇ ನಿರತರಾಗಿ ಗುರಿಯನ್ನೇ ಅವರು ಮರೆತುಬಿಟ್ಟರು. ಮನಸ್ಸನ್ನು ವೃತ್ತಿಹೀನವಾಗಿ ಮಾಡ ಬೇಕು ಯಾವುದಾದರೊಂದು ವಸ್ತುವಿನ ಮೇಲೆ ನಾವು ತಲ್ಲೀನರಾಗದೇ ಇದ್ದರೆ ಇದು ಸಾಧ್ಯವಿಲ್ಲ.

೫. ಅಂತರ್ಯದಲ್ಲಿ ಸಿಂಹಸದೃಶ ಚೈತನ್ಯವಿದೆ. ನಿತ್ಯಶುದ್ಧ ಸ್ವಯಂಜ್ಯೋತಿ ಸ್ವರೂಪ ಮುಕ್ತಾತ್ಮನವನು. ಏಕಾಗ್ರತೆ ಮತ್ತು ಧ್ಯಾನದ ಮೂಲಕ ಯಾವಾಗ ಒಬ್ಬ ಅದನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವನೋ ಆಗ ಮಾಯಾ ಪ್ರಪಂಚ ಇಲ್ಲದಂತಾಗುವುದು.

೬. ನೀವು ಮನಸ್ಸನ್ನು ಒಂದು ವಸ್ತುವಿನ ಮೇಲೆ ತೈಲಧಾರೆಯಂತೆ ಇಡಬೇಕು. ಸಾಧಾರಣ ಮನುಷ್ಯನ ಮನಸ್ಸಾದರೋ ಹಲವು ವಸ್ತುಗಳ ಮೇಲೆ ಹರಿದು ಹಂಚಿಹೋಗಿದೆ. ಧ್ಯಾನ ಮಾಡುವ ಸಮಯದಲ್ಲಿ ಕೂಡ ಇದು ಅತ್ತ ಇತ್ತ ಚಲಿಸಲೆತ್ನಿಸುವುದು. ಆದರೆ ಮನಸ್ಸಿನಲ್ಲಿ ಯಾವ ವಿಧವಾದ ಆಲೋಚನೆ ಯಾದರೂ ಏಳಲಿ, ಸುಮ್ಮನೆ ಕುಳಿತುಕೊಂಡು ಎಂತಹ ಆಲೋಚನೆಗಳು ಏಳು ತ್ತಿವೆ ಎಂಬುದನ್ನು ಗಮನಿಸಿ. ಹೀಗೆ ನಾವು ಅದನ್ನು ನೋಡುತ್ತಿದ್ದರೆ, ಮನಸ್ಸಿನ ವೃತ್ತಿಗಳು ಕ್ರಮೇಣ ಕಡಮೆಯಾಗಿ ಶಾಂತವಾಗುವುದು. ಮನಸ್ಸಿನ ಆಲೋಚನೆಯನ್ನೇ ಈ ವೃತ್ತಿಗಳು ತೋರುವುವು. ನೀವು ಯಾವ ಆಲೋಚನೆ ಯನ್ನು ಮೊದಲು ತೀವ್ರವಾಗಿ ಮಾಡುತ್ತಿದ್ದಿರೊ ಅವು ಮನಸ್ಸಿನಲ್ಲಿ ಅಂತರ್ ಪ್ರವಾಹವಾಗಿ ಧ್ಯಾನ ಸಮಯದಲ್ಲಿ ಮೇಲೇಳುತ್ತವೆ. ಧ್ಯಾನದ ಸಮಯದಲ್ಲಿ

ಇಂತಹ ಅಲೆಗಳು ಎದ್ದರೆ ಮನಸ್ಸು ಏಕಾಗ್ರದ ಕಡೆ ಪ್ರಯಾಣ ಮಾಡುತ್ತಿದೆ ಎಂದು ಭಾವಿಸಬೇಕು.

೭. ಕೆಲವುವೇಳೆ ಮನಸ್ಸು ಕೆಲವು ಭಾವನೆಗಳ ಮೇಲೆ ಏಕಾಗ್ರವಾಗುವುದು. ಇದನ್ನೇ ವಿಕಲ್ಪಧ್ಯಾನ ಎನ್ನುವುದು. ಆದರೆ ಮನಸ್ಸು ವೃತ್ತಿಗಳಿಂದ ಪಾರಾದರೆ ಆಗ ಅನಂತಜ್ಞಾನ ಸಾರವಾದ ಅಂತರಾತ್ಮನಲ್ಲಿ ತಲ್ಲೀನವಾಗುವುದು. ಅದು ಏಕ, ನಿರಪೇಕ್ಷವಾದುದು.

೮. ಧ್ಯಾನ ಆಧ್ಯಾತ್ಮಿಕ ಜೀವನಕ್ಕೆ ಬಹಳ ಸಹಕಾರಿಯಾದುದು. ಧ್ಯಾನ ಮಾಡುವಾಗ ನಾವು ಮನಸ್ಸನ್ನು ಪ್ರಾಪಂಚಿಕ ಭಾವನೆಯಿಂದ ಬೇರ್ಪಡಿಸಿ ನಮ್ಮ ಪವಿತ್ರ ಸ್ವಭಾವವನ್ನು ಅನುಭವಿಸಲು ಯತ್ನಿಸುವೆವು. ಧ್ಯಾನದಲ್ಲಿ ನಾವು ಯಾವ ಬಾಹ್ಯ ಸಹಾಯವನ್ನೂ ಆಶ್ರಯಿಸುವುದಿಲ್ಲ.

೯. ಧ್ಯಾನವಿರಬೇಕು. ಧ್ಯಾನವೇ ಅತ್ಯಂತ ಆವಶ್ಯಕವಾಗಿ ಬೇಕಾಗಿರುವುದು. ಧ್ಯಾನಮಾಡಿ. ಸರ್ವಶ್ರೇಷ್ಠವಾದುದೇ ಧ್ಯಾನ. ಆಧ್ಯಾತ್ಮಿಕ ಜೀವನಕ್ಕೆ ಅತ್ಯಂತ ಸಮೀಪವಾದುದೇ ಧ್ಯಾನ. ಧ್ಯಾನಾವಸ್ಥೆಯಲ್ಲಿರುವ ಮನಸ್ಸು ಮಾತ್ರ ಪ್ರಪಂಚವನ್ನು ಕುರಿತು ಚಿಂತಿಸುವುದಿಲ್ಲ, ಆತ್ಮ ತನ್ನನ್ನು ತಾನೇ ಕುರಿತು ಚಿಂತಿಸುತ್ತದೆ. ಆಗ ಎಲ್ಲಾ ಬಾಹ್ಯ ಉಪಾಧಿಗಳಿಂದಲೂ ಪಾರಾಗಿರುತ್ತದೆ. ಆತ್ಮನ ಅತಿ ಪವಿತ್ರವಾದ ಅದ್ಭುತವಾದ ಸ್ಪರ್ಶವೇ ಅದು.

೧೦. ನಾವೇ ಸರ್ವವ್ಯಾಪಿಯಾದ ಆತ್ಮ ಎಂದು ಮನನ ಮಾಡಿ, ಧ್ಯಾನ ಮಾಡಿ. "ನಾನು ದೇಹವಲ್ಲ, ಮನಸ್ಸಲ್ಲ, ಬುದ್ಧಿಯಲ್ಲ, ಸೂಕ್ಷ್ಮ ದೇಹವಲ್ಲ." ಹೀಗೆ ನೇತಿನೇತಿ ಮಾರ್ಗವನ್ನು ಅನುಸರಿಸಿ ನಿಮ್ಮ ಸ್ವಭಾವವಾದ ಅತೀಂದ್ರಿಯ ಜ್ಞಾನದಲ್ಲಿ ನೆಲಸಿ. ಮನಸ್ಸನ್ನು ಪುನಃಪುನಃ ಇದರಲ್ಲಿ ಅದ್ದಿ ಮನಸ್ಸನ್ನು ಇಲ್ಲದಂತೆ ಮಾಡಿ, ಅದನ್ನು ನುಗ್ಗಿ ನೋಣೆಯಿರಿ. ಆಗ ಮಾತ್ರ ನೀವು ಚೇತನ ಸಾರವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವಿರಿ ಅಥವಾ ನಿಮ್ಮ ನೈಜಸ್ವಭಾವದಲ್ಲಿ ನೆಲಸುವಿರಿ. ಆಗ ಜ್ಞಾನಿ ಮತ್ತು ಜ್ಞೇಯ, ಧ್ಯಾನಿ ಮತ್ತು ಧ್ಯೇಯ ಇವೆಲ್ಲಾ ಒಂದಾಗುವುವು. ಅನಂತರ ಆರೋಪಿಸಿದ ದೃಶ್ಯವೆಲ್ಲಾ ಮಾಯವಾಗುವುದು. ಈ ಸ್ಥಿತಿಯಲ್ಲಿ ಯಾವ ಸಾಪೇಕ್ಷ ಜ್ಞಾನವೂ ಇರುವುದಿಲ್ಲ. ಆತ್ಮನೊಬ್ಬನೇ ಜ್ಞಾನಿಯಾಗಿರುವಾಗ, ಅವನನ್ನು ಅರಿಯುವುದು ಯಾವುದರಿಂದ ? ಆತ್ಮನೇ ಸಚ್ಚಿದಾನಂದ.

೩೨ ಮನಸ್ಸು ಮತ್ತು ಆಲೋಚನೆ

೧. ಶ್ರೇಷ್ಠಮಾನವರು ಪ್ರಶಾಂತ ಚಿತ್ತರು, ಮೌನಿಗಳು. ಇವರು ಇರುವುದು ಯಾರಿಗೂ ಗೊತ್ತಾಗುವುದಿಲ್ಲ. ಇವರಿಗೆ ಮಾತ್ರ ಆಲೋಚನೆಯ ಶಕ್ತಿ ನಿಜವಾಗಿ ಗೊತ್ತಿರುವುದು. ಇವರೊಂದು ಗುಹೆಗೆ ಹೋಗಿ ಬಾಗಿಲುಗಳನ್ನು ಮುಚ್ಚಿ ಐದು ಆಲೋಚನೆಗಳನ್ನು ಮಾಡಿ ಕಾಲವಾಗಿ ಹೋದರೂ ಈ ಆಲೋಚನೆ ಪ್ರಪಂಚ ಇರುವವರೆಗೆ ಇರಬಲ್ಲದು. ಇಂತಹ ಆಲೋಚನೆಗಳು ಪರ್ವತಗಳನ್ನು ಭೇದಿಸಿಕೊಂಡು ಹೋಗುತ್ತವೆ, ಸಾಗರವನ್ನು ದಾಟುತ್ತವೆ, ಪ್ರಪಂಚವನ್ನೆಲ್ಲಾ ಸಂಚರಿಸುತ್ತವೆ.

೨. ಯಾವುದಾದರೊಂದು ಆಲೋಚನೆಯನ್ನು ತೆಗೆದುಕೊಳ್ಳಿ. ಅದನ್ನು ನಿಮ್ಮ ನಿತ್ಯಜೀವನದಲ್ಲಿ ಅನುಷ್ಠಾನಕ್ಕೆ ತನ್ನಿ. ಅದನ್ನೇ ಮನನ ಮಾಡಿ, ಕನಸು ಕಾಣಿ, ಅದಕ್ಕಾಗಿ ಬಾಳಿ. ನಿಮ್ಮ ಮೆದುಳು, ಮಾಂಸಖಂಡ, ನರಗಳು ಮತ್ತು ದೇಹದ ಅಂಗೋಪಾಂಗವೂ ಈ ಭಾವನೆಯಿಂದ ಓತಪ್ರೋತವಾಗಲಿ. ಇತರ ಆಲೋಚನೆಯನ್ನೆಲ್ಲಾ ಸಂಪೂರ್ಣ ತ್ಯಜಿಸಿ. ಇದೇ ಜಯದ ಮಾರ್ಗ. ಆಧ್ಯಾತ್ಮ ಮಹಾಮಹಿಮರು ಆಗುವುದು ಹೀಗೆ.

೩. ಮನಸ್ಸೆಲ್ಲಾ ವಿಶ್ವ ಮನಸ್ಸಿನ ಒಂದು ಅಂಶ. ಯಾರಿಗೆ ಒಂದು ಹಿಡಿ ಮಣ್ಣು ಗೊತ್ತೊ ಅವರಿಗೆ ಪ್ರಪಂಚದ ಮಣ್ಣೆಲ್ಲಾ ಗೊತ್ತು. ಯಾರು ತಮ್ಮ ಮನಸ್ಸನ್ನು ನಿಗ್ರಹಿಸಿರುವರೋ ಅವರಿಗೆ ಎಲ್ಲರ ಮನಸ್ಸಿನ ರಹಸ್ಯವೂ ಗೊತ್ತಿದೆ. ಅವರಿಗೆ ಎಲ್ಲರ ಮನಸ್ಸಿನ ಮೇಲೆಯೂ ಅಧಿಕಾರವಿದೆ.

೪. ಸರ್ವಜ್ಞರು ಹಿಂದೆ ಇದ್ದರು, ಈಗಲೂ ಇರುವರು. ಮುಂದೆಯೂ ಇಂತಹ ಹಲವರು ಬರುವರು.

೫. ನಮ್ಮಲ್ಲಿ ಕರ್ಮವನ್ನು ಪ್ರಚೋದಿಸುವ ಶಕ್ತಿಯೇ ಆಲೋಚನೆ. ಮನಸ್ಸನ್ನು ಶ್ರೇಷ್ಠ ಆಲೋಚನೆಗಳಿಂದ ತುಂಬಿ. ಹಗಲು ರಾತ್ರಿ ಅದನ್ನು ಕೇಳಿ. ಪ್ರತಿಮಾಸವೂ ಅದನ್ನು ಕುರಿತು ಯೋಚಿಸಿ ಸೋಲನ್ನು ಪರಿಗಣಿಸದಿರಿ. ಅದು ಸ್ವಾಭಾವಿಕವಾದುದು. ಈ ಸೋಲೇ ಜೀವನದ ಸೌಂದರ್ಯ.

೬. ನಿಮ್ಮ ಮನಸ್ಸು ನಿಮ್ಮ ವಶಕ್ಕೆ ಬಂದ ಮೇಲೆ ದೇಹದಮೇಲೆಲ್ಲಾ ನಿಮ್ಮ ನಿಗ್ರಹ ಬರುವುದು. ಆಗ ನೀವು ದೇಹದ ಗುಲಾಮರಾಗುವ ಬದಲು

ದೇಹ ನಿಮಗೆ ಗುಲಾಮನಾಗುವುದು. ಈ ದೇಹವೆಂಬ ಯಂತ್ರ ಆತ್ಮನನ್ನು ಅಧೋಗತಿಗೆ ಎಳೆಯುವ ಬದಲು, ಇದು ಆತ್ಮನಿಗೆ ದೊಡ್ಡ ಸ್ನೇಹಿತನಾಗುವುದು.

೭. ಮನಸ್ಸು ಒಂದು ಸರೋವರದಂತೆ. ಪ್ರತಿಯೊಂದು ಆಲೋಚನೆಯೂ ಅದರ ಮೇಲಿರುವ ಅಲೆ. ಹೇಗೆ ಸರೋವರದಲ್ಲಿ ಅಲೆಗಳು ಮೇಲೆದ್ದು ಬಿದ್ದು ಮಾಯವಾಗಿ ಹೋಗುವುವೋ ಹಾಗೆಯೇ ಮನೋಸಾಗರದಲ್ಲಿ ಆಲೋಚನಾ ವೃತ್ತಿಗಳು ಎದ್ದು ಬೀಳುತ್ತಿರುತ್ತವೆ. ಅವು ಬೀಳುತ್ತಿರುತ್ತವೆ. ಆದರೆ ಅವು ಎಂದೆಂದಿಗೂ ಮಾಯವಾಗಿ ಹೋಗುವುದಿಲ್ಲ. ಅವು ಸೂಕ್ಷ್ಮವಾಗುವುವು ಆದರೆ ಅವುಗಳೆಲ್ಲಾ ಅಲ್ಲಿವೆ. ಪುನಃ ಅವಕಾಶ ಸಿಕ್ಕಿದರೆ ಮೇಲೆದ್ದು ಬರುವುದಕ್ಕೆ ಸಿದ್ಧ ವಾಗಿವೆ.

೮. ಹೇಗೆ ನಮ್ಮ ಪ್ರಜ್ಞೆಯ ಕೆಳಗಡೆ ಕೆಲವು ನಮಗೆ ಅರಿವಿಲ್ಲದೇ ಆಗುವ ಕ್ರಿಯೆಗಳು ಇವೆಯೋ ಹಾಗೆಯೇ ನಮ್ಮ ಪ್ರಜ್ಞೆಯ ಮೇಲುಗಡೆಯೂ ಕೆಲವು ಕ್ರಿಯೆಗಳು ನಮ್ಮ ಪ್ರಜ್ಞೆ ಇಲ್ಲದೆ ಆಗುವುವು. ಇವೆರಡರ ಹಿಂದೆಯೂ ಅಹಂಕಾರವಿಲ್ಲ. ಅಹಂಕಾರವಿರುವುದು ಮಧ್ಯದಲ್ಲಿ ಮಾತ್ರ, ಮನಸ್ಸು ಪ್ರಜ್ಞೆಯ ಮೇಲೆ ಅಥವಾ ಕೆಳಗೆ ಇದ್ದರೆ ಅಲ್ಲಿ ನಾನೆಂಬ ಭಾವನೆ ಇರುವುದಿಲ್ಲ. ಆದರೂ ಮನಸ್ಸು ಕೆಲಸ ಮಾಡುವುದು. ಮನಸ್ಸು ಯಾವಾಗ ಪ್ರಜ್ಞೆಗೆ ಅತೀತವಾಗಿ ಹೋಗುವುದೋ ಆಗಲೇ ಅದನ್ನು ಸಮಾಧಿ ಅಥವಾ ಅತಿಪ್ರಜ್ಞಾವಸ್ಥೆ ಎನ್ನುವುದು.

೯. ಮನಸ್ಸು ಕೆಲಸಮಾಡದೆ ಇರುವಾಗ ಅದು ಮಾಯವಾಗುವುದು. ಆಗ ಆತ್ಮ ವ್ಯಕ್ತವಾಗುವುದು. ಇದನ್ನೇ ಶಂಕರಾಚಾರ್ಯರು ಅಪರೋಕ್ಷಾನುಭೂತಿ ಎಂದು ಹೇಳುವುದು.

೧೦, ಪ್ರತಿಯೊಂದು ಆಲೋಚನೆಯೂ ನಮ್ಮ ದೇಹವೆಂಬ ಕಬ್ಬಿಣದ ಮೇಲೆ ಕೊಟ್ಟ ಒಂದು ಸುತ್ತಿಗೆಯ ಪೆಟ್ಟಿನಂತೆ. ಇದರಿಂದ ನಾವೇನು ಆಗ ಬೇಕೆಂದಿರುವೆವೋ ಅದಾಗುವೆವು.

೧೧. ನಾವು ನಮ್ಮ ಆಲೋಚನೆಯಂತೆ ಇರುವೆವು. ಆದಕಾರಣ ನೀವು ಏನನ್ನು ಯೋಚಿಸುವಿರೋ ಅದರ ವಿಷಯದಲ್ಲಿ ಜೋಪಾನವಾಗಿರಿ.

೧೨. ಪ್ರತಿಯೊಂದು ದುಷ್ಟ ಆಲೋಚನೆಯೂ ನಮಗೇ ಹಿಂತಿರುಗಿ ಬರು ವುದು. ಪ್ರತಿಯೊಂದು ದ್ವೇಷಭಾವನೆಯೂ ಅದನ್ನು ಒಂದು ಗುಹೆಯಲ್ಲಿ ಮಾಡಿ ದ್ದರೂ ಅದು ಸುಪ್ತಾವಸ್ಥೆಯಲ್ಲಿರುವುದು. ಒಂದಲ್ಲ ಒಂದು ದಿನ ದುಃಖದ ರೂಪಿನಲ್ಲಿ ರಭಸದಿಂದ ನಮ್ಮ ಮೇಲೆ ಬೀಳುವುದು. ದ್ವೇಷ ಅಸೂಯೆ ಭಾವನೆ

ಯನ್ನು ನೀವು ಮಾಡಿದ್ದರೆ ಅದು ಚಕ್ರಬಡ್ಡಿ ಸಮೇತ ನಿಮ್ಮ ಮೇಲೆ ಹಿಂತಿರುಗಿ ಬೀಳುವುದು. ಯಾವುದೂ ಅದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಒಂದು ಸಲ ನೀವು ಅದನ್ನು ಚಲಿಸುವಂತೆ ಮಾಡಿದರೆ ಅದನ್ನು ಸಹಿಸಬೇಕು. ಇದನ್ನೇ ಜ್ಞಾಪಕದಲ್ಲಿಟ್ಟರೆ ಪಾಪ ಮಾಡುವುದನ್ನು ತಪ್ಪಿಸುವುದು.

೧೩. ಪ್ರಪಂಚದಲ್ಲಿರುವ ಒಳ್ಳೆಯ ಆಲೋಚನೆಗೆಲ್ಲಾ ನಾವು ಹಕ್ಕುದಾರರು. ನಾವು ಅದನ್ನು ಹೇಗೆ ಸ್ವಾಗತಿಸಬೇಕೆಂಬುದನ್ನು ಅರಿತಿರಬೇಕು.

೧೪. ನನ್ನ ಆದರ್ಶವೇ, ಅತಿದೀನನಿಗೂ ದರಿದ್ರನಿಗೂ ಮಾನವಕೋಟಿ ಇಂಡಿಯಾ ದೇಶದಲ್ಲಿ ಮತ್ತು ಹೊರಗೆ ಮಾಡಿದ ಭವ್ಯಭಾವನೆ ಸಿಕ್ಕುವಂತೆ ಮಾಡುವುದು. ಅನಂತರ ಅವರು ತಾವೇ ಸ್ವತಂತ್ರವಾಗಿ ಆಲೋಚಿಸಲಿ.

ಜೀವನ ಬೆಳೆಯಬೇಕಾದರೆ, ವಿಕಾಸವಾಗಬೇಕಾದರೆ, ಬಲಿಷ್ಠವಾಗಬೇಕಾದರೆ, ಆಲೋಚನೆ ಮತ್ತು ಕ್ರಿಯೆಗೆ ಒಂದು ಸ್ವಾತಂತ್ರ್ಯವಿರಬೇಕು. ಇದು ಎಲ್ಲಿ ಇಲ್ಲವೋ ಆ ಮನುಷ್ಯ, ಜನಾಂಗ, ದೇಶ, ಅಧೋಗತಿಗೆ ಇಳಿಯುವುದು. ಜಾತಿ ಇರಲಿ ಇಲ್ಲದಿರಲಿ, ಧರ್ಮ ಇರಲಿ ಇಲ್ಲದೇ ಇರಲಿ, ವ್ಯಕ್ತಿಯ ಸ್ವಾತಂತ್ರ ಆಲೋಚನೆ ಮತ್ತು ಕ್ರಿಯೆಗೆ—ಅದು ಇನ್ನೊಬ್ಬರಿಗೆ ಎಲ್ಲಿಯವರೆಗೆ ಆತಂಕವಾಗಿಲ್ಲವೋ ಅಲ್ಲಿಯವರೆಗೆ—ಆತಂಕವಾಗಿರುವ ವ್ಯಕ್ತಿ, ಪಂಗಡ, ಜಾತಿ, ದೇಶ, ಸಂಸ್ಥೆ ಎಲ್ಲಾ ಪೈಶಾಚಿಕ. ಅವು ತೊಲಗಬೇಕು.

೩೩ ಮಹಮ್ಮದ್ ಮತ್ತು ಇಸ್ಲಾಂ ಧರ್ಮ

೧. ಮುಹಮ್ಮದ್, ಸರಿಸಮಾನತೆಯನ್ನು ಸಾರಿದ ಸಂದೇಶಕ. ಅವನ ಧರ್ಮದಲ್ಲಿ ಏನು ಒಳ್ಳೆಯದಿದೆ ಎಂದು ನೀವು ಕೇಳಬಹುದು. ಒಳ್ಳೆಯದಿಲ್ಲದೇ ಇದ್ದಿದ್ದರೆ ಅದು ಹೇಗೆ ಇಲ್ಲಿಯವರೆಗೆ ಇರುತ್ತಿತ್ತು ? ಒಳ್ಳೆಯದೇ ಬಹಳ ಕಾಲ ಬಾಳಬೇಕಾದರೆ, ಇರಬೇಕಾದರೆ. ಮುಹಮ್ಮದೀಯ ಧರ್ಮದಲ್ಲಿ ಏನೂ ಒಳ್ಳೆಯ ದಿಲ್ಲದೇ ಇದ್ದರೆ ಅದು ಹೇಗೆ ಇದುವರೆಗೆ ಜೀವಿಸುತ್ತಿತ್ತು? ಆದರಲ್ಲೂ ಎಷ್ಟೋ ಒಳ್ಳೆಯದಿದೆ.

೨. ಮುಹಮ್ಮದ್ ಸಮಾನತೆಯ ದೇವದೂತ, ಮಾನವ ಸಹೋದರತ್ವ, ಮುಹಮ್ಮದೀಯರ ಸಹೋದರತ್ವದ ಸಂದೇಶಕ.

೩. ಮುಹಮ್ಮದ್ ತನ್ನ ಜೀವನದ ಮೂಲಕ, ಮುಹಮ್ಮದೀಯರಲ್ಲಿ ಸಹೋದರತ್ವ ಮತ್ತು ಸರಿಸಮಾನತೆ ಇರಬೇಕೆಂದು ತೋರಿದನು. ಇಲ್ಲಿ ಜನಾಂಗ, ಜಾತಿ, ಬಣ್ಣ ಮತ್ತು ಲಿಂಗಭೇದದ ಪ್ರಶ್ನೆಯೇ ಇಲ್ಲ. ಟರ್ಕಿಯ ಸುಲ್ತಾನ ಒಬ್ಬ ಗುಲಾಮನನ್ನು ಆಫ್ರಿಕದ ಸಂತೆಯಲ್ಲಿ ಕೊಂಡು ಸರಪಳಿಕಟ್ಟಿ ಅವನನ್ನು ತನ್ನ ರಾಜಧಾನಿಗೆ ತರಬಹುದು. ಅವನು ಮುಹಮ್ಮದೀಯನಾದರೆ, ಅವನಿಗೆ ಸಾಕಾ ದಷ್ಟು ಬುದ್ಧಿ ಕುಶಲತೆ ಇದ್ದರೆ, ತನ್ನ ಮಗಳನ್ನು ಬೇಕಾದರೆ ಅವನಿಗೆ ಕೊಟ್ಟು ಮದುವೆ ಮಾಡುವನು. ಈ ದೇಶದಲ್ಲಿ (ಅಮೆರಿಕಾದಲ್ಲಿ) ನೀಗ್ರೋ ಮತ್ತು ರೆಡ್ ಇಂಡಿಯನ್ನರನ್ನು ಹೇಗೆ ನೋಡುತ್ತಾರೆ ಇವುಗಳೊಂದಿಗೆ ಹೋಲಿಸಿ ನೋಡಿ. ಹಿಂದೂಗಳು ಏನು ಮಾಡುತ್ತಾರೆ? ನಿಮ್ಮ ಪಾದ್ರಿಗಳಲ್ಲಿ ಯಾರಾದರೂ ಆಚಾರ ಶೀಲನ ಆಹಾರವನ್ನು ಮುಟ್ಟಿದರೆ ಅದನ್ನು ಬಿಸಾಡುವರು. ನಮ್ಮಲ್ಲಿ ಅಮೋಘ ವಾದ ತತ್ತ್ವವಿದ್ದರೂ ಅನುಷ್ಠಾನದಲ್ಲಿ ನಾವೆಷ್ಟು ದುರ್ಬಲರು ಎಂಬುದನ್ನು ನೋಡಿ. ಮತ್ತಾವ ಜನಾಂಗದಲ್ಲೂ ಇಲ್ಲದ ಒಳ್ಳೆಯ ಗುಣವನ್ನು ಮುಹಮ್ಮದೀಯ ರಲ್ಲಿ ನೋಡುವಿರಿ. ಜಾತಿ ಜನಾಂಗದ ಮಾತನ್ನೇ ಮೂಲೆಗೊತ್ತಿ ಪೂರ್ಣವಾದ ಸರಿಸಮಾನತೆಯ ಭಾವವನ್ನು ಇಲ್ಲಿ ವ್ಯಕ್ತಗೊಳಿಸುವರು.

೪. ಹಿಂದಿನ ಧರ್ಮಗಳೆಲ್ಲಾ ಇನ್ನೂ ಉಳಿದಿರುವುದರಿಂದ ಅವರು ತಮ್ಮ ಹಿಂದಿನ ಆದರ್ಶವನ್ನು ಇನ್ನು ಅಚ್ಚಳಿಯದಂತೆ ಇಟ್ಟಿರಬೇಕು ಎಂಬುದನ್ನು ತೋರುವುದು. ಅವುಗಳಿಗೆ ಎಷ್ಟೇ ಕಷ್ಟಬರಲಿ, ಎಷ್ಟೇ ಅಡಚಣೆಗಳು ಬರಲಿ,

ಎಷ್ಟೇ ಜಗಳವಾಗಲಿ ಎಷ್ಟೇ ವಿಗ್ರಹ ಆಚಾರಗಳು ಇವುಗಳಿಗೆ ಧಾಳಿ ಇಡಲಿ, ಇವುಗಳಲ್ಲಿ ಪ್ರತಿಯೊಂದು ಧರ್ಮವೂ ಜೀವಂತವಾಗಿದೆ. ಅದರ ಹೃದಯ ಸ್ಪಂದಿಸುತ್ತಿದೆ, ಅವು ಯಾವ ಉದ್ದೇಶಕ್ಕೆ ಪ್ರಪಂಚಕ್ಕೆ ಬಂದವೋ ಅವುಗಳಾವುದನ್ನೂ ಅವು ಕಳೆದುಕೊಂಡಿಲ್ಲ. ಅವುಗಳ ಉದ್ದೇಶವನ್ನು ಓದುವುದು ಬಹಳ ಪ್ರಯೋಜನಕಾರಿ. ಮಹಮ್ಮದೀಯರ ಧರ್ಮವನ್ನು ಉದಾಹರಣೆಗೆ ತೆಗೆದುಕೊಳ್ಳಿ, ಒಬ್ಬ ಮಹಮ್ಮದೀಯನಾದೊಡನೆಯೇ, ಇಡೀ ಇಸ್ಲಾಂ ಪ್ರಪಂಚ ಅವನನ್ನು ಒಬ್ಬ ಸಹೋದರನಂತೆ ಬೀಸಿದ ಕರಗಳಿಂದ ಸ್ವಾಗತಿಸುವುದು. ಇತರ ಧರ್ಮಗಳು ತೋರಿದ ವ್ಯತ್ಯಾಸವಾವುದನ್ನೂ ಮಾಡುವುದಿಲ್ಲ. ನಿಮ್ಮ ಅಮೆರಿಕ ಇಂಡಿಯನ್ ಮಹಮ್ಮದೀಯನಾದರೆ, ಟರ್ಕಿಯ ಸುಲ್ತಾನ ಅವನೊಡನೆ ಊಟ ಮಾಡಲು ಯಾವ ಅಭ್ಯಂತರವೂ ಇಲ್ಲ. ಅವನು ಬುದ್ಧಿವಂತನಾಗಿದ್ದರೆ ಯಾವ ಅಧಿಕಾರವನ್ನು ಬೇಕಾದರೂ ಪಡೆಯಬಹುದು. ಈ ದೇಶದಲ್ಲಿ ಬಿಳಿಯ ಮತ್ತು ನೀಗ್ರೋ ಜನಗಳು ಪಕ್ಕ ಪಕ್ಕದಲ್ಲಿ ಕಾಲೂರಿ ನಿಂತು ಪ್ರಾರ್ಥಿಸುವಂತಹ ಚರ್ಚನ್ನು ನಾನು ಇನ್ನೂ ನೋಡಿಲ್ಲ.

೫. ಇಸ್ಲಾಂ ಎಲ್ಲರನ್ನೂ ಸರಿಸಮಾನರನ್ನಾಗಿ ಮಾಡುವುದು. ಇದೇ ಮಹಮ್ಮದೀಯ ಧರ್ಮದ ಒಂದು ವೈಶಿಷ್ಟ್ಯ. ಪ್ರಪಂಚದಲ್ಲಿ ಮಹಮ್ಮದೀಯ ಧರ್ಮ ಬಂದದ್ದೇ ತಮ್ಮ ಧರ್ಮಕ್ಕೆ ಸೇರಿದವರೆಲ್ಲರೂ ವ್ಯಾವಹಾರಿಕವಾಗಿ ಸರಿಸಮಾನರಂತೆ ವರ್ತಿಸಬೇಕು ಎನ್ನುವುದನ್ನು ಬೋಧಿಸುವುದಕ್ಕೆ.

೬. ಮಹಮ್ಮದೀಯರಲ್ಲಿ ಪ್ರವಾದಿಗಳು, ಮಹಾತ್ಮರು ಮುಂತಾದವರನ್ನು ಪೂಜಿಸುತ್ತಾರೆ. ಅವರು ಪ್ರಾರ್ಥಿಸುವಾಗ ಕಾಬಾ ಕಡೆಗೆ ತಿರುಗುತ್ತಾರೆ. ಮನುಷ್ಯರು ಧರ್ಮದ ಪ್ರಾರಂಭದಲ್ಲಿ ಯಾವುದಾದರೂ ಬಾಹ್ಯವನ್ನು ಉಪಯೋಗಿಸಬೇಕೆಂಬುದನ್ನು ಇದು ತೋರುವುದು. ಮನಸ್ಸು ಪರಿಶುದ್ಧವಾದ ಮೇಲೆ ಸೂಕ್ಷ್ಮವಿಷಯಗಳನ್ನು ಕುರಿತು ಅವರು ಯೋಚಿಸಬಲ್ಲರು.

೭. ಮಹಮ್ಮದೀಯರಲ್ಲಿ ಸ್ತ್ರೀಯರಿಗೆ ಆತ್ಮವಿಲ್ಲ ಎಂದು ನಿಮಗೆ ಅಪಪ್ರಚಾರ ಮಾಡಿರುವರು. ಇದು ಕ್ರೈಸ್ತರ ಒಂದು ಹಳೆಯ ದೋಷ. ಅವರಿಗೆ ಆ ದೋಷವನ್ನು ಕಂಡರೆ ಆಸೆ ಎಂದು ತೋರುವುದು. ನಾನು ಮಹಮ್ಮದೀಯನಲ್ಲ ಎಂಬುದು ನಿಮಗೆ ಗೊತ್ತಿದೆ. ಆದರೂ ಅವರ ಸ್ಥಿತಿಯನ್ನು ಪರಿಶೀಲಿಸಲು ನನಗೆ ಅವಕಾಶವಿತ್ತು. ಖೊರಾನಿನಲ್ಲಿ ಒಂದು ಕಡೆಯೂ ಸ್ತ್ರೀಯರಿಗೆ ಆತ್ಮನಿಲ್ಲ ಎಂದು ಹೇಳುವುದಿಲ್ಲ. ಅದಕ್ಕೆ ಬದಲು ಇದೆ ಎಂದು ಹೇಳುವುದು.

೮. ಇಂಗ್ಲೆಂಡಿನವರಿಗೆ ಭೌತಿಕ ಖಡ್ಗವಿದೆ, ಹಿಂದೆ ನಮ್ಮ ಮಹಮ್ಮದೀಯರಿಗೆ ಇದ್ದಂತೆ. ಆದರೂ ಅಕ್ಬರ್ ಮಹಾಶಯನು ಅನುಷ್ಠಾನದಲ್ಲಿ ಹಿಂದೂ

ಮಂತೆಯೇ ಆದನು. ವಿದ್ಯಾವಂತರಾದ ಮುಹಮ್ಮದೀಯರು ಮತ್ತು ಸಂಘಗಳು ಇವರನ್ನು ಹಿಂದೂಗಳಿಂದ ಬೇರ್ಪಡಿಸಲು ಸಾಧ್ಯವೇ ಇಲ್ಲ. ಅವರು ದನದ ಮಾಂಸ ತಿನ್ನುವುದಿಲ್ಲ, ಇತರ ವಿಷಯಗಳಲ್ಲಿ ಹಿಂದೂಗಳನ್ನೇ ಹೋಲುವರು. ನಮ್ಮ ಭಾವನೆಗಳು ಅವರಲ್ಲಿ ಹಾಸುಹೊಕ್ಕಾಗಿ ಹೋಗಿವೆ.

೯. ವೇದಾಂತಧರ್ಮದ ಉದಾರ ಸ್ವಭಾವ ಮುಹಮ್ಮದೀಯರ ಮೇಲೆ ಬಹಳವಾಗಿ ತನ್ನ ಪ್ರಭಾವವನ್ನು ಬೀರಿದೆ. ಇಂಡಿಯಾ ದೇಶದಲ್ಲಿರುವ ಮುಹಮ್ಮದೀಯಧರ್ಮ ಇತರ ಕಡೆಗಳಂತೆ ಅಲ್ಲ. ಅವುಗಳಿಗಿಂತ ಸಂಪೂರ್ಣ ಬೇರೆ. ಹೊರಗಿನಿಂದ ಬಂದ ಮುಹಮ್ಮದೀಯರು ಇಂಡಿಯಾದೇಶದ ಮುಹಮ್ಮದೀಯರಿಗೆ ಅನ್ಯ ಧರ್ಮದ ವಿಷಯವಾಗಿ ಮಾತನಾಡಿದಾಗ ಮಾತ್ರ ಅವರು ಉದ್ವಿಗ್ನರಾಗುವರು.

೧೦. ವೇದಾಂತ ಅಥವಾ ಮತ್ತಾವ ಹೆಸರಿನಿಂದಾದರೂ ಕರೆಯಿರಿ, ಸತ್ಯವೇನೆಂದರೆ ಅದ್ವೈತವೇ ಧರ್ಮ ಮತ್ತು ತತ್ವದ ಕೊನೆಯ ಮಾತು. ಅದ್ವೈತ ದೃಷ್ಟಿಯಿಂದ ಮಾತ್ರ ಎಲ್ಲಾ ಧರ್ಮ ಮತ್ತು ಜಾತಿಗಳನ್ನು ಪ್ರೀತಿಯಿಂದ ನೋಡಬಹುದು. ಇದೇ ಭವಿಷ್ಯ ಜನಾಂಗದ ಮುಂದುವರಿದ ಜನರ ಧರ್ಮ ಎಂದು ನಾವು ನಂಬುತ್ತೇವೆ. ಇತರರಿಗಿಂತ ಮುಂಚೆ ಇದನ್ನು ಕಂಡುಹಿಡಿದ ಕೀರ್ತಿ ಹಿಂದೂಗಳಿಗೆ ಸಲ್ಲುವುದು. ಅವರು ಹಿಬ್ರೂ ಮತ್ತು ಅರಬ್ಬಿಯವರಿಗಿಂತ ಪುರಾತನ ಜನಾಂಗ. ಆದರೂ ಎಲ್ಲರನ್ನೂ ಒಂದೇ ಎಂದು ನೋಡುವ ಅನುಷ್ಠಾನ ಅದ್ವೈತ ಇವರಲ್ಲಿಯೂ ಇನ್ನೂ ಬೆಳೆಯಬೇಕಾಗಿದೆ.

ಯಾವುದಾದರೂ ಧರ್ಮ, ಅನುಷ್ಠಾನ ಜೀವನದಲ್ಲಿ ಸರ್ವಸಮಾನತೆಯ ಆದರ್ಶಕ್ಕೆ ಅತಿಸಮೀಪವಾಗಿ ಬಂದಿದ್ದರೆ ಅದೇ ಇಸ್ಲಾಂ ಮತ. ಈ ಆದರ್ಶದ ಹಿಂದೆ ಇರುವ ತತ್ತ್ವ ಮತ್ತು ಅಂತರಾರ್ಥ ಅವರಿಗೆ ಅಷ್ಟು ಗೋಚರವಿಲ್ಲದೇ ಇರಬಹುದು. ಆದರೆ ಹಿಂದೂಗಳಲ್ಲಾದರೋ ಇದು ಸ್ಪಷ್ಟವಾಗಿ ಕಾಣುವುದು.

೧೧. ವ್ಯಾವಹಾರಿಕ ಇಸ್ಲಾಮಿನ ಸಹಾಯವಿಲ್ಲದೆ ವೇದಾಂತ ಸಿದ್ಧಾಂತಗಳು ಎಷ್ಟೇ ಸೂಕ್ಷ್ಮವಾಗಿದ್ದರೂ, ಅದ್ಭುತವಾಗಿದ್ದರೂ, ಮಾನವಕೋಟಿಯ ಜನಸಾಧಾರಣರಿಗೆ ಇದರಿಂದ ಏನೂ ಪ್ರಯೋಜನವಿಲ್ಲವೆಂಬುದೇ ನಮ್ಮ ಮತ.

೧೨. ನಮ್ಮ ಮಾತೃಭೂಮಿ ಹಿಂದೂ ಮತ್ತು ಇಸ್ಲಾಂ ಧರ್ಮಗಳ ಒಂದು ಸಂಗಮಸ್ಥಳವಾಗಬೇಕು. ವೇದಾಂತದ ಮೆದುಳು, ಇಸ್ಲಾಮಿನ ದೇಹ ಇದೊಂದೇ ನಮಗೆ ಭರವಸೆಯನ್ನು ನೀಡಬಹುದು.

೧೩. ನನ್ನ ಅಂತರ್ ದೃಷ್ಟಿಗೆ ಭರತಖಂಡ ಈಗಿನ ಗೊಂದಲದಿಂದ ಸರ್ವಾಂಗ ಸುಂದರವಾಗಿ, ಅಜೇಯವಾಗಿ ವೇದಾಂತದ ಮೆದುಳು ಇಸ್ಲಾಂ ದೇಹದಿಂದೊಡಗೂಡಿ ಉದಿಸುತ್ತಿರುವುದು ಕಾಣುತ್ತಿದೆ.

೩೪ ಅಹಿಂಸೆ

೧. ಯಾವ ಪ್ರಾಣಿಗೂ ಕಾಯಕವಾಗಿ, ಮಾನಸಿಕವಾಗಿ ವಾಚಿಕವಾಗಿ ಯಾತನೆ ಕೊಡದಿರುವುದೇ ಅಹಿಂಸೆ. ಅಹಿಂಸೆಗಿಂತ ಹಿರಿಗಿಲಾದ ಧರ್ಮವಿನ್ನು ಇಲ್ಲ. ಯಾರಿಗೂ ನೋವನ್ನು ಕೊಡದ ಸ್ಥಿತಿಯಿಂದ ಬರುವ ಸುಖಕ್ಕಿಂತ ಹಿರಿಗಿಲಾದ ಆನಂದವಿನ್ನು ಪ್ರಪಂಚದಲ್ಲಿ ಇಲ್ಲ.

೨. ಅಹಿಂಸೆಯು ಒಂದು ಪರೀಕ್ಷೆಯೇ ಅಸೂಯೆ ಇಲ್ಲದಿರುವುದು. ಇದ್ದಕ್ಕಿದ್ದಂತೆಯೇ ಅಥವಾ ಪುರೋಹಿತರ ಮತ್ತು ಮೂಢನಂಬಿಕೆಯ ಬಲಾತ್ಕಾರದಿಂದ ಯಾರಾದರೂ ಒಂದು ದೊಡ್ಡ ದಾನವನ್ನು ಮಾಡಬಹುದು. ಆದರೆ ನಿಜವಾಗಿ ಮಾನವ ಹಿತಾಕಾಂಕ್ಷಿ ಯಾರೆಂದರೆ ಯಾರ ಮೇಲೂ ಯಾರಿಗೆ ಅಸೂಯೆ ಇಲ್ಲವೋ ಅವನು. ಪ್ರಪಂಚದ ಮಹಾವ್ಯಕ್ತಿಗಳೆಲ್ಲ ಸ್ವಲ್ಪ ಹಣಕ್ಕೋ ಕೀರ್ತಿಗೋ ಲಾಭಕ್ಕೋ ಇತರರ ಮೇಲೆ ಅಸೂಯೆಪಡುವುದನ್ನು ನೋಡುವೆವು. ಎಲ್ಲಿಯವರೆಗೆ ಅಸೂಯೆ ಇರುವುದೋ ಅಲ್ಲಿಯವರೆಗೆ ಅವನು ಅಹಿಂಸಾವ್ರತ ಸಿದ್ಧಿಯಿಂದ ಬಹಳ ದೂರದಲ್ಲಿರುವನು. ಕೆಲವರು ದನ ಅಥವಾ ಕುರಿ ಮಾಂಸ ತಿನ್ನುವುದಿಲ್ಲ. ಅವರೇನು ದೊಡ್ಡ ಯೋಗಿಗಳೇ, ದೊಡ್ಡ ಅಹಿಂಸಾವರ್ತಿಗಳೇ ? ಯಾವ ಮೂರ್ಖನಾದರೂ ತಿನ್ನುವುದನ್ನು ಬಿಡಬಹುದು· ಇದರಿಂದ ಪ್ರಾಣಿಗಳಿಗಿಂತ ಹೆಚ್ಚಾಗಿ ಅವನೇನೂ ಮಾಡಲಿಲ್ಲ. ಯಾರು ದಯಾದಾಕ್ಷಿಣ್ಯವಿಲ್ಲದೆ ವಿಧವೆಯರು ಮತ್ತು ಅನಾಥ ಬಾಲಕರಿಗೆ ಮೋಸ ಮಾಡುವನೋ, ಹಣಕ್ಕಾಗಿ ಎಂತಹ ಪಾಪಕಾರ್ಯವನ್ನಾದರೂ ಮಾಡಬಲ್ಲನೋ, ಇಂತಹವನು ಕೇವಲ ಹುಲ್ಲಿನ ಮೇಲೆ ಜೀವಿಸಿದರೂ ಅಧಮಾಧಮ. ಯಾರು ಇನ್ನೊಬ್ಬರಿಗೆ ಹಿಂಸೆ ಮಾಡಬೇಕೆಂಬ ಆಲೋಚನೆಯನ್ನೇ ಮಾಡುವುದಿಲ್ಲವೋ, ಯಾರು ತಮ್ಮ ಬದ್ಧ ದ್ವೇಷಿಯ ಉನ್ನತಿಗೂ ಸಂತೋಷಪಡುವನೋ ಇಂತಹವನೇ ಭಕ್ತ, ಇಂತಹವನೇ ಯೋಗಿ, ಇಂತಹವನೇ ಎಲ್ಲರಿಗೂ ಗುರು. ಇಂತಹವನು ಪ್ರತಿದಿನ ಹಂದಿ ಮಾಂಸವನ್ನು ತಿಂದರೂ ಚಿಂತೆಯಿಲ್ಲ. ಆದಕಾರಣ ಬಾಹ್ಯ ಸಾಧನೆಗಳು ನಮ್ಮ ಆಂತರಿಕ ಜೀವನ ವಿಕಾಸಕ್ಕೆ ಸಹಾಯ ಮಾಡಿದಾಗ ಮಾತ್ರ ಅವು ಪ್ರಯೋಜನಕಾರಿ ಎಂಬುದನ್ನು ನೆನಪಿನಲ್ಲಿಡಬೇಕು. ಬಾಹ್ಯಾಚಾರಕ್ಕೆ ಹೆಚ್ಚು ಗಮನವನ್ನು ಕೊಡಲು ಸಾಧ್ಯವಾಗದೇ ಇರುವಾಗ ಆಂತರಿಕ ಪವಿತ್ರತೆಯನ್ನು ಇಟ್ಟುಕೊಂಡಿ

ರುವುದೇ ಮೇಲು. ಆದರೆ ಯಾವ ವ್ಯಕ್ತಿಯಾಗಲಿ, ಧರ್ಮದ ತಿರುಳನ್ನು ಮರೆತು ಕೇವಲ ಬಾಹ್ಯಾಚಾರವನ್ನೇ ಕಪಿಮುಷ್ಟಿಯಿಂದ ಹಿಡಿದುಕೊಂಡರೆ ಶೋಚನೀಯವೇ ಸರಿ.

೩. ಯಾರು ಮುಕ್ತನಾಗಬೇಕೆಂದು ಬಯಸುವನೋ ಅವನು ಅಹಿಂಸಾ ವ್ರತವನ್ನು ಪರಿಪಾಲಿಸಬೇಕು. ಯಾರು ಸಂಪೂರ್ಣವಾಗಿ ಅಹಿಂಸಾವ್ರತವನ್ನು ಸಾಧಿಸಿರುವನೋ ಅವನಿಗಿಂತ ಬಲಿಷ್ಠ ಇನ್ನಿಲ್ಲ. ಅವನೆದುರಿಗೆ ಯಾರೂ ಜಗಳ ಕಾಯಲಾರರು, ನಿಂದಿಸಲಾರರು. ಇಂತಹವನ ಸಾನ್ನಿಧ್ಯವೇ ಸಾಕು, ಮತ್ತೇನೂ ಬೇಕಿಲ್ಲ. ಶಾಂತಿ ಮತ್ತು ಪ್ರೀತಿ ಅವನಿರುವ ಸ್ಥಳದಲ್ಲಿ ತಾಂಡವವಾಡುವಂತೆ ಮಾಡುವುದು. ದುಷ್ಟಮೃಗಗಳೂ ಕೂಡ ಅವನ ಸಮ್ಮುಖದಲ್ಲಿ ಸೌಮ್ಯವಾಗಿರುವುವು.

೪. ಜಗದ್ಗುರುಗಳೆಲ್ಲ ಪಾಪವನ್ನು ಎದುರಿಸಬೇಡಿ, ಅಹಿಂಸೆಯೇ ಪರಮ ಧರ್ಮ ಎಂದು ಸಾರಿರುವರು. ನಮ್ಮಲ್ಲಿ ಕೆಲವರು ಈ ಆದರ್ಶವನ್ನು ಅನುಷ್ಠಾನಕ್ಕೆ ತರಲು ಯತ್ನಿಸಿದರೆ ಸಮಾಜ ಕುಸಿದು ಬೀಳುವುದು. ದುಷ್ಟರು ನಮ್ಮ ಆಸ್ತಿಪಾಸ್ತಿ ಪ್ರಾಣವನ್ನು ಕೂಡ ಅಪಹರಿಸಿ ತಮ್ಮಿಚ್ಛೆ ಬಂದಂತೆ ನಮ್ಮನ್ನು ಹಿಂಸಿಸುವರು. ಒಂದು ದಿನವಾದರೂ ಅಹಿಂಸೆಯನ್ನು ಅನುಷ್ಠಾನ ಮಾಡಿದರೆ ಇದರಿಂದ ಅನಾಹುತವಾಗುವುದು. ಆದರೂ ನಮ್ಮ ಹೃದಯಾಂತರಾಳದಲ್ಲಿ ಅಹಿಂಸೆ ಪರಮಧರ್ಮ ಎಂಬುದನ್ನು ನಂಬುವೆವು. ಇದೇ ಶ್ರೇಷ್ಠ ಆದರ್ಶದಂತೆ ಕಾಣುವುದು. ಆದರೆ ಕೇವಲ ಇದೊಂದೇ ಆದರ್ಶವನ್ನು ಜಗತ್ತಿನಲ್ಲಿ ಸಾರಬೇಕೆಂದಿದ್ದರೆ, ಬಹುಪಾಲು ಮಾನವಕೋಟಿಗೆ ಅನ್ಯಾಯ ಮಾಡಿದಂತೆ ಆಗುವುದು. ಇದೇ ಅಲ್ಲ. ತಮ್ಮ ಮನಸ್ಸಿನಲ್ಲಿ ತಾವೊಂದು ಮಹಾಪರಾಧವನ್ನು ಮಾಡಿರುವೆವು, ತಮ್ಮ ನಡತೆಯಲ್ಲಿ ಏನೋ ಕುಂದುಕೊರತೆ ಇದೆ ಎಂದು ಭಾವಿಸಿ ಕ್ರಮೇಣ ಅವರು ದುರ್ಬಲರಾಗುವರು. ಸತತ ಆತ್ಮನಿಂದೆಯಿಂದ ದೌರ್ಬಲ್ಯಗಳಿಗಿಂತ ಹೆಚ್ಚು ಅನರ್ಥ ಸಂಭವಿಸಬಹುದು.

೫. ಅಕರ್ಮಕ್ಕೆ ನಾವು ಯಾವ ರೀತಿಯಲ್ಲಿಯೂ ಎಡೆಗೊಡಕೂಡದು. ಕರ್ಮಮಾಡುವುದು ಎಂದರೆ ನಿಗ್ರಹಿಸುವುದು. ಎಲ್ಲಾ ವಿಧದ ಪಾಪಗಳನ್ನೂ, ಕಾಯಕವಾಗಲಿ ಮಾನಸಿಕವಾಗಲಿ ಅವುಗಳನ್ನೆಲ್ಲಾ ನಿಗ್ರಹಿಸಿ. ಇವುಗಳನ್ನೆಲ್ಲಾ ಜಯಿಸಿದ ಮೇಲೆ ಶಾಂತಿ ಪ್ರಾಪ್ತವಾಗುವುದು. ಯಾರನ್ನೂ ದ್ವೇಷಿಸಬೇಡಿ, ಯಾವ ಪಾಪಿಗೂ ತೊಂದರೆ ಕೊಡಬೇಡಿ ಎಂದು ಹೇಳುವುದು ಸುಲಭ. ಆದರೆ ಅನುಷ್ಠಾನದಲ್ಲಿ ಅದು ಹೇಗೆ ಪರ್ಯವಸಾನವಾಗುವುದೆಂಬುದು ನಮಗೆ ಗೊತ್ತಿದೆ.

ಸಮಾಜದ ಕಣ್ಣುಗಳೆಲ್ಲ ನಮ್ಮನ್ನು ನೋಡುತ್ತಿರುವಾಗ ನಾವು ಅಹಿಂಸಾವ್ರತಿಗಳಂತೆ ನಟಿಸುವೆವು. ಆದರೆ ಒಳಗೆ ದ್ವೇಷಿಸುತ್ತಿರುವೆವು. ಇದು ಮಿಥ್ಯಾಚಾರ, ಇದರಿಂದ ಏನೂ ಪ್ರಯೋಜನವಿಲ್ಲ.

೬. ಗೃಹಸ್ಥ ತನ್ನ ವೈರಿಗಳೆದುರಿಗೆ ಧೀರನಂತೆ ವರ್ತಿಸಬೇಕು ಮತ್ತು ಅವನನ್ನು ತಡೆಯಬೇಕು. ಇದೇ ಗೃಹಸ್ಥನ ಧರ್ಮ. ಅವನೊಂದು ಮೂಲೆಯಲ್ಲಿ ಕುಳಿತುಕೊಂಡು ಅಹಿಂಸೆಯ ವಿಚಾರವಾಗಿ ಹರಟಕೂಡದು. ಅವನು ತನ್ನ ವೈರಿಗಳೆದುರಿಗೆ ಧೀರನಂತೆ ವರ್ತಿಸದೇ ಇದ್ದರೆ ಕರ್ತವ್ಯಲೋಪಮಾಡಿದಂತೆ ಆಗುವುದು.

೭. ನಾವು ಈ ಒಂದು ಪಾಠವನ್ನು ಚೆನ್ನಾಗಿ ಕಲಿಯಬೇಕು. ಎಲ್ಲಾ ವಿಷಯಂದಲ್ಲಿಯೂ ಅತಿರೇಕಗಳು (Extremes) ಒಂದೇ ಸಮನಾಗಿರುವಂತೆ ತೋರುವುದು. ಪೂರ್ಣವಾಗಿರುವುದು, ಖಾಲಿಯಾಗಿರುವುದು ಒಂದೇ ಸಮನಾಗಿ ಕಾಣುವುದು. ಜ್ಯೋತಿಸ್ಪಂದನ ಬಹಳ ಕಡಮೆ ಇರುವಾಗ ನಮಗೆ ಬೆಳಕು ಕಾಣುವುದಿಲ್ಲ. ಸ್ಪಂದನ ಅತಿ ಜಾಸ್ತಿಯಾಗಿರುವಾಗಲೂ ನಾವು ಬೆಳಕನ್ನು ನೋಡಲಾರೆವು. ಹೀಗೆಯೇ ಅಹಿಂಸೆ ಮತ್ತು ನಿಗ್ರಹ. ಒಬ್ಬ ತಾನು ತಡೆಯಲಾರ. ಏಕೆಂದರೆ ಅವನಿಗೆ ಬಲವಿಲ್ಲ, ಸೋಮಾರಿ ; ಅವನಿಗೆ ಆ ಕೆಲಸ ಸಾಧ್ಯವೇ ಇಲ್ಲ. ಮತ್ತೊಬ್ಬನಿಗೆ ಬೇಕಾದರೆ ಚೆನ್ನಾಗಿ ವೈರಿಗೆ ಬುದ್ಧಿ ಕಲಿಸುವ ಶಕ್ತಿ ಇದೆ. ಆದರೂ ಅವನು ಹಿಂಸಿಸುವುದಿಲ್ಲ ; ಅದರ ಬದಲು ವೈರಿಯನ್ನು ಆಶೀರ್ವದಿಸುವನು. ಯಾರು ದೌರ್ಬಲ್ಯದಿಂದ ಶತ್ರುವನ್ನು ನಿಗ್ರಹಿಸಲಾರನೋ ಅಂತಹವನಿಗೆ ಅಹಿಂಸೆಯ ಪುಣ್ಯ ಬರಲಾರದು. ಮತ್ತೊಬ್ಬನಾದರೊ ವೈರಿಯನ್ನು ನಿಗ್ರಹಿಸುವುದರಿಂದ ಪಾಪವನ್ನು ಮಾಡುವನು.

೩೫ ಏಕತ್ವ

೧. ಸರ್ವವ್ಯಾಪ್ತಿಯಾದ, ಅದ್ವಿತೀಯವಾದ. ನಿರ್ದೇಹಿಯಾದ, ಸೂರ್ಯ ಚಂದ್ರರನ್ನೇ ಪ್ರಾಸವಾಗಿ ಉಳ್ಳ ವಿಶ್ವದ ಮಹಾಕವಿ ಪ್ರತಿಯೊಬ್ಬನಿಗೂ ಅವನವನ ಯೋಗ್ಯತೆಗೆ ತಕ್ಕಂತೆ ನೀಡುತ್ತಿರುವನು,

೨. ಈ ವೈವಿಧ್ಯತೆಯ ಪ್ರಪಂಚದಲ್ಲಿ ಯಾರು ಏಕವನ್ನು ನೋಡುತ್ತಿರುವರೋ, ಪ್ರತಿಕ್ಷಣದಲ್ಲಿಯೂ ಬದಲಾಯಿಸುತ್ತಿರುವ ಪ್ರಪಂಚದಲ್ಲಿ ಬದಲಾಯಿಸದೆ ಇರುವವನನ್ನು ಯಾರು ತನ್ನಾತ್ಮನಂತೆ ನೋಡಿರುವರೋ ಅವರೇ ಮುಕ್ತರು, ಧನ್ಯರು, ತಮ್ಮ ಗುರಿಯನ್ನು ಮುಟ್ಟಿದವರು.

೩. ಯಾರು ಈ ಭಿನ್ನ ಪ್ರಪಂಚದಲ್ಲಿ ಸೂತ್ರರೂಪದಂತೆ ಇರುವ ಏಕವನ್ನು ಪ್ರತಿಯೊಂದರಲ್ಲಿಯೂ ನೋಡಿರುವರೋ, ಯಾರು ಈ ಮರ್ತ್ಯ ಪ್ರಪಂಚದಲ್ಲಿ ಒಂದು ಅನಂತ ಚೇತನವನ್ನು ನೋಡಿರುವರೋ, ಯಾರು ಈ ಅಚೇತನ ಅಜ್ಞಾನದ ಪ್ರಪಂಚದಲ್ಲಿ ಆ ಸ್ವಯಂ ಜ್ಯೋತಿಯನ್ನು, ಜ್ಞಾನವನ್ನು ಕಂಡಿರುವರೋ, ಅವರಿಗೆ ಮಾತ್ರ ಶಾಶ್ವತ ಶಾಂತಿ, ಇತರರಿಗಲ್ಲ, ಇತರರಿಗಲ್ಲ.

೪. ಅವನು ಏಕ, ಎಲ್ಲವನ್ನೂ ಸೃಷ್ಟಿಸಿದವನು, ಸರ್ವೇಶ್ವರ, ಸರ್ವಾಂತರ್ಯಾಮಿ. ಅವನು ತನ್ನ ಏಕವನ್ನು ಬಹುವನ್ನಾಗಿ ಮಾಡುವನು. ಯಾವ ಜ್ಞಾನಿಗಳು ಇವನನ್ನು ತಮ್ಮ ಆತ್ಮನ ಆತ್ಮನೆಂದು ಅರಿಯಬಲ್ಲರೋ ಅಂತಹವರಿಗೆ ಮಾತ್ರ, ಶಾಶ್ವತ ಶಾಂತಿ. ಇತರರಿಗಲ್ಲ, ಇತರರಿಗಲ್ಲ.

೫. ನೀವು ತಿಳಿದುಕೊಳ್ಳಬೇಕಾದ ಮುಖ್ಯಾಂಶ ಇದು. ಈ ಉಪನ್ಯಾಸದ ಸಾರವೇ ಇರುವುದೊಂದೇ ಅಸ್ತಿತ್ವ ಎಂಬುದು. ಆ ಒಂದು ಬೇರೆ ಬೇರೆ ವಸ್ತುಗಳಲ್ಲಿ ಬೇರೆ ಬೇರೆ ರೂಪಗಳನ್ನು ತಾಳಿರುವುದು. ಭೂಮಿಯಂತೆಯೂ ಮಾನವರಂತೆಯೂ, ರಾಕ್ಷಸರಂತೆಯೂ, ಪ್ರಪಂಚದಂತೆಯೂ, ರೂಪವನ್ನು ತಾಳಿರುವುದು. ಈ ಹಲವು ವಸ್ತುಗಳ ವ್ಯತ್ಯಸಾಗರದಲ್ಲಿ ಯಾರು ಆ ಒಂದನ್ನು ನೋಡಿರುವರೋ, ಈ ಕ್ಷಣಭಂಗುರ ಪ್ರಪಂಚದಲ್ಲಿ ಯಾರು ಆ ಏಕ ಚೇತನ ಮೂರ್ತಿಯನ್ನು ನೋಡಿರುವರೋ, ಯಾರು ಯಾವ ಬದಲಾವಣೆಗೂ ನಿಲುಕದಿರುವ ಅವನನ್ನು ಕಂಡಿರುವರೋ ಅವರಿಗೆ ಮಾತ್ರ ಶಾಶ್ವತ ಶಾಂತಿ. ಇತರರಿಗಲ್ಲ, ಇತರರಿಗಲ್ಲ.

೬. ಈ ಪ್ರಪಂಚದಲ್ಲಿ ಯಾವ ಒಂದು ವಸ್ತುವಿನ ಕಣವೂ ಇಡೀ ಪ್ರಪಂಚದ ಮೇಲೆ ತನ್ನ ಪ್ರಭಾವವನ್ನು ಬೀರದೆ ಇರುವುದಿಲ್ಲ. ಪ್ರಪಂಚ ವೆಲ್ಲವೂ ಮುಂದುವರಿದರೆ ಮಾತ್ರ ಅಭಿವೃದ್ಧಿ. ಯಾವ ಒಂದು ಸಮಸ್ಯೆಯನ್ನೂ ಕೇವಲ ಆ ಜನಾಂಗ, ದೇಶ ಅಥವಾ ಇಂತಹ ಸಣ್ಣ ದೃಷ್ಟಿಯಿಂದಲೇ ಪರಿಹರಿಸ ಲಾಗುವುದಿಲ್ಲ ಎಂಬುದು ದಿನಕಳೆದಂತೆ ಸ್ಪಷ್ಟವಾಗುತ್ತಾ ಬರುತ್ತಿದೆ.

೭. ನಿನ್ನಲ್ಲಿರುವ ದೇವರೇ ಎಲ್ಲರಲ್ಲಿರುವ ದೇವರೂ ಆಗಿರುವನು. ನಿನಗೆ ಇದು ಗೊತ್ತಿಲ್ಲದೇ ಇದ್ದರೆ ನಿನಗೆ ಏನೂ ಗೊತ್ತಿಲ್ಲ. ವ್ಯತ್ಯಾಸ ಹೇಗೆ ಇರಲು ಸಾಧ್ಯ ? ಎಲ್ಲವೂ ಒಂದೇ. ಪ್ರತಿಯೊಬ್ಬರೂ ಪರಮಾತ್ಮನ ದೇವಾಲಯವೆ. ನೀವು ಇದನ್ನು ನೋಡಬಲ್ಲವರಾದರೆ ಒಳ್ಳೆಯದು, ಇಲ್ಲದೇ ಇದ್ದರೆ ಆಧ್ಯಾತ್ಮಿಕ ಜೀವನ ನಿಮಗೆ ಇನ್ನೂ ಪ್ರಾರಂಭವಾಗಿಲ್ಲ.

೮. ನಾವು ಪ್ರಾರ್ಥನೆ ಮಾಡುವ ಸಮಯದಲ್ಲಿ ದೇವರೇ ಎಲ್ಲರಿಗೂ ತಂದೆ ಎಂದು ಕರೆದು, ನಮ್ಮ ನಿತ್ಯಜೀವನದಲ್ಲಿ ಎಲ್ಲರನ್ನೂ ನಮ್ಮ ಸಹೋದರರಂತೆ ಕಾಣದೇ ಇದ್ದರೆ ಏನು ಪ್ರಯೋಜನ ?

೯. ಪ್ರತಿಯೊಬ್ಬ ಮಾನವನನ್ನೂ ಒಂದು ಗ್ಲಾಸಿನ ಚಿಮಣಿಗೆ ಹೋಲಿಸ ಬಹುದು. ಇವುಗಳ ಮಧ್ಯದಲ್ಲಿ ಭಗವಂತನ ಜ್ಯೋತಿ ಎಂಬ ಪ್ರಭೆ ಬೆಳಗುತ್ತಿದೆ. ಆದರೆ ಗ್ಲಾಸು ಬೇರೆ ಬೇರೆ ಬಣ್ಣದ್ದಾಗಿರುವುದರಿಂದ, ಹೆಚ್ಚು ಕಡಮೆ ದಪ್ಪ ವಾಗಿರುವುದರಿಂದ, ಅದು ಬೇರೆ ಬೇರೆ ರೀತಿಯಲ್ಲಿ ಪ್ರತಿಬಿಂಬಿಸುವುದು.

೧೦. ಪ್ರಪಂಚದಲ್ಲಿ ಯಾವ ಮೂಲೆಯಲ್ಲಿ ಕೆಟ್ಟದ್ದಿರಲಿ ಅದಕ್ಕೆ ಪ್ರತಿ ಯೊಬ್ಬನೂ ಜವಾಬ್ದಾರನೇ.

೧೧. ಯಾವುದು ವಿಶ್ವದೊಂದಿಗೆ ನಮ್ಮನ್ನು ಒಂದುಗೂಡಿಸುವುದೋ ಅದೆಲ್ಲ ಪುಣ್ಯ, ನಮ್ಮನ್ನು ಅದರಿಂದ ಪ್ರತ್ಯೇಕಿಸುವುದೆಲ್ಲ ಪಾಪ.

೧೨. ನೀನು ಅಖಂಡ ಬ್ರಹ್ಮನ ಒಂದು ಅಂಶ. ಇದೇ ನಿನ್ನ ಸ್ವಭಾವ. ಆದಕಾರಣ ನೀನು ನಿನ್ನ ಸಹೋದರನ ರಕ್ಷಕ.

೧೩. ಎಲ್ಲರೂ ಸುಖವಾಗಿರುವ ತನಕ ಯಾರೂ ಸುಖವಾಗಿರಲಾರರು.

೧೪. ನೀನು ಯಾರಿಗಾದರೂ ಕೇಡನ್ನುಂಟುಮಾಡಿದರೆ ಅದರಿಂದ ನಿನಗೇ ಕೇಡು. ಏಕೆಂದರೆ ನೀನು ಮತ್ತು ನಿನ್ನ ಸಹೋದರರು ಒಬ್ಬರೇ.

೧೫. ಯಾರು ಎಲ್ಲರಲ್ಲಿಯೂ ಆತ್ಮನನ್ನು ನೋಡುವರೋ, ಆತ್ಮನಲ್ಲಿ ಎಲ್ಲರನ್ನೂ ನೋಡುವರೋ ಅವರೇ ನಿಜವಾದ ಯೋಗಿಗಳು.

೧೬. ವಿಕಾಸವೇ ಜೀವನ, ಸಂಕೋಚವೇ ಮರಣ. ಪ್ರೀತಿಯೇ ಜೀವನ, ದ್ವೇಷವೇ ಮರಣ.

೧೭. ವ್ಯಕ್ತಿಯಾಗಲಿ, ಜನಾಂಗವಾಗಲಿ, ಮತ್ತೊಬ್ಬರಿಂದ ಪ್ರತ್ಯೇಕವಾಗಿ ಬಹಳ ಕಾಲ ಬಾಳಲಾರದೆಂದು ನನಗೆ ಸ್ಪಷ್ಟವಾಗಿ ಗೊತ್ತಾಗಿದೆ. ಎಂದಾದರೂ ಒಂದು ದೊಡ್ಡಸ್ಥಿಕೆಗಾಗಿಯೋ, ಇದೊಂದು ಯುಕ್ತಿಯಂತೆಯೋ, ಹಾಗಿರುವುದು ಪವಿತ್ರದ ಚಿಹ್ನೆ ಎಂತಲೊ ಹಾಗಾಗಲು ಪ್ರಯತ್ನಿಸಿದಾಗ ಹಾಗೆ ಪ್ರಯತ್ನಿಸಿದ ವರಿಗೆ ಸರ್ವನಾಶ ಕಾದಿದೆ.

೩೬ ಧರ್ಮ

೧. ಹಲವು ನದಿಗಳು ಬೇರೆಬೇರೆ ಪರ್ವತದಲ್ಲಿ ಜನಿಸಿ ನೇರವಾಗಿಯೋ, ವಕ್ರವಾಗಿಯೋ ಹರಿದು ಕೊನೆಗೆ ಸಾಗರವನ್ನು ಸೇರುವಂತೆ, ಹಲವು ಧರ್ಮಗಳು ನೇರವಾಗಿಯೋ, ವಕ್ರವಾಗಿಯೋ ಬೇರೆಬೇರೆ ಮಾರ್ಗದ ಮೂಲಕ ಕೊನೆಗೆ ನಿನ್ನೆಡೆಗೆ ಬರುವುವು.

೨. ಒಂದು ಧರ್ಮದ ಪ್ರಮಾಣ ಇತರ ಧರ್ಮಗಳ ಪ್ರಮಾಣದ ಮೇಲೆ ನಿಂತಿದೆ. ಉದಾಹರಣೆಗೆ ನನಗೆ ಮಾತ್ರ ಕೈಯಲ್ಲಿ ಆರು ಬೆರಳಿದ್ದು ಮಂತ್ತಾರಿಗೂ ಹಾಗೆ ಇಲ್ಲದೇ ಇದ್ದರೆ ನಾನೊಂದು ವಿನಾಯಿತಿ ಆಗಬಹುದೇ ಹೊರತು ನಿಯಮ ವಲ್ಲ. ಒಂದು ಧರ್ಮ ಮಾತ್ರ ಸತ್ಯ, ಇತರ ಧರ್ಮಗಳಲ್ಲ ಎಂಬುದಕ್ಕೂ ಇದೇ ತರ್ಕ ಅನ್ವಯಿಸುವುದು. ಆರು ಬೆರಳಿನ ಕೈಯಂತೆ ಒಂದೇ ಧರ್ಮ ಸತ್ಯವೆನ್ನು ವುದು ಕೂಡ ಅಸ್ವಾಭಾವಿಕ. ಆದಕಾರಣವೇ ಒಂದು ಧರ್ಮ ಸತ್ಯವಾದರೆ ಎಲ್ಲಾ ಧರ್ಮಗಳೂ ಸತ್ಯವಾಗಬೇಕು. ಗೌಣ ವಿಷಯಗಳಲ್ಲಿ ವ್ಯತ್ಯಾಸವಿರಬಹುದು, ಆದರೆ ಮುಖ್ಯ ವಿಷಯಗಳಲ್ಲಿ ಎಲ್ಲವೂ ಒಂದೇ. ನನ್ನ ಕೈ ಐದು ಬೆರಳು ಸಾಮಾನ್ಯವಾದರೆ ನಿನ್ನ ಕೈ ಐದು ಬೆರಳು ಕೂಡ ಸಾಮಾನ್ಯ ಸತ್ಯವೆಂಬುದನ್ನು ದೃಢಪಡಿಸುವುದು.

೩. ಇತರ ಭೌತ ವಿಜ್ಞಾನಗಳು ಯುಕ್ತಿಯ ಪ್ರಮಾಣದ ಮೇಲೆ ನಿಂತಿರು ವಂತೆ ಧರ್ಮ ನಿಲ್ಲಬೇಕೆ ? ಬಾಹ್ಯ ಜ್ಞಾನಗಳಿಗೆ ಯಾವ ಮಾರ್ಗವನ್ನು ಅನುಸರಿ ಸುತ್ತೇವೆಯೋ ಅದನ್ನೇ ಧರ್ಮ ವಿಜ್ಞಾನಕ್ಕೂ ಅನ್ವಯಿಸಲು ಸಾಧ್ಯವೆ ? ನನ್ನ ದೃಷ್ಟಿಯಲ್ಲಿ ಇದು ಸಾಧ್ಯ, ಎಷ್ಟು ಬೇಗ ಇದು ಆದರೆ ಅಷ್ಟೂ ಮೇಲು. ಇಂತಹ ಪರೀಕ್ಷೆಯಿಂದ ಧರ್ಮ ನಾಶವಾಗುವ ಹಾಗಿದ್ದರೆ, ಆ ಧರ್ಮ ಇದುವರೆಗೂ ನಿಕೃಷ್ಟವಾಗಿತ್ತು, ಅಯೋಗ್ಯವಾದ ಮೂಢನಂಬಿಕೆ ಆಗಿತ್ತು. ಎಷ್ಟು ಬೇಗ ಇಂತಹ ಧರ್ಮ ನಾಶವಾದರೆ ಅಷ್ಟು ಮೇಲು. ಇಂತಹ ಧರ್ಮದ ನಾಶವೇ ಪ್ರಪಂಚಕ್ಕೆ ಶ್ರೇಯಸ್ಕರ ಎಂದು ನಾನು ನಿರ್ವಿವಾದವಾಗಿ ನಂಬುವೆನು. ಕೆಲಸಕ್ಕೆ ಬಾರದುದನ್ನೆಲ್ಲಾ ಕೊಚ್ಚಿಕೊಂಡು ಹೋಗುವುದು, ಇದರಲ್ಲಿ ಸಂಶಯ ವಿಲ್ಲ. ಆದರೆ ಇಂತಹ ಪರೀಕ್ಷೆಯಿಂದ ಧರ್ಮದ ಸಾರ ಜಯಪ್ರದವಾಗಿ ಮೇಲೇಳು ವುದು. ಧರ್ಮ, ರಸಾಯನಶಾಸ್ತ್ರ. ಭೌತಿಕಶಾಸ್ತ್ರದಷ್ಟಾದರೂ ವೈಜ್ಞಾನಿಕವಾಗು

ವುದು ಮಾತ್ರವಲ್ಲ, ಧರ್ಮಕ್ಕೆ ಅದಕ್ಕಿಂತ ಹೆಚ್ಚು ಶಕ್ತಿ ಇರುವುದು. ಧರ್ಮದ ಸತ್ಯತೆಗೆ ಅಂತಃಸಾಕ್ಷಿ ಇರುವಂತೆ ರಸಾಯನಶಾಸ್ತ್ರ ಮತ್ತು ಭೌತಿಕ ಶಾಸ್ತ್ರಗಳಿಗೆ ಇಲ್ಲ.

೪. ಹಿಂದಿಗಿಂತ ಧರ್ಮವನ್ನು ವಿಶಾಲವಾದ ದೃಷ್ಟಿಯಿಂದ ಅಧ್ಯಯನ ಮಾಡಬೇಕು, ಧರ್ಮದ ಎಲ್ಲಾ ವಿಧವಾದ ಸಂಕುಚಿತ ಕ್ಷುದ್ರವಾದ ವೈಮನಸ್ಯಕ್ಕೆ ಕಾರಣವಾದ ಭಾವನೆಗಳೆಲ್ಲ ಹೋಗಬೇಕು. ಯಾವುದೊ ಒಂದು ಕೋಮಿನ ಧರ್ಮ, ಪಂಗಡದ ಧರ್ಮಗಳ ಭಾವನೆಗಳನ್ನು ತ್ಯಜಿಸಬೇಕು. ಪ್ರತಿಯೊಂದು ಜನಾಂಗವೂ ತನ್ನದೇ ಒಂದು ದೇವರಿದೆ ಎಂದು ಭಾವಿಸುವುದು ಹೋಗಬೇಕು. ಇದು ತಪ್ಪು. ಇದೊಂದು ಮೌಢ್ಯ, ಇದು ಗತಕಾಲದ ಚಿಹ್ನೆ ಆಗಬೇಕು. ಇಂತಹ ಭಾವನೆಗಳನ್ನು ತ್ಯಜಿಸಬೇಕು.

೫. ಧರ್ಮ ಏನನ್ನಾದರೂ ಸಾಧಿಸಬಲ್ಲದೆ ಎಂಬ ಪ್ರಶ್ನೆ ಏಳುವುದು. ಧರ್ಮ ಸಾಧಿಸಬಲ್ಲದು. ಮಾನವನಿಗೆ ಇದು ಅನಂತ ಜೀವನವನ್ನು ನೀಡುವುದು. ಮಾನವ ಈಗಿರುವಂತೆ ಮಾಡಿದ್ದು ಧರ್ಮ. ಈ ಮಾನವ ಮೃಗವನ್ನು ದೇವ ಸದೃಶನನ್ನಾಗಿ ಮಾಡಬಲ್ಲದು ಧರ್ಮ. ಮಾನವಸಮಾಜದಿಂದ ಧರ್ಮವನ್ನು ತೆಗೆದು ಬಿಟ್ಟರೆ ಉಳಿಯುವುದೇನು ? ಬರೀ ಕಾಡುಮನುಷ್ಯರ ಹಿಂಡು. ಇಂದ್ರಿಯಭೋಗ ಮಾನವನ ಗುರಿಯಲ್ಲ. ಜ್ಞಾನವೇ ಮಾನವ ಜೀವನದ ಗುರಿ. ಮೃಗ ತನ್ನ ಪಂಚೇಂದ್ರಿಯಗಳ ಸವಿಯನ್ನು ಅನುಭವಿಸುವುದಕ್ಕಿಂತ ಹೆಚ್ಚಾಗಿ ಮಾನವ ತನ್ನ ಬುದ್ಧಿಶಕ್ತಿಯ ಮೂಲಕ ಆನಂದಿಸುವನು. ಮಾನವ ಆಧ್ಯಾತ್ಮಿಕ ಸ್ವಭಾವವನ್ನು ಬುದ್ಧಿಗಿಂತ ಹೆಚ್ಚಾಗಿ ಆನಂದಿಸುವನು. ಆದಕಾರಣ ಆಧ್ಯಾತ್ಮವೇ ಎಲ್ಲದಕ್ಕಿಂತ ಶ್ರೇಷ್ಠ ಜ್ಞಾನವಾಯಿತು. ಈ ಜ್ಞಾನದ ಮೂಲಕ ಆನಂದ ಬರುವುದು. ಈ ಪ್ರಪಂಚದ ವಸ್ತುಗಳೆಲ್ಲಾ ಛಾಯಾಸ್ವರೂಪ. ಆ ಚಿದಾನಂದದ ಬಹಳ ಅಸ್ಪಷ್ಟವಾದ ಸಂಕೇತ.

೬. ದೇವರು ನಮಗೆ ಬೇಕೇಬೇಕು ಎಂಬುದು ಮುಖ್ಯವಲ್ಲ. ನಮಗೆ ದೇವರಲ್ಲದೆ ಎಲ್ಲವೂ ಬೇಕು, ಏಕೆಂದರೆ ಬಾಹ್ಯಪ್ರಪಂಚ ನಮ್ಮ ಬಯಕೆಗಳನ್ನೆಲ್ಲಾ ಈಡೇರಿಸುವುದು. ಬಾಹ್ಯಪ್ರಪಂಚಕ್ಕೆ ಅತೀತವಾಗಿರುವುದು ನಮಗೇನಾದರೂ ಬೇಕಾದರೆ ಮಾತ್ರ ದೇವರು ಬೇಕು. ಎಲ್ಲಿಯವರೆಗೆ ನಮಗೆ ಈ ಪ್ರಾಪಂಚಿಕ ವಸ್ತುಗಳು ಮಾತ್ರ ಸಾಕೊ ಅಲ್ಲಿಯವರೆಗೆ ನಮಗೆ ದೇವರು ಬೇಕಾಗಿಲ್ಲ. ಇಲ್ಲಿರುವುದರ ಮೇಲೆಲ್ಲ ನಮಗೆ ಜುಗುಪ್ಸೆ ಬಂದ ಮೇಲೆ ಮಾತ್ರ ತೃಪ್ತಿಗೆ ಹೊರಗಿನದನ್ನು ನಾವು ಹುಡುಕುವೆವು. ಆವಶ್ಯಕತೆ ಇದ್ದಾಗ ಮಾತ್ರ ನಾವು ಕೇಳುವುದು.

ಸಾಧ್ಯವಾದಷ್ಟು ಬೇಗ ಪ್ರಪಂಚವೆಂಬ ಮಕ್ಕಳಾಟವನ್ನು ಪೂರೈಸಿ. ಆಗ ಮಾತ್ರ ಅತೀತವಾಗಿರುವುದರ ಬಯಕೆ ನಮ್ಮಲ್ಲಿ ಏಳುವುದು. ಅದು ಧರ್ಮದ ಮೊದಲಮೆಟ್ಟಿಲು. ನಮ್ಮಲ್ಲಿ ಅದು ಆಗ ಜಾಗ್ರತವಾಗುವುದು.

೭. ನಮ್ಮ ಗುರುಗಳು ಈ ಉಪಮಾನವನ್ನು ಕೊಡುತ್ತಿದ್ದರು : ಒಬ್ಬ ಒಂದು ಮಾವಿನ ತೋಟಕ್ಕೆ ಹೋಗಿ ಅದರ ಎಲೆ, ರೆಂಬೆ, ಕೊಂಬೆ ಮುಂತಾದು ವನ್ನೆಲ್ಲಾ ಎಣಿಸತೊಡಗಿದನು. ಈ ಗುಂಪಿನಲ್ಲಿ ಎಲ್ಲೋ ಒಬ್ಬನಿಗೆ ಮಾತ್ರ ಮಾವಿನ ಹಣ್ಣನ್ನು ತಿನ್ನಬೇಕೆಂದು ಇಚ್ಛೆ ಇತ್ತು. ಈ ವಿಷಯವನ್ನು ಕುರಿತು ನೀವು ಏನು ಹೇಳುತ್ತೀರಿ ? ಆದಕಾರಣ ರೆಂಬೆಕೊಂಬೆಗಳ ಟಿಪ್ಪಣಿ ಬರೆಯುವು ದನ್ನು ಇತರರಿಗೆ ಬಿಡಿ. ಆ ಕೆಲಸಕ್ಕೆ ಬೇರೆ ಒಂದು ಸ್ಥಳವಿದೆ. ಅದಕ್ಕೆ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಬೆಲೆ ಇಲ್ಲ. ಮನುಷ್ಯರು ಇಂತಹ ಕೆಲಸದಿಂದ ಎಂದಿಗೂ ಆಧ್ಯಾತ್ಮಿಕ ಜೀವಿಗಳಾಗುವುದಿಲ್ಲ. ಇಂತಹ ಎಲೆ ಎಣಿಸುವವರ ಪೈಕಿ ನಿಮಗೆ ಯಾವ ಆಧ್ಯಾತ್ಮಿಕ ವೀರನೂ ದೊರಕುವುದಿಲ್ಲ. ಮಾನವನ ಪರಮ ಗುರಿಯೇ ಧರ್ಮ, ಇದೇ ಮಹತ್ವವುಳ್ಳದ್ದು. ಇದಕ್ಕೆ ಎಲೆ ಎಣಿಸುವ ವಿದ್ಯೆ ಬೇಕಾಗಿಲ್ಲ. ನೀವು ನಿಜ ವಾದ ಕ್ರೈಸ್ತರಾಗಬೇಕಾದರೆ ಕ್ರಿಸ್ತನು ಜೆರೂಸಲೇಮಿನಲ್ಲಿ ಹುಟ್ಟಿದನೆ ಬೆತ್ಲೆ ಹೆಮ್ಮಿನಲ್ಲಿ ಹುಟ್ಟಿದನೆ, ಗುಡ್ಡದ ಮೇಲೆ ಉಪದೇಶ ಮಾಡಿದ ಸರಿಯಾದ ತಾರೀಖು ಯಾವುದು ಎಂಬುದನ್ನು ತಿಳಿಯಬೇಕಾಗಿಲ್ಲ. ಇದನ್ನು ಯಾವಾಗ ಮಾಡಿದನು ಎಂಬುದರ ಮೇಲೆ ಸುಮಾರು ಎರಡು ಸಾವಿರ ಪದಗಳ ಒಂದು ಲೇಖನವನ್ನು ಓದಬೇಕಾಗಿಲ್ಲ. ಇವನ್ನೆಲ್ಲ ಕೇವಲ ಪಂಡಿತರಂಜನೆಗೆ ಬೇಕಾದರೆ ಅವರು ಇಟ್ಟುಕೊಳ್ಳಲಿ ; ಅವರಿಗೆ ಒಳ್ಳೆಯದಾಗಲಿ ಎಂದು ಇಚ್ಛಿಸಿ. ನಾವು ಮಾತ್ರ ಮಾವಿನ ಹಣ್ಣನ್ನು ತಿನ್ನುವ.

೮. ಧರ್ಮಕ್ಕೆ ಧರ್ಮವೇ ಫಲಸ್ವರೂಪ. ಯಾವುದು ನಮ್ಮ ಐಹಿಕ ಜೀವ ನಕ್ಕೆ ಸಹಕಾರಿಯಾಗುವುದೋ ಅದು ಧರ್ಮವಲ್ಲ. ಅದನ್ನು ಇನ್ನು ಬೇರೆ ಯಾವ ಹೆಸರಿನಿಂದಲಾದರೂ ಕರೆಯಬಹುದು.

೯. ಧರ್ಮದ ಗುರಿ ಮತ್ತು ಉದ್ದೇಶವೆಲ್ಲ ಸಾಕ್ಷಾತ್ಕಾರ. ದೇವರನ್ನು ಮಾತ್ರ ಪೂಜಿಸುವುದೇ ಪರಮಶ್ರೇಷ್ಠ ಸಾಧನೆ.

೧೦. ಧರ್ಮ ಒಂದು, ಆದರೆ ಅದರ ಪ್ರಯೋಗಗಳು ಬಹುವಿಧವಾಗಿವೆ.

೧೧, ಯಾರೂ ಯಾವ ಧರ್ಮಕ್ಕೂ ಹುಟ್ಟಲಾರರು. ಪ್ರತಿಯೊಬ್ಬನ ಹೃದಯದಲ್ಲಿಯೂ ಅವನ ಧರ್ಮವಿದೆ.

೧೨. ಧರ್ಮದ ಹೆಸರಿನಲ್ಲಿ ಆಡುವ ಕಚ್ಚಾಟವೆಲ್ಲ ಹೊರಗಡೆಯ ಕರಟಕ್ಕೆ.

ಯಾವಾಗ ಆಧ್ಯಾತ್ಮ ಮತ್ತು ಪವಿತ್ರತೆ ಹೃದಯದಿಂದ ಮಾಯವಾಗುವುದೋ, ಹೃದಯ ಶುಷ್ಕವಾಗುವುದೋ, ಆಗಲೇ ಧರ್ಮದ ಹೆಸರಿನಲ್ಲಿ ಕಚ್ಚಾಟ ಆರಂಭ ವಾಗುವುದು, ಇದಕ್ಕೆ ಮುಂಚೆ ಅಲ್ಲ.

೧೩. ಧರ್ಮವೆಂದರೆ ಭಗವತ್ ಸಾಕ್ಷಾತ್ಕಾರ.

೧೪. ಧರ್ಮ ಅತೀಂದ್ರಿಯ ಅನುಭವ. ಪ್ರಪಂಚದಲ್ಲಿರುವ ಎಲ್ಲರಲ್ಲಿಯೂ ಇಂದ್ರಿಯಾತೀತರಾಗುವ ಶಕ್ತಿ ಸುಪ್ತವಾಗಿದೆ. ಒಂದು ಸಣ್ಣ ಕೀಟವೂ ಒಂದಲ್ಲ ಒಂದು ದಿನ ಇಂದ್ರಿಯದ ಬೇಲಿಯನ್ನು ದಾಟಿ ದೇವರನ್ನು ಸೇರುವುದು. ಯಾವುದೂ ವ್ಯರ್ಥವಲ್ಲ ; ಪ್ರಪಂಚದಲ್ಲಿ ವ್ಯರ್ಥ ಎಂಬುದಿಲ್ಲ.

೧೫. ಅನೇಕರಿಗೆ ಧರ್ಮ ಎಂದರೆ ಬೌದ್ಧಿಕವಾಗಿ ಏನನ್ನಾದರೂ ಒಪ್ಪಿ ಕೊಳ್ಳುವುದಾಗಿದೆ. ಇದು ನಮ್ಮ ಒಪ್ಪಿಗೆಯ ಪತ್ರಕ್ಕಿಂತ ಹೆಚ್ಚೇನೂ ಅಲ್ಲ. ಇದನ್ನು ನಾನು ಧರ್ಮ ಎಂದು ಕರೆಯಲಾರೆ. ಹೀಗೆ ಧಾರ್ಮಿಕನಾಗುವುದಕ್ಕಿಂತ ನಾಸ್ತಿಕನಾಗುವುದು ಮೇಲು.

೧೬. ಧರ್ಮ ಎಂದರೆ ಮತವಲ್ಲ, ಸಿದ್ಧಾಂತವಲ್ಲ, ಶಾಸ್ತ್ರವೂ ಅಲ್ಲ, ಅದು ಸಾಕ್ಷಾತ್ಕಾರ ಎಂಬುದನ್ನು ನೀವು ಗಮನದಲ್ಲಿಡಬೇಕು. ಇದು ಕಲಿಯುವುದಲ್ಲ, ಪಡೆಯುವುದು, ಸಾಕ್ಷಾತ್ಕಾರ.

೧೭. ನಾವೆಲ್ಲ ಧಾರ್ಮಿಕ ಪ್ರಪಂಚದಲ್ಲಿ ಕೇವಲ ಮಕ್ಕಳಂತೆ. ನಮಗೆ ವಯಸ್ಸಾಗಿರಬಹುದು. ನಾವು ಪ್ರಪಂಚದಲ್ಲಿರುವ ಪುಸ್ತಕಗಳನ್ನೆಲ್ಲಾ ಓದಿರ ಬಹುದು ಆದರೆ ನಾವೆಲ್ಲಾ ಆಧ್ಯಾತ್ಮಿಕ ವಿಷಯದಲ್ಲಿ ಹಸುಳೆಗಳು. ನಾವು ಯಾವುದೋ ಆಚಾರವನ್ನೋ ಸಿದ್ಧಾಂತವನ್ನೋ ಕಲಿತಿರುವೆವು. ಆದರೆ ನಮ್ಮ ಜೀವನದಲ್ಲಿ ಯಾವ ಅನುಭವವನ್ನೂ ಪಡೆದಿಲ್ಲ.

೧೮. ಒಂದೇ ಧರ್ಮ, ಒಬ್ಬನೇ ಪ್ರವಾದಿ, ಒಬ್ಬನೇ ಅವತಾರ ಮಾತ್ರ ಇರಲು ಸಾಧ್ಯ ಎಂದು ಮನುಷ್ಯ ನಂಬಬಹುದು. ಆದರೆ ಇದು ಸತ್ಯವಲ್ಲ. ನಾವು ಎಲ್ಲಾ ಮಹಾತ್ಮರ ಜೀವನ ಚರಿತ್ರೆಯನ್ನೂ ನೋಡಿದರೆ ಇವರಲ್ಲಿ ಪ್ರತಿ ಯೊಬ್ಬನೂ ಯಾವುದೋ ಒಂದು ಅಂಶವನ್ನು, ಭಾಗವನ್ನು ಮಾತ್ರ ತೋರಲು ಬಂದನು ಎಂಬುದು ವ್ಯಕ್ತವಾಗುವುದು ಸಮರಸವಿರುವುದು ಇವುಗಳ ಸಮಷ್ಟಿ ಯಲ್ಲೇ ವಿನಃ ಯಾವುದೋ ಒಂದರಲ್ಲಿ ಅಲ್ಲ.

೧೯. ನನ್ನ ಅಲ್ಪ ಅನುಭವದಲ್ಲಿ ನನಗೆ ಇದು ಅರ್ಥವಾಗಿದೆ. ಧರ್ಮವನ್ನು ನಾವು ಬೇಕಾದಷ್ಟು ದೂರಿದರೂ ತಪ್ಪು ಧರ್ಮದ್ದಲ್ಲ. ಯಾವ ಧರ್ಮವೂ ಅನ್ಯ ರನ್ನು ಹಿಂಸಿಸಲಿಲ್ಲ ; ಯಾವ ಧರ್ಮವೂ ಮಂತ್ರವಾದಿಗಳನ್ನು ಸುಡಲಿಲ್ಲ.

ಯಾವ ಧರ್ಮವೂ ಧರ್ಮದ ಹೆಸರಿನಲ್ಲಿ ಚಿತ್ರಹಿಂಸೆಯನ್ನು ಕೊಡಲಿಲ್ಲ. ಆದರೆ ಹೀಗೆಲ್ಲಾ ಮಾಡುವಂತೆ ಮಾಡಿದ್ದು ಯಾವುದು ? ರಾಜಕೀಯವೇ ಹೊರತು ಎಂದಿಗೂ ಧರ್ಮವಲ್ಲ. ಇಂತಹ ರಾಜಕೀಯ ಧರ್ಮದ ಹೆಸರನ್ನು ತಾಳಿದರೆ ತಪ್ಪು ಯಾರದು ?

೨೦. ನನ್ನ ಧರ್ಮ, ನಿನ್ನ ಧರ್ಮ, ನಿನ್ನ ಜನಾಂಗದ ಧರ್ಮ, ನನ್ನ ಜನಾಂಗದ ಧರ್ಮ ಎಂಬುದು ಎಂದಿಗೂ ಇರಲಿಲ್ಲ. ಇದ್ದುದು ಯಾವಾಗಲೂ ಒಂದೇ ಧರ್ಮ. ಒಂದೇ ಸನಾತನಧರ್ಮ ಹಿಂದೇ ಇತ್ತು, ಮುಂದೆಯೂ ಇರುತ್ತದೆ. ಈ ಒಂದು ಧರ್ಮವೇ ಬೇರೆ ಬೇರೆ ದೇಶದಲ್ಲಿ ಬೇರೆ ಬೇರೆ ರೀತಿಯಲ್ಲಿ ವ್ಯಕ್ತವಾಗುತ್ತಿದೆ.

೨೧. ದೇವರನ್ನು ನಾವು ನಂಬುವೆವು ಎಂದು ಹೇಳಿ ಅದೇ ಕಾಲದಲ್ಲೇ ದೇವರು ಯಾರೊ ತಮಗೆ ಬೇಕಾದ ಕೆಲವರಿಗೆ ಮಾತ್ರ ಸತ್ಯವನ್ನೆಲ್ಲಾ ಹೇಳಿರುವನು, ತಾವೇ ಜಗದ ರಕ್ಷಕರು ಎಂಬುದನ್ನು ಹೇಗೆ ನಂಬಬಲ್ಲರೊ ನನಗದು ಅರ್ಥವಾಗದು.

೨೨. ಧಾರ್ಮಿಕ ಪ್ರಪಂಚ ಒಂದು ದೊಡ್ಡ ಯಾತ್ರೆಯಂತಿದೆ. ಪ್ರತಿಯೊಬ್ಬ ಸ್ತ್ರೀಪುರುಷರೂ ಬೇರೆ ಬೇರೆ ಸನ್ನಿವೇಶಗಳ ಮೂಲಕ ಒಂದೇ ಗುರಿ ಎಡೆಗೆ ಮುಂದುವರಿಯುತ್ತಿರುವರು. ಪ್ರತಿಯೊಂದು ಧರ್ಮವೂ ಮಾನವನಿಂದ ದೇವರು ಮೂಡವಂತೆ ಮಾಡುತ್ತದೆ, ಎಲ್ಲರಿಗೂ ಸ್ಫೂರ್ತಿದಾಯಕ ಪರಮೇಶ್ವರನೊಬ್ಬನೇ.

೨೩. ಮಾನವ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಂಡು ತಾನು ಪವಿತ್ರನಾಗಬೇಕಾಗಿದೆ. ವಿಗ್ರಹ, ದೇವಸ್ಥಾನ, ಚರ್ಚ್, ಗ್ರಂಥ ಮುಂತಾದವುಗಳೆಲ್ಲ ಆಧ್ಯಾತ್ಮಿಕ ಶೈಶವಾವಸ್ಥೆಯಲ್ಲಿರುವವರಿಗೆ ಸಹಾಯ ಮಾತ್ರ. ಅವನು ಅಲ್ಲೇ ನಿಲ್ಲ ಕೂಡದು, ಮುಂದೆ ಮುಂದೆ ಹೋಗುತ್ತಿರಬೇಕು.

೨೪. ಮಾನವ ದೇವರನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕು, ಅನುಭವಿಸಬೇಕು, ದೇವರನ್ನು ನೋಡಬೇಕು, ಅವನೊಡನೆ ಮಾತನಾಡಬೇಕು. ಇದೇ ಧರ್ಮ.

೨೫. ಇಡೀ ಮಾನವ ಕೋಟಿಗೆ ಅನುಕಂಪ ಮತ್ತು ಪ್ರೀತಿ ಅದೇ ನಿಜವಾದ ಧರ್ಮಪರೀಕ್ಷೆ.

೨೬. ನಮ್ಮ ಈಗಿರುವ ಸ್ಥಿತಿಯಲ್ಲಿ ಪ್ರಚಂಡ ಅತೃಪ್ತಿ, ಜೀವನದೊಡನೆ ರಾಜಿಮಾಡಿಕೊಳ್ಳುವುದರೊಂದಿಗೆ ಅಸಹನೀಯ ದ್ವೇಷ, ಈ ಪ್ರಪಂಚದ ಮೋಸ

ಮತ್ತು ಸುಳ್ಳು ಇವನ್ನು ನೋಡಿ ಅಸಹನೀಯ ಜುಗುಪ್ಸೆ ಇವು ಆದಾಗ ಧರ್ಮ ಪ್ರಾರಂಭವಾಗುವುದು.

೨೭. ಸೋಮಾರಿಯಾಗಿ ಅಜ್ಞಾನದಲ್ಲಿ ಬಾಳುವುದಕ್ಕಿಂತ ಸಾವು ಮೇಲು. ಸೋತು ಬಾಳುವುದಕ್ಕಿಂತ ಹೋರಾಡುತ್ತಾ ಸಮರಾಂಗಣದಲ್ಲಿ ಮಡಿಯುವುದು ಲೇಸು. ಈ ದೃಷ್ಟಿಯೇ ಧರ್ಮದ ಮೂಲ. ಯಾವಾಗ ಒಬ್ಬ ಈ ಸ್ಥಿತಿಯಲ್ಲಿರುವನೋ ಆವನು ಸತ್ಯದ ಕಡೆ ಹೋಗುತ್ತಿರುವನು, ದೇವರ ಕಡೆ ಹೋಗುತ್ತಿರುವನು.

೨೮. ಧಾರ್ಮಿಕನಾಗಬೇಕಾದರೆ ಒಂದು ಪ್ರಚಂಡ ಪ್ರತಿಜ್ಞೆಯನ್ನು ಮೊದಲು ಮಾಡುವಂತೆ ಆಗಬೇಕು: ನಾನೇ ಒಂದು ದಾರಿಯನ್ನು ಕಂಡುಹಿಡಿಯುತ್ತೇನೆ. ನಾನು ಸತ್ಯವನ್ನು ಅರಿಯುತ್ತೇನೆ ಅಥವಾ ಪ್ರಯತ್ನದಲ್ಲಿ ಪ್ರಾಣಾರ್ಪಣೆ ಮಾಡುತ್ತೇನೆ. ಈ ಸಂಸಾರದಲ್ಲಿ ಏನಿಲ್ಲ, ಇದೆಲ್ಲ ಕ್ಷಣಿಕ, ಪ್ರತಿದಿನ ಮಾಯವಾಗುತ್ತಿದೆ. ಅತ್ತಕಡೆಯಾದರೋ ಮಹಾ ದಿಗ್ವಿಜಯದ ಸಂತೋಷವಿದೆ. ಬಾಳಿನ ಕೋಟಲೆಯನ್ನೆಲ್ಲಾ ನಿರ್ಮೂಲಗೊಳಿಸುವ ಸಾಧನವಿದೆ. ಜೀವನವನ್ನೇ ಗೆಲ್ಲಬಹುದು, ಪ್ರಪಂಚವನ್ನೇ ಗೆಲ್ಲಬಹುದು. ಅತ್ತಕಡೆಯಾದರೊ ಆತ್ಮ ಸ್ಥಿರವಾಗಿ ನಿಲ್ಲಬಲ್ಲದು.

೨೯. ನನ್ನ ಗುರುಗಳು ಹೀಗೆ ಹೇಳುತ್ತಿದ್ದರು : ರಣಹದ್ದು ಮೇಲೆ ಮೇಲಕ್ಕೆ ಆಕಾಶದಲ್ಲಿ ಒಂದು ಚುಕ್ಕಿಯಂತೆ ಕಾಣುವ ತನಕ ಹಾರುತ್ತವೆ. ಆದರೆ ಅದರ ದೃಷ್ಟಿಯೆಲ್ಲಾ ಕೆಳಗೆ ನಾರುತ್ತಿರುವ ಕೊಳೆತ ಹೆಣದ ಮೇಲೆ. ಕೊನೆಗೆ ನಿಮ್ಮ ಧರ್ಮದಿಂದ ಏನು ಪ್ರಯೋಜನ ? ಸಮಾಜಸಂಧಾರಣೆ ಮತ್ತು ಊಟ ಬಟ್ಟೆ ತಾನೆ. ಊಟ ಬಟ್ಟೆಯನ್ನು ಯಾರು ಲೆಕ್ಕಿಸುವರು ? ಪ್ರತಿಕ್ಷಣವೂ ಕೋಟ್ಯಂತರ ಜನ ಹುಟ್ಟುತ್ತಿರುವರು, ಸಾಯುತ್ತಿರುವರು. ಇದನ್ನು ಯಾರು ಲೆಕ್ಕಿಸುವರು. ಈ ಕ್ಷುದ್ರ ಪ್ರಪಂಚದ ಸುಖದುಃಖಗಳನ್ನು ಲೆಕ್ಕಿಸುವವರಾರು ? ಧೈರ್ಯವಿದ್ದರೆ ಇದಕ್ಕೆ ಅತೀತರಾಗಿ. ಎಲ್ಲಾ ನಿಯಮಗಳನ್ನೂ ಭಂಗಿಸಿ ನಿಲ್ಲಿ ; ಪ್ರಪಂಚ ಮಾಯವಾಗಲಿ, ನೀನೊಬ್ಬನೇ ನಿಲ್ಲು. "ನಾನೇ ಸಚ್ಚಿದಾನಂದಸ್ವರೂಪ ಶಿವೋಽಹಂ, ಶಿವೋಽಹಂ,"

೩೭ ಸಂನ್ಯಾಸ

೧. ಒಬ್ಬ ತಾನು ಜನಿಸಿದ ಆಶ್ರಮದ ಕರ್ತವ್ಯವನ್ನೆಲ್ಲಾ ಪರಿಪಾಲಿಸಿದ ಮೇಲೆ, ಪ್ರಪಂಚದ ಕೀರ್ತಿ, ಅಧಿಕಾರ ಮುಂತಾದ ಲಾಲಸೆಗಳ ಮೇಲೆ ಜುಗುಪ್ಸೆ ಹುಟ್ಟಿ, ಇವುಗಳನ್ನು ಸಂಪೂರ್ಣ ತ್ಯಜಿಸಿ ನಿವೃತ್ತಿಮಾರ್ಗವನ್ನು ಅನುಸರಿಸುವ ಅಭಿಲಾಷೆಯುಳ್ಳವನಾಗುವನು. ಪ್ರಪಂಚದ ವಸ್ತುಗಳ ಸ್ವಭಾವ ಇವನಿಗೆ ಚೆನ್ನಾಗಿ ಗೊತ್ತಾದಂತೆ, ಇದರ ಕ್ಷಣಿಕತೆ, ಹೋರಾಟ, ದುಃಖ ಇವುಗಳಿಂದ, ಬರುವ ಅಪ್ರಯೋಜನ ವಸ್ತುಗಳು ಇವುಗಳಿಗೆಲ್ಲಾ ವಿಮುಖನಾಗಿ ಪರಂಧಾಮವಾದ ಸತ್ಯವನ್ನು, ಸನಾತನ ಪ್ರೇಮವನ್ನು ಅರಸುವನು. ಆಗ ಅವನು ಪ್ರಪಂಚಕ್ಕೆ ಸಂಬಂಧಪಟ್ಟ ಅಂತಸ್ತು, ಐಶ್ವರ್ಯ, ಕೀರ್ತಿ ಎಲ್ಲವನ್ನೂ ತ್ಯಜಿಸಿ ಪರಿವ್ರಾಜಕ ನಾಗಿ ಅಲೆದಾಡುವನು. ಆಧ್ಯಾತ್ಮಿಕ ಜ್ಞಾನವನ್ನು ಪಡೆಯಲು ಪದೇಪದೇ ಹೋರಾಡುವನು. ಪ್ರೀತಿ, ದಯೆ, ಪರಮಜ್ಞಾನವನ್ನು ಪಡೆಯಲು ಸಾಧನೆ ಮಾಡುವನು. ಹಲವು ವರುಷಗಳ ಧ್ಯಾನ, ನಿಯಮಬದ್ಧ ಜೀವನ ಮತ್ತು ಮುಕ್ತಿಯ ಮೂಲಕ ಜ್ಞಾನ ಮಾಣಿಕ್ಯವನ್ನು ಪಡೆಯುವನು. ಅವನು ಅನಂತರ ಒಬ್ಬ ಗುರುವಾಗಿ, ಆ ಜ್ಞಾನವನ್ನು ಬಯಸುವ ಯೋಗ್ಯ ಶಿಷ್ಯನಿಗೆ (ಗೃಹಸ್ಥ ಇಲ್ಲವೆ ಸಂನ್ಯಾಸಿ) ತನ್ನ ಅನುಭವ ಮತ್ತು ಜ್ಞಾನವನ್ನೆಲ್ಲಾ ಧಾರೆಯೆರೆದು ಕೊಡುವನು.

೨. ಸಂನ್ಯಾಸಿ ಯಾವ ಧರ್ಮಕ್ಕೂ ಸೇರಿದವನಲ್ಲ. ಏಕೆಂದರೆ ಅವನು ಸ್ವತಂತ್ರವಾಗಿ ಪ್ರತಿಯೊಂದು ಧರ್ಮದಿಂದಲೂ ಒಳ್ಳೆಯದನ್ನು ಹೀರುವನು. ಅವನು ಆತ್ಮಸಾಕ್ಷಾತ್ಕಾರದ ಮೇಲೆ ನಿಂತಿರುವನು. ಅವನು ಯಾವ ಸಿದ್ಧಾಂತ ನಂಬಿಕೆ ಮೌಢ್ಯತೆಯನ್ನಾಗಲಿ ಸ್ವೀಕರಿಸುವವನಲ್ಲ.

೩. ಸಂನ್ಯಾಸದ ನಿಜವಾದ ಗುರಿ "ಆತ್ಮನ ಮೋಕ್ಷ ಮತ್ತು ಜಗತ್ತಿನ ಹಿತ." ಸಂನ್ಯಾಸವಿಲ್ಲದೆ ಯಾರೂ ನಿಜವಾಗಿ ಬ್ರಹ್ಮವಿತ್ ಆಗಲಾರರು. ಇದನ್ನೇ ಎಲ್ಲಾ ವೇದ ವೇದಾಂತಗಳೂ ಸಾರುವುವು. "ನಾವು ಪ್ರಪಂಚದಲ್ಲಿಯೂ ಇದ್ದು ಬ್ರಹ್ಮ ನನ್ನೂ ಸಾಕ್ಷಾತ್ಕಾರ ಮಾಡಿಕೊಳ್ಳುವೆವು" ಎನ್ನುವವರ ಮಾತನ್ನು ಕೇಳಬೇಡಿ. ಭೋಗಲಾಲಸಿಗಳು ತಮ್ಮ ಸಮಾಧಾನಕ್ಕೆ ಹೇಳಿಕೊಳ್ಳುವ ಹೊಗಳಿಕೆ ಇದು.

೪. ತ್ಯಾಗವಿಲ್ಲದೆ ಮುಕ್ತಿಯಿಲ್ಲ. ತ್ಯಾಗವಿಲ್ಲದೆ ಪರಾಭಕ್ತಿ ಸಾಧ್ಯವೇ ಇಲ್ಲ

೫. ಪ್ರಪಂಚದ ಬಂಧನಗಳನ್ನು ತುಂಡರಿಸದೆ ಯಾರಿಗೂ ಮುಕ್ತಿ ದೊರೆಯದು. ಯಾರೋ ಪ್ರಾಪಂಚಿಕ ಜೀವನವನ್ನು ನಡೆಸುತ್ತಿರುವರು ಎಂಬುದೇ ಅವನು ಯಾವ ಆಸೆಗೋ ಯಾವ ವ್ಯಕ್ತಿಗೋ ದಾಸ ಎಂಬುದನ್ನು ತೋರುವುದು. ಇಲ್ಲದೇ ಇದ್ದರೆ ಅವನು ಅಲ್ಲಿ ಏಕೆ ಆಸಕ್ತನಾಗುತ್ತಿದ್ದ ? ಅವನು ಕಾಮುಕ್ಕೋ, ಕಾಂಚನಕ್ಕೊ, ಕೀರ್ತಿಗೊ, ಪದವಿಗೋ, ಪಾಂಡಿತ್ಯಕ್ಕೋ ದಾಸ. ಈ ಬಂಧನಗಳಿಂದ ಪಾರಾದ ಮೇಲೆ ಮಾತ್ರ ಒಬ್ಬ ಮುಕ್ತಿಯ ಕಡೆ ಸಾಗಲು ಸಾಧ್ಯ. ಜನ ತಮಗೆ ಬಂದಂತೆ ವಾದಿಸಬಹುದು ; ಬಂಧನಗಳನ್ನೆಲ್ಲಾ ತ್ಯಜಿಸುವ ತನಕ, ಸಂನ್ಯಾಸ ಜೀವನವನ್ನು ಸ್ವೀಕರಿಸುವ ತನಕ ಯಾರೂ ಮುಕ್ತರಾಗಲಾರರು, ಬ್ರಹ್ಮಜ್ಞಾನಿಗಳಾಗಲಾರರು.

೬. ಬಹು ಜನರ ಹಿತಕ್ಕೆ ಬಹುಜನರ ಸುಖಕ್ಕೆ ಸಂನ್ಯಾಸಿ ಜನ್ಮವೆತ್ತುವುದು. ಯಾರು ಸಂನ್ಯಾಸ ದೀಕ್ಷೆಯನ್ನು ಸ್ವೀಕರಿಸಿ ತನ್ನ ಧರ್ಮವನ್ನು ಮರೆಯುವನೋ ಅವನ ಸ್ಥಿತಿ ಶೋಚನೀಯ. ಸಂನ್ಯಾಸಿ ಈ ಪ್ರಪಂಚಕ್ಕೆ ಬರುವುದೇ ಇತರರಿಗೆ ತನ್ನ ಜೀವನವನ್ನು ಅರ್ಪಿಸುವುದಕ್ಕೆ, ಮಾನವರ ದುಃಖವನ್ನು ತಗ್ಗಿಸುವುದಕ್ಕೆ, ವಿಧವೆಯರ ಕಂಬನಿಯನ್ನು ಒರಸುವುದಕ್ಕೆ, ತನ್ನ ಮಕ್ಕಳನ್ನು ಕಳೆದುಕೊಂಡು ವ್ಯಥೆಪಡುವ ತಾಯಿಯ ಹೃದಯಕ್ಕೆ ಶಾಂತಿ ತರುವುದಕ್ಕೆ. ಜನಸಾಧಾರಣರಿಗೆ ಜೀವನದ ವ್ಯವಹಾರದಲ್ಲಿ ಪ್ರೋತ್ಸಾಹವೀಯಲು, ಆಧ್ಯಾತ್ಮಿಕ ಬೋಧನೆಯಿಂದ ಎಲ್ಲರ ಐಹಿಕ ಮತ್ತು ಆಧ್ಯಾತ್ಮಿಕ ಮೇಲ್ಮೆಗೆ ಸಹಕಾರಿಯಾಗಲು, ಎಲ್ಲರಿಗೂ ಜ್ಞಾನದಾನ ಮಾಡಿ ಸುಪ್ತವಾಗಿರುವ ಬ್ರಹ್ಮನನ್ನು ಜಾಗ್ರತಗೊಳಿಸಲು ಸಂನ್ಯಾಸಿ ಜನ್ಮವೆತ್ತುವುದು.

೭. ಜಾಗ್ರತರಾಗಿ, ಎದ್ದೇಳಿ, ನೀವು ಜಾಗ್ರತರಾಗಿ, ಇತರರನ್ನೂ ಎಳಿಸಿ. ನೀವು ಪ್ರಪಂಚವನ್ನು ಬಿಡುವುದಕ್ಕೆ ಮುಂಚೆ ಜೀವನದ ಗುರಿಯನ್ನು ಸೇರಿ. ಜಾಗ್ರತರಾಗಿ, ಎದ್ದೇಳಿ. ಗುರಿ ಸೇರುವವರೆಗೆ ನಿಲ್ಲಬೇಡಿ.

೮. ಮಾನವ ಜನ್ಮ ಪಡೆದ ಮೇಲೆ,ಮುಮುಕ್ಷುವಾಗಬೇಕೆಂಬ ಆಸೆ ಉತ್ಕಟವಾದರೆ ಜೊತೆಗೆ ಸಾಕ್ಷಾತ್ಕಾರವನ್ನು ಪಡೆದ ಮಹಾತ್ಮನ ಕೃಪೆ ದೊರೆತರೆ ಆಗ ಆತ್ಮಜ್ಞಾನವನ್ನು ಪಡೆಯಬೇಕೆಂಬುವ ಆಸೆ ತೀವ್ರವಾಗುವುದು. ಇಲ್ಲದೇ ಇದ್ದರೆ ಕಾಮುಕಾಂಚನಾಸಕ್ತರಾದವರ ಮನಸ್ಸು ಎಂದಿಗೂ ಅತ್ತ ವಾಲುವುದಿಲ್ಲ. ಯಾರ ಹೃದಯದಲ್ಲಿ ಸಂಸಾರವನ್ನು ಅನುಭವಿಸಬೇಕೆಂಬ ಆಸೆ, ಐಶ್ವರ್ಯ ಮತ್ತು ಕೀರ್ತಿಯನ್ನು ಅನುಭವಿಸಬೇಕೆಂಬ ಆಸೆ ಇದೆಯೋ ಅವರಲ್ಲಿ ಬ್ರಹ್ಮನನ್ನು ಅರಿಯಬೇಕೆಂಬ ಆಸೆಯಾದರೂ ಏಳುವುದು ಹೇಗೆ ? ಯಾರು ಎಲ್ಲವನ್ನೂ ತ್ಯಜಿಸಲು

ಸಿದ್ಧನಾಗಿರುವನೋ, ಯಾರು ಸುಖ ದುಃಖ. ಪಾಪ ಪುಣ್ಯಗಳೆಂಬ ದ್ವಂದ್ವದ ಹೊಡೆತದ ಮಧ್ಯದಲ್ಲಿಯೂ ಪ್ರಶಾಂತಚಿತ್ತನಾಗಿರುವನೋ, ಧೀರನಾಗಿರುವನೋ. ಸಮತ್ವದಿಂದಿರುವನೋ, ತನ್ನ ಆದರ್ಶವನ್ನು ಮರೆಯುವುದಿಲ್ಲವೋ ಅವನು ಮಾತ್ರ ಆತ್ಮಜ್ಞಾನವನ್ನು ಪಡೆಯಲು ಯತ್ನಿಸುವನು. ಅವನು ಮಾತ್ರ ತನ್ನ ಸ್ವಂತ ಶಕ್ತಿಯ ಸಹಾಯದಿಂದ ಪ್ರಪಂಚದ ಮಾಯಾಪಾಶವನ್ನು, ಪಂಜರವನ್ನು ಸೀಳಿಕೊಂಡು ಬರುವ ಕೇಸರಿಯಂತೆ, ತುಂಡರಿಸುವನು.

೯. ಒಬ್ಬನಿಗೆ ಬಾಹ್ಯ ಮತ್ತು ಆಂತರಿಕ ಸಂನ್ಯಾಸಗಳೆರಡೂ ಆವಶ್ಯಕ. ಮನಸ್ಸಿನಲ್ಲಿ ತ್ಯಾಗವಿರಬೇಕು, ಹೊರಗೆ ಅದನ್ನು ತ್ಯಜಿಸಲೂ ಬೇಕು. ವೈರಾಗ್ಯವಿಲ್ಲದೆ, ತ್ಯಾಗವಿಲ್ಲದೆ, ಭೋಗವಾಸನೆಯನ್ನು ಸಂಪೂರ್ಣವಾಗಿ ತ್ಯಜಿಸದೆ, ಆಧ್ಯಾತ್ಮಿಕ ಜೀವನದಲ್ಲಿ ಏನನ್ನೂ ಗಳಿಸಲಾಗುವುದಿಲ್ಲ. ಮುಕ್ತಿ ಮಗುವಿನ ಕೈಯಲ್ಲಿರುವ ಮಿಠಾಯಿಯಲ್ಲ, ಅದನ್ನು ಉಪಾಯದಿಂದ ಕಸಿದುಕೊಳ್ಳುವುದಕ್ಕೆ.

೧೦, ನಮಗೆ ತಿಳಿದಿರುವ ಪ್ರತಿಯೊಂದು ಧರ್ಮದಲ್ಲಿಯೂ ಸಂನ್ಯಾಸಿಗಳು, ಇದ್ದೇ ಇರುವರು. ಹಿಂದೂ ಸಂನ್ಯಾಸಿಗಳು, ಕ್ರೈಸ್ತ ಸಂನ್ಯಾಸಿಗಳು, ಬೌದ್ಧ ಸಂನ್ಯಾಸಿಗಳು ಇರುವರು. ಇಸ್ಲಾಂ ಧರ್ಮ ಕೂಡ ಕೆಲವು ಫಕೀರರಿಗೆ ತನ್ನ ಧರ್ಮದಲ್ಲಿ ಅವಕಾಶ ಮಾಡಿಕೊಡಬೇಕಾಯಿತು.

೧೧, ಏಕಾಂಗಿಯಾಗಿ ನಿಂತು, ಎಲ್ಲಾ ಸಹಾಯವನ್ನು ತಿರಸ್ಕರಿಸಿ, ಜೀವನದ ಸಮಸ್ಯೆಗಳನ್ನು ಎದುರಿಸುತ್ತ, ಯಾವ ಕರ್ತವ್ಯದ ನೀರಸ ದೃಷ್ಟಿಯೂ ಇಲ್ಲದೆ, ಯಾವ ವಿಧವಾದ ಫಲಾಕಾಂಕ್ಷೆಯೂ ಇಲ್ಲದೆ, ಇತರರಿಗೆ ಸಹಾಯ ಮಾಡುವ ಅನುಭವವನ್ನು ನೀವು ಏನೆಂದು ಭಾವಿಸುವಿರಿ ?

ಸಂನ್ಯಾಸಿ ಬದುಕಿರುವ ತನಕ ಸಂತೋಷದಿಂದ ಸ್ವತಂತ್ರವಾಗಿ ಕೆಲಸಮಾಡುವನು. ಇವನು ಗುಲಾಮನಂತೆ ಬಲಾತ್ಕಾರಕ್ಕೊಳಗಾಗಿ ಕೆಲಸ ಮಾಡುವುದಿಲ್ಲ. ಯಾವುದೋ ಸ್ವಾರ್ಥ ಪ್ರೀತಿಗಾಗಲಿ, ಕೀರ್ತಿಗಾಗಲಿ ವಶನಾಗಿ ಕೆಲಸ ಮಾಡುವುದಿಲ್ಲ.

ಸಂನ್ಯಾಸಿಗೆ ಮಾತ್ರ ಇದು ಸಾಧ್ಯ. ಧರ್ಮವೆಂದರೇನು? ಧರ್ಮ ಇರಬೇಕೆ, ಮಾಯವಾಗಬೇಕೆ ? ಅದು ಜೀವಂತವಾಗಿರಬೇಕಾದರೆ ಧರ್ಮದಲ್ಲಿ ವಿಶೇಷ ಜ್ಞಾನ ಪಡೆದಿರುವವರು ಇರಬೇಕು, ಅದಕ್ಕಾಗಿ ಹೋರಾಡುವ ಯೋಧರು ಇರಬೇಕು. ಸಂನ್ಯಾಸಿಯೇ ಧರ್ಮದಲ್ಲಿ ವಿಶೇಷ ಅನುಭವ ಪಡೆದವನು. ಅವನು ಧರ್ಮವನ್ನು ತನ್ನ ಏಕಮಾತ್ರ ಜೀವನದ ಉದ್ದೇಶವಾಗಿ ಮಾಡಿಕೊಂಡಿರುವನು. ಅವನು ಭಗವಂತನ ಯೋಧ. ಯಾವ ಧರ್ಮದಲ್ಲಿ ನಿಷ್ಠಾವಂತರಾದ ಕೆಲವು

ಸಂನ್ಯಾಸಿಗಳು ಇರುವವರೋ ಆ ಧರ್ಮ ಹೇಗೆ ನಾಶವಾಗಬಲ್ಲದು ?

೧೨. ಸಂನ್ಯಾಸಾಶ್ರಮಕ್ಕೆ ಮೂಲ ಎಲ್ಲಿಯಾದರೂ ಇರಲಿ, ಜೀವನದ ಗುರಿ ತ್ಯಾಗವ್ರತವನ್ನು ಸ್ವೀಕರಿಸಿ ಬ್ರಹ್ಮಜ್ಞಾನಿಯಾಗುವುದು.

೧೩. ನನಗೆ ಆಧ್ಯಾತ್ಮಿಕ ಜೀವನದಲ್ಲಿ ತೃಪ್ತಿ ಸಿಕ್ಕದೇ ಇದ್ದರೆ ಇಂದ್ರಿಯ ಗಳಲ್ಲಿ ತೃಪ್ತಿಯನ್ನು ಅರಸಲೆ ? ಕುಡಿಯಲು ಅಮೃತ ಸಿಕ್ಕದೇ ಇದ್ದರೆ ಬಚ್ಚಲ ನೀರನ್ನು ಕುಡಿಯಬೇಕೆ ?

೧೪. ಒಬ್ಬ ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ಪಡೆಯ ಬಹುದು. ಆದರೆ ಅವನು ತನ್ನ ಆಕಾಂಕ್ಷೆಗಳಿಗೆ ದಾಸನಾಗಿದ್ದರೆ, ಅವನು ನಿಜವಾದ ಸ್ವಾತಂತ್ರ್ಯದ ಆನಂದವನ್ನು ಅನುಭವಿಸಲಾರ.

೧೫. ಒಬ್ಬ ಪ್ರಾಪಂಚಿಕ ಭೋಗವಸ್ತುಗಳನ್ನು ತ್ಯಜಿಸಿದರೆ, ಜನ ಅವನನ್ನು ಹುಚ್ಚನೆಂದು ಕರೆಯುವುದನ್ನು ಕೇಳಿರುವೆವು. ಆದರೆ ಅಂತಹವರೇ ಪ್ರಪಂಚದ ಶ್ರೇಷ್ಠತಮ ವ್ಯಕ್ತಿಗಳು. ಹಿಂದೆ ಪ್ರಪಂಚದ ಚಾಲಕ ಶಕ್ತಿ ಇಂತಹ ಹುಚ್ಚರಿಂದ ಬಂದಿದೆ. ಮುಂದಿನ ಚಾಲಕಶಕ್ತಿ ಕೂಡ ಇಂತಹವರಿಂದಲೇ ಆಗಬೇಕಾಗಿದೆ.

೧೬. ನಿಜವಾದ ಸಂನ್ಯಾಸಿ ಗೃಹಸ್ಥರ ಗುರು. ಸಂನ್ಯಾಸಿಗಳಿಂದ ಪಡೆದ ಬೋಧನೆ ಮತ್ತು ಸಲಹೆಗಳ ಸಹಾಯಗಳಿಂದ ಹಿಂದಿನ ಕಾಲದಲ್ಲಿ ಅವರು ಅನೇಕ ಸಮಸ್ಯೆಗಳೊಡನೆ ಹೋರಾಡಿ ಪಾರಾಗಲು ಸಾಧ್ಯವಾಯಿತು. ಗೃಹಸ್ಥ, ಸಂನ್ಯಾಸಿಯ ಅಮೋಘವಾದ ಬೋಧನೆಗೆ ಸ್ವಲ್ಪ ಹಿಟ್ಟು ಬಟ್ಟೆಯನ್ನು ಕೊಡು ವನು. ಭರತಖಂಡದಲ್ಲಿ ಹೀಗೆ ಕೊಟ್ಟು ತೆಗೆದುಕೊಳ್ಳುವುದಿಲ್ಲದೇ ಇದ್ದಿದ್ದರೆ ಭಾರತೀಯರು ಅಮೇರಿಕಾದ ರೆಡ್ ಇಂಡಿಯಾದವರಂತೆ ಎಂದೋ ನಾಮಾವ ಶೇಷರಾಗಿ ಹೋಗುತ್ತಿದ್ದರು. ಗೃಹಸ್ಥರು ಸಂನ್ಯಾಸಿಗಳಿಗೆ ಸ್ವಲ್ಪ ಆಹಾರವನ್ನು ಕೊಡುವುದರಿಂದ ಅವರು ಈಗಲೂ ಪ್ರಗತಿಗಾಮಿಗಳಾಗಿರುವುದು. ಸಂನ್ಯಾಸಿಗಳು ಸೋಮಾರಿಗಳಲ್ಲ, ಅವರೇ ಎಲ್ಲಾ ಚಳುವಳಿಯ ಮೂಲ. ಪವಿತ್ರವಾದ ಆದರ್ಶ ವನ್ನು ಸಂನ್ಯಾಸಿಗಳು ಜೀವನದಲ್ಲಿ ಅನುಷ್ಠಾನಕ್ಕೆ ತಂದಿರುವುದನ್ನು ಗೃಹಸ್ಥರು ನೋಡುವರು. ಆದಕಾರಣವೇ ಅಂತಹ ಆದರ್ಶವನ್ನು ಅವರಿಂದ ಗೃಹಸ್ಥರು ಸ್ವೀಕರಿಸುವರು, ಇದರಿಂದಲೇ ಗೃಹಸ್ಥರಿಗೆ ಕರ್ಮಭೂಮಿಯಲ್ಲಿ ಜಯಪ್ರದವಾಗಿ ಹೋರಾಡಲು ಸಾಧ್ಯವಾಯಿತು. ಸಾಧುಗಳ ಉದಾಹರಣೆಯಿಂದ ಗೃಹಸ್ಥರಿಗೆ ಸಂಸಾರದಲ್ಲಿ ಒಳ್ಳೆಯ ಆದರ್ಶವನ್ನು ಇಟ್ಟುಕೊಳ್ಳಲು ಸಾಧ್ಯವಾಗುವುದು. ಕರ್ಮ ಮಾಡುವುದಕ್ಕೆ ನಿಜವಾದ ಶಕ್ತಿ ಅವರಿಗೆ ಸಂನ್ಯಾಸಿಗಳಿಂದ ದೊರಕುವುದು. ಸಂನ್ಯಾಸಿಗಳು ಯಾವ ಒಂದು ಒಳ್ಳೆಯ ಕೆಲಸವನ್ನು ಮಾಡಬೇಕೆಂದರೂ ಗೃಹಸ್ಥ

ರಿಗೆ ಸ್ಫೂರ್ತಿಯ ಮೂಲವಾಗಿರುವರು. ಸಂನ್ಯಾಸಿಗಳು ದೇವರಿಗೆ ಮತ್ತು ಪ್ರಪಂಚದ ಒಳ್ಳೆಯದಕ್ಕೆ ತಮ್ಮ ಸರ್ವಸ್ವವನ್ನೂ ಧಾರೆ ಎರೆದಿರುವರು. ಇದಕ್ಕೆ ಬದಲು ಗೃಹಸ್ಥರು ಅವರಿಗೆ ಕೆಲವು ತುತ್ತು ಅನ್ನ ಕೊಡುವರು. ಹೀಗೆ ಆಹಾರ ವನ್ನು ಬೆಳೆಯಬೇಕು ಎಂಬ ಆಸೆ ಮತ್ತು ಶಕ್ತಿ ಕೂಡ ಸರ್ವಸಂಗಪರಿತ್ಯಾಗ ಮಾಡಿದ ಸಂನ್ಯಾಸಿಯ ಶುಭಾಶಯ ಮತ್ತು ಆಶೀರ್ವಾದದ ಪರಿಣಾಮ. ಜನಗಳಿಗೆ ಗೂಢ ವಾದ ವಿಷಯಗಳು ಗೊತ್ತಿಲ್ಲದೆ ಇರುವುದರಿಂದ ಅವರು ಸಂನ್ಯಾಸಾಶ್ರಮವನ್ನು ಹಳಿಯುವರು. ಬೇರೆ ದೇಶದಲ್ಲಿ ಅದು ಹೇಗಾದರೂ ಇರಲಿ, ಭರತ ಖಂಡದಲ್ಲಿ ಗೃಹಸ್ಥನ ಜೀವನ ದೋಣಿ ಮುಳುಗದೆ ಇರುವುದಕ್ಕೆ ಕಾರಣ ಅದು ಸಂನ್ಯಾಸಿಯ ಚಾಲಕತ್ವದಲ್ಲಿರುವುದು.

೧೭. ನಾವು ಯಾವ ಗುರಿಯನ್ನು ಸಾಧಿಸಬೇಕಾದರೂ ಅದಕ್ಕೊಂದು ದಾರಿಬೇಕು. ಈ ದಾರಿ ದೇಶ, ಕಾಲ, ವ್ಯಕ್ತಿಗನುಸಾರವಾಗಿ ವ್ಯತ್ಯಾಸವಾಗುವುದು. ಆದರೆ ಗುರಿ ಯಾವಾಗಲೂ ಒಂದೇ. ಸಂನ್ಯಾಸಿಯ ಆದರ್ಶವಾದರೊ ತನ್ನ ಮುಕ್ತಿ ಮತ್ತು ಜಗದ ಹಿತ. ಅದನ್ನು ಸಾಧಿಸಬೇಕಾದರೆ ಕಾಮಕಾಂಚನವನ್ನು ಅವನು ತ್ಯಜಿಸಬೇಕು. ಜ್ಞಾಪಕದಲ್ಲಿಡಿ, ತ್ಯಾಗವೆಂದರೆ ಎಲ್ಲಾ ವಿಧವಾದ ಸ್ವಾರ್ಥ ಉದ್ದೇಶದ ನಾಶ. ಸುಮ್ಮನೆ ಹೊರಗೆ ಹಣವನ್ನು ಮುಟ್ಟದೆ ಅದನ್ನು ಮತ್ತೊ ಬ್ಬನ ಹತ್ತಿರ ಇಟ್ಟು ಅದರಿಂದ ಬರುವ ಅನುಕೂಲವನ್ನೆಲ್ಲಾ ಅನುಭವಿಸುವುದಲ್ಲ. ಇದನ್ನು ತ್ಯಾಗವೆನ್ನಲಾಗುವುದೆ ? ಮೇಲಿನ ಎರಡು ಆದರ್ಶವನ್ನೂ ಸಾಧಿಸ ಬೇಕಾದರೆ ಸಂನ್ಯಾಸಿಗೆ ಭಿಕ್ಷಾವೃತ್ತಿ ಬಹಳ ಒಳ್ಳೆಯದಾಗಿತ್ತು ಹಿಂದೆ. ಆಗ ಮನು ಮತ್ತು ಇತರ ಶ್ರುತಿಕಾರರು ಹೇಳಿದುದನ್ನು ಜನ ಕೇಳುತ್ತಿದ್ದರು. ಅವರು ತಮ್ಮ ಊಟದ ಸ್ವಲ್ಪ ಭಾಗವನ್ನು ಸಂನ್ಯಾಸಿಗಳಿಗೆ ಭಿಕ್ಷೆ ನೀಡುವುದಕ್ಕಾಗಿ ತೆಗೆದಿಡುತ್ತಿ ದ್ದರು. ಈಗಿನ ಕಾಲದಲ್ಲಿ ಪರಿಸ್ಥಿತಿ ಬದಲಾಯಿಸಿದೆ. ಅದರಲ್ಲೂ ಬಂಗಾಳದೇಶ ದಲ್ಲಿ ಮಧುಕರಿಯ ವೃತ್ತಿ ಜಾರಿಯಿಲ್ಲ. ಇಲ್ಲಿ ಮಧುಕರಿಯ ಮೇಲೆ ಜೀವಿಸಲೆತ್ನಿ ಸುವುದು ವೃಥಾ ಶಕ್ತಿ ಕ್ಷಯ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಭಿಕ್ಷವನ್ನು ಬೇಡಬೇಕೆಂಬ ವಿಧಿ ಕಾಮಕಾಂಚನ ತ್ಯಾಗಕ್ಕೆ ಸಹಾಯಕವಾಗಿತ್ತು. ಈಗ ಅದರಿಂದ ಪ್ರಯೋಜನವಿಲ್ಲ. ಇಂತಹ ಸ್ಥಿತಿಯಲ್ಲಿ ಸಂನ್ಯಾಸಿ ತನ್ನ ಊಟ ಬಟ್ಟೆಗೆ ಸಾಕಷ್ಟು ವ್ಯವಸ್ಥೆಗೊಳಿಸಿ ಇತರ ಕಾಲವನ್ನು ತನ್ನ ಆದರ್ಶಸಾಧನೆಗೆ ಉಪಯೋಗಿಸುವುದು ಸಂನ್ಯಾಸ ಧರ್ಮಕ್ಕೆ ವಿರೋಧವಾಗಿ ಹೋದಂತೆ ಅಲ್ಲ. ತಿಳಿ ಯದೆ ಕೇವಲ ದಾರಿಯನ್ನೇ ಮುಖ್ಯ ಮಾಡಿಕೊಂಡರೆ ಗುರಿಯನ್ನೇ ಮರೆಯು ವೆವು. ಗುರಿಯನ್ನು ನಾವು ಎಂದಿಗೂ ಮರೆಯಕೂಡದು.

೧೮, ಅಮೇರಿಕಾ ದೇಶದಲ್ಲಿ ಪಾದ್ರಿಗಳಿಗೆ ಕೆಲವು ವೇಳೆ ವರುಷಕ್ಕೆ ಮೂವತ್ತು, ನಲವತ್ತು, ಐವತ್ತು ಸಾವಿರ ರೂಪಾಯಿನಷ್ಟು ಸಂಬಳ ಕೊಡುತ್ತಾರೆ. ಭಾನುವಾರ ಮಾತ್ರ ಎರಡು ಗಂಟೆಗಳ ಬೋಧನೆಗೆ, ಅದೂ ವರುಷಕ್ಕೆ ಆರು ತಿಂಗಳು ಮಾತ್ರ. ತಮ್ಮ ಧರ್ಮಕ್ಕಾಗಿ ಅವರು ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡುವುದನ್ನು ನೋಡಿ, ಆದರೂ ಕಂಬ್ಳಿವಾಲನಂತಹ ದೇವರಂತಹ ನಿಸ್ವಾರ್ಥರನ್ನು ಶುದ್ಧ ಸೋಮಾರಿಗಳಂತೆ ಪರಿಗಣಿಸಿ ಎಂದು ಮಂಗಯುವಕರಿಗೆ ಬೋಧಿಸುತ್ತಿರುವರು! "ಯಾರು ನನ್ನ ಭಕ್ತರ ಭಕ್ತನೋ ಅವನೇ ಶ್ರೇಷ್ಠ ಭಕ್ತ."

ಏನೂ ತಿಳಿಯದ ಒಬ್ಬ ಬೈರಾಗಿಯ ಅತಿ ಕನಿಷ್ಠ ಉದಾಹರಣೆಯನ್ನಾದರೂ ತೆಗೆದುಕೊಳ್ಳಿ. ಆತನೂ ಕೂಡ ಒಂದು ಹಳ್ಳಿಗೆ ಹೋದರೆ ತನಗೆ ತಿಳಿದ ಮಟ್ಟಿಗೆ ಜನರಿಗೆ ತುಳಸೀದಾಸನ ರಾಮಾಯಣದಿಂದಲೋ ಚೈತನ್ಯಚರಿತಾಮೃತದಿಂದಲೋ ದಕ್ಷಿಣದಲ್ಲಿ ಆಳ್ವಾರರ ಬೋಧನೆಗಳಿಂದಲೋ ಜನರಿಗೆ ಹೇಳುವನು, ಇದೂ ಕೂಡ ಸ್ವಲ್ಪ ಒಳ್ಳೆಯ ಕೆಲಸವಲ್ಲವೆ? ಇದೆಲ್ಲ ಒಂದು ತುತ್ತು ಅನ್ನಕ್ಕೆ, ಗೇಣುದ್ದ ಬಟ್ಟೆಗೆ. ಇಂತಹವರನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುವುದಕ್ಕೆ ಮುಂಚೆ, ನೀನು ನಿನ್ನ ಬಡ ಸಹೋದರರಿಗೆ ಏನು ಮಾಡುತ್ತಿರುವೆ? ಅವರು ಕೊಡುವ ತೆರಿಗೆಯಿಂದ ನಿಮಗೆ ವಿದ್ಯೆ ಸಿಕ್ಕಿದೆ, ಅವರನ್ನು ಅರೆದು ತಿನ್ನುವುದರಿಂದ ನಿನಗೆ ಸಮಾಜದಲ್ಲಿ ಸ್ಥಾನಮಾನ ಸಿಕ್ಕಿದೆ, ಇದರಿಂದ ನಿಮಗೆ ಬರುವ ಹಣವನ್ನು ಬಾಬಾಜಿಗಳು ಶುದ್ಧ ಸೋಮಾರಿಗಳು ಎಂದು ಬೋಧಿಸುವವರಿಗೆ ಕೊಡುತ್ತೀರಿ. ಇವುಗಳನ್ನು ಕುರಿತು ಆಲೋಚಿಸಿ ನೋಡಿ.

೩೮ ಸೇವೆ

೧. ಪರಬ್ರಹ್ಮನಿಂದ ಹಿಡಿದು ಅತಿಕ್ಷುದ್ರ ಕ್ರಿಮಿಯವರೆಗೆ ಸೂಕ್ಷ್ಮತಮ ಕಣದ ಅಂತರಾಳದಲ್ಲಿಯೂ ಪ್ರೇಮಮಯನಾದ ಭಗವಂತನು ಸರ್ವಾಂತರ್ಯಾಮಿ ಯಾಗಿರುವನು. ಸಖನೆ, ಅವುಗಳಡಿದಾವರೆಯಲ್ಲಿ ಮನಸ್ಸು, ಜೀವ, ದೇಹ ಗಳನ್ನು ಅರ್ಪಿಸು.

ನಿನ್ನ ಎದುರಿಗೆ ಇರುವುದೇ ಭಗವಂತನ ವಿಶ್ವರೂಪ. ಇದನ್ನು ತೊರೆದು ಮತ್ತೆಲ್ಲಿ ದೇವರನ್ನು ಅರಸುವೆ ? ತಾರತಮ್ಯವಿಲ್ಲದೆ ಯಾರು ಎಲ್ಲರನ್ನೂ ಪ್ರೀತಿ ಸುವರೊ ಅವರು ಮಾತ್ರ ತಮ್ಮ ಇಷ್ಟದೇವರನ್ನು ಅತ್ಯುತ್ತಮ ರೀತಿಯಿಂದ ಅರಾಧಿಸುತ್ತಿರುವರು.

೨. ಶುದ್ಧವಾಗಿರುವುದು, ಪರರಿಗೆ ಹಿತವನ್ನು ಮಾಡುವುದು ಇದೇ ಎಲ್ಲಾ ಪೂಜೆಯ ಸಾರ. ದರಿದ್ರರಲ್ಲಿ. ದೀನರಲ್ಲಿ, ದುರ್ಬಲರಲ್ಲಿ ಯಾರು ಶಿವನನ್ನು ನೋಡುವರೋ ಅವರೇ ನಿಜವಾಗಿ ಶಿವನನ್ನು ಆರಾಧಿಸುವರು. ಕೇವಲ ವಿಗ್ರಹದಲ್ಲಿ ಮಾತ್ರ ಶಿವನನ್ನು ನೋಡುವುದು ಭಗವದಾರಾಧನೆಗೆ ಪೀಠಿಕೆ ಮಾತ್ರ. ಯಾರು ಜಾತಿ, ಕುಲ, ಗೋತ್ರ, ಜನಾಂಗವನ್ನು ಗಮನಿಸದೆ ಒಬ್ಬ ದೀನನಿಗೆ ಸಹಾಯ ಮಾಡಿರುವನೋ, ದೀನನನ್ನು ಸೇವಿಸಿರುವನೋ ಅವನನ್ನು ಕಂಡರೆ ಶಿವ, ತನ್ನನ್ನು ದೇಗುಲದಲ್ಲಿ ಮಾತ್ರ ನೋಡುವ ಭಕ್ತರಿಗಿಂತ ಹೆಚ್ಚು ಮೆಚ್ಚುವನು.

೩. ಯಾರು ತಂದೆಯನ್ನು ಸೇವಿಸಬೇಕೆಂದು ಬಯಸುವರೋ ಅವರು ಅವನ ಮಕ್ಕಳ ಸೇವೆಯನ್ನು ಮೊದಲು ಮಾಡಬೇಕು. ಯಾರು ಶಿವನನ್ನು ಸೇವಿಸಬೇಕೆಂದು ಬಯಸುವರೋ ಅವರು ಶಿವನ ಮಕ್ಕಳನ್ನು ಸೇವಿಸಬೇಕು.

೪. ಯಾರು ಭಗವದ್ ಭಕ್ತರನ್ನು ಸೇವಿಸುವರೋ ಅವರು ಭಗವಂತನ ಅತ್ಯುತ್ತಮ ಭಕ್ತರೆಂದು ಶಾಸ್ತ್ರಗಳು ಸಾರುತ್ತವೆ. ಇದನ್ನು ಜ್ಞಾಪಕದಲ್ಲಿಡಿ.

೫. ನಾನು ಪುನಃ ನಿಮಗೆ ಹೇಳುತ್ತೇನೆ ಕೇಳಿ. ನೀವು ಪರಿಶುದ್ಧರಾಗಿ. ಯಾರು ಸಹಾಯಕ್ಕಾಗಿ ನಿಮ್ಮ ಬಳಿಗೆ ಬರುವರೋ ಅವರಿಗೆ ಸಾಧ್ಯವಾದಷ್ಟು ಸಹಾಯಮಾಡಿ. ಇದು ಒಳ್ಳೆಯ ಕರ್ಮ. ಇದರಿಂದ ಚಿತ್ತಶುದ್ಧಿಯಾಗು ವುದು. ಸರ್ವರಲ್ಲಿ ನೆಲಸಿರುವ ಭಗವಂತ ವ್ಯಕ್ತನಾಗುವನು.

೬. ಮೊದಲು ತಮ್ಮ ಸುಖವನ್ನು ಕುರಿತು ಆಲೋಚಿಸುವ ಸ್ವಾರ್ಥವೇ ಮಹಾಪಾಪ. ಯಾರು "ಮೊದಲು ನಾನು ತಿನ್ನುತ್ತೇನೆ, ಇತರರಿಗಿಂತ ಹೆಚ್ಚು ಹಣವನ್ನು ಗಳಿಸುತ್ತೇನೆ. ಎಲ್ಲವನ್ನೂ ನಾನು ಪಡೆಯುತ್ತೇನೆ, ಉಳಿದವರಿಗಿಂತ ಮೊದಲು ನಾನು ಸ್ವರ್ಗಕ್ಕೆ ಹೋಗುವೆನು. ಮುಕ್ತಿ ಪಡೆಯುವೆನು" ಎಂದು ಯೋಚಿಸುವನೋ ಅವನು ಸ್ವಾರ್ಥಪರ. ನಿಃಸ್ವಾರ್ಥಿ "ನಾನು ಕೊನೆಗೆ ಉಳಿಯುತ್ತೇನೆ. ಸ್ವರ್ಗಲೋಕಕ್ಕೆ ಹೋಗುವುದಕ್ಕೂ ನನಗೆ ಇಚ್ಛೆ ಇಲ್ಲ. ನಾನು ನರಕಕ್ಕೆ ಹೋಗುವುದರಿಂದ ನನ್ನ ಸಹೋದರರಿಗೆ ಸಹಾಯವಾಗುವ ಹಾಗಿದ್ದರೆ ನಾನು ಅದಕ್ಕೂ ಸಿದ್ಧನಾಗಿರುವೆನು" ಎನ್ನುತ್ತಾನೆ,

೭. ಈ ಜೀವನ ಕ್ಷಣಿಕ. ಸುಖಭೋಗಗಳು ನಶ್ವರ. ಯಾರು ಪರರಿಗೋಸುಗ ಬಾಳುವರೋ ಅವನು ಜೀವಂತ, ಉಳಿದವರು ಬದುಕಿರುವುದಕ್ಕಿಂತ ಹೆಚ್ಚು ಸತ್ತಿರುವರು.

೮. ನೀವು ನಿಮ್ಮ ಸಹೋದರರನ್ನು ಪ್ರೀತಿಸುವಿರೇನು ? ದೇವರನ್ನು ಅರಸಿಕೊಂಡು ನೀವೆಲ್ಲಿಗೆ ಹೋಗುವಿರಿ ? ಕಣ್ಣೆದುರಿಗೆ ಇರುವ ದೀನರು, ದರಿದ್ರರು, ದುಃಖಿಗಳು ದೇವರಲ್ಲವೇ ? ಮೊದಲು ಅವರನ್ನು ಏತಕ್ಕೆ ಪೂಜಿಸಬಾರದು ? ಗಂಗಾನದಿಯ ತೀರದಲ್ಲಿ ಭಾವಿಯನ್ನು ಏತಕ್ಕೆ ತೋಡಲು ಹೋಗುವಿರಿ ?

೯. ಪ್ರಪಂಚಕ್ಕೆ ಬೆಳಕನ್ನು ಯಾರು ನೀಡುವರು ? ಹಿಂದೆ ತ್ಯಾಗವೇ ನಿಯಮವಾಗಿತ್ತು, ಮುಂದೆಯೂ ಅದೇ ನಿಯಮವಾಗುವುದು. ಬಹು ಜನರ ಹಿತಕ್ಕೆ, ಬಹು ಜನರ ಸುಖಕ್ಕೆ, ಪ್ರಪಂಚದ ಶ್ರೇಷ್ಠತಮ ವ್ಯಕ್ತಿಗಳು, ಮಹಾವೀರರು ತಮ್ಮ ಬಾಳನ್ನು ಅರ್ಪಿಸಬೇಕು. ಎಂದಿಗೂ ಬತ್ತದ ದೇಶ ಪ್ರೇಮ ಮತ್ತು ವಿಶ್ವಾನುಕಂಪದಿಂದ ತುಂಬಿತುಳುಕಾಡುತ್ತಿರುವ ನೂರಾರು ಭಕ್ತರು ಆವಶ್ಯಕ.

೧೦. ಪ್ರಪಂಚದ ಧರ್ಮಗಳು ನಗೆಗೀಡಾಗಿವೆ, ಪ್ರಪಂಚಕ್ಕೆ ಬೇಕಾಗಿರುವುದು ಘನತರದ ನಡತೆ. ಯಾರ ಜೀವನ ನಿಃಸ್ವಾರ್ಥ ಪ್ರೀತಿಯಿಂದ ಬೆಳಗುತ್ತಿದೆಯೋ ಅಂತಹ ವ್ಯಕ್ತಿಗಳು ಜಗತ್ತಿಗೆ ಬೇಕಾಗಿದೆ. ಅಂತಹ ಪ್ರೇಮದಿಂದಾಡಿದ ಪ್ರತಿಯೊಂದು ನುಡಿಯೂ ಸಿಡಿಲಿನಂತೆ ಪರಿಣಾಮಕಾರಿಯಾಗುವುದು.

೧೧. ಮಹಾವ್ಯಕ್ತಿಗಳೇ, ಏಳಿ, ಜಾಗ್ರತರಾಗಿ. ದುಃಖದಿಂದ ದಹಿಸುತ್ತಿದೆ ಪ್ರಪಂಚ. ನೀವು ನಿದ್ರಿಸಬಲ್ಲಿರಾ ? ನಿದ್ರಿಸುತ್ತಿರುವ ದೇವತೆಗಳು ಜಾಗ್ರತರಾಗುವವರೆಗೆ ಮರಳಿ ಮರಳಿ ಕರೆಯೋಣ. ಆ ಕರೆಗೆ ಹೃದಯಾಂತರಗಳಲ್ಲಿರುವ ಭಗ

ವಂತನ ಮಾರುತ್ತರ ದೊರೆಯುವವರೆಗೆ ಕರೆಯೋಣ. ಜೀವನದಲ್ಲಿ ಇದಕ್ಕಿಂತ ಹೆಚ್ಚಿನದೇನಿದೆ ? ಇದಕ್ಕಿಂತ ಸತ್ಕಾರ್ಯವೇನಿದೆ ?

೧೨. ಪುನಃ ಪುನಃ ನಾನು ಜನ್ಮವೆತ್ತಲು ಸಿದ್ಧನಾಗಿರುವೆನು. ಸಾವಿರಾರು ಕಷ್ಟನಷ್ಟಗಳನ್ನು ಅನುಭವಿಸಲು ಸಿದ್ಧನಾಗಿರುವೆನು. ಇದರಿಂದ ಇರುವ ಒಬ್ಬನೇ ದೇವರನ್ನು. ನಾನು ನಂಬುವ ಒಬ್ಬನೇ ದೇವರನ್ನು, ಎಲ್ಲಾ ಜೀವಿಗಳ ಮೊತ್ತ ವನ್ನು, ಎಲ್ಲಕ್ಕಿಂತ ಮಿಗಿಲಾಗಿ ದುರಾತ್ಮನಾದ ನನ್ನ ದೇವರನ್ನು, ದುಃಖಿಯಾದ ನನ್ನ ದೇವರನ್ನು, ಎಲ್ಲಾ ಜಾತಿಯ ಎಲ್ಲಾ ಜನಾಂಗದ ದೀನರಾದ ನನ್ನ ದೇವರನ್ನು ಪೂಜಿಸಬೇಕೆಂಬುದೇ ನನ್ನ ಪ್ರಾರ್ಥನೆಯ ಪರಮಗುರಿ.

೧೩. ದಯೆಯಿಂದ ಪ್ರೇರಿತರಾಗಿ ಮತ್ತೊಬ್ಬರಿಗೆ ಹಿತವನ್ನು ಮಾಡುವು ದೊಳ್ಳೆಯದು. ಆದರೆ ದೇವರೇ ಎಲ್ಲವೂ ಆಗಿರುವನೆಂದು ತಿಳಿದು ಸೇವೆ ಮಾಡು ವುದು ಅತ್ಯುತ್ತಮ.

೧೪. ಮತ್ತೊಬ್ಬನಿಗೆ ದಯೆ ತೋರುವುದು ನಮಗೆ ಸಿಕ್ಕಿರುವ ಒಂದು ದೊಡ್ಡ ಅವಕಾಶ. ನಾವು ಹೀಗೆಯೇ ವಿಕಾಸವಾಗಬೇಕಾದರೆ. ನಮಗೆ ಸಹಾಯ ವಾಗಲಿ ಎಂದು ದೇವರು ಕಷ್ಟವನ್ನು ಅನುಭವಿಸುವನು. ನೀಡುವವನು ಬಾಗಿ ಸ್ವೀಕರಿಸುವವನಿಗೆ ಧನ್ಯವಾದವನ್ನು ಅರ್ಪಿಸಲಿ. ಸ್ವೀಕರಿಸುವವನು ಎದ್ದುನಿಂತು ಅದಕ್ಕೆ ಅವಕಾಶವನ್ನು ಕೊಡಲಿ. ಎಲ್ಲರಲ್ಲಿಯೂ ಭಗವಂತನನ್ನು ಕಂಡು ಸೇವೆ ಯನ್ನು ಅವನಿಗೆ ಅರ್ಪಿಸಿ.

೧೫. ಕರ್ಮ ಮಾಡುವುದೇ ಧರ್ಮವಲ್ಲ. ಆದರೆ ಧಾರ್ಮಿಕವಾಗಿ ಕರ್ಮ ಮಾಡಿದರೆ ಅದು ಮುಕ್ತಿಗೊಯ್ಯುವುದು. ಸತ್ಯವಾಗಿ ನೋಡಿದರೆ, ಮರುಕ ವೆಂಬುದು ಅಜ್ಞಾನ ಜನ್ಯ. ನಾವು ಯಾರಿಗೆ ಮರುಗಬಲ್ಲೆವು ? ನೀವು ದೇವರಿಗೆ ಮರುಗುವಿರಾ? ದೇವರಲ್ಲದೆ ಪ್ರಪಂಚದಲ್ಲಿ ಯಾವುದಾದರೂ ಇರುವುದೆ? ನಿಮ್ಮ ವಿಕಾಸಕ್ಕೆ ಪ್ರಪಂಚವೆಂಬ ಗರಡಿಯ ಮನೆಯನ್ನು ಕೊಟ್ಟಿರುವುದರಿಂದ ದೇವರಿಗೆ ಧನ್ಯವಾದವನ್ನು ಅರ್ಪಿಸಿ. ಆದರೆ ಪ್ರಪಂಚಕ್ಕೆ ಉಪಕಾರ ಮಾಡುವೆನು ಎಂದು ಎಂದಿಗೂ ಭ್ರಾಂತರಾಗಬೇಡಿ.

೧೬. ಆತ್ಮಪ್ರತಿಷ್ಠೆಯಿಲ್ಲ, ಆತ್ಮತ್ಯಾಗ, ಪ್ರಪಂಚದ ಶ್ರೇಷ್ಠತಮ ಧರ್ಮ.

೧೭. ಧರ್ಮ ತೀವ್ರ ಆತ್ಮತ್ಯಾಗದಿಂದ ಬರುವುದು.

೧೮. ಏನನ್ನೂ ನಿಮಗಾಗಿ ಇಚ್ಛಿಸಬೇಡಿ. ಎಲ್ಲವನ್ನೂ ಇತರರಿಗೆ ಮಾಡಿ, ಇದೇ ದೇವರಲ್ಲಿ ಜೀವಿಸುವುದು. ದೇವರಲ್ಲಿ ಚಲಿಸುವುದು, ದೇವರನ್ನು ಹೊಂದು ವುದು.

೧೯. ಸ್ವಾರ್ಥತೆಯೇ ಪ್ರತಿಯೊಬ್ಬನಲ್ಲಿಯೂ ಇರುವ ಪಿಶಾಚಿ. ಸ್ವಾರ್ಥದ ಪ್ರತಿಯೊಂದು ಚೂರು ಕೂಡ ಪೈಶಾಚಿಕವಾದುದು. ಸ್ವಾರ್ಥವನ್ನು ಒಂದು ಕಡೆ ಯಿಂದ ಹೊರದೂಡಿದರೆ ಮತ್ತೊಂದು ಕಡೆಯಿಂದ ದೇವರು ಬರುವನು.

೨೦. ಪೂರ್ಣ ತ್ಯಾಗವೇ ಪರಮಾದರ್ಶ. ಅಲ್ಲಿ ನಾನೆಂಬುದಿಲ್ಲ, ಎಲ್ಲಾ ನೀನು.

೨೧. ನಿಃಸ್ವಾರ್ಥತೆಯೇ ದೇವರು.

೨೨. ನೀನು ನಿಃಸ್ವಾರ್ಥಿಯೇ ? ಅದೇ ಪ್ರಶ್ನೆ. ನೀನು ನಿಃಸ್ವಾರ್ಥಿಯಾದರೆ ಯಾವ ಒಂದು ಧಾರ್ಮಿಕ ಗ್ರಂಥವನ್ನು ಓದದೇ ಇದ್ದರೂ, ಯಾವ ಒಂದು ಚರ್ಚ್ ಅಥವಾ ದೇವಸ್ಥಾನಕ್ಕೆ ಹೋಗದೇ ಇದ್ದರೂ, ನೀನು ಪೂರ್ಣಾತ್ಮನಾಗ ಬಲ್ಲೆ.

೨೩. ದೇವರಿಗೂ ಸೈತಾನನಿಗೂ ಇರುವ ವ್ಯತ್ಯಾಸ ಸ್ವಾರ್ಥತೆ ಮತ್ತು ನಿಃಸ್ವಾರ್ಥತೆ ಅಲ್ಲದೆ ಬೇರಲ್ಲ.

೨೪. ಮಾನವ ಕೋಟಿಯನ್ನು ಸೇವಿಸುವುದೊಂದು ಮಹಾ ಭಾಗ್ಯ. ಇದೇ ದೇವರ ಪೂಜೆ. ಪ್ರತಿಯೊಂದು ಜೀವಿಯಲ್ಲಿಯೂ ದೇವರಿರುವನು. ಮಾನವನ ಆತ್ಮವೇ ಅವನು.

೨೫. ನೀವು ಉಪಕಾರ ಮಾಡುವ ಮನುಷ್ಯರಿಗೆ ಕೃತಜ್ಞರಾಗಿ, ಅವರನ್ನು ದೇವರೆಂದು ಭಾವಿಸಿ. ನಿಮ್ಮ ಸಹೋದರರಿಗೆ ಉಪಕಾರ ಮಾಡುವ ಮೂಲಕ ಭಗವಂತನನ್ನು ಪೂಜಿಸಲು ನಿಮಗೆ ಸಿಕ್ಕಿರುವ ಅವಕಾಶ ಒಂದು ಪುಣ್ಯವಲ್ಲವೆ ?

೨೬. ಪ್ರಪಂಚ ಒಂದು ಅಮೋಘವಾದ ನೀತಿಯ ಗರಡಿಮನೆ. ಧರ್ಮ ದಲ್ಲಿ ಹೆಚ್ಚು ಬಲಾಢ್ಯರಾಗಲು ನಾವಿಲ್ಲಿ ಶಿಕ್ಷಣವನ್ನು ಪಡೆಯಬೇಕು.

೨೭. ಪ್ರತಿಯೊಂದೂ ಪ್ರಥಮ ಫಲವೂ ದೀನರಿಗೆ ಹೋಗಬೇಕು, ಉಳಿ ದುದಕ್ಕೆ ಮಾತ್ರ ನಮಗೆ ಹಕ್ಕಿರುವುದು. ದೀನರು ಭಗವಂತನ ಪ್ರತಿನಿಧಿಗಳು ಕಷ್ಟಪಡುವವರೆಲ್ಲ ಅವನ ಪ್ರತಿನಿಧಿಗಳು.

೩೯ ಶಕ್ತಿ

೧. ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ. ಇದೊಂದು ದೊಡ್ಡ ಸತ್ಯ. ಶಕ್ತಿಯೇ ಸೌಭಾಗ್ಯ ; ಅನಂತಜೀವನ, ಅಮೃತಸ್ವರೂಪ. ದೌರ್ಬಲ್ಯವೇ ಅನವರತ ಚಿಂತೆ, ದುಃಖ. ದೌರ್ಬಲ್ಯವೇ ಮರಣ.

೨. ಬಾಲ್ಯಾರಭ್ಯ ಮನುಷ್ಯರಿಗೆ ಅವರು ಪಾಪಿಗಳು, ಅಬಲರು ಎಂದು ಬೋಧಿಸಿದೆ. ಅವರೆಲ್ಲರೂ ಮಹಾಮಹಿಮರಾದ ಅಮೃತಾತ್ಮನ ಮಕ್ಕಳೆಂಬುದನ್ನು ಬೋಧಿಸಿ, ಯಾರು ಅತ್ಯಂತ ದುರ್ಬಲರಾಗಿರುವರೋ ಅವರಿಗೂ ಕೂಡ ಸ್ಪಷ್ಟವಾದ, ಬಲಯುತವಾದ ಅವರಿಗೆ ನೆರವಾಗುವಂತಹ ಭಾವನೆಗಳು ಬಾಲ್ಯಾರಭ್ಯ ಅವರ ಮೆದುಳಿಗೆ ಸೇರಲಿ. ಈ ಭಾವನೆಯ ಪ್ರಭಾವಕ್ಕೆ ಬೀಳಿ. ನಮ್ಮನ್ನು ದುರ್ಬಲರನ್ನಾಗಿ ಮಾಡುವ, ಅಂಜುವಂತೆ ಮಾಡುವ ಆಲೋಚನೆಗೆ ಬೀಳಬೇಡಿ. ನಿಮ್ಮ ಮನಸ್ಸಿಗೆ "ಶಿವೋಽಹಂ" ಎಂದು ಹೇಳಿ. ಹಗಲು ರಾತ್ರಿ ಅದೊಂದು ಮಹಾಗಾನದಂತೆ ನಿಮ್ಮಲ್ಲಿ ಅನುರಣಿಸುತ್ತಿರಲಿ. ಮರಣಕಾಲದಲ್ಲಿ ಕೂಡ "ನಾನೆ ಅವನು" ಎಂದು ಸಾರಿ. ಅದೇ ಸತ್ಯ. ಪ್ರಪಂಚದ ಅನಂತಶಕ್ತಿಯ ಆಗಾರ ನಿನ್ನಲ್ಲಿದೆ.

೩. ನೀನು "ನಾನು ಬದ್ಧ, ನಾನು ಬಲಹೀನ, ನನಗೆ ಭರವಸೆಯಿಲ್ಲ" ಎಂದು ಹೇಳಿದೊಡನೆಯೆ ಇದೊಂದು ಮಹಾ ಪಾಪ. ನಿನ್ನ ಬಂಧನವನ್ನು ಮತ್ತೂ ಹೆಚ್ಚುಮಾಡಿಕೊಳ್ಳುವೆ. ಹೀಗೆ ಹೇಳಬೇಡಿ, ಹೀಗೆ ಆಲೋಚಿಸಬೇಡಿ.

೪. ಪ್ರಪಂಚದ ದುಃಖಕ್ಕೆಲ್ಲಾ ಕಾರಣ ದೌರ್ಬಲ್ಯ. ದೌರ್ಬಲ್ಯವೊಂದೇ ನಮ್ಮ ಸಂಕಟಕ್ಕೆಲ್ಲಾ ಕಾರಣ. ನಾವು ದುರ್ಬಲರಾಗಿರುವುದರಿಂದ ಸುಳ್ಳು ಹೇಳುತ್ತೇವೆ, ಕದಿಯುತ್ತೇವೆ, ಕೊಲ್ಲುತ್ತೇವೆ ಮತ್ತು ಇನ್ನೂ ಅನೇಕ ಪಾತಕಗಳನ್ನು ಮಾಡುತ್ತೇವೆ. ನಾವು ದುರ್ಬಲರಾಗಿರುವುದರಿಂದ ಸಾಯುತ್ತೇವೆ. ನಮ್ಮನ್ನು ದುರ್ಬಲರನ್ನಾಗಿ ಮಾಡುವುದು ಯಾವುದೂ ಇಲ್ಲದೇ ಇದ್ದರೆ, ಮೃತ್ಯು ಭಯವಿಲ್ಲ, ದುಃಖವಿಲ್ಲ. ಭ್ರಾಂತಿಯಿಂದ ನಾವು ದುಃಖಿಗಳಾಗಿರುವೆವು. ಭ್ರಾಂತಿಯನ್ನು ತ್ಯಜಿಸಿ, ತಕ್ಷಣ ಬಂಧನಗಳೆಲ್ಲಾ ಮಾಯುವಾಗುವುವು.

೫. ಪ್ರತಿಯೊಬ್ಬ ಸ್ತ್ರೀ, ಪುರುಷ, ಬಾಲಕರಿಗೆ ಅವರು ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಸಾಧನೆಯಲ್ಲಿ ನಿರತರಾಗಿರುವಾಗ ಈ ಒಂದು ಪ್ರಶ್ನೆಯನ್ನು

ಅವರಿಗೆ ಹಾಕುತ್ತೇನೆ. ನೀವು ಶಕ್ತಿವಂತರೆ ? ನಿಮಗೆ ಶಕ್ತಿಯ ಅನುಭವ ಇದೆಯೆ ? ಸತ್ಯವೊಂದೇ ಶಕ್ತಿಯನ್ನು ನೀಡಬಲ್ಲದೆಂಬುದು ನನಗೆ ಗೊತ್ತಿದೆ. ಸತ್ಯದೆಡೆಗೆ ನಾವು ಪ್ರಯಾಣ ಮಾಡಿದಾಗ ಮಾತ್ರ ನಾವು ಶಕ್ತಿವಂತರಾಗಬೇಕಾದರೆ. ಬಲಾಢ್ಯರಾಗುವವರೆಗೆ ಯಾರೂ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲಾರರು. ಯಾವ ಸಿದ್ಧಾಂತವಾದರೂ ಆಗಲಿ, ಯಾವುದು ಮನಸ್ಸನ್ನು ದುರ್ಬಲಗೊಳಿಸುವುದೋ, ಮೂಢನನ್ನಾಗಿ ಮಾಡುವುದೋ, ಆಲಸಿಯನ್ನಾಗಿ ಮಾಡುವುದೋ, ಎಲ್ಲಾ ಬಗೆಯ ಅಸಾಧ್ಯ ಅದ್ಭುತಗಳು, ಪವಾಡಗಳು ಇವುಗಳನ್ನು ಆಲೋಚಿಸುವಂತೆ ಮಾಡುವುದೋ, ಇವುಗಳನ್ನೆಲ್ಲಾ ನಾನು ದ್ವೇಷಿಸುತ್ತೇನೆ. ಏಕೆಂದರೆ ಇದರ ಪರಿಣಾಮ ಬಹಳ ಅಪಾಯಕಾರಿ, ಇಂತಹ ಸಿದ್ಧಾಂತಗಳಿಂದ ಯಾವ ಒಳ್ಳೆಯದೂ ಆಗಲಾರದು. ಇವು ಮನುಷ್ಯನನ್ನು ತಾಮಸಿಕನನ್ನಾಗಿ ಮಾಡುವುದು, ದುರ್ಬಲನನ್ನಾಗಿ ಮಾಡುವುದು. ಇವನು ಎಷ್ಟು ದುರ್ಬಲನಾಗುತ್ತಾನೆ ಎಂದರೆ ಕಾಲಕ್ರಮೇಣ ಇವನು ಯಾವ ಸತ್ಯವನ್ನೂ ಸ್ವೀಕರಿಸಿ ಅದರಂತೆ ಬಾಳುವ ಸ್ಥಿತಿಯಲ್ಲಿರುವುದಿಲ್ಲ, ಆದಕಾರಣ ನಮಗಿಂದು ಅತ್ಯಾವಶ್ಯಕವಾಗಿ ಬೇಕಾಗಿರುವುದು ಶಕ್ತಿ.

೬. ನನ್ನ ಜೀವನಕ್ಕೆ ನಾನೇ ಹೊಣೆಗಾರ, ನನ್ನ ಶುಭಕ್ಕೂ ನಾನೇ ಕಾರಣ, ಅಶುಭಕ್ಕೂ ನಾನೇ ಕಾರಣ. ನಾನೇ ಪವಿತ್ರಾತ್ಮ, ಧನ್ಯಾತ್ಮ. ಇದಕ್ಕೆ ವ್ಯತಿರಿಕ್ತವಾಗಿರುವ ಭಾವನೆಗಳನ್ನು ತಿರಸ್ಕರಿಸಬೇಕು.

೭. ನಾವು ಪವಿತ್ರಾತ್ಮರೆಂದು ಹೇಳಿಕೊಳ್ಳುವುದು ಮತ್ತು ಇತರರಿಗೆ ಇದನ್ನು ಬೋಧಿಸುವುದು, ಇಂದೊಂದೇ ನಾವು ಗುರಿಯನ್ನು ಮುಟ್ಟಬೇಕಾದರೆ ಇರುವ ಏಕೈಕ ಮಾರ್ಗ. ನಾವು ಇದನ್ನು ಮನನ ಮಾಡುತ್ತಿದ್ದರೆ ಶಕ್ತಿ ಬರುವುದು, ನಮ್ಮ ಧ್ವನಿ ಶಕ್ತಿಪೂರಿತವಾಗುತ್ತಾ ಬರುವುದು. ಕೊನೆಗೆ ಸತ್ಯ ನಮ್ಮ ಹೃದಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದು, ನಮ್ಮ ನಾಡಿಯಲ್ಲಿ ಸಂಚರಿಸುವುದು, ದೇಹದಲ್ಲೆಲ್ಲಾ ಹಾಸುಹೊಕ್ಕಾಗುವುದು.

೮, ಯಾರು ಇತರರನ್ನು ದೂರುವರೋ,—(ಅಯ್ಯೋ, ಅಂತಹವರ ಸಂಖ್ಯೆ ಕ್ರಮೇಣ ಅಧಿಕವಾಗುತ್ತಿದೆ)—ಅವರು ಸಾಧಾರಾಣವಾಗಿ ಅಯೋಗ್ಯರು. ಅವರಿಗೆ ಯೋಚನಾ ಶಕ್ತಿಯೇ ಇಲ್ಲ. ಅವರು ತಮ್ಮ ತಪ್ಪಿನಿಂದ ಅಧೋಗತಿಗೆ ಬಂದು ಇತರರನ್ನು ದೂರುತ್ತಿರುವರು. ಇದರಿಂದ ಅವರ ಸ್ಥಿತಿ ಉತ್ತಮವಾಗುವುದಿಲ್ಲ. ಇದರಿಂದ ಅವರಿಗೆ ಯಾವ ಒಳ್ಳೆಯದೂ ಆಗುವುದಿಲ್ಲ. ಇತರರನ್ನು ಆರೋಪಮಾಡಿದಂತೆಲ್ಲಾ ಅವರು ಮತ್ತೂ ದುರ್ಬಲರಾಗುತ್ತಾ ಬರುವರು. ಆದ

ಕಾರಣ ನಿಮ್ಮ ತೃಪ್ತಿಗಾಗಿ ಯಾರನ್ನೂ ದೂರಬೇಡಿ. ನಿಮ್ಮ ಕಾಲ ಮೇಲೆ ನೀವು ನಿಂತು, ಜವಾಬ್ದಾರಿಯನ್ನೆಲ್ಲಾ ನೀವೇ ವಹಿಸಿಕೊಳ್ಳಿ. ನಾನು ಯಾವ ದುಃಖ ದಿಂದ ನರಳುತ್ತಿರುವೆನೋ ಅದಕ್ಕೆ ನಾನೇ ಕಾರಣ. ಆದಕಾರಣ ನಾನು ಅದನ್ನು ಬೇಕಾದರೆ ಬದಲಾಯಿಸಬಹುದು ಎಂಬುದನ್ನು ತೋರುವುದು. ಯಾವುದನ್ನು ನಾನು ಕಟ್ಟಿರುವೆನೋ ಅದನ್ನು ನಾನು ಬೇಕಾದರೆ ಧ್ವಂಸ ಮಾಡಬಲ್ಲೆ. ಯಾವು ದನ್ನು ಇತರರು ಮಾಡಿರುವರೋ ಅದರ ಮೇಲೆ ನನಗೆ ಸ್ವಾತಂತ್ರ್ಯವಿಲ್ಲ. ಆದ ಕಾರಣ ಎದ್ದುನಿಲ್ಲಿ, ಧೀರರಾಗಿ, ಶೂರರಾಗಿ.

೯. ಯಾವ ಯಾವ ಶಕ್ತಿ ಸಮಾಧಾನಗಳನ್ನು ನೀನು ಆಶಿಸುತ್ತಿರುವೆಯೋ ಅವೆಲ್ಲಾ ಆಗಲೇ ನಿನ್ನಲ್ಲಿವೆ. ಆದಕಾರಣ ನಿನ್ನ ಭವಿಷ್ಯವನ್ನು ನೀನೇ ರೂಪಿಸಿಕೋ. ಆದದ್ದು ಆಯಿತು. ಅನಂತ ಭವಿಷ್ಯ ನಿನ್ನ ಮುಂದಿದೆ. ನೀವು ಮಾಡಿದ ಪ್ರತಿ ಯೊಂದು ಆಲೋಚನೆ, ಕೆಲಸ, ಆಡಿದ ಮಾತು ಕೂಡ ಮನಸ್ಸಿನಲ್ಲಿ ತನ್ನ ಪರಿ ಣಾಮವನ್ನು ಬಿಡುವುದು ಎಂಬುದನ್ನು ಸದಾ ನೆನಪಿನಲ್ಲಿಡಿ. ಕೆಟ್ಟ ಆಲೋಚನೆ, ಕೆಲಸಗಳ ದುಷ್ಟ ಪರಿಣಾಮ, ನಿಮ್ಮ ಮೇಲೆ ವ್ಯಾಘ್ರದಂತೆ ನೆಗೆಯಲು ಸಿದ್ಧ ವಾಗಿದ್ದರೆ, ನೀವು ಮಾಡಿದ ಒಳ್ಳೆಯ ಆಲೋಚನೆ, ಒಳ್ಳೆಯ ಕೆಲಸಗಳ ಪರಿಣಾಮ, ಲಕ್ಷಾಂತರ ದೇವಗಣಗಳ ಶಕ್ತಿ ಸಮೂಹದೊಂದಿಗೆ ನಿಮ್ಮನ್ನು ಎಂದೆಂದೂ ರಕ್ಷಿಸಲು ಕಾಯುತ್ತಿದೆ.

೧೦. ದೌರ್ಬಲ್ಯಕ್ಕೆ ಮದ್ದು ನಮ್ಮ ದೌರ್ಬಲ್ಯವನ್ನೇ ಕುರಿತು ಮೆಲುಕು ವುದಲ್ಲ, ಆಗಲೇ ನಮ್ಮಲ್ಲಿರುವ ಶಕ್ತಿಯನ್ನು ಕುರಿತು ಚಿಂತಿಸುವುದು. ಜನರನ್ನು ಪಾಪಿಗಳೆಂದು ಕರೆಯುವ ಬದಲು ವೇದಾಂತ ಅದಕ್ಕೆ ವಿರುದ್ಧವಾದ ಮಾರ್ಗ ವನ್ನು ಅನುಸರಿಸುವುದು. "ನೀವು ಪರಿಶುದ್ಧರು, ಪವಿತ್ರಾತ್ಮರು. ನೀವು ಯಾವು ದನ್ನು ಪಾಪ ಎನ್ನುವಿರೋ ಅದು ನಿಮಗೆ ಸೇರಿದ್ದಲ್ಲ." ಪಾಪ ಎಂದರೆ ಆತ್ಮ ಶಕ್ತಿ ತುಂಬಾ ಕೆಳಗೆ ಆವಿರ್ಭಾವವಾಗಿರುವುದು. ಅದನ್ನು ಮೇಲಿನ ಮಟ್ಟದಲ್ಲಿ ವ್ಯಕ್ತವಾಗುವಂತೆ ಮಾಡಬೇಕು. ನಾವೆಲ್ಲಾ ಗಮನಿಸಬೇಕಾದ ವಿಷಯ ಇದು. ನಾವುಗಳೆಲ್ಲಾ ಅದನ್ನು ಮಾಡಬಹುದು. ಎಂದಿಗೂ ಇಲ್ಲ ಎನ್ನಬೇಡಿ ; ಸಾಧ್ಯವಿಲ್ಲ ಎನ್ನಬೇಡಿ. ನಿಮ್ಮ ಸ್ವಭಾವದೊಂದಿಗೆ ಹೋಲಿಸಿ ನೋಡಿದರೆ ಅನಂತಕಾಲ ದೇಶ ಗಳು ಕೂಡ ಕೆಲಸಕ್ಕೆ ಬಾರದವು. ನೀವು ಏನನ್ನು ಬೇಕಾದರೂ ಮಾಡಬಹುದು, ಎಲ್ಲವನ್ನೂ ಮಾಡಬಹುದು. ನೀವು ಸರ್ವಶಕ್ತರು.

೧೧. ಮನುಷ್ಯನನ್ನು ಯಾವುದು ಜಾಗ್ರತನನ್ನಾಗಿ ಮಾಡಿ ಕಾರ್ಯೋನ್ಮುಖ ನನ್ನಾಗಿ ಮಾಡುವುದೊ ಅದೇ ಶಕ್ತಿ. ಶಕ್ತಿಯೇ ಪುಣ್ಯ, ದೌರ್ಬಲ್ಯವೇ ಪಾಪ. ಉಪನಿಷತ್ತಿನಿಂದ ಬಾಂಬಿನಂತೆ ಯಾವುದಾದರೊಂದು ಪದ ಬರುತ್ತಿದ್ದರೆ,

ಅಜ್ಞಾನದ ಮೊತ್ತದ ಮೇಲೆ ಸಿಡಿಮದ್ದಿನಂತೆ ಬೀಳುತ್ತಿದ್ದರೆ, ಅದೇ ನಿರ್ಭಯತೆ. ನಾವು ಬೋಧಿಸಬೇಕಾದ ಏಕಮಾತ್ರ ಧರ್ಮವೇ ನಿರ್ಭಯತೆ. ಲೌಕಿಕ ಪ್ರಪಂಚ ದಲ್ಲಾಗಲಿ, ಪಾರಮಾರ್ಥಿಕ ಪ್ರಪಂಚದಲ್ಲಾಗಲಿ, ಪಾಪ ಮತ್ತು ಅವನತಿಗೆ ಮುಖ್ಯ ಕಾರಣ ಅಂಜಿಕೆ. ಅಂಜಿಕೆಯೇ ದುಃಖವನ್ನು ತರುವುದು, ಮರಣವನ್ನು ತರು ವುದು, ಪಾಪವನ್ನು ಬೆಳೆಸುವುದು. ಅಂಜಿಕೆಗೆ ಕಾರಣ ಯಾವುದು ? ನಮ್ಮ ಸ್ವಭಾವದ ಅಜ್ಞಾನ.

೧೨. ಪ್ರಪಂಚದ ಮೇಲೆ ಬೀಸಿದ ಭ್ರಾಂತಿಯ ಸಮ್ಮೋಹಿನೀ ತೆರೆಯನ್ನು ಅತ್ತ ಸರಿಸಿರಿ. ಮಾನವಕೋಟಿಗೆ ದೌರ್ಬಲ್ಯದ ಆಲೋಚನೆಯನ್ನಾಗಲಿ, ಮಾತನ್ನಾಗಲಿ ಕಳಿಸಬೇಡಿ. ಎಲ್ಲಾ ಪಾಪಗಳನ್ನೂ, ದುಷ್ಕೃತ್ಯಗಳನ್ನೂ ಒಂದು ಪದದಲ್ಲಿ ಅಡಗಿಸಬಹುದು, ಅದೇ ದೌರ್ಬಲ್ಯ. ನಮ್ಮನ್ನು ಪಾಪಕ್ಕೆ ಪ್ರೇರೇಪಿಸುವ ಭಾವನೆಯೆ ದೌರ್ಬಲ್ಯ. ಇತರರನ್ನು ಹಿಂಸಿಸುವಂತೆ ಮಾಡುವುದೇ ದೌರ್ಬಲ್ಯ. ನಮ್ಮ ನೈಜಸ್ವಭಾವವನ್ನು ವ್ಯಕ್ತಗೊಳಿಸದಂತೆ ಮಾಡಿರುವುದೇ ದೌರ್ಬಲ್ಯ. ಜನರು ತಮ್ಮ ನೈಜಸ್ಥಿತಿಯನ್ನು ಅರಿಯಲಿ, ಹಗಲು ರಾತ್ರಿ ತಮ್ಮ ನೈಜಸ್ವಭಾವವನ್ನು ಮನನ ಮಾಡಲಿ, ಶಕ್ತಿಯ ಭಾವನೆಯನ್ನು ಬಾಲ್ಯದಿಂದಲೂ ತಾಯಿಯ ಎದೆ ಹಾಲಿನ ಮೂಲಕವಾಗಿಯೂ ಹೀರಲಿ. ನಾನೆ ಅವನು, ನಾನೇ ಅವನು.

೧೩. ಅನಂತಶಕ್ತಿಯೇ ಧರ್ಮ ಮತ್ತು ದೇವರು. ದೌರ್ಬಲ್ಯ ಮತ್ತು ದಾಸತ್ವದಿಂದ ಪಾರಾಗಿ.

೧೪. ಶಕ್ತಿ, ಶಕ್ತಿ ನಮಗಿಂದು ಬೇಕಾಗಿರುವುದು. ನಮಗೆ ಅದನ್ನು ಯಾರು ಕೊಡುವರು ? ನಮ್ಮನ್ನು ದುರ್ಬಲರನ್ನಾಗಿ ಮಾಡಲು ಸಾವಿರಾರು ಕಟ್ಟು ಕಥೆ ಗಳು ಸಾಕಷ್ಟು ಇವೆ. ಕಳೆದ ಸಾವಿರ ವರುಷಗಳಿಂದ ನಮ್ಮ ಜನಾಂಗವನ್ನು ಅಧೋಗತಿಗೊಯ್ಯುವುದೆಲ್ಲ ಆಗಲೇ ನಮ್ಮಲ್ಲಿದೆ. ಆ ಕಾಲದಲ್ಲಿ ನಮ್ಮ ರಾಷ್ಟ್ರ ಜೀವನದಲ್ಲಿ ಈ ಒಂದು ಭಾವನೆ ಮಾತ್ರ ಇದ್ದಂತೆ ಕಾಣುವುದು. ಅದೇ ನಮ್ಮನ್ನು ಬರಬರುತ್ತಾ ಹೀಗೆ ದುರ್ಬಲರನ್ನಾಗಿ ಮಾಡಿರುವುದು. ಯಾರು ನಮ್ಮನ್ನು ತುಳಿ ಯಲು ಕಾಲಿಡುವರೋ ಅದರ ಕೆಳಗೆ ನಾವು ನರಳುತ್ತಿರುವ ಎರೆ ಹುಳುಗಳಂತೆ ಆಗಿರುವೆವು. ಆದಕಾರಣ ನಮ್ಮ ಸಹೋದರರೆ, ರಕ್ತಬಂಧುಗಳಲ್ಲೊಬ್ಬನಂತೆ, ನಿಮ್ಮೊಡನೆ ಬಾಳಿ ಅಳಿವ ಒಬ್ಬನಂತೆ, ನಿಮಗೆ ನಾನು ಹೇಳಬೇಕಾಗಿದೆ ; ನಮಗಿಂದು ಶಕ್ತಿ ಬೇಕು, ಶಕ್ತಿ ಬೇಕು ಎಂದು ಹೇಳಬೇಕಾಗಿದೆ.

೧೫. ಜೀವನದಲ್ಲಿ ನಮ್ಮ ಶ್ರೇಷ್ಠ ಮಾರ್ಗದರ್ಶಕವೆ ಶಕ್ತಿ. ಇತರ ಕಡೆ ಗಳಂತೆ ಧರ್ಮಕ್ಷೇತ್ರದಲ್ಲಿಯೂ ನಮ್ಮನ್ನು ದುರ್ಬಲರನ್ನಾಗಿ ಮಾಡುವುದನ್ನೆಲ್ಲಾ ತ್ಯಜಿಸಿ. ಅದರೊಂದಿಗೆ ಯಾವ ವ್ಯವಹಾರವನ್ನೂ ಇಟ್ಟುಕೊಳ್ಳಬೇಡಿ.

೪೦ ಉಪನಿಷತ್

೧. ವೇದವನ್ನು ಮುಖ್ಯವಾಗಿ ಎರಡು ಭಾಗ ಮಾಡಿರುವರು. ಅದೇ ಕರ್ಮಕಾಂಡ ಮತ್ತು ಜ್ಞಾನಕಾಂಡ. ಬ್ರಾಹ್ಮಣದಲ್ಲಿ ಬರುವ ಯಾಗ, ಯಜ್ಞಗಳು ಮತ್ತು ಪ್ರಖ್ಯಾತವಾದ ಮಂತ್ರಗಳು ಕರ್ಮಕಾಂಡದಲ್ಲಿವೆ. ಕರ್ಮಕಾಂಡವನ್ನು ಬಿಟ್ಟು ಆಧ್ಯಾತ್ಮಿಕ ವಿಷಯಗಳನ್ನು ಚರ್ಚಿಸುವ ಭಾಗವೇ ಉಪನಿಷತ್. ಉಪನಿಷತ್ತುಗಳು ಜ್ಞಾನಕಾಂಡಕ್ಕೆ ಸೇರಿವೆ. ವೇದದಲ್ಲಿ ಬರುವ ಉಪನಿಷತ್ತುಗಳನ್ನೇ ಬೇರೆ ಭಾಗವಾಗಿ ರಚಿಸಿರುವರು ಎಂದಲ್ಲ. ಕೆಲವು ಉಪನಿಷತ್ತುಗಳು ಬ್ರಾಹ್ಮಣದಲ್ಲಿ ಸೇರಿಹೋಗಿವೆ. ಅದರಲ್ಲಿ ಒಂದು ಉಪನಿಷತ್ತಾದರೂ ಸಂಹಿತೆಯ ಭಾಗದಲ್ಲಿ ಬರುವುದು.

೨. ಎಲ್ಲಾ ಉಪನಿಷತ್ತಿನ ಗುರಿ ಇದು : "ಹೇಗೆ ನಾವು ಒಂದು ಹಿಡಿ ಮಣ್ಣಿನ ಸತ್ಯವನ್ನು ಅರಿತರೆ ಪ್ರಪಂಚದ ಮಣ್ಣಿನ ಸತ್ಯವನ್ನೆಲ್ಲಾ ಅರಿಯಬಹುದೋ ಹಾಗೆಯೇ ಯಾವುದನ್ನು ಅರಿತರೆ ಪ್ರಪಂಚವನ್ನೆಲ್ಲಾ ಅರಿಯಬಹುದು ?"

೩. ಉಪನಿಷತ್ತು ಶಕ್ತಿಯ ಅದ್ಭುತ ಗಣಿ. ಇಡೀ ಪ್ರಪಂಚವನ್ನೇ ಉಜ್ಜೀವನಗೊಳಿಸಬಲ್ಲ ಶಕ್ತಿ ಅದರಲ್ಲಿದೆ. ಉಪನಿಷತ್ತಿನಿಂದ ಇಡೀ ಪ್ರಪಂಚವನ್ನು ಜಾಗ್ರತಗೊಳಿಸಬಹುದು ; ಅದನ್ನು ಬಲಾಢ್ಯವಾಗಿ ಮಾಡಬಹುದು, ಶಕ್ತಿಯನ್ನು ತುಂಬಬಹುದು. ಅದು ತೂರ್ಯವಾಣಿಯಿಂದ ಇಡೀ ವಿಶ್ವದ, ಎಲ್ಲಾ ಜನಾಂಗದ, ಕೋಮಿನ, ಧರ್ಮದ, ದೀನರು ದುಃಖಿಗಳು ದಲಿತರಿಗೆ ತಮ್ಮ ಕಾಲ ಮೇಲೆ ನಿಂತು ಸ್ವತಂತ್ರರಾಗಿ ಎಂದು ಬೋಧಿಸುವುದು. ಸ್ವಾತಂತ್ರ್ಯ—ಶಾರೀರಿಕ ಸ್ವಾತಂತ್ರ್ಯ, ಮಾನಸಿಕ ಸ್ವಾತಂತ್ರ್ಯ, ಆಧ್ಯಾತ್ಮಿಕ ಸ್ವಾತಂತ್ರ್ಯ—ಇದೇ ಉಪನಿಷತ್ತಿನ ಪಲ್ಲವಿ.

೪. ಆಧುನಿಕ ಭಾಷೆಯಲ್ಲಿ ಉಪನಿಷತ್ತಿನ ಸಂದೇಶವೇನೆಂದರೆ ಪ್ರಪಂಚದ ವಸ್ತುಗಳಲ್ಲಿ ಒಂದು ಅಂತಿಮ ಐಕ್ಯತೆಯನ್ನು ಕಂಡುಹಿಡಿಯುವುದು. ವೈವಿಧ್ಯತೆಯಲ್ಲಿ ಐಕ್ಯತೆಯನ್ನು ಕಂಡುಹಿಡಿಯುವುದೇ ಜ್ಞಾನ. ಮತ್ತೇನೂ ಅಲ್ಲ. ಪ್ರತಿಯೊಂದು ವಿಜ್ಞಾನವೂ ನಿಂತಿರುವುದು ಐಕ್ಯತೆಯ ಆಧಾರದ ಮೇಲೆ. ವೈವಿಧ್ಯತೆಯಲ್ಲಿ ಐಕ್ಯತೆಯನ್ನು ಕಂಡುಹಿಡಿಯುವುದೇ ಎಲ್ಲಾ ಜ್ಞಾನಗಳ ಗುರಿ.

ನಾವು ವಿಜ್ಞಾನವೆನ್ನುವುದು ಅಂಶಜ್ಞಾನ. ಇದರ ಹಿಂದಿರುವ ಐಕ್ಯತೆಯನ್ನು ಕಂಡುಹಿಡಿಯುವುದು ವಿಜ್ಞಾನದ ಗುರಿ. ಆದರೆ ಇಡೀ ವಿಶ್ವದ ಹಿಂದೆ ಇರುವ ಐಕ್ಯತೆಯನ್ನು ಕಂಡುಹಿಡಿಯಬೇಕಾದರೆ ಅದೊಂದು ಅದ್ಭುತ ಸಾಹಸದ ಕೆಲಸವಾಗುವುದು. ಪ್ರಪಂಚದಲ್ಲಿ ನಾಮರೂಪ, ಜಡ ಚೇತನದ ವಿಭಾಗಗಳು ಅಸಂಖ್ಯಾತವಾಗಿವೆ. ಒಂದು ರೂಪಕ್ಕೂ ಮತ್ತೊಂದು ರೂಪಕ್ಕೂ ವ್ಯತ್ಯಾಸವಿದೆ. ಹಲವು ಕೋಶಗಳು ಮತ್ತು ಲೋಕಗಳಲ್ಲಿ ಒಂದು ಸಾಮರಸ್ಯವನ್ನು ತರುವುದು, ಅಸಂಖ್ಯಾತ ವೈವಿಧ್ಯತೆಯ ಹಿಂದೆ ಒಂದು ಐಕ್ಯತೆಯನ್ನು ಕಂಡುಹಿಡಿಯುವುದು, ಇದೇ ಉಪನಿಷತ್ತಿನ ಗುರಿ.

೫. ಉಪನಿಷತ್ತಿನಲ್ಲಿ ಒಂದು ಅಚ್ಚ ಹೊಸಮಾರ್ಗವನ್ನೇ ನೋಡುತ್ತೇವೆ. ಮರಣಾನಂತರ ಜೀವಿಗಳು ಎಲ್ಲಿ ಪಿತೃಗಳೊಂದಿಗೆ ಇರುವರೋ ಆ ಲೋಕ ಶಾಶ್ವತವಲ್ಲ ಎನ್ನುವರು. ಏಕೆಂದರೆ ನಾಮರೂಪದಿಂದ ಕೂಡಿರುವುದೆಲ್ಲ ನಾಶವಾಗಲೇಬೇಕು. ಅವು ಕೋಟ್ಯಂತರ ವರುಷಗಳು ಇರಬಹುದು. ಆದರೆ ಒಂದಲ್ಲ ಒಂದು ದಿನ ನಾಶವಾಗಲೇಬೇಕು. ಇವುಗಳೊಂದಿಗೆ ಮತ್ತೊಂದು ಭಾವನೆಯೂ ಬಂದಿತು. ಅದೇ ಈ ಜೀವಿಗಳು ಸ್ವರ್ಗದಿಂದ ಮರಳಿ ಹಿಂತಿರುಗಬೇಕು ಎಂಬುದು. ಸ್ವರ್ಗವೆಂದರೆ ತಮ್ಮ ಪುಣ್ಯ ಕರ್ಮದ ಫಲವನ್ನು ಭೋಗಿಸುವ ಲೋಕ. ಈ ಪುಣ್ಯ ಕ್ಷಯವಾದ ಮೇಲೆ ಅವರು ಪುನಃ ಈ ಲೋಕಕ್ಕೆ ಬರಬೇಕಾಗಿದೆ.

೬. ಉಪನಿಷತ್ತಿನ ಒಂದೆರಡು ಭಾವನೆಯನ್ನು ನಿಮ್ಮ ಗಮನಕ್ಕೆ ತರಬೇಕೆಂದಿರುವೆನು. ಮೊದಲನೆಯದಾಗಿ ಅವು ಪ್ರಪಂಚದ ಶ್ರೇಷ್ಠತಮ ಕಾವ್ಯಗಳು. ವೇದಗಳಲ್ಲಿ ಸಂಹಿತೆಯ ಭಾಗವನ್ನು ಓದುತ್ತಿದ್ದರೆ ಮಧ್ಯೆ ಮಧ್ಯೆ ಅತಿ ಸುಂದರವಾಗಿರುವ ಭಾಗ ದೊರಕುವುದು. ಅದರಲ್ಲಿ ಪ್ರಳಯದ ಅಂಧಕಾರವನ್ನು ವಿವರಿಸುವಾಗ, "ತಮ ಆಸೀತ್ ತಮಸಾ ಗೂಢಮಗ್ರೇ"—ಆದಿಯಲ್ಲಿ ತಮಸ್ಸು ತಮಸ್ಸಿನಲ್ಲಿ ಲೀನವಾಗಿತ್ತು ಎಂದಿದೆ. ಇದನ್ನು ಓದುತ್ತಿರುವಾಗ ಕವಿತ್ವದ ಅಪೂರ್ವ ಭವ್ಯತೆ ವ್ಯಕ್ತವಾಗುವುದು. ಇದನ್ನು ಗಮನಿಸಿ. ಭರತ ಖಂಡದಲ್ಲಿ ಮತ್ತು ಹೊರಗೆ ಭವ್ಯ ಭಾವನೆಯನ್ನು ಚಿತ್ರಿಸಲು ಪ್ರಯತ್ನಪಟ್ಟಿರುವರು. ಆದರೆ ಹೊರಗಿನವರು ಇದನ್ನು ವಿವರಿಸಲು ಕೇವಲ ಜಡಪ್ರಕೃತಿಯ ಅನಂತ ಭಾವವರ್ಣನೆಗೆ ಪ್ರಯತ್ನಪಟ್ಟಿರುವರು—ಕೇವಲ ಅನಂತ ಬಹಿಃಪ್ರಕೃತಿ, ಅನಂತಜಡ, ಅನಂತ ದೇಶದ ವರ್ಣನೆ ಮೂಲಕ ಪ್ರಯತ್ನ ಪಟ್ಟಿರುವರು. ಮಿಲ್ಟನ್, ಡಾಂಟೆ ಅಥವಾ ಈಚಿನ ಮತ್ತು ಪುರಾತನ ಪ್ರಸಿದ್ಧ

ಕವಿಗಳು ಅನಂತವನ್ನು ವಿವರಿಸಬೇಕಾದರೆ ಹೊರಗೆ ಹೋಗಿ ಬಾಹ್ಯ ಪ್ರಕೃತಿಯ ಮೂಲಕ ಅನಂತತೆಯ ಭಾವನೆಯನ್ನು ಕೊಡಲು ಯತ್ನಿಸುವರು. ಭರತಖಂಡ ದಲ್ಲಿಯೂ ಆ ಪ್ರಯತ್ನ ಮಾಡಿದರು. ಸಂಹಿತೆಯಲ್ಲಿ ಅನಂತಾಕಾಶವನ್ನು ಅತಿ ಸುಂದರವಾಗಿ ಚಿತ್ರಿಸುವರು. ಅದೇ "ತಮ ಆಸೀತ್ ತಮಸಾ ಗೂಢಮಗ್ರೇ." ಇಂತಹ ಒಂದು ವರ್ಣನೆ ಪ್ರಪಂಚದ ಸಾಹಿತ್ಯದಲ್ಲಿ ಮತ್ತೊಂದು ಸಿಕ್ಕಲಾರದು.

೭. ಪ್ರಾಚೀನ ಗ್ರೀಸ್ ಮತ್ತು ಆಧುನಿಕ ಯೂರೋಪಿನವರು ಜೀವನ ಮತ್ತು ಜಗತ್ ಕಾರಣಕ್ಕೆ ಸಂಬಂಧಪಟ್ಟ ಪರಮಾತ್ಮ ತತ್ವವನ್ನು ಬಾಹ್ಯದಲ್ಲಿ ಹುಡುಕುವರು. ಇದರಂತೆಯೇ ನಮ್ಮ ಪೂರ್ವಿಕರೂ ಪ್ರಯತ್ನಪಟ್ಟರು. ಐರೋಪ್ಯರು ನಿರಾಶರಾದರು. ಅವರು ಅಲ್ಲಿಂದ ಮುಂದೆ ಹೋಗಲಿಲ್ಲ. ಬಾಹ್ಯ ಪ್ರಕೃತಿಯಲ್ಲಿ ಜೀವನ ಮರಣ ರಹಸ್ಯ ಅವರಿಗೆ ಗೊತ್ತಾಗಲಿಲ್ಲ. ಅವರು ಅಲ್ಲೇ ದಾರಿತಪ್ಪಿ ನಿಂತರು. ನಮ್ಮ ಪೂರ್ವಿಕರಿಗೂ ಅಸಾಧ್ಯವೆಂದು ಗೊತ್ತಾಯಿತು. ಇಂದ್ರಿಯಗಳಿಗೆ ಈ ವಿಷಯವನ್ನು ತಿಳಿದುಕೊಳ್ಳುವುದು ಅಸಾಧ್ಯವೆಂದು ಧೈರ್ಯ ವಾಗಿ ಒಪ್ಪಿಕೊಂಡರು. ಉತ್ತರ ಎಲ್ಲಿಯೂ ಉಪನಿಷತ್ತು ವಿವರಿಸುವುದಕ್ಕಿಂತ ಸುಂದರವಾಗಿಲ್ಲ. "ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹಾ" ಎಲ್ಲಿ ಮಾತು ಮನಸ್ಸು ಹಿಂತಿರುಗುವುದೋ ! "ನ ತತ್ರ ಚಕ್ಷುರ್ಗಚ್ಛತಿ ನ ವಾಕ್ ಗಚ್ಛತಿ" ಅಲ್ಲಿಗೆ ಕಣ್ಣು ಹೋಗಲಾರದು, ಮಾತು ಹೋಗಲಾರದು. ಇಂದ್ರಿಯ ಗಳಿಗೆ ಇದು ಅಸಾಧ್ಯ ಎಂದು ವಿವರಿಸುವ ವಾಕ್ಯಗಳಿವೆ. ಆದರೆ ಅವರು ಅಲ್ಲೇ ನಿಲ್ಲಲಿಲ್ಲ, ಮನುಷ್ಯನ ಅಂತರಂಗದ ಕಡೆ ತಿರುಗಿದರು. ತಮ್ಮ ಅಂತರಾಳದಿಂದ ಅದಕ್ಕೆ ಉತ್ತರವನ್ನು ಕಂಡುಹಿಡಿಯಲು ಯತ್ನಿಸಿದರು. ಅಂತರ್ಮುಖಿಗಳಾದರು. ಬಾಹ್ಯ ಪ್ರಕೃತಿಯಲ್ಲಿ ಏನೂ ದೊರಕಲಿಲ್ಲ. ದೊರಕುವ ಸಂಭವವೂ ಇಲ್ಲ. ಆದ ಕಾರಣವೇ ಪ್ರಯೋಜನವಿಲ್ಲ ಎಂದು ಅದನ್ನು ತ್ಯಜಿಸಿದರು. ಜಡ ಅಚೇತನ ಪ್ರಕೃತಿ ನಮಗೆ ಸತ್ಯವನ್ನು ಕೊಡಲಾರದು. ಜ್ಯೋತಿರ್ಮಯ ಜೀವಾತ್ಮನ ಕಡೆ ತಿರುಗಿದರು. ಅಲ್ಲಿ ಉತ್ತರ ಸಿಕ್ಕಿತು.

೮. "ತಮೇವೈಕಂ ಜಾನಥ ಆತ್ಮಾನಂ ಅನ್ಯಾ ವಾಚೋ ವಿಮುಂಚಥ", ಆತ್ಮನನ್ನು ಮಾತ್ರ ಅರಿಯಿರಿ, ಉಳಿದುದನ್ನೆಲ್ಲಾ ತ್ಯಜಿಸಿ.

ಆತ್ಮನಲ್ಲಿ ಎಲ್ಲಾ ಸಮಸ್ಯೆಗಳಿಗೂ ಸಮಾಧಾನ ದೊರಕಿತು. ಪರಮಾತ್ಮ, ದೇವರು, ವಿಶ್ವೇಶ್ವರ ಎಲ್ಲಾ ಅಲ್ಲಿ ದೊರೆತರು. ಜೀವಾತ್ಮನಿಗೂ ಪರಮಾತ್ಮ ನಿಗೂ ಇರುವ ಸಂಬಂಧ, ಮಾನವನ ಕರ್ತವ್ಯ, ಅವನಿಗೂ ಇತರ ಮಾನವರಿಗೂ ಇರುವ ಸಂಬಂಧ ಎಲ್ಲವನ್ನೂ ಅರಿತನು. ಆತ್ಮ ತತ್ತ್ವದ ವರ್ಣನೆಯಲ್ಲಿ

ಪ್ರಪಂಚದ ಅತಿ ಶ್ರೇಷ್ಠ ಕಾವ್ಯವಿದೆ. ಜಡಭಾಷೆಯ ಮೂಲಕ ಆತ್ಮನನ್ನು ವಿವರಿಸುವ ಪ್ರಯತ್ನ ಇನ್ನು ಇಲ್ಲ. ಆದಕ್ಕಾಗಿ ಅಸ್ತಿಸೂಚಕ ಭಾಷೆಯನ್ನೇ ತೊರೆದಿರುವರು. ಅನಂತತೆಯ ಭಾವವನ್ನು ಮನಸ್ಸಿಗೆ ತರುವುದಕ್ಕೆ ಬಾಹ್ಯವರ್ಣನೆಯ ಸಂಬಂಧವೇ ಇಲ್ಲ. ಬಾಹ್ಯ ಜಡ ಅಚೇತನ, ಆಕಾಶದಲ್ಲಿರುವ ಇಂದ್ರಿಯ ಗ್ರಾಹ್ಯ ಅನಂತ ಇನ್ನು ಮೇಲೆ ಇಲ್ಲ, ಅದರ ಬದಲು ಇಂತಹ ಸುಂದರವಾದ ಭಾವನೆಗಳು ಬರುವುವು:

"ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ
ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ ।
ತಮೇವ ಭಾಂತಮನು ಭಾತಿ ಸರ್ವಂ
ತಸ್ಯ ಭಾಸಾ ಸರ್ವಮಿದಂ ವಿಭಾತಿ" ॥

"ಅಲ್ಲಿ ಸೂರ್ಯ ಬೆಳಗಲಾರ, ಚಂದ್ರ ಬೆಳಗಲಾರ, ತಾರೆಗಳು ಬೆಳಗಲಾರವು, ಇನ್ನು ಅಗ್ನಿಯ ಪಾಡೇನು ?" ಪೃಥ್ವಿಯಲ್ಲಿ ಯಾವ ಕಾವ್ಯ ಇದಕ್ಕಿಂತ ಸುಂದರವಾಗಿರಬಲ್ಲದು? ಇಂತಹ ಕಾವ್ಯ ಪ್ರಪಂಚದಲ್ಲಿ ಮತ್ತೆಲ್ಲಿಯೂ ದೊರಕದು.

೯. ಈಗ ನಾವು ಉಪನಿಷತ್ತಿನ ಬೋಧನೆಗೆ ಬರುತ್ತೇವೆ. ಹಲವು ಬಗೆಯ ಭಾವನೆಯ ಶ್ಲೋಕಗಳಿವೆ. ಕೆಲವು ಕೇವಲ ದ್ವೈತ ದೃಷ್ಟಿಗೆ ಸೇರಿದವು. ಮತ್ತೆ ಅದ್ವೈತಕ್ಕೆ ಸೇರಿದವು. ಎಲ್ಲಾ ವಿಭಿನ್ನ ಸಂಪ್ರದಾಯದವರೂ ಒಪ್ಪಿಕೊಳ್ಳುವಂತಹ ಕೆಲವು ಸಿದ್ಧಾಂತಗಳಿವೆ. ಮೊದಲನೆಯದಾಗಿಯೇ ಸಂಸಾರದ ಅಥವಾ ಪುನರ್ಜನ್ಮದ ಸಿದ್ಧಾಂತವಿದೆ. ಎರಡನೆಯದಾಗಿ ಇವರ ಮಾನಸಿಕಶಾಸ್ತ್ರವೆಲ್ಲಾ ಒಂದೇ. ಪ್ರಥಮವಾಗಿ ಒಂದು ದೇಹವಿದೆ, ಅದರ ಹಿಂದೆ ಸೂಕ್ಷ್ಮ ಶರೀರವಿದೆ, ಅದರ ಹಿಂದೆ ಜೀವವಿದೆ. ಇದೇ ಪೌರಾತ್ಯ ಮತ್ತು ಪಾಶ್ಚಾತ್ಯ ಮಾನಸಿಕಶಾಸ್ತ್ರಕ್ಕೆ ಇರುವ ವ್ಯತ್ಯಾಸ. ಪಾಶ್ಚಾತ್ಯ ಮಾನಸಿಕ ಶಾಸ್ತ್ರದಲ್ಲಿ ಮನಸ್ಸೇ ಜೀವ ; ಆದರೆ ಇಲ್ಲಿ ಹಾಗಲ್ಲ, ಮನಸ್ಸು ಎಂದರೆ ಅಂತಃಕರಣ. ಇದು ಜೀವನ ಕೈಯಲ್ಲಿ ಒಂದು ಯಂತ್ರದಂತೆ. ಇದರ ಮೂಲಕ ಜೀವನು ದೇಹ ಮತ್ತು ಬಾಹ್ಯ ಪ್ರಕೃತಿಯಲ್ಲಿ ಕೆಲಸ ಮಾಡುವನು. ಇದನ್ನು ವಿಭಿನ್ನ ಪಂಗಡದವರೆಲ್ಲ ಒಪ್ಪಿಕೊಳ್ಳುವರು. ಅನಂತರ ಯಾವುದನ್ನು ಜೀವ ಅಥವಾ ಜೀವಾತ್ಮ ಎನ್ನುವರೋ ಅದು ಸನಾತನವಾದುದು, ಆದಿ ಅಂತ್ಯ ರಹಿತವಾದುದು, ಮುಕ್ತಿಯನ್ನು ಪಡೆಯುವ ತನಕ ಹಲವು ಜನ್ಮಗಳನ್ನು ಧರಿಸುತ್ತದೆ ಎಂದು ಎಲ್ಲರೂ ನಂಬುವರು. ಅನಂತರ ಒಂದು ಮುಖ್ಯ ಸಿದ್ಧಾಂತ ಬರುವುದು, ಅದನ್ನು ಎಲ್ಲರೂ ಒಪ್ಪುವರು. ಇದೇ

ಭಾರತೀಯರಿಗೂ ಅನ್ಯರಿಗೂ ಇರುವ ಬಹಳ ಮುಖ್ಯವಾದ ವ್ಯತ್ಯಾಸ, ಆ ಸಿದ್ಧಾಂತವೇ ಆಗಲೇ ಆತ್ಮನಲ್ಲಿ ಎಲ್ಲಾ ಅಂತರ್ಗತವಾಗಿದೆ ಎಂಬುದು. ನಿಜವಾಗಿ Inspiration (ಹೊರಗಿನಿಂದ ಬರುವ ಸ್ಫೂರ್ತಿ) ಎಂಬುದಿಲ್ಲ, ಅದನ್ನು ಸರಿಯಾದ ಭಾಷೆಯಲ್ಲಿಡಬೇಕಾದರೆ Expiration (ಅಂತರಾಳದಿಂದ ಹೊರ ಹೊಮ್ಮುವುದು). ಎಲ್ಲವೂ ಆಗಲೇ ಆತ್ಮನಲ್ಲಿರುವುದು.

೧೦. ವೇದಗಳು ನಮ್ಮನ್ನು ಕ್ಷಮಿಸಲಾರದ ಭಯಾನಕ ನಿಯಮಾವಳಿಯನ್ನು ಸಾರುವುದಿಲ್ಲ. ಕಾರ್ಯಕಾರಣ ಸಂಬಂಧದ ಒಂದು ನಿತ್ಯ ಸೆರೆಮನೆಯನ್ನೂ ಸಾರುವುದಿಲ್ಲ. ಈ ನಿಯಮಾವಳಿಗಳನ್ನೆಲ್ಲಾ ಮೆಟ್ಟಿ ನಿಂತಿರುವ, ಜಡ ಮತ್ತು ಚೇತನದ ಅಂತರಾಳದಲ್ಲೆಲ್ಲ ಹಾಸುಹೊಕ್ಕಾಗಿರುವ ಒಬ್ಬನನ್ನು ಬೋಧಿಸುವುದು. "ಅವನಾಜ್ಞೆಯಂತೆ ಗಾಳಿ ಬೀಸುವುದು. ಬೆಂಕಿ ಉರಿಯುವುದು, ಮೋಡಗಳು ಮಳೆಗರೆಯುವುವು, ಮೃತ್ಯು ಪ್ರಪಂಚದಲ್ಲಿ ಸಂಚರಿಸುವನು."

೪೧ ವೇದಾಂತ

೧. ಜಡವಾದಿಗಳು ಸ್ವಾತಂತ್ರ್ಯ ಎಂಬ ಭಾವನೆ ಒಂದು ಭ್ರಾಂತಿ ಎನ್ನುವರು. ಭಾವಸತ್ತಾವಾದಿಗಳು ಬಂಧನವನ್ನು ಸಾರುವ ಭಾವನೆಯೇ ಭ್ರಾಂತಿ ಎನ್ನುವರು. ವೇದಾಂತ, ನೀವು ಏಕಕಾಲದಲ್ಲೇ ಸ್ವತಂತ್ರರು ಮತ್ತು ಅಸ್ವತಂತ್ರರು ಎನ್ನುವುದು. ಭೌತಿಕ ದೃಷ್ಟಿಯಿಂದ ನಾವು ಎಂದಿಗೂ ಮುಕ್ತರಲ್ಲ, ಆದರೆ ಆಧ್ಯಾತ್ಮಿಕ ದೃಷ್ಟಿಯಿಂದ ನಿತ್ಯಮುಕ್ತರು ಎಂದು ಸಾರುವುದು.

೨. ಈ ತತ್ತ್ವ ಬಹಳ ಪುರಾತನವಾದುದು. ಇದೆಲ್ಲ ವೇದಗಳೆಂದು ಕರೆಯುವ ಹಿಂದಿನ ಆರ್ಯರ ಸಾಹಿತ್ಯದಿಂದ ಬಂದದ್ದು. ಹಲವು ಶತಮಾನಗಳಿಂದ ಸಂಗ್ರಹಿಸಿದ ಸಾಹಿತ್ಯರಾಶಿಯಿಂದ ಆಯ್ದ ಶ್ರೇಷ್ಠತಮ ಭಾವನೆಗಳು. ಅವರ ಅನುಭವ ಮತ್ತು ಊಹೆಯ ಶ್ರೇಷ್ಠ ಸಿದ್ಧಾಂತಗಳು ಇವು. ವೇದಾಂತ ತತ್ತ್ವಕ್ಕೆ ಕೆಲವು ವೈಶಿಷ್ಟ್ಯಗಳಿವೆ. ಇದು ಯಾವ ವ್ಯಕ್ತಿಯ ಆಧಾರದ ಮೇಲೂ ನಿಂತಿಲ್ಲ. ಯಾವ ಮಹಾತ್ಮನೂ ಪ್ರವಾದಿಯೂ ಇದಕ್ಕೆ ಮೂಲ ಪುರುಷರಲ್ಲ. ಯಾವ ಒಂದು ವ್ಯಕ್ತಿಯ ಕೇಂದ್ರದ ಸುತ್ತಲೂ ಇದು ಬೆಳೆಯುವುದಿಲ್ಲ. ಆದರೂ ಯಾವುದಾದರೂ ವ್ಯಕ್ತಿಯ ಆಧಾರದ ಮೇಲೆ ನಿಂತ ತತ್ತ್ವಕ್ಕೆ ವಿರೋಧವಾಗಿಲ್ಲ.

೩. ಈಗಿನ ಕಾಲದಲ್ಲಿ ಯಾವುದನ್ನು ವೇದಾಂತ ತತ್ತ್ವವೆಂದು ಕರೆಯುತ್ತಾರೋ ಅದು ಇಂಡಿಯಾ ದೇಶದಲ್ಲಿ ಈಗ ಪ್ರಚಲಿತವಾದ ಎಲಾ ಸಿದ್ಧಾಂತಗಳನ್ನೂ ಒಳಗೊಳ್ಳುವುದು. ಹಲವು ವಿವರಣೆಗಳಿವೆ. ಇವು ನನ್ನ ದೃಷ್ಟಿಗೆ ಪ್ರಗತಿಗಾಮಿಗಳಾಗಿವೆ. ದ್ವೈತದಲ್ಲಿ ಪ್ರಾರಂಭವಾಗಿ ಅದ್ವೈತದಲ್ಲಿ ಕೊನೆಗಾಣುವುದು.

೪. ವೇದಾಂತ ಮತ್ತು ಆಧುನಿಕ ವಿಜ್ಞಾನ ಇವೆರಡೂ ಮೂಲ ಕಾರಣ ತಾನೆ ವಿಕಾಸವಾಗುತ್ತಿದೆ ಎಂದು ಊಹಿಸುವುವು. ಆದರಲ್ಲೇ ಎಲ್ಲಾ ಕಾರಣಗಳೂ ಇವೆ. ಉದಾಹರಣೆಗೆ ಮಡಕೆಯನ್ನು ಮಾಡುವ ಕುಂಬಾರನನ್ನು ತೆಗೆದುಕೊಳ್ಳಿ. ಕುಂಬಾರ ನಿಮಿತ್ತ, ಮಣ್ಣು ಉಪಾದಾನ ಕಾರಣ, ಚಕ್ರ ಉಪಕರಣ. ಆತ್ಮನೇ ಇವು ಮೂರೂ ಆಗಿರುವನು. ಆತ್ಮನೇ ಕಾರ್ಯ ಮತ್ತು ಕಾರಣ. ವೇದಾಂತಿಗಳು ಈ ಪ್ರಪಂಚ ಸತ್ಯವಲ್ಲ, ಇದೊಂದು ತೋರಿಕೆ ಎನ್ನುವರು. ಮಾಯೆಯ ಮೂಲಕ ಕಾಣುವುದೇ ವಿಶ್ವವೆಂಬ ದೇವರು. ವಿಶ್ವ

ದೇವೈಕ್ಯವಾದಿಗಳು :(Pantheists) ದೇವರೇ ಈ ವಿಶ್ವವಾಗಿರುವನು ಎನ್ನುವರು. ಅದ್ವೈತಿಗಳು ದೇವರು ಈ ವಿಶ್ವದಂತೆ ತೋರುತ್ತಿರುವನೇ ಹೊರತು ಅವನು ವಿಶ್ವವಾಗಿಲ್ಲ ಎನ್ನುವರು.

೫. ಮಾನವ ಪವಿತ್ರ, ನಾವು ನೋಡುವುದೆಲ್ಲ ಆ ಪವಿತ್ರಾತ್ಮನ ಭಾವನೆಯಿಂದಾದುದು ಎಂದು ವೇದಾಂತ ಸಾರುವುದು. ಮಾನವರಲ್ಲಿ ಶಕ್ತಿಯಿಂದ ಕೂಡಿರುವುದು, ಶುಭವಾದುದು, ಶೌರ್ಯದಿಂದ ಕೂಡಿರುವುದೆಲ್ಲ ಆ ಪವಿತ್ರತೆ ಯಿಂದ ಬಂದುದು. ಕೆಲವರಲ್ಲಿ ಇದು ಸುಪ್ತವಾಗಿದ್ದರೂ, ಒಬ್ಬನಿಗೂ ಮತ್ತೊಬ್ಬನಿಗೂ ನೈಜವಾದ ಯಾವ ವ್ಯತ್ಯಾಸವೂ ಇಲ್ಲ. ನಮ್ಮಗಳೆಲ್ಲರ ಹಿಂದೆ ಒಂದು ಅನಂತ ಸಾಗರವಿರುವಂತೆ ಇದೆ. ನಾವು ನೀವುಗಳೆಲ್ಲಾ ಅದರ ಮೇಲಿರುವ ಅಲೆಗಳು. ನಮ್ಮಲ್ಲಿ ಪ್ರತಿಯೊಬ್ಬರು ನಮಗೆ ಸಾಧ್ಯವಾದಷ್ಟನ್ನು ಆವಿರ್ಭಾವಿಸಲು ಯತ್ನಿಸುತ್ತಿರುವೆವು.

೬. ವೇದಾಂತದ ಮತ್ತೊಂದು ವಿಶಾಲ ಭಾವನೆಯೇ, ಆಧ್ಯಾತ್ಮಿಕ ಪ್ರಪಂಚ ದಲ್ಲಿ ಬೇಕಾದಷ್ಟು ವೈವಿಧ್ಯತೆಗೆ ಅವಕಾಶ ಕೊಡಬೇಕು, ಎಲ್ಲರನ್ನೂ ಒಂದೇ ದೃಷ್ಟಿಗೆ ತರಬಾರದು. ಏಕೆಂದರೆ ಎಲ್ಲರ ಗುರಿಯೂ ಒಂದೇ. ಇದನ್ನೇ ವೇದಾಂತಿ ಗಳು ತಮ್ಮ ಕಾವ್ಯಮಯವಾದ ಭಾಷೆಯಲ್ಲಿ ಹೀಗೆ ವಿವರಿಸುವರು : "ಹಲವು ನದಿಗಳು ಬೇರೆಬೇರೆ ಪರ್ವತಗಳಲ್ಲಿ ಹುಟ್ಟಿ ನೇರವಾಗಿಯೋ ವಕ್ರವಾಗಿಯೋ ಹರಿದು ಕೊನೆಗೆ ಸಾಗರವನ್ನು ಸೇರುವಂತೆ—ಎಲ್ಲಾ ಧರ್ಮ ಮತ್ತು ಮತಗಳು, ಬೇರೆಬೇರೆ ದೃಷ್ಟಿಯಲ್ಲಿ ಉಗಮವಾಗಿ, ನೇರವಾಗಿಯೊ ವಕ್ರವಾಗಿಯೊ ಹರಿದು, ಕೊನೆಗೆ ನಿನ್ನೆಡೆಗೇ ಬರುವುವು."

೭. ವೇದಾಂತ ಈ ಪ್ರಪಂಚವನ್ನು ದುಃಖಮಯ ಎಂದು ನೋಡುವು ದಿಲ್ಲ. ಆದರೆ ಪ್ರಪಂಚವೆಲ್ಲ ಸುಖ ಸಂತೋಷದಿಂದ ನಲಿಯುತ್ತಿದೆ ಎಂದು ಹೇಳುವುದು ಕೂಡ ತಪ್ಪು. ಆದಕಾರಣವೇ ಮಕ್ಕಳಿಗೆ, ಈ ಪ್ರಪಂಚವೆಲ್ಲ ಸುಖಸಂತೋಷದಿಂದ ತುಂಬಿ ತುಳುಕಾಡುತ್ತಿದೆ, ಇಲ್ಲಿ ಬರೀ ಹೂವು ಹಾಲು ಜೇನೇ ಇವೆ ಎಂದು ಬೋಧಿಸುವುದು ತಪ್ಪು. ನಾವು ಮುಂಚೆ ಪ್ರಪಂಚವೆಲ್ಲ ಸುಖ ಸಂತೋಷದಿಂದ ತುಂಬಿದೆ ಎಂದು ಕನಸು ಕಾಣುವೆವು. ಆದರೂ ಒಬ್ಬ ಮತ್ತೊಬ್ಬನಿಗಿಂತ ಹೆಚ್ಚು ದುಃಖವನ್ನು ಅನುಭವಿಸಿರುವುದರಿಂದ ಅವನು ಪ್ರಪಂಚವೆಲ್ಲ ದುಃಖಮಯ ಎಂದು ಹೇಳುವುದು ಕೂಡ ತಪ್ಪೇ. ಈ ದ್ವಂದ್ವವೇ, ಪಾಪಪುಣ್ಯಗಳ ನರ್ತನವೇ, ನಾವು ಅನುಭವಿಸುವ ಪ್ರಪಂಚ ವಾಗುವುದು. ಅದೇ ಕಾಲದಲ್ಲಿ ವೇದಾಂತ ಹೀಗೆ ಬೋಧಿಸುವುದು : ಪಾಪ ಪುಣ್ಯ

ಗಳು ಬೇರೆ ಬೇರೆ ಎಂದು ಭಾವಿಸಬೇಡಿ, ಅವೆರಡೂ ಒಂದೇ. ಬೇರೆ ಬೇರೆ ಪ್ರಮಾಣದಲ್ಲಿ ಬೇರೆ ಬೇರೆ ದೇಶದಲ್ಲಿ ತೋರುತ್ತ ವ್ಯಕ್ತಿಗಳಲ್ಲಿ ಬೇರೆ ಬೇರೆ ಅನುಭವವನ್ನು ಉಂಟುಮಾಡುತ್ತಿವೆ.

೮. ವೇದಾಂತ ಮಹಾದುಃಖದಲ್ಲಿ ಪ್ರಾರಂಭವಾದರೂ ನಿಜವಾದ ಶುಭ ನಿರೀಕ್ಷಣೆಯಲ್ಲಿ ಕೊನೆಗಾಣುವುದು. ಇಂದ್ರಿಯಗಳ ಸುಖಸಂತೋಷವನ್ನು ಅಲ್ಲ ಗಳೆದರೂ, ಅತೀಂದ್ರಿಯ ಶುಭವನ್ನು ನಾವು ಸಾರುತ್ತೇವೆ. ನಿಜವಾದ ಸಂತೋಷ ಇಂದ್ರಿಯಗಳಲ್ಲಿ ಇಲ್ಲ. ಅದಕ್ಕೆ ಅತೀತವಾದುದು. ಅದು ಪ್ರತಿಯೊಬ್ಬರಲ್ಲಿಯೂ ಇರುವುದು. ಪ್ರಪಂಚದಲ್ಲಿ ಯಾವುದು ಸುಖರೂಪವನ್ನು ಧರಿಸಿರುವುದೋ ಅದೇ ನಮ್ಮನ್ನು ಇಂದ್ರಿಯಗಳ ಮೂಲಕ ಸರ್ವನಾಶಕ್ಕೆ ಒಯ್ಯುವುದು.

೯. ವೇದಾಂತದ ಬೋಧನೆಯು ಎಲ್ಲದರಲ್ಲಿಯೂ ದೇವರನ್ನು ಕಾಣು ವುದು ; ವಸ್ತುಗಳನ್ನು ಅವುಗಳ ನೈಜ ಸ್ಥಿತಿಯಲ್ಲಿ ನೋಡುವುದು, ನಮಗೆ ತೋರುವಂತೆ ಅಲ್ಲ.

೧೦. ನೀವು ಪರಿಶುದ್ಧರು, ಪೂರ್ಣಾತ್ಮರು, ಎಂದು ವೇದಾಂತ ಬೋಧಿ ಸುವುದು. ಪಾಪಪುಣ್ಯಗಳಿಗತೀತವಾದ ಒಂದು ಸ್ಥಿತಿ ಇದೆ. ಅದೇ ನಿಮ್ಮ ನೈಜ ಸ್ಥಿತಿ. ಅದು ಒಳ್ಳೆಯದಕ್ಕಿಂತಲೂ ಮೇಲಾದುದು. ಯಾವುದನ್ನು ನಾವು ಒಳ್ಳೆ ಯದು ಎನ್ನುವೆವೋ ಅದು ಕೆಟ್ಟದ್ದಕ್ಕಿಂತ ಸ್ವಲ್ಪ ಮೇಲು ಅಷ್ಟೇ.

ನಮ್ಮಲ್ಲಿ ಯಾವ ಪಾಪ ಸಿದ್ಧಾಂತವೂ ಇಲ್ಲ. ನಾವು ಪಾಪವನ್ನು ಅಜ್ಞಾನ ಎಂದು ಕರೆಯುವೆವು.

೧೧. ಧರ್ಮ ಎಂದರೆ ಈಗ ಇಲ್ಲಿ ಬಾಳುವುದು ಎಂದು ವೇದಾಂತ ಸಾರು ವುದು. ಈ ಜನ್ಮ ಆ ಜನ್ಮ, ಜನನ ಮರಣ, ಈ ಲೋಕ ಆ ಲೋಕ ಎಂಬುದೆಲ್ಲ ಒಂದು ಮೂಢ ನಂಬಿಕೆ, ಪೂರ್ವ ಕಲ್ಪಿತ ಅಭಿಪ್ರಾಯ. ಅನಂತ ಕಾಲದಲ್ಲಿ ಭಾಗ ಗಳಿಲ್ಲ. ಅವೆಲ್ಲ ನಮ್ಮ ಕಲ್ಪನೆ. ಹತ್ತು ಗಂಟೆಗೂ ಹನ್ನೆರಡು ಗಂಟೆಗೂ ಏನು ವ್ಯತ್ಯಾಸ ? ಹೊರಗೆ ನಾವು ನೋಡುವ ಕೆಲವು ಬದಲಾವಣೆ ಮಾತ್ರ. ಕಾಲ ಎಂದಿನಂತೆಯೇ ಇದೆ. ಹಾಗಾದರೆ ಈ ಜನ್ಮ ಆ ಜನ್ಮ ಎಂದರೇನು ? ಇದೆಲ್ಲಾ ಕಾಲದ ಪ್ರಶ್ನೆ. ಎಲ್ಲಿ ಕಾಲದ ದೃಷ್ಟಿಯಿಂದ ನಾವು ಕಳೆದುಕೊಂಡಿರುವೆವೋ ಅದನ್ನು ಹೆಚ್ಚು ವೇಗದಿಂದ ಸಂಪಾದಿಸಬಹುದು. ಆದಕಾರಣವೇ ಧರ್ಮವನ್ನು ನಾವು ಈಗ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು ಎನ್ನುವುದು ವೇದಾಂತ. ನೀವು ಧಾರ್ಮಿಕರಾಗುವುದು ಎಂದರೆ, ಈಗ ಯಾವ ಧರ್ಮವೂ ಇಲ್ಲದೆ ಪ್ರಾರಂಭ ಮಾಡಿ, ಮುಂದೆ ಮುಂದೆ ಹೋಗಿ, ಪ್ರತ್ಯಕ್ಷ ನೀವೇ ಅದನ್ನು ಅನುಭವಿಸುವುದು.

ಹಾಗೆ ಪ್ರತ್ಯಕ್ಷ ಮಂನಗಂಡ ಮೇಲೆ ಮಾತ್ರ ನಿಮಂಗೆ ಒಂದು ಧರ್ಮವಿದೆ. ಅದಕ್ಕೆ ಮುಂಚೆ ನೀವು ನಾಸ್ತಿಕರಿಗಿಂತ ಮೇಲಲ್ಲ. ಇಲ್ಲ, ನಾಸ್ತಿಕನಿಗಿಂತಲೂ ಕೇಡು, ನಾಸ್ತಿಕನಾದರೂ ಯಥಾರ್ಥವಾದಿ, ನನಗೆ ಇದಾವುದೂ ಗೊತ್ತಿಲ್ಲ, ಎನ್ನುವನು. ಆದರೆ ಮಿಕ್ಕವರಾದರೋ ತಮಂಗೆ ಏನೂ ಗೊತ್ತಿಲ್ಲದೇ ಇದ್ದರೂ ತಾವು ತುಂಬಾ ಧರ್ಮಾತ್ಮರು ಎಂದು ಸಾರಿಕೊಳ್ಳುವರು.

೧೨. ಇಂದು ಯುರೋಪಿನಲ್ಲಿ ಜಡವಾದವಿದೆ. ಆಧುನಿಕ ಸಂಶಯ ಗ್ರಸ್ಥರಿಗಾಗಿ ನೀವು ಪ್ರಾರ್ಥಿಸಬಹುದು. ಆದರೆ ಅವರು ನಿಮಂಗೆ ಬಗ್ಗುವುದಿಲ್ಲ. ಅವರಿಗೆ ವಿಚಾರ ಬೇಕು. ವಿಚಾರಪೂರಿತ ಧರ್ಮದ ಮೇಲೆ ಯುರೋಪಿನ ಮೋಕ್ಷ ನಿಂತಿದೆ. ಅದ್ವೈತ, ಏಕತ್ವ ಮತ್ತು ನಿರ್ಗುಣ ಬ್ರಹ್ಮವೊಂದೇ ಬುದ್ಧಿ ಮಂತರಿಗೆ ಸೂಕ್ತವಾದ ಧರ್ಮವಾಗಿದೆ. ಯಾವಾಗ ಅಧರ್ಮ ಜಾಸ್ತಿಯಾಗು ವುದೋ, ಧರ್ಮಗ್ಲಾನಿಯಾಗುವುದೋ ಆಗಲೆಲ್ಲ ಅದ್ವೈತ ಪ್ರಚಾರಕ್ಕೆ ಬರು ವುದು. ಆದಕಾರಣವೇ ಯುರೋಪ್ ಮತ್ತು ಅಮೆರಿಕಾ ದೇಶದಲ್ಲಿ ಈಗ ಅದ್ವೈತ ಬೇರೂರಲು ಮೊದಲಾಗಿದೆ.

೧೩. ಆಧುನಿಕ ವಿಜ್ಞಾನದ ಆವಿಷ್ಕಾರಗಳನ್ನು ನೈತಿಕ ಮತ್ತು ಭೌತಿಕ ಕ್ಷೇತ್ರಗಳಲ್ಲಿ ಒಪ್ಪಿಕೊಂಡು ಕೆಲವು ವೇಳೆ ಅದಕ್ಕಿಂತಲೂ ಮುಂದುವರಿದಿರುವ ಧರ್ಮವೆಂದರೆ ಅದ್ವೈತವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಆದ ಕಾರಣವೆ ಅದು ಆಧುನಿಕ ವಿಜ್ಞಾನಿಗಳ ಮೆಚ್ಚುಗೆಗೆ ಪಾತ್ರವಾಗಿದೆ. ಹಿಂದಿನ ಕಾಲದ ದ್ವೈತ ಸಿದ್ಧಾಂತಗಳು ಅವರಿಗೆ ಸಾಲದಾಗಿವೆ, ಅವರ ಆವಶ್ಯಕತೆಯನ್ನು ತೃಪ್ತಿಪಡಿಸಲಾರದಾಗಿವೆ.

೧೪. ಅದ್ವೈತ ಸಿದ್ಧಾಂತ ಮತ್ತು ಅದರ ವಿಶೇಷವೇ ಅದು ಪ್ರಾರಂಭ ದಿಂದಲೂ ಯಾವುದನ್ನೂ ಧ್ವಂಸ ಮಾಡದಿರುವುದು. "ಯಾರ ಶ್ರದ್ಧೆಗೂ ಭಂಗ ತರಬೇಡಿ, ಅಜ್ಞಾನದಿಂದ ಇತರ ಕ್ಷುದ್ರದೇವತೆಗಳನ್ನು ಪೂಜಿಸುತ್ತಿರುವವರ ಶ್ರದ್ಧೆಗೂ ಭಂಗ ತರಬೇಡಿ" ಎಂದು ಧೈರ್ಯವಾಗಿ ಬೋಧಿಸುವುದು. ಇದೇ ವೇದಾಂತದ ಮತ್ತೊಂದು ಮಹಿಮೆ. ಯಾರ ಶ್ರದ್ಧೆಗೂ ಭಂಗ ತರಬೇಡಿ ; ಪ್ರತಿಯೊಬ್ಬರಿಗೂ ಅವರಿಗಿರುವ ಸ್ಥಳದಿಂದ ಮೇಲೆ ಹೋಗಲು ಸಹಾಯಮಾಡಿ, ಇಡೀ ಮಾನವಕೋಟಿಗೆ ಸಹಾಯ ಮಾಡಿ.

೧೫. ದ್ವೈತಿಗಳು ಸಾಧಾರಣವಾಗಿ ಎಲ್ಲಾ ಕಡೆಯಲ್ಲಿಯೂ ಒಬ್ಬ ಸಗುಣ ದೇವರನ್ನು ನಂಬುವರು. ಇದು ಮನುಷ್ಯತ್ವ ಆರೋಪಣ. ಅವನು ಪ್ರಪಂಚ ವನ್ನು ಆಳುವ ಒಬ್ಬ ದೊಡ್ಡ ಚಕ್ರವರ್ತಿಯಂತೆ. ಕೆಲವರ ಮೇಲೆ ಪ್ರೀತಿ, ಕೆಲ

ವರ ಮೇಲೆ ದ್ವೇಷ. ಕೆಲವು ವ್ಯಕ್ತಿ ಅಥವಾ ಜನಾಂಗದ ಮೇಲೆ ಯಾವ ಕಾರಣವೂ ಇಲ್ಲದೆ ಬೇಕಾದಷ್ಟು ವರವನ್ನು ಕರುಣಿಸುವನು. ದ್ವೈತಿಗಳು ಸ್ವಾಭಾವಿಕವಾಗಿ ದೇವರಿಗೆ ಕೆಲವರು ಬೇಕಾದವರು ಇರುವರು ಎಂದು ಭಾವಿಸುವರು. ತಾನು ಅವ ರಲ್ಲಿ ಒಬ್ಬನಾಗಬೇಕೆಂದು ಆಶಿಸುವನು. ಪ್ರತಿಯೊಂದು ದ್ವೈತ ಧರ್ಮದಲ್ಲಿಯೂ "ನಾವು ದೇವರಿಗೆ ಬೇಕಾದವರು, ಇತರರೂ ನಮ್ಮಂತೆ ನಂಬಿದರೆ ಮಾತ್ರ ಅವರೂ ದೇವರ ಪ್ರೀತಿಯನ್ನು ಗಳಿಸಬಹುದು" ಎಂದು ನಂಬುವರು. ಕೆಲವು ದ್ವೈತಿಗಳಂತೂ ತುಂಬಾ ಸ್ವಾರ್ಥ ದೃಷ್ಟಿಯುಳ್ಳವರು, ಯಾರು ದೇವರ ಪ್ರೀತಿಗೆ ಪಾತ್ರರಾಗಿರುವರೋ ಅಂತಹ ಕೆಲವರು ಮಾತ್ರ ಉದ್ಧಾರವಾಗುವರು, ಇತರರು ಎಷ್ಟೇ ಪ್ರಯತ್ನಪಟ್ಟರೂ ಉದ್ಧಾರವಾಗಲಾರರು ಎಂದು ಭಾವಿಸುವರು. ಇಂತಹ ಪ್ರತ್ಯೇಕತೆ ಇಲ್ಲದೆ ಇರುವ ಯಾವುದಾದರೊಂದು ದ್ವೈತ ಧರ್ಮ ವನ್ನು ತೋರಿ ಎಂದು ನಾನು ನಿಮ್ಮನ್ನು ಕೇಳುತ್ತೇನೆ. ಆದಕಾರಣ ಸ್ವಾಭಾವಿಕ ವಾಗಿ ಇಂತಹ ದ್ವೈತ ಧರ್ಮಗಳು ತಮ್ಮತಮ್ಮಲ್ಲೇ ಕಾದಾಡುವುದು ಸಹಜ ವಾಗಿಯೇ ಇದೆ.

೧೬. ಮಾನವ ಜನ್ಮಕ್ಕೆ ಆದಿ ಅಂತ್ಯ ಇಲ್ಲವೆಂಬ ಭಾವನೆಯೊಂದಿಗೆ ಜೀವಿಗೆ ಪುನರ್ಜನ್ಮವಿದೆ ಎಂಬ ನಂಬಿಕೆಯೂ ಜೊತೆಯಲ್ಲೇ ಹೋಗುವುದು. ಯಾವುದು ಕಾಲದಲ್ಲಿ ಕೊನೆಗಾಣುವುದೋ ಅದಕ್ಕೆ ಆದಿ ಇಲ್ಲದೇ ಇರದು. ಯಾವುದಕ್ಕೆ ಒಂದು ಆದಿ ಇದೆಯೋ ಅದಕ್ಕೆ ಅಂತ್ಯ ಇಲ್ಲದೇ ಇರದು. ಮಾನವನ ಆತ್ಮಕ್ಕೆ ಒಂದು ಆದಿ ಇತ್ತು ಎಂಬ ಅಯೋಗ್ಯ ಭಾವನೆಯನ್ನು ನಾವೆಂದಿಗೂ ನಂಬ ಲಾರೆವು. ಪುನರ್ಜನ್ಮದ ಸಿದ್ಧಾಂತ ಆತ್ಮನ ಸ್ವಾತಂತ್ರ್ಯವನ್ನು ಸಾರುವುದು.

೧೭. ಯಾರು ಶೂನ್ಯದಿಂದ ಬರುವರೋ ಅವರು ನಿಜವಾಗಿ ಶೂನ್ಯಕ್ಕೆ ಹೋಗುವರು. ನಾನಾಗಲಿ, ನೀವಾಗಲಿ ಅಥವಾ ಮತ್ತಾರೇ ಆಗಲಿ ಯಾರೂ ಶೂನ್ಯದಿಂದ ಬಂದಿಲ್ಲ; ಶೂನ್ಯಕ್ಕೆ ಹೋಗುವುದಿಲ್ಲ. ನೀವು ಯಾವಾಗಲೂ ಇದ್ದಿರಿ ಮತ್ತು ಇರುವಿರಿ. ಪ್ರಪಂಚದಲ್ಲಿ ಯಾವ ಶಕ್ತಿಯೂ ನಿಮ್ಮನ್ನಾಗಲಿ ನಮ್ಮನ್ನಾಗಲಿ ನಾಶಮಾಡಲಾರದು, ಯಾವುದೂ ನಮ್ಮನ್ನು ಶೂನ್ಯಕ್ಕೆ ತಳ್ಳ ಲಾರದು. ಪುನರ್ಜನ್ಮ ಸಿದ್ಧಾಂತ ಭಯಾನಕವಾದುದೇನೋ ಅಲ್ಲ. ಮಾನವ ಜನಾಂಗದ ನೈತಿಕ ಜೀವನಕ್ಕೆ ಅತ್ಯಾವಶ್ಯಕ. ಆಲೋಚನಾಪರರು ಯುಕ್ತಿಯ ಮೂಲಕ ಬರಬಹುದಾದ ನಿರ್ಣಯ ಇದೊಂದೇ. ಇನ್ನು ಮೇಲೆ ನೀನು ಎಂದೆಂದಿಗೂ ಇರುವ ಹಾಗಿದ್ದರೆ, ಇದಕ್ಕೆ ಮುಂಚೆಯೂ ನೀನು ಎಂದೆಂದಿಗೂ ಇದ್ದಿರಲೇಬೇಕು. ಇಲ್ಲದೇ ಇದ್ದರೆ ಸಾಧ್ಯವೇ ಇಲ್ಲ.

೧೮. ಆತ್ಮ ಬರುವುದೂ ಇಲ್ಲ, ಹೋಗುವುದೂ ಇಲ್ಲ, ಹುಟ್ಟುವುದೂ ಇಲ್ಲ, ಸಾಯುವುದೂ ಇಲ್ಲ. ಪ್ರಕೃತಿ ಆತ್ಮನ ಮುಂದೆ ಚಲಿಸುತ್ತಿದೆ. ಈ ಚಲನೆಯ ಪ್ರತಿಬಿಂಬ ಆತ್ಮನ ಮೇಲೆ ಬಿದ್ದಿದೆ. ಆತ್ಮ ಭ್ರಾಂತಿಯಿಂದ ತಾನು ಚಲಿಸುತ್ತಿರುವೆ ಎಂದು ಭಾವಿಸುವುದು. ಆತ್ಮ ತಾನು ಚಲಿಸುತ್ತಿರುವೆ ಎಂದು ಭಾವಿಸಿದರೆ ಅದು ಬಂಧನ; ತಾನು ಚಲಿಸುತ್ತಿಲ್ಲ, ತಾನು ಸರ್ವವ್ಯಾಪಿಯಾಗಿರುವವನು ಎಂದು ಭಾವಿಸಿದಾಗ ಮುಕ್ತಿ. ಬಂಧನದಲ್ಲಿರುವ ಆತ್ಮನೇ ಜೀವ. ಆತ್ಮ ಬರುತ್ತದೆ ಹೋಗುತ್ತದೆ ಎಂದರೆ ಅದನ್ನು ಕೇವಲ ವ್ಯವಹಾರ ದೃಷ್ಟಿಯಿಂದ ಹೇಳಿದ್ದು, ಖಗೋಳ ಶಾಸ್ತ್ರವನ್ನು ಓದುತ್ತಿರುವಾಗ ಸೂರ್ಯ ಭೂಮಿಯ ಸುತ್ತಲೂ ಸುತ್ತದೇ ಇದ್ದರೂ, ನೀವು ಸುತ್ತುತ್ತಿದೆ ಎಂದು ಊಹಿಸಿಕೊಳ್ಳಿ ಎನ್ನುವಂತೆ. ಹೀಗೆಯೇ ಜೀವ ಉತ್ತಮ ಮತ್ತು ಅಧಮ ಜನ್ಮಗಳಿಗೆ ಬರುತ್ತದೆ ಎಂಬುದು. ಇದೇ ಪ್ರಖ್ಯಾತವಾದ ಪುನರ್ಜನ್ಮ ಸಿದ್ಧಾಂತ. ಸೃಷ್ಟಿಯನ್ನೆಲ್ಲಾ ಇದು ತನ್ನ ವಜ್ರಮುಷ್ಟಿಯಲ್ಲಿ ಬಂಧಿಸುವುದು.

೧೯. ಜ್ಞಾನಯೋಗಿಗೆ ಈ ಜೀವನದ ಗುರಿ ಜೀವನ್ಮುಕ್ತನಾಗುವುದು. ಅನಾಸಕ್ತರಾಗಿ ಯಾರು ಪ್ರಪಂಚದಲ್ಲಿರಬಲ್ಲರೋ ಅವರೇ ಜೀವನ್ಮುಕ್ತರು. ಅವರು ನೀರಿನಲ್ಲಿರುವ ಕಮಲಪತ್ರದಂತೆ, ಎಂದಿಗೂ ನೀರಿನಿಂದ ಒದ್ದೆಯಾಗುವುದಿಲ್ಲ, ಅವನೇ ಮಾನವ ಶ್ರೇಷ್ಠ ; ಅಷ್ಟು ಮಾತ್ರವಲ್ಲ, ಸರ್ವ ಶ್ರೇಷ್ಠ; ಏಕೆಂದರೆ ಅವನು ತಾನೆ ಬ್ರಹ್ಮನೆಂದು ಅರಿತಿರುವನು ; ತಾನು ಪರಮೇಶ್ವರನಲ್ಲಿ ಐಕ್ಯವಾಗಿರುವೆನು ಎಂದು ಅರಿತಿರುವನು.

೨೦. ಯಾರು ಆತ್ಮಸಾಕ್ಷಾತ್ಕಾರವನ್ನು ಪಡೆದಿರುವರೋ, ಸತ್ಯದಲ್ಲಿ ಒಂದಾಗಿರುವರೋ, ಅವನಲ್ಲಿ ಕಿಂಚಿತ್ ಪುಣ್ಯ ಸಂಸ್ಕಾರ ಉಳಿದುಕೊಂಡಿದೆ, ಅವನು ದೇಹದಲ್ಲಿದ್ದು ಅನವರತ ಕೆಲಸ ಮಾಡಿದರೂ ಅವನು ಬರೀ ಪುಣ್ಯವನ್ನು ಮಾತ್ರ ಮಾಡಬಲ್ಲ, ಅವನ ಬಾಯಿಂದ ಎಲ್ಲರಿಗೂ ಆಶೀರ್ವಾದವಾಣಿ ಮಾತ್ರ ಹೊರಬರುವುದು. ಅವನ ಕೈಗಳು ಕೇವಲ ಪುಣ್ಯಕೆಲಸವನ್ನು ಮಾತ್ರ ಮಾಡಬಲ್ಲದು ; ಅವನ ಮನಸ್ಸು ಪವಿತ್ರವಾದ ಆಲೋಚನೆಯನ್ನು ಮಾತ್ರ ಮಾಡಬಲ್ಲದು, ಅಷ್ಟೇಕೆ, ಅವನ ಸಾನ್ನಿಧ್ಯವೇ ಮಂಗಳಕರವಾಗಿರುವುದು.

೨೧. ಕೆಲವರು ಅದ್ವೈತವನ್ನು ಅರ್ಥಮಾಡಿಕೊಳ್ಳಲಾರರು, ಅದನ್ನು ಹಾಸ್ಯಾಸ್ಪದ ಮಾಡಿರುವರು. ಶುದ್ಧ ಏನು, ಅಶುದ್ಧ ಏನು, ಪಾಪವೇನು, ಪುಣ್ಯವೇನು, ಇದೆಲ್ಲಾ ಮಾನವನ ಭ್ರಾಂತಿ. ತಮ್ಮ ನಿತ್ಯ ಜೀವನದಲ್ಲಿ ಯಾವ ನೀತಿ ನಿಯಮವನ್ನೂ ಅನುಸರಿಸುವುದಿಲ್ಲ. ಇದು ಬರೀ ಠಕ್ಕು. ಇಂತಹ ಸಿದ್ಧಾಂತ

ವನ್ನು ಬೋಧಿಸಿ ಬೇಕಾದಷ್ಟು ಅನಾಹುತವಾಗುವುದು.

ಈ ದೇಹ ಪಾಪ ಪುಣ್ಯವೆಂಬ ಎರಡು ಕರ್ಮದಿಂದಾಗಿದೆ, ಒಂದು ಮುಳ್ಳು ನನ್ನ ಕಾಲಿಗೆ ಹೊಕ್ಕಿದೆ, ನಾನು ಮತ್ತೊಂದು ಮುಳ್ಳಿನಿಂದ ಅದನ್ನು ತೆಗೆದು ಎರಡನ್ನೂ ಬಿಸಾಡುವೆನು. ಯಾರು ಮುಕ್ತನಾಗಬೇಕೆಂದು ಬಯಸುವನೋ ಅವನು ಪುಣ್ಯದ ಮುಳ್ಳಿನಿಂದ ಪಾಪದ ಮುಳ್ಳನ್ನು ತೆಗೆದುಹಾಕುವನು. ಅವನು ಅನಂತರವೂ ಜೀವಿಸಿರುವನು. ಅವನಲ್ಲಿ ಬರೀ ಪುಣ್ಯ ಸಂಸ್ಕಾರಗಳು ಇರುವುದ ರಿಂದ ಅವನು ಮಾಡುವ ಕೆಲಸವೂ ಕೂಡ ಪುಣ್ಯ ಕೆಲಸವೇ ಆಗಿರುವುದು, ಜೀವ ನ್ಮುಕ್ತನಲ್ಲಿ ಇನ್ನೂ ಸ್ವಲ್ಪ ಪುಣ್ಯ ಅಂಟಿಕೊಂಡಿರುವುದು, ಅವನು ಇನ್ನೂ ಜೀವಂತನಾಗಿರುವನು, ಅವನು ಮಾಡುವ ಕೆಲಸವೆಲ್ಲಾ ಪುಣ್ಯಕೆಲಸವಾಗಿರುವುದು,

೧. ಪ್ರತಿಯೊಂದು ಆತ್ಮವೂ ಸ್ವಭಾವತಃ ಪವಿತ್ರ. ಈ ಪವಿತ್ರತೆಯನ್ನು ಬಾಹ್ಯ ಮತ್ತು ಆಂತರಿಕ ಪ್ರಕೃತಿಯ ನಿಗ್ರಹದ ಮೂಲಕ ವ್ಯಕ್ತಗೊಳಿಸುವುದು ಗುರಿ. ಕರ್ಮದ ಮೂಲಕವೋ, ಭಕ್ತಿಯ ಮೂಲಕವೋ ಮನೋನಿಗ್ರಹದ ಮೂಲಕವೋ, ಜ್ಞಾನದ ಮೂಲಕವೋ ಯಾವುದಾದರೂ ಒಂದರ ಮೂಲಕವೋ ಅಥವಾ ಎಲ್ಲವನ್ನು ಸೇರಿಸಿಯೋ ಈ ಗುರಿಯನ್ನು ಸೇರಿ, ಮುಕ್ತರಾಗಿ.

ಇದೇ ಧರ್ಮದ ಸರ್ವಸ್ವ. ಸಿದ್ಧಾಂತ, ನಂಬಿಕೆ, ಆಚಾರ, ಶಾಸ್ತ್ರ ದೇವಸ್ಥಾನ ಮುಂತಾದುವೆಲ್ಲ ಗೌಣ.

೨. ಎಲ್ಲಾ ಮಾನವರ ಗುರಿ, ಎಲ್ಲಾ ಧರ್ಮಗಳ ಗಂತವ್ಯ ಒಂದೇ. ಅದೇ ಪರಮಾತ್ಮನೊಂದಿಗೆ ಒಂದಾಗುವುದು. ಅಂದರೆ ಎಲ್ಲರಲ್ಲಿಯೂ ಇರುವ ಪವಿತ್ರತೆಯೊಂದಿಗೆ ಐಕ್ಯರಾಗುವುದು. ಗುರಿ ಒಂದೇ, ಆದರೆ ಜನರ ಪ್ರಕೃತಿಗನುಸಾರ ಮಾರ್ಗಗಳು ಹಲವು.

ಗುರಿ ಮತ್ತು ಇದನ್ನು ಸೇರುವ ಮಾರ್ಗ ಇವುಗಳೇ ಯೋಗ. ಇಂಗ್ಲೀಷಿನಲ್ಲಿ Yoke ಎಂದರೆ ಸೇರಿಸು ಎಂಬ ಪದದಂತೆಯೇ ಯೋಗ ಎನ್ನುವ ಸಂಸ್ಕೃತ ಮೂಲಕ್ಕೆ ಒಂದುಗೂಡಿಸು ಎಂದು ಅರ್ಥ. ಹಲವು ಯೋಗಗಳಿವೆ. ಇವುಗಳಲ್ಲಿ ಮುಖ್ಯವಾದುವೆ ಕರ್ಮಯೋಗ, ಭಕ್ತಿಯೋಗ, ರಾಜಯೋಗ, ಜ್ಞಾನಯೋಗ.

೩. ಪ್ರತಿಯೊಂದು ವಿಜ್ಞಾನಕ್ಕೂ ಒಂದು ಮಾರ್ಗವಿರುವಂತೆ ಪ್ರತಿಯೊಂದು ಧರ್ಮಕ್ಕೂ ಒಂದು ಮಾರ್ಗವಿದೆ. ಧರ್ಮದ ಗುರಿಯನ್ನು ಮುಟ್ಟುವ ಮಾರ್ಗವನ್ನೇ ಯೋಗ ಎಂದು ಕರೆಯುವುದು. ಭಿನ್ನ ಭಿನ್ನ ಪ್ರಕೃತಿಗೆ ತಕ್ಕಂತೆ ಬೇರೆ ಬೇರೆ ಮಾರ್ಗಗಳಿವೆ. ನಾವು ಅವುಗಳನ್ನು ನಾಲ್ಕು ಭಾಗ ಮಾಡುವೆವು.

೧. ಕರ್ಮಯೋಗ : ಕರ್ಮ ಮತ್ತು ತನ್ನ ಕರ್ತವ್ಯವನ್ನು ನೆರವೇರಿಸುವುದರ ಮೂಲಕ ತನ್ನ ಪವಿತ್ರತೆಯನ್ನು ಅರಿಯುವುದು.

೨. ಭಕ್ತಿಯೋಗ : ಪರಮೇಶ್ವರನ ಮೇಲೆ ಇಡುವ ಭಕ್ತಿಯಿಂದ ತನ್ನ ಪವಿತ್ರತೆಯನ್ನು ಅರಿಯುವುದು.

೩. ರಾಜಯೋಗ : ಮನೋನಿಗ್ರಹದ ಮೂಲಕ ತನ್ನ ಪವಿತ್ರತೆಯನ್ನು ಅರಿಯುವುದು.

೪. ಜ್ಞಾನಯೋಗ : ಜ್ಞಾನದ ಮೂಲಕ ತನ್ನ ಪವಿತ್ರತೆಯನ್ನು ಅರಿಯುವುದು.

೪. ಪ್ರತಿಯೊಂದು ಯೋಗವೂ ಇತರ ಯೋಗದ ಸಹಾಯವಿಲ್ಲದೆ ಒಬ್ಬನನ್ನು ಗುರಿ ಎಡೆಗೆ ಒಯ್ಯಬಲ್ಲುದು. ಏಕೆಂದರೆ ಇವುಗಳ ಗುರಿಯೆಲ್ಲಾ ಒಂದೇ. ಕರ್ಮ, ಜ್ಞಾನ, ಭಕ್ತಿಗಳೆಲ್ಲ ನೇರವಾಗಿ ಸ್ವತಂತ್ರವಾಗಿ ಮುಕ್ತಿಯನ್ನು ಕೊಡಬಲ್ಲವು.

೫. ಎಲ್ಲಾ ಯೋಗಗಳಿಗೂ ಅನಾಸಕ್ತಿ ಅತ್ಯಂತ ಮುಖ್ಯ. ಮನೆಬಿಟ್ಟು, ಒಳ್ಳೆಯ ವಸ್ತ್ರಗಳನ್ನು ತ್ಯಜಿಸಿ, ಊಟವನ್ನು ತ್ಯಜಿಸಿ, ಕಾಡಿಗೆ ಹೋಗುವವನೂ ಕೂಡ ಬಹಳ ಆಸಕ್ತನಾಗಿರಬಹುದು. ಅವನ ಏಕಮಾತ್ರ ವಸ್ತು ಎಂದರೆ ಅವನ ದೇಹವೇ ಅವನಿಗೆ ಸರ್ವಸ್ವವಾಗಬಹುದು. ಅವನು ಕೇವಲ ತನ್ನ ದೇಹಕ್ಕಾಗಿ ಹೋರಾಡುತ್ತ ಬದುಕಿರುವವನು.

೬. ಎಲ್ಲಾ ಯೋಗಗಳಲ್ಲಿಯೂ ವೈರಾಗ್ಯವೇ ಅತಿ ಮುಖ್ಯವಾದುದು. ಕರ್ಮಯೋಗಿ ಕರ್ಮಫಲಗಳನ್ನು ತ್ಯಜಿಸುತ್ತಾನೆ. ಭಕ್ತ ಸರ್ವೇಶ್ವರನಿಗೆ, ಸರ್ವವ್ಯಾಪಿಯಾದ ಪ್ರೇಮಮೂರ್ತಿಗೆ, ಎಲ್ಲಾ ಅಲ್ಪಪ್ರೀತಿಗಳನ್ನೂ ತ್ಯಜಿಸುತ್ತಾನೆ. ಯೋಗಿ ತನ್ನ ವೈಯಕ್ತಿಕ ಅನುಭವವನ್ನೆಲ್ಲಾ ತ್ಯಜಿಸುತ್ತಾನೆ. ಏಕೆಂದರೆ ಅವನ ತತ್ತ್ವಕ್ಕೆ ಇಡೀ ಪ್ರಕೃತಿಯೇ ದೃಶ್ಯವಾಗಿದೆ. ಪ್ರಕೃತಿ ಜೀವನ ಅನುಭವಕ್ಕಾಗಿ ಇದ್ದರೂ ಕೊನೆಗೆ ಅವನು ತಾನು ಪ್ರಕೃತಿಯಲ್ಲಿ ಇರಲಿಲ್ಲ, ಎಂದೆಂದಿಗೂ ಅದರಿಂದ ಬೇರೆ ಎನ್ನುವುದನ್ನು ಅರಿಯುವವನು. ಜ್ಞಾನಿ ಪ್ರತಿಯೊಂದನ್ನೂ ತ್ಯಜಿಸುತ್ತಾನೆ. ಏಕೆಂದರೆ ಅವನ ತತ್ತ್ವದ ಪ್ರಕಾರ ಪ್ರಕೃತಿ,ಭೂತ ಭವಿಷ್ಯತ್ ವರ್ತಮಾನ ಕಾಲಗಳಲ್ಲಿ ಎಂದಿಗೂ ಇರಲಿಲ್ಲ.

೭. ಜ್ಞಾನಾರ್ಜನೆಗೆ ಮನೋ ಏಕಾಗ್ರತೆಯೊಂದೇ ಮಾರ್ಗ ಎಂದು ನಾವು ಹೇಳುತ್ತೇವೆ. ಬಾಹ್ಯ ವಿಜ್ಞಾನದಲ್ಲಿ ಮನಸ್ಸನ್ನು ಯಾವುದಾದರೂ ಬಾಹ್ಯ ವಸ್ತುವಿನ ಮೇಲೆ ಕೇಂದ್ರೀಕರಿಸುವೆವು. ಆಂತರಿಕ ವಿಜ್ಞಾನದಲ್ಲಿ ಮನಸ್ಸನ್ನು ತನ್ನಾತ್ಮನ ಕಡೆ ಸೆಳೆದುಕೊಳ್ಳುವುದು. ಇದನ್ನೇ ಮನೋ ಏಕಾಗ್ರತೆ ಅಥವಾ ಯೋಗ ಎನ್ನುವುದು.

ಯೋಗಿಗಳು ತಾವು ಏನೇನನ್ನೊ ಪಡೆಯುತ್ತೇವೆ ಎನ್ನುತ್ತಾರೆ. ಮನಸ್ಸಿನ ಏಕಾಗ್ರತೆಯಿಂದ ಬಾಹ್ಯ ಮತ್ತು ಆಂತರಿಕ ವಿಷಯಗಳ ರಹಸ್ಯವೆಲ್ಲಾ ಮನಸ್ಸಿಗೆ ಗೊತ್ತಾಗುವುದು ಎಂದು ಅವರು ಹೇಳುತ್ತಾರೆ.

೮. ಮಾನವ ದೇಹದಲ್ಲಿರುವ ಶಕ್ತಿಯಲ್ಲೆಲ್ಲಾ ಓಜಸ್ಸೇ ಸರ್ವಶ್ರೇಷ್ಠ

ವಾದುದು ಎಂದು ಯೋಗಿಗಳು ಹೇಳುತ್ತಾರೆ. ಈ ಓಜಸ್ಸು ಮೆದುಳಿನಲ್ಲಿ ಸಂಗ್ರಹ ವಾಗಿದೆ. ಯಾರಲ್ಲಿ ಹೆಚ್ಚು ಓಜಸ್ಸು ಇದೆಯೋ ಅವನು ಹೆಚ್ಚು ಪರಾಕ್ರಮಶಾಲಿ, ಬುದ್ಧಿಶಾಲಿ ಮತ್ತು ಆಧ್ಯಾತ್ಮಿಕವಾಗಿಯೂ ವೀರನಾಗಿರುವನು. ಕೆಲವರು ಸುಂದರ ವಾದ ಭಾಷೆಯ ಮೂಲಕ ಸುಂದರ ಭಾವಗಳನ್ನು ವ್ಯಕ್ತಗೊಳಿಸಬಹುದು. ಆದರೂ ಇದು ಜನರನ್ನು ಆಕರ್ಷಿಸಲಾರದು. ಮತ್ತೊಬ್ಬ ಸುಂದರವಾದ ಭಾಷೆ ಯಲ್ಲಿ ಮಾತನಾಡುವುದಿಲ್ಲ ; ಸುಂದರವಾಗಿ ಭಾವನೆಯನ್ನೂ ವಿವರಿಸುವುದಿಲ್ಲ. ಆದರೂ ಅವನಲ್ಲಿ ಒಂದು ಅದ್ಭುತ ಆಕರ್ಷಣೆ ಇದೆ. ಅವನ ಪ್ರತಿಯೊಂದು ನಡೆ ನುಡಿಯೂ ಶಕ್ತಿಯಿಂದ ತುಂಬಿ ತುಳುಕಾಡುತ್ತಿರುವುದು. ಇದೇ ಓಜಸ್ಸಿನ ಶಕ್ತಿ.

೯. ನಮ್ಮ ದೇಹದಲ್ಲಿ ಕೆಲಸ ಮಾಡುತ್ತಿರುವ ಶಕ್ತಿಯ ಉತ್ತಮ ಭಾಗ ವೆಲ್ಲಾ ಓಜಸ್ಸಾಗುವುದು. ಇದೊಂದು ರೂಪಾಂತರದ ಪ್ರಶ್ನೆ ಎಂಬುದನ್ನು ನೀವು ಗಮನದಲ್ಲಿಡಬೇಕು. ಬಾಹ್ಯದಲ್ಲಿ ಯಾವುದು ವಿದ್ಯುತ್ ಮತ್ತು ಆಯಸ್ಕಾಂತ ಶಕ್ತಿಯಂತೆ ಇದೆಯೋ ಅದೇ ಸೂಕ್ಷ್ಮವಾದ ಶಕ್ತಿಯಾಗುವುದು. ಯಾವುದು ಮಾಂಸಖಂಡಗಳ ಮೂಲಕ ಚಲನವಲನಗಳ ಶಕ್ತಿಯಂತೆ ಇದೆಯೋ ಅದೇ ಓಜಸ್ಸಾಗುವುದು. ಯಾವ ಶಕ್ತಿ ಸಂಭೋಗ ಕಾಲದಲ್ಲಿ ವೀರ್ಯದಂತೆ ಹೋಗು ವುದೋ ಅದನ್ನು ನಿಗ್ರಹಿಸಿದರೆ ಅದು ಸುಲಭವಾಗಿ ಓಜಸ್ಸಾಗುವುದು. ಮೂಲಾ ಧಾರಚಕ್ರ ಇದರ ಅಧೀನದಲ್ಲಿರುವುದರಿಂದ ಯೋಗಿಗಳು ಆ ಕೇಂದ್ರವನ್ನು ವಿಶೇಷವಾಗಿ ಗಮನಿಸುತ್ತಾರೆ. ಅವರು ವೀರ್ಯವನ್ನೆಲ್ಲಾ ಓಜಸ್ಸನ್ನಾಗಿ ಪರಿವರ್ತಿ ಸಲು ಯತ್ನಿಸುತ್ತಾರೆ. ಜಿತೇಂದ್ರಿಯರಾದ ಸ್ತ್ರೀಪುರುಷರು ಮಾತ್ರ ಓಜಸ್ಸನ್ನು ಊರ್ಧ್ವಮುಖ ಮಾಡಿ, ಮೆದುಳಿನಲ್ಲಿ ಸಂಗ್ರಹಿಸಬಲ್ಲರು. ಆದಕಾರಣವೇ ಬ್ರಹ್ಮ ಚರ್ಯವನ್ನು ಶ್ರೇಷ್ಠವ್ರತ ಎಂದು ಸಾರುವುದು. ಜಿತೇಂದ್ರಿಯರಲ್ಲದೇ ಇದ್ದರೆ ಆಧ್ಯಾತ್ಮಿಕತೆ ಇರಲಾರದು. ಅವನು ನೈತಿಕ ಮತ್ತು ಮಾನಸಿಕ ಶಕ್ತಿಯನ್ನು ಕಳೆದುಕೊಳ್ಳುವನು. ಆದಕಾರಣವೇ ಆಧ್ಯಾತ್ಮಿಕವೀರರು ಉದ್ಭವಿಸಿದ ಧರ್ಮ ದಲ್ಲೆಲ್ಲಾ ಬ್ರಹ್ಮಚರ್ಯಕ್ಕೆ ಅಷ್ಟೊಂದು ಪ್ರಾಮುಖ್ಯತೆಯನ್ನು ಕೊಟ್ಟಿರುವರು. ಆದಕಾರಣವೇ ಮದುವೆಯನ್ನು ತ್ಯಜಿಸಿದ ಸನ್ಯಾಸಿ ಬಂದದ್ದು. ಕಾಯಾ ವಾಚಾ ಮನಸಾ ಜಿತೇಂದ್ರಿಯನಾಗಿರಬೇಕು. ಇದಿಲ್ಲದೇ ಇದ್ದರೇ ರಾಜಯೋಗವನ್ನು ಅಭ್ಯಾಸ ಮಾಡುವುದು ಅಪಾಯಕರ. ಅದು ಒಬ್ಬನನ್ನು ಹುಚ್ಚನನ್ನಾಗಿಯೂ ಮಾಡಬಲ್ಲದು.

೧೦. ಈ ಯೋಗದ ಮುಖ್ಯ ಉದ್ದೇಶವೇ ಮಾನವರನ್ನು ಪೂರ್ಣಾತ್ಮ ರನ್ನಾಗಿ ಮಾಡುವುದು. ಅವರು ಜನ್ಮಜನ್ಮಗಳು ಕಾಯುತ್ತಾ ಬಾಹ್ಯ ಪ್ರಕೃತಿ

ಹೇಳಿದಂತೆ ಕೇಳುತ್ತಾ ಅಲೆಯ ಮೇಲೆ ಕೆಳಗೆ ತೇಲುತ್ತಿರುವ ಹುಲ್ಲಿನೆಸಳಿನಂತೆ. ಯೋಗಿ ಹಾಗೆ ಇರಬಯಸುವುದಿಲ್ಲ. ನೀವು ಬಲಶಾಲಿಗಳಾಗಿ ಎಂದು ಈ ಯೋಗ ಸಾರುವುದು. ಈ ಕೆಲಸವನ್ನು ಪ್ರಕೃತಿಗೆ ಬಿಡುವ ಬದಲು ನಿಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಸಂಸಾರಕ್ಕೆ ಅತೀತರಾಗಿ ಎನ್ನುವುದು ಯೋಗ.

೧೧. ಯೋಗಗಳಲ್ಲಿ ಯಾವುದು ರಹಸ್ಯವೋ ಗುಹ್ಯವೋ ಅದನ್ನು ತಕ್ಷಣ ತ್ಯಜಿಸಬೇಕು. ಜೀವನದಲ್ಲಿ ಶ್ರೇಷ್ಠ ಮಾರ್ಗದರ್ಶಕನೇ ಶಕ್ತಿ. ಇತರ ಕ್ಷೇತ್ರಗಳಂತೆ ಧಾರ್ಮಿಕ ಪ್ರಪಂಚದಲ್ಲಿಯೂ ನಿಮ್ಮನ್ನು ಯಾವುದು ದುರ್ಬಲರನ್ನಾಗಿ ಮಾಡುವುದೋ ಅದನ್ನು ಬಹಿಷ್ಕರಿಸಿ. ಅದರೊಂದಿಗೆ ಯಾವ ವ್ಯವಹಾರವನ್ನೂ ಇಟ್ಟು ಕೊಳ್ಳಬೇಡಿ. ರಹಸ್ಯದ ಮೇಲಿನ ಅಭಿಲಾಷೆ ಮಾನವರನ್ನು ದುರ್ಬಲರನ್ನಾಗಿ ಮಾಡುವುದು. ಪರಮಶ್ರೇಷ್ಠವಾದ ವಿಜ್ಞಾನ ಶಾಸ್ತ್ರವಾದಂತಹ ಯೋಗದ ಬಹು ಭಾಗವನ್ನು ರಹಸ್ಯಲಾಲಸೆ ನಾಶಮಾಡುವುದು.

೪೩ ಸ್ತ್ರೀಯರು ಮತ್ತು ಆಧ್ಯಾತ್ಮಿಕ ಜೀವನ

೧. ಪ್ರಖ್ಯಾತರಾದ ಆರ್ಯರೆಲ್ಲ, ಬುದ್ಧನೂ ಸಹ, ಪುರುಷನಿಗೆ ಸರಿಸಮನಾದ ಅಂತಸ್ತನ್ನೇ ಸ್ತ್ರೀಯರಿಗೆ ಕೊಟ್ಟಿರುವರು. ಧಾರ್ಮಿಕಕ್ಷೇತ್ರಗಳಲ್ಲಿ ಅವರಿಗೆ ಲಿಂಗ ಭೇದಗಳಿರಲಿಲ್ಲ. ವೇದ ಮತ್ತು ಉಪನಿಷತ್ತುಗಳಲ್ಲಿ ಸ್ತ್ರೀಯರು ಶ್ರೇಷ್ಠತಮ ಸತ್ಯಗಳನ್ನು ಬೋಧಿಸಿದರು, ಪುರುಷರಂತೆಯೇ ಗೌರವವನ್ನೂ ಗಳಿಸಿದರು.

೨. ಬುದ್ಧ ಆಧ್ಯಾತ್ಮಿಕ ಜೀವನದಲ್ಲಿ ಸ್ತ್ರೀಗೂ ಸರಿಸಮನಾದ ಅವಕಾಶವನ್ನು ಕೊಟ್ಟನು. ಅವನ ಪ್ರಥಮ ಶಿಷ್ಯಳೇ, ಸ್ತ್ರೀಯರಲ್ಲೆಲ್ಲಾ ಶ್ರೇಷ್ಠತಮಳಾದ ಅವನ ಹೆಂಡತಿ. ಅವಳು ಭರತಖಂಡದ ಸ್ತ್ರೀಯರಲ್ಲಿ ಬೌದ್ಧಧರ್ಮ ಪ್ರಚಾರಕಾರ್ಯದಲ್ಲಿ ಅಗ್ರಗಣ್ಯಳಾದಳು.

೩. ಭರತಖಂಡದಲ್ಲಿ ಬರುವ ಮಹಾತ್ಮರ ಗುಂಪಿನಲ್ಲಿ ಅನೇಕ ಪ್ರವಾದಿನಿಯರೂ ಇರುವರು. ಕ್ರೈಸ್ತ ಧರ್ಮದಲ್ಲಿ ಸ್ತ್ರೀಯರಿಗೆ ಪ್ರವಾದಿನಿಯ ಸ್ಥಾನ ಸಿಕ್ಕಿದೆ. ಆದರೆ ಇಂಡಿಯಾ ದೇಶದಲ್ಲಿ ಅವರ ಶಾಸ್ತ್ರಗಳಲ್ಲಿಯೂ ಸ್ತ್ರೀಯರಿಗೆ ಉತ್ತಮ ಸ್ಥಾನ ದೊರಕಿದೆ.

೪. ಜನಕನ ಆಸ್ಥಾನದಲ್ಲಿ ಯಾಜ್ಞವಲ್ಕ್ಯನನ್ನು ಹೇಗೆ ಪ್ರಶ್ನಿಸಿದರು ನಿಮಗೆ ನೆನಪಿದೆಯೆ ? ಅವನ ಮುಖ್ಯ ಪರೀಕ್ಷಕಳೇ ಬ್ರಹ್ಮವಾದಿನಿ ಎಂದು ಪ್ರಖ್ಯಾತಳಾದ ವಾಕ್ ಚತುರೆ ಕುಮಾರಿ ವಾಚಕ್ನವಿ. ಜಾಣನಾದ ಬಿಲ್ಲುಗಾರನ ಕೈಯಲ್ಲಿರುವ ಎರಡು ಬಾಣಗಳಂತಿವೆ ನನ್ನ ಪ್ರಶ್ನೆಗಳು ಎನ್ನುವಳು. ಅವಳ ಲಿಂಗವನ್ನು ಕುರಿತು ಮಾತೇ ಇಲ್ಲ. ಹಿಂದೆ ನಮ್ಮ ಅರಣ್ಯದ ಗುರುಕುಲಗಳಲ್ಲಿ ಬಾಲಕ ಬಾಲಿಕೆಯರಿಗೆ ಇದ್ದ ಸರಿಸಮಾನತೆಗಿಂತ ಮಿಗಿಲಾದುದಿದೆಯೆ ? ನಮ್ಮ ಸಂಸ್ಕೃತ ನಾಟಕಗಳನ್ನು ಓದಿ. ಶಕುಂತಲೆಯ ಕಥೆಯನ್ನು ಓದಿ. ಟೆನಿಸನ್ ಕವಿಯ Princess ನಮಗೆ ಏನಾದರೂ ಕಲಿಸುವುದಿದೆಯೆ ನೋಡಿ.

೫. ಆರ್ಯ ಮತ್ತು ಸೆಮೆಟಿಕ್ ಸ್ತ್ರೀಯರ ಆದರ್ಶ ಪರಸ್ಪರ ವಿರೋಧವಾಗಿದೆ. ಸೆಮೆಟಿಕ್ ಜನಾಂಗದಲ್ಲಿ ಸ್ತ್ರೀ ಸಾನ್ನಿಧ್ಯ ಧರ್ಮಜೀವನಕ್ಕೆ ಆತಂಕ ಎಂದು ಭಾವಿಸುವರು. ಅವಳು ಯಾವ ಧಾರ್ಮಿಕ ಆಚಾರಗಳನ್ನೂ ನೆರವೇರಿಸ ಕೂಡದು. ಆಹಾರಕ್ಕಾಗಿ ಒಂದು ಹಕ್ಕಿಯನ್ನು ಕೂಡ ಕೊಲ್ಲಕೂಡದು. ಆರ್ಯರಲ್ಲಾದರೋ ಸತಿ ಇಲ್ಲದೆ ಯಾವ ಪೂಜೆ ಅಥವಾ ವ್ರತವನ್ನೂ ಪತಿ ಮಾಡುವಂತೆ ಇಲ್ಲ.

ಆದಕಾರಣವೇ ಶ್ರೀರಾಮಕೃಷ್ಣರ ಅವತಾರದಲ್ಲಿ ಸ್ತ್ರೀಯನ್ನು ಗುರುವಿ ನಂತೆ ಸ್ವೀಕರಿಸಿದ್ದು; ಸ್ತ್ರೀವೇಷದಲ್ಲಿ ಮತ್ತು ಸ್ತ್ರೀಭಾವದಲ್ಲಿ ಅವರು ಸಾಧನೆ ಮಾಡಿದ್ದು; ಸ್ತ್ರೀಯರು ಜಗನ್ಮಾತೆಯ ಪ್ರತಿನಿಧಿ ಎಂದು ಬೋಧಿಸಿದ್ದು.

೬. ಸ್ತ್ರೀಯರ ಸ್ಥಿತಿ ಉತ್ತಮವಾಗುವ ತನಕ ಪ್ರಪಂಚ ಉತ್ತಮವಾಗ ಲಾರದು. ಹಕ್ಕಿ ಕೇವಲ ಒಂದೇ ರೆಕ್ಕೆಯ ಬಲದಿಂದ ಹಾರಲಾರದು.

೭. ಸಿಂಹವಾಗುವುದಕ್ಕೆ ಒಬ್ಬರಿಗೆ ಅವಕಾಶ ಕೊಡದೆ ಇದ್ದರೆ ಅವರು ನರಿಯಶಾಗುವರು. ಸ್ತ್ರೀಯರು ಶಕ್ತಿಸ್ವರೂಪಿಣಿಯರು. ಈಗ ಅವರ ಶಕ್ತಿ ಯೆಲ್ಲ ದುಷ್ಕಾರ್ಯದ ಕಡೆ ತಿರುಗುತ್ತಿದೆ. ಏಕೆಂದರೆ ಪುರುಷರು ಅವರನ್ನು ತುಳಿ ಯುತ್ತಿರುವರು. ಆದರೆ ಎಂದು ಅವಳು ಸ್ವತಂತ್ರಳಾಗುವಳೋ ಆಗ ಸಿಂಹಿಣಿ ಯಶಾಗುವಳು.

೮. ಒಂದು ಜನಾಂಗ ಎಷ್ಟು ಮುಂದುವರಿದಿದೆ ಎಂಬುದನ್ನು ಪರೀಕ್ಷಿಸು ವುದಕ್ಕೆ ಇರುವ ಒರೆಗಲ್ಲೆ ಅವರು ಸ್ತ್ರೀಯರನ್ನು ಹೇಗೆ ನೋಡುತ್ತಿರುವರು ಎಂಬುದು. ಪುರಾತನ ಗ್ರೀಸ್ ದೇಶದಲ್ಲಿ ಸ್ತ್ರೀಪುರುಷರ ಅಂತಸ್ತಿನಲ್ಲಿ ಯಾವ ಭೇದಭಾವವೂ ಇರಲಿಲ್ಲ. ಆದರ್ಶ ಸರಿಸಮಾನತೆಯ ಭಾವ ಅವರಲ್ಲಿತ್ತು. ಮದುವೆಯಶಾಗುವ ತನಕ ಯಾವ ಹಿಂದುವೂ ಪುರೋಹಿತನಾಗಲಾರ. ಏಕೆಂದರೆ ಮದುವೆ ಆಗುವವರೆಗೆ ಪುರುಷ ಒರೀ ಅರ್ಧ, ಪೂರ್ಣವಾಗಿಲ್ಲ. ಎಲ್ಲಿ ಪೂರ್ಣ ಸ್ತ್ರೀತ್ವದ ಆದರ್ಶವಿದೆಯೊ ಅಲ್ಲಿ ಪೂರ್ಣ ಸ್ವಾತಂತ್ರ್ಯವಿದೆ. ಆಧುನಿಕ ಸ್ತ್ರೀಯರ ಮುಖ್ಯ ಆದರ್ಶವೇ ಪಾತಿವ್ರತ್ಯ. ಸತಿಯೇ ಗೃಹದ ಕೇಂದ್ರ. ಅವಳ ಪಾತಿ ವ್ರತ್ಯದ ಮೇಲೆ ಅದು ಉರ್ಜಿತವಾಗಿ ನಿಲ್ಲುವುದು. ಈ ಆದರ್ಶದ ಅತಿರೇಕವೇ ವಿಧವೆಯರನ್ನು ಸುಡುವುದಕ್ಕೆ ಕಾರಣವಾಯಿತು. ಹಿಂದೂ ಸ್ತ್ರೀಯರು ಸಾತ್ವಿಕರು, ಧಾರ್ಮಿಕರು. ಪ್ರಪಂಚದ ಎಲ್ಲಾ ಸ್ತ್ರೀಯರಿಗಿಂತಲೂ ಅವರು ಬಹುಶಃ ಇದರಲ್ಲಿ ಮೇಲಾಗಿರುವರು. ನಾವು ಅವರಲ್ಲಿರುವ ಈ ಭವ್ಯವಾದ ಆದರ್ಶ ಗಳನ್ನು ಸಂರಕ್ಷಿಸಿ ಜೊತೆಗೆ ಅವರ ಬುದ್ಧಿ ವಿಕಾಸವಾಗುವಂತೆ ಮಾಡಿದರೆ, ಭವಿಷ್ಯದ ಭಾರತದ ನಾರಿ, ವಿಶ್ವದ ಆದರ್ಶ ನಾರಿಯಾಗುವಳು.

೯. ನನ್ನ ದೃಷ್ಟಿಯಲ್ಲಿ ಜನಾಂಗ ಸಂಪೂರ್ಣ ಬ್ರಹ್ಮಚರ್ಯದ ಆದರ್ಶ ವನ್ನು ಪಡೆಯುವುದಕ್ಕೆ ಮುಂಚೆ ವಿವಾಹದ ಪವಿತ್ರತೆ ಮತ್ತು ಅಚ್ಛೇದ್ಯತೆ ಇವು ಗಳ ಮೂಲಕ ಮಾತೃಸ್ಥಾನಕ್ಕೆ ಗೌರವ ಕೊಡುವುದನ್ನು ಕಲಿಯಬೇಕು. ರೋಮನ್ ಕ್ಯಾಥೋಲಿಕ್ ಮತ್ತು ಹಿಂದೂಗಳು ಮದುವೆಯು ಪವಿತ್ರವಾದು ದೆಂದೂ, ಅದನ್ನು ಅಲ್ಲಗಳೆಯುವುದಕ್ಕೆ ಆಗುವುದಿಲ್ಲವೆಂದೂ ತಿಳಿದುದರಿಂದ,

ವಿಶೇಷ ಶಕ್ತಿಯಿಂದ ಕೂಡಿದ ಸ್ತ್ರೀಪುರುಷರಿಗೆ ಜನ್ಮ ನೀಡಿದೆ. ಅರಬ್ಬಿ ದೇಶದವರಿಗೆ ಮದುವೆ ಒಂದು ಕರಾರು. ಬಲವಂತದಿಂದ ಒಬ್ಬಳನ್ನು ಹೊಂದಿರಬಹುದು, ಇಚ್ಛೆ ಬಂದಾಗ ಅವಳನ್ನು ತಿರಸ್ಕರಿಸಬಹುದು. ಅವರಲ್ಲಿ ಬ್ರಹ್ಮಚಾರಿ ಮತ್ತು ಬ್ರಹ್ಮಚಾರಿಣಿಯರ ಆದರ್ಶದ ಬೆಳವಣಿಗೆ ನಮಗೆ ಕಾಣುವುದಿಲ್ಲ. ಆಧುನಿಕ ಬೌದ್ಧಧರ್ಮವು ಮದುವೆಯ ಆದರ್ಶವನ್ನೇ ಇನ್ನೂ ಮುಟ್ಟದ ಜನಾಂಗಗಳ ಮಧ್ಯದಲ್ಲಿ ಬಿದ್ದುದರಿಂದ ಸನ್ಯಾಸಾಶ್ರಮವನ್ನು ಹಾಸ್ಯಾಸ್ಪದವನ್ನಾಗಿ ಮಾಡಿದೆ. ಅದುದರಿಂದ ಮೊದಲು ಜಪಾನಿನಲ್ಲಿ ವಿವಾಹವು ಒಂದು ಉತ್ತಮವಾದ ಪವಿತ್ರವಾದ ಆದರ್ಶವಾಗದಿದ್ದರೆ ಹೇಗೆ ಪ್ರಖ್ಯಾತರಾದ ಭಿಕ್ಷುಭಿಕ್ಷುಣಿಗಳಾಗುತ್ತಾರೋ ನನಗೆ ತಿಳಿಯದು. ಜೀವನದ ಮಹಿಮೆ ಇರುವುದು ಸಂಯಮದಲ್ಲಿ ಎಂದು ನಿಮಗೆ ಹೇಗೆ ಗೊತ್ತಾಯಿತೋ ನನಗೂ ಕೂಡ ಆಜನ್ಮ ಬ್ರಹ್ಮಚರ್ಯ ವ್ರತವನ್ನು ಪಾಲಿಸುವವರಿಗಾಗಿ ಬಹುಪಾಲು ಮಂದಿಗೆ ಈ ಮದುವೆಯ ಪವಿತ್ರತೆ ಆವಶ್ಯಕವೆಂದು ಗೊತ್ತಾಗಿದೆ.

೧೦. ಸದ್ಯಕ್ಕೆ ದೇವರನ್ನು ಅನಂತ ಶಕ್ತಿಸ್ವರೂಪಿಣಿ ತಾಯಿಯಂತೆ ಆರಾಧಿಸಬೇಕು. ಇದರಿಂದ ಉಪಾಸಕರು ಪವಿತ್ರರಾಗುವರು. ಅದ್ಭುತವಾದ ಶಕ್ತಿ ಅಮೇರಿಕಾದಲ್ಲಿ ಬರುವುದು. ಇಲ್ಲಿ ನಮ್ಮನ್ನು ಸೆಳೆಯುವುದಕ್ಕೆ ಯಾವ ದೇವಸ್ಥಾನವೂ ಇಲ್ಲ. ಬಡದೇಶದಲ್ಲಿ ನರಳುವಂತೆ ಇಲ್ಲಿ ಯಾರೂ ವ್ಯಥೆಪಡುವುದಿಲ್ಲ. ಸಹಸ್ರಾರು ವರುಷಗಳು ಸ್ತ್ರೀಯರು ವ್ಯಥೆಪಟ್ಟಿರುವರು. ಇದರಿಂದ ಅವರಿಗೆ ಅನಂತ ತಾಳ್ಮೆ ಮತ್ತು ದೃಢತೆ ಬಂದಿದೆ. ಅವಳೊಂದು ಆದರ್ಶಕ್ಕೆ ಶರಣಾಗಿರುವಳು. ಆದಕಾರಣ ಪ್ರತಿಯೊಂದು ದೇಶದಲ್ಲಿಯೂ ಮೂಢನಂಬಿಕೆ ಮತ್ತು ಪಾದ್ರಿಗಳು ಮುಂದುವರಿಯುವಂತೆ ಅವಳು ಮಾಡಿರುವಳು. ಈ ಸ್ವಭಾವವೇ ಅವಳನ್ನು ಮುಕ್ತಳನ್ನಾಗಿಯೂ ಮಾಡುವುದು. ನಾವು ವೇದಾಂತಿಗಳಾಗಬೇಕು. ಮಹಾಧ್ಯೇಯಗಳನ್ನು ನಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರಬೇಕು. ಜನಸಾಧಾರಣರಿಗೂ ಇದು ದೊರೆಯಬೇಕು. ಅಮೇರಿಕಾ ದೇಶದಲ್ಲಿ ಮಾತ್ರ ಇದು ಸಾಧ್ಯ. ಇಂಡಿಯಾ ದೇಶದಲ್ಲಿ ಬುದ್ಧ, ಶಂಕರ ಮುಂತಾದವರು ಮೇಲಿನ ಆದರ್ಶಗಳನ್ನು ಜೀವನದಲ್ಲಿ ಕಾರ್ಯಕಾರಿಯಾಗುವಂತೆ ಮಾಡಿದರೂ ಜನಸಾಧಾರಣರಿಗೆ ಇದು ಸಾಧ್ಯವಾಗಲಿಲ್ಲ. ನವಯುಗದಲ್ಲಿ ಸಾಧಾರಣ ಜನರು ವೇದಾಂತವನ್ನು ಬಾಳಬೇಕು. ಇದು ಸ್ತ್ರೀಯರ ಮೂಲಕ ಬರಬೇಕಾಗಿದೆ.

"ಜೋಪಾನವಾಗಿ ಪ್ರೀತಿಪಾತ್ರಳಾದ ಲಾವಣ್ಯನಿಧಿಯಾದ ಜಗನ್ಮಯಿಯನ್ನು ನಿನ್ನ ಹೃದಯಾಂತರಾಳದಲ್ಲಿ ರಕ್ಷಿಸು."

"ನನ್ನ ನಾಲಗೆಯನ್ನು ವಿನಃ ಉಳಿದೆಲ್ಲವನ್ನೂ ಆಚೆಗೆ ಬಿಸುಡು. ನಾಲಗೆ 'ತಾಯಿ, ತಾಯಿ' ಎನ್ನುತ್ತಿರಲಿ."

"ಮತ್ತಾವ ಆಲೋಚನೆಗಳೂ ಮನಸ್ಸನ್ನು ಪ್ರವೇಶಮಾಡದಿರಲಿ. ನಾನು ಮತ್ತು ನನ್ನ ಹೃದಯ ಮಾತ್ರ ತಾಯನ್ನು ನೋಡಲಿ."

"ನೀನು ವ್ಯಕ್ತಿಗೆ ಅತೀತಳಾಗಿರುವೆ, ನನ್ನ ಬಾಳ ಚಂದ್ರಮುಳಿ, ನನ್ನ ಆತ್ಮದ ಆತ್ಮವೆ."

೧೧. ನಿಮ್ಮಲ್ಲಿ ಯಾರಿಗೂ ಇನ್ನೂ ಶ್ರೀಮಾತೆಯವರ ಜೀವನ ಮಹಾತ್ಮ್ಯ ಅರಿವಾಗಿಲ್ಲ. ಆದರೆ ಕ್ರಮೇಣ ನಿಮಗೆ ಅರಿವಾಗುವುದು. ಶಕ್ತಿ ಇಲ್ಲದೆ ಪ್ರಪಂಚ ಉದ್ಧಾರವಾಗುವ ಹಾಗಿಲ್ಲ. ನಮ್ಮ ದೇಶ ಏತಕ್ಕೆ ಎಲ್ಲಾ ದೇಶಗಳಿಗಿಂತಲೂ ದುರ್ಬಲವಾಗಿದೆ, ಹಿಂದುಳಿದಿದೆ ? ಏಕೆಂದರೆ ಇಲ್ಲಿ ಶಕ್ತಿಗೆ ಪುರಸ್ಕಾರವಿಲ್ಲ. ಭರತ ಖಂಡದಲ್ಲಿ ಶಕ್ತಿಪೂಜೆಯ ಮಹತ್ವವನ್ನು ಪ್ರಚಾರ ಮಾಡುವುದಕ್ಕಾಗಿ ಶ್ರೀಮಾತೆ ಜನ್ಮವೆತ್ತಿರುವುದು. ಅವರ ಆಧಾರದ ಮೇಲೆ ಗಾರ್ಗಿ, ಮೈತ್ರೇಯಿ ಮುಂತಾದ ವರು ಜನ್ಮತಾಳುವರು. ನನ್ನ ಪ್ರಿಯಸಹೋದರನೆ, ನಿನಗೆ ಇನ್ನೂ ಏನೂ ತಿಳಿ ಯದು. ಆದರೆ ಕ್ರಮೇಣ ನಿನಗೆ ಎಲ್ಲಾ ಗೊತ್ತಾಗುತ್ತಾ ಬರುವುದು. ಆದ ಕಾರಣವೆ ಮೊದಲು ನಮಗೆ ಅವರ ಮಠ ಪ್ರಾರಂಭವಾಗಬೇಕು. ಶಕ್ತಿಯ ಅನು ಗ್ರಹವಿಲ್ಲದೆ ನಾವು ಏನನ್ನೂ ಸಾಧಿಸಲಾರೆವು. ಯುರೋಪ್ ಮತ್ತು ಅಮೇರಿಕಾ ದೇಶದಲ್ಲಿ ನನಗೆ ಏನು ಕಾಣುತ್ತಿದೆ ? ಶಕ್ತಿಯ ಆರಾಧನೆ. ಆದರೂ ಅವರು ಅಜ್ಞಾನದಿಂದ ಇಂದ್ರಿಯ ತೃಪ್ತಿಯ ಮೂಲಕ ಆರಾಧಿಸುತ್ತಿರುವರು. ಸಾತ್ವಿಕ ದೃಷ್ಟಿಯಿಂದ ಪವಿತ್ರ ಭಾವನೆಗಳಿಂದ ಪೂತರಾಗಿ ಅವಳನ್ನು ಜಗಜ್ಜನನಿ ಎಂದು ಆರಾಧಿಸಿದರೆ ಎಷ್ಟು ಕಲ್ಯಾಣಕಾರಿಯಾಗುವುದೆಂಬುದನ್ನು ಆಲೋಚಿಸಿ ನೋಡಿ. ದಿನ ಕಳೆದಂತೆ ನಾನು ಸ್ಪಷ್ಟವಾಗಿ ನೋಡುತ್ತಿರುವೆನು. ಅಂತರ್‌ದೃಷ್ಟಿ ಆಳ ಆಳಕ್ಕೆ ಹೋಗುತ್ತಿದೆ. ಆದಕಾರಣವೆ ಮೊದಲು ಶ್ರೀಮಾತೆಗೊಂದು ಮಠವನ್ನು ಕಟ್ಟಬೇಕು. ಮೊದಲು ತಾಯಿ ಮತ್ತು ಮಗಳು, ಅನಂತರ ತಂದೆ ಮತ್ತು ಮಗ. ನಿನಗ ಇದು ಗೊತ್ತಾಯಿತೆ ? ನನಗೆ ತಾಯಿಯ ಅನುಗ್ರಹ ತಂದೆಯ ಅನುಗ್ರಹ ಕ್ಕಿಂತ ಲಕ್ಷಪಾಲು ಪವಿತ್ರವಾದುದು. ತಾಯಿಯ ಅನುಗ್ರಹ, ತಾಯಿಯ ಆಶೀ ರ್ವಾದ, ನನಗೆ ಬಹಳ ಅಮೂಲ್ಯವಾದುದು.

೧೨. ಯಾವ ಜನಾಂಗ ಸೀತೆಗೆ ಜನ್ಮ ನೀಡಿತೊ, ಆ ಜನಾಂಗ ಸೀತೆ ಯನ್ನು ಸಂಪೂರ್ಣ ಕಲ್ಪಿಸಿಕೊಂಡಿದ್ದರೂ, ಅದು ಇಡೀ ಪ್ರಪಂಚದಲ್ಲೇ ಮತ್ತಾರೂ ನಾರಿಯರಿಗೆ ತೋರದ ಗೌರವವನ್ನು ತೋರಿದೆ. ಪಾಶ್ಚಾತ್ಯ ಸ್ತ್ರೀಯರಿಗೆ ಹಲವು

ಕಾನೂನಿನ ದಿಗ್‌ಬಂಧನಗಳಿವೆ. ಅವುಗಳ ಪರಿಚಯವೇ ನಮಗಿಲ್ಲ. ನಮ್ಮಲ್ಲಿಯೂ ಲೋಪದೋಷಗಳಿವೆ, ಅದರಂತೆಯೇ ಅವರಲ್ಲಿಯೂ ಕೂಡ. ಪ್ರಪಂಚದಲ್ಲೆಲ್ಲಾ ಪ್ರೀತಿ, ಮಾರ್ದವ, ಋಜುತ್ವ ಮುಂತಾದುವನ್ನು ವ್ಯಕ್ತಪಡಿಸಲು ಯತ್ನಿಸುತ್ತಿರುವರು. ಜನಾಂಗದ ನಡೆನುಡಿಯಲ್ಲಿ ಇದು ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ. ಗೃಹಕ್ಕೆ ಸಂಬಂಧಪಟ್ಟ ನಡೆನುಡಿಯಲ್ಲಿ ನಮ್ಮ ಭರತಖಂಡ ಇತರ ದೇಶಗಳಿಗಿಂತ ಮೇಲು ಎಂದು ನಾನು ನಿಸ್ಸಂದೇಹವಾಗಿ ಹೇಳಬಲ್ಲೆ.

ಪ್ರಶ್ನೆ : ಸ್ವಾಮೀಜಿ, ನಮ್ಮ ಸ್ತ್ರೀಯರಿಗೆ ಏನಾದರೂ ಸಮಸ್ಯೆಗಳಿವೆಯೆ?

ಉತ್ತರ : ಹೌದು, ಎಷ್ಟೋ ದೊಡ್ಡ ದೊಡ್ಡ ಸಮಸ್ಯೆಗಳಿವೆ. ಆದರೆ ವಿದ್ಯಾಭ್ಯಾಸ ಎಂಬ ಮಹಾಮಂತ್ರ ಬಗೆಹರಿಸಲಾರದುದು ಯಾವುದೂ ಇಲ್ಲ. ನಿಜವಾದ ವಿದ್ಯಾಭ್ಯಾಸ ಎಂದರೆ ಏನು ಎಂಬುದನ್ನು ನಾವಿನ್ನೂ ಬಗೆಹರಿಸಿಲ್ಲ.

ಪ್ರಶ್ನೆ : ನೀವು ಅದನ್ನು ಹೇಗೆ ವಿವರಿಸುತ್ತೀರಿ ?

ಉತ್ತರ : ನಾನು ಯಾವುದನ್ನೂ ವಿವರಿಸುವುದಿಲ್ಲ. ಆದರೂ ಇದನ್ನು ಒಬ್ಬನಲ್ಲಿರುವ ಸಾಧ್ಯತೆಗಳನ್ನು ಅಭಿವೃದ್ಧಿಗೊಳಿಸುವುದು, ಬರೀ ವಿಷಯ ಸಂಗ್ರಹವಲ್ಲ ಎನ್ನಬಹುದು. ವ್ಯಕ್ತಿ ಸರಿಯಾಗಿ ದಕ್ಷತೆಯಿಂದ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಎಂದು ಬೇಕಾದರೂ ಹೇಳಬಹುದು. ಆದಕಾರಣವೆ ಭರತಖಂಡಕ್ಕೆ ನಿರ್ಭಯರಾದ ಸ್ತ್ರೀಯರು ಬೇಕಾಗಿರುವರು. ಸಂಗಮಿತ್ರ, ಲೀಲಾ, ಅಹಲ್ಯಾಬಾಯಿ, ಮೀರಾಬಾಯಿ ಮುಂತಾದವರ ಪರಂಪರೆಗೆ ಯೋಗ್ಯರಾದಂತಹ ಸ್ತ್ರೀಯರು ಬೇಕು. ಮಹಾ ವೀರರಿಗೆ ಜನ್ಮ ನೀಡುವಂತಹ ತಾಯಂದಿರು ಅವರು ; ಏಕೆಂದರೆ ಅವರು ಪರಿಶುದ್ಧರಾಗಿದ್ದರು, ನಿಃಸ್ವಾರ್ಥರಾಗಿದ್ದರು. ಭಗವಂತನ ಪಾದಸ್ಪರ್ಶದಿಂದ ಮಾತ್ರ ಬರಬಹುದಾದ ಶಕ್ತಿಯಿಂದ ಅವರು ಕೂಡಿದ್ದರು.

೧೩. ನಮ್ಮ ಸ್ತ್ರೀಯರಲ್ಲಿ ನಿಮ್ಮ (ಪಾಶ್ಚಾತ್ಯ ನಾರಿಯರ) ಬುದ್ಧಿಶಕ್ತಿ ಇದ್ದರೆ ಎಷ್ಟು ಚೆನ್ನಾಗಿರುವುದು. ಆದರೆ ಚಾರಿತ್ರ ಪರಿಶುದ್ಧತೆಗೆ ಭಂಗತರುವ ಅಂತಹ ಬುದ್ಧಿಚತುರತೆ ಇರಕೂಡದು. ನಿಮ್ಮ ಶಕ್ತಿ ಸಾಹಸಕ್ಕೆ ನಾನು ಮಾರು ಹೋಗಿದ್ದೇನೆ. ಆದರೆ ಕೆಟ್ಟದ್ದರ ಮೇಲೆ ಗುಲಾಬಿಯ ಹೂವಿನ ರಾಶಿಯನ್ನು ಮುಚ್ಚಿ ಅದನ್ನು ಒಳ್ಳೆಯದು ಎನ್ನುವ ನಿಮ್ಮ ಸ್ವಭಾವ ನನಗೆ ಆಗದು. ಬುದ್ಧಿಮತ್ತೆಯೆ ಪರಮಶ್ರೇಷ್ಠವಲ್ಲ. ನೀತಿ ಮತ್ತು ಆಧ್ಯಾತ್ಮಿಕತೆಯನ್ನು ನಾವು ಗಳಿಸಬೇಕು. ನಮ್ಮ ಸ್ತ್ರೀಯರು ಅಷ್ಟು ಪಂಡಿತರಲ್ಲ ; ಆದರೆ ಅವರು ಹೆಚ್ಚು ಪರಿಶುದ್ಧರು. ಎಲ್ಲಾ ಸ್ತ್ರೀಯರಿಗೂ ತನ್ನ ಗಂಡನ ಹೊರತು ಉಳಿದ ಪುರುಷರು ತನ್ನ ಮಕ್ಕಳ ಸಮಾನವಾಗಿರಬೇಕು.

ಎಲ್ಲಾ ಪುರುಷರಿಗೂ ತನ್ನ ಸ್ತ್ರೀ ಹೊರತು ಉಳಿದವರು ತಾಯಿ ಸಮಾನ ವಿರಬೇಕು. ನೀವು ಯಾವುದನ್ನು gallentry (ಸ್ತ್ರೀಪರಾಯಣತೆ) ಎನ್ನುವಿರೋ ಅದನ್ನು ನಿಮ್ಮಲ್ಲಿ ನೋಡಿದರೆ ನನಗೆ ಜುಗುಪ್ಸೆ ಬರುವುದು. ನೀವು ಲಿಂಗಾತೀತ ರಾಗಿ, ಸ್ತ್ರೀಪುರುಷರಿಬ್ಬರೂ ಸರಿಸಮಾನರಾದ ಮಾನವಕೋಟಿ ಎಂದು ಪರಸ್ಪರ ನೋಡುವ ತನಕ, ನಿಮ್ಮ ಸ್ತ್ರೀಯರು ವಿಕಾಸವಾಗಲಾರರು, ಅಲ್ಲಿಯವರೆಗೆ ಅವರು ಪುರುಷನ ಭೋಗ್ಯವಸ್ತುಗಳಷ್ಟೆ, ಅದಕ್ಕಿಂತ ಹೆಚ್ಚೇನೂ ಅಲ್ಲ. ಇದೇ ದಾಂಪತ್ಯ ವಿಚ್ಛೇದನಕ್ಕೆ ಕಾರಣ. ನಿಮ್ಮ ಪುರುಷರು ಸ್ತ್ರೀಯರೆದುರಿಗೆ ಬಾಗಿ, ಕುಳಿತು ಕೊಳ್ಳಲು ಕುರ್ಚಿಯನ್ನು ಕೊಡುವರು. ಸ್ವಲ್ಪ ಹೊತ್ತಿನಲ್ಲೇ ಅವಳನ್ನು ಕೊಂಡಾ ಡುವರು. ಓ ತರುಣಿ, ನಿನ್ನ ಕಣ್ಣುಗಳು ಎಷ್ಟು ಸುಂದರವಾಗಿವೆ ಎನ್ನುವರು. ಹೀಗೆ ಮಾಡಲು ಅವರಿಗೆ ಯಾವ ಹಕ್ಕಿದೆ ? ಪುರುಷ ಇಷ್ಟು ದೂರ ಹೇಗೆ ಹೋಗಬಲ್ಲ ? ನಿಮ್ಮ ಸ್ತ್ರೀಯರು ತಾನೆ ಅದಕ್ಕೆ ಹೇಗೆ ಅವಕಾಶ ಕೊಡುತ್ತಾರೆ? ಇವು ಮಾನವನ ಭವ್ಯಗುಣ ವಿಕಾಸಕ್ಕೆ ಸಹಾಯಕವಲ್ಲ. ಹೀನತರ ಗುಣಗಳ ಬೆಳ ವಣಿಗೆಗೆ ಅವಕಾಶ ನೀಡುವುದು.

ನಾವು ಸ್ತ್ರೀಯರು ಪುರುಷರು ಎಂದು ಭಾವಿಸಕೂಡದು. ನಾವೆಲ್ಲಾ ಮಾನವರು ಎಂದು ಭಾವಿಸಬೇಕು. ಒಬ್ಬರು ಇನ್ನೊಬ್ಬರಿಗೆ ನೆರವಾಗಲು ಬಂದಿರ ವೆವು ಎಂದು ಭಾವಿಸಬೇಕು. ತರುಣ ತರುಣಿಯರು ಎಲ್ಲಿ ಇಬ್ಬರೇ ಇರುವರೊ ಅಲ್ಲಿ ಆಗಲೇ ತರುಣ, ಹೆಂಗಸಿಗೆ ತನ್ನ ಪ್ರೀತಿಯನ್ನು ವ್ಯಕ್ತಗೊಳಿಸಲು ಯತ್ನಿಸು ವನು. ಅವನು ಒಬ್ಬ ಹೆಂಡತಿಯನ್ನು ಆರಿಸಿಕೊಳ್ಳುವುದಕ್ಕೆ ಮುಂಚೆ ಬಹುಶಃ ಇನ್ನೂರು ಹುಡುಗಿಯರಿಗೆ ತನ್ನ ಪ್ರಣಯವನ್ನು ಸೂಚಿಸಿರಬಹುದು. ಅಯ್ಯೋ, ನಾನೇನಾದರೂ ಮದುವೆಯಾಗುವವರ ಗುಂಪಿಗೆ ಸೇರಿದ್ದರೆ ಈ ಫಜೀತಿ ಯಾವುದೂ ಇಲ್ಲದೆ ಪ್ರೀತಿಸುತ್ತಿದ್ದೆ !

ಭರತಖಂಡದಲ್ಲಿ ಇವುಗಳನ್ನೆಲ್ಲಾ ಹೊರಗಿನಿಂದ ನೋಡಿದಾಗ, ಅದರ ಲ್ಲೇನೂ ತಪ್ಪಿಲ್ಲ, ಅದೆಲ್ಲಾ ಬರೀ ತಮಾಷೆ ಎಂದು ಭಾವಿಸಿದ್ದರು. ನಾನೂ ಅದನ್ನು ನಂಬಿದ್ದೆ. ಆದರೆ ಅನಂತರ ನಾನು ಬೇಕಾದಷ್ಟು ಪ್ರಪಂಚವನ್ನು ನೋಡಿರುವೆನು. ಅದು ಸರಿಯಲ್ಲ ಎಂದು ಗೊತ್ತಾಗಿದೆ. ಇದೆಲ್ಲ ತಪ್ಪು. ಆದರೆ ಪಾಶ್ಚಾತ್ಯರು ಕಣ್ಣು ಮುಚ್ಚಿಕೊಂಡು ಇದೆಲ್ಲಾ ಸರಿ ಎನ್ನುವರು. ಪಾಶ್ಚಾತ್ಯ ಜನಗಳ ಒಂದು ದೋಷವೇನೆಂದರೆ ಅವರಿನ್ನೂ ಯುವಕರು, ಬುದ್ಧಿಯಿಲ್ಲ, ಚಂಚಲರು ಮತ್ತು ಬೇಕಾದಷ್ಟು ಐಶ್ವರ್ಯ ಬೇರೆ ಇದೆ. ಇಂತಹ ಯಾವುದಾದರೂ ಒಂದು ಗುಣದಿಂದಲೇ ಬೇಕಾದಷ್ಟು ಅನಾಹುತ ಆಗಬಲ್ಲದು. ಇವುಗಳೆಲ್ಲ ಒಟ್ಟಿಗೇ

ಸೇರಿದರೆ ! ಅದಕ್ಕೇ ಜೋಪಾನವಾಗಿರಿ !

೧೪. ಅನಂತರ ಧರ್ಮದ ಪ್ರಶ್ನೆ ಏಳುವುದು. ಹಿಂದೂಧರ್ಮ ಸ್ತ್ರೀಯರಿಗೆ ಸಹಾಯಕವಾಗಿದೆ. ಇದನ್ನು ಗಮನದಲ್ಲಿಡಿ. ಹಿಂದೂಧರ್ಮ ಮದುವೆ ಕಟ್ಟಿದ್ದು, ಇದು ಕೇವಲ ದುರ್ಬಲರಿಗೆ ಮಾತ್ರ ಎಂದು ಹೇಳುವುದು. ಆಧ್ಯಾತ್ಮಿಕ ಅಭೀಪ್ಸೆ ಯುಳ್ಳ ಸ್ತ್ರೀ ಪುರುಷರಾರೂ ಮದುವೆಯಾಗುವುದಿಲ್ಲ. ಆದಕಾರಣವೆ ಆಧ್ಯಾತ್ಮಿಕ ಜೀವನವನ್ನು ನಡೆಸಬೇಕೆಂಬ ಹೆಂಗಸು, "ನಾನು ಮದುವೆ ಏಕೆ ಮಾಡಿಕೊಳ್ಳ ಬೇಕು, ಮದುವೆ ಮಾಡಿಕೊಳ್ಳದೆ ಇದ್ದರೆ ಹೆಚ್ಚು ಭಗವತ್‌ಚಿಂತನೆಗೆ ಅವಕಾಶ ವಿದೆ. ಧನ್ಯವಾದ ದೇವರಿಗೆ ; ಅವನನ್ನು ಪೂಜಿಸುವೆ, ಸಾಧಾರಣ ಮಾನವನನ್ನು ಏತಕ್ಕೆ ನಾವು ಪ್ರೀತಿಸಬೇಕು" ಎನ್ನುವಳು.

೧೫. ಅನಂತರವೇ (ಅಮೇರಿಕಾದಲ್ಲಿ) ಇರುವ ನಾರಿಯರ ಪೂಜೆ. ಶಕ್ತಿ ಪೂಜೆ ಕಾಮದಿಂದ ಪ್ರೇರಿತವಾದುದಲ್ಲ. ಆದರೆ ಅದು ಕಾಶಿ, ಕಾಳಿಘಾಟ್ ಮತ್ತು ಇತರ ಕ್ಷೇತ್ರಗಳಲ್ಲಿ ಮಾಡುವ ಕುಮಾರಿಯ ಅಥವಾ ಸಾಧ್ವಿಯ ಪೂಜೆಯೆ ? ಶಕ್ತಿಪೂಜೆ ಸ್ತ್ರೀಯರನ್ನು ನಿಜವಾಗಿಯೂ ಪೂಜಿಸುವುದು. ಕೇವಲ ಮಾನಸಿಕ ವಾಗಿ ಅಲ್ಲ, ಕಲ್ಪನೆಯ ಮೂಲಕ ಅಲ್ಲ. ಕೆಲವು ಪವಿತ್ರ ಸ್ಥಳಗಳಲ್ಲಿ ಮತ್ತು ಕೆಲವು ಪವಿತ್ರದಿನಗಳಲ್ಲಿ ಮಾತ್ರ ನಾವು ಶಕ್ತಿಪೂಜೆಯನ್ನು ಮಾಡುವೆವು. ಆದರೆ ಅಲ್ಲಿ (ಅಮೇರಿಕಾದಲ್ಲಿ) ಎಲ್ಲಾ ಸ್ಥಳದಲ್ಲಿ, ಎಲ್ಲಾ ಕಾಲದಲ್ಲಿಯೂ ದಿನಂಪ್ರತಿ ಅದನ್ನು ಮಾಡುತ್ತಿರುವರು. ಸ್ತ್ರೀಸ್ಥಾನ ಅಗ್ರಸ್ಥಳದಲ್ಲಿ, ಅವಳ ಉಡಿಗೆ ತೊಡಿಗೆ ಎಲ್ಲರನ್ನೂ ಆಕರ್ಷಿಸುವಂತಹುದು. ಅವಳ ಪೀಠ, ಅವಳ ಆಹಾರ, ಅವಳ ಕೋರಿಕೆ, ಅವಳ ಅನುಕೂಲ ಎಲ್ಲಕ್ಕೂ ಅಗ್ರಸ್ಥಾನ. ಎಲ್ಲಾ ಕಡೆಯಲ್ಲಿಯೂ ಪ್ರಥಮ ಗೌರವ ಸ್ತ್ರೀಗೆ. ಶ್ರೀಮಂತ ಹೆಂಗಸಿಗೆ ಮಾತ್ರ ಅಲ್ಲ, ಯುವತಿಗೆ ಮಾತ್ರ ಅಲ್ಲ, ಸುಂದರಿಗೆ ಮಾತ್ರ ಅಲ್ಲ ; ಪ್ರತಿಯೊಬ್ಬ ಸ್ತ್ರೀಗೂ ಅವಳು ಪರಿಚಿತ ಳಾಗಿರಲಿ, ಅಪರಿಚಿತಳಾಗಿರಲಿ ಎಲ್ಲರಿಗೂ ಈ ಗೌರವ ಸಲ್ಲುವುದು.

೧೬. ಪುರುಷರ ತರಬೇತಿಗೆ ಹೇಗೆ ಕೇಂದ್ರಗಳನ್ನು ಸ್ಥಾಪಿಸಬೇಕೊ ಹಾಗೆಯೇ ಸ್ತ್ರೀಯರ ತರಬೇತಿಗೂ ಕೇಂದ್ರವನ್ನು ಸ್ಥಾಪಿಸಬೇಕು. ಇಂತಹ ಕೇಂದ್ರಗಳಲ್ಲಿ ವಿದ್ಯಾವತಿಯರಾದ ಬ್ರಹ್ಮಚಾರಿಣಿಯರು ಬೋಧನೆಯ ಕೆಲಸ ವನ್ನು ವಹಿಸಿಕೊಳ್ಳಬೇಕು. ಅಲ್ಲಿ ಆಧುನಿಕ ವಿಜ್ಞಾನದೊಂದಿಗೆ ಚರಿತ್ರೆ, ಪುರಾಣ, ಗೃಹವಿದ್ಯೆ, ಕಲೆ, ಶುದ್ಧ ಚಾರಿತ್ರ್ಯಕ್ಕೆ ಬೇಕಾದ ಗೃಹನಡವಳಿಕೆ, ಎಲ್ಲವನ್ನೂ ಬೋಧಿಸಬೇಕು. ವಿದ್ಯಾರ್ಥಿನಿಯರು ನೀತಿ ಮತ್ತು ಆಧ್ಯಾತ್ಮಿಕ ವಿದ್ಯೆಯಲ್ಲಿ ಪಳ ಗಿರಬೇಕು. ಕಾಲಕ್ರಮೇಣ ಅವರು ಆದರ್ಶ ಗೃಹಿಣಿಯರಾಗುವಂತೆ ಮಾಡಬೇಕು.

ಇಂತಹ ಸದ್ಗುಣಭರಿತರಾದ ತಾಯಂದಿರ ಮಕ್ಕಳು ಅವರಿಗಿಂತ ಉತ್ತಮರಾಗಿ ಬೆಳೆಯಲು ಅವಕಾಶವಾಗುವುದು. ಧರ್ಮಾತ್ಮರಾದ, ವಿದ್ಯಾವಂತರಾದವರ ಮನೆಯಲ್ಲೇ ಮಹಾಪುರುಷರು ಜನ್ಮವೆತ್ತುವುದು. ನೀವು ನಿಮ್ಮ ಸ್ತ್ರೀಯರನ್ನು ಮಕ್ಕಳನ್ನು ಹೆರುವ ಕಾರ್ಖಾನೆಯ ಸ್ಥಿತಿಗೆ ತಂದಿರುವಿರಿ. ಅಯ್ಯೋ ದೇವರೇ ! ಇದೇ ನಿಮ್ಮ ವಿದ್ಯೆಯ ಪರಿಣಾಮ ? ಸ್ತ್ರೀಯರನ್ನು ಮೇಲೆತ್ತಬೇಕು, ಜನಸಾಧಾರಣರನ್ನು ಜಾಗೃತರನ್ನಾಗಿ ಮಾಡಬೇಕು. ಆಗ ಮಾತ್ರ ಭರತಖಂಡದಲ್ಲಿ ಶುಭೋದಯವಾಗಬಲ್ಲದು.

೧೭. ಸತಿ ಸಹಧರ್ಮಚಾರಿಣಿ ಹಿಂದೂಗಳು ನೂರಾರು ವ್ರತಾದಿಗಳನ್ನು ಮಾಡಬೇಕಾಗಿದೆ. ಪುರುಷನಿಗೆ ಸತಿ ಇಲ್ಲದೇ ಇದ್ದರೆ ಅವನು ಯಾವುದನ್ನೂ ಮಾಡಲಾರ. ಪುರೋಹಿತರು ಅವರ ಸೆರಗನ್ನು ಗಂಟು ಹಾಕುವುದನ್ನು ನೋಡಿ. ಅವರು ಜೊತೆಯಲ್ಲೇ ಹಲವು ದೇವಸ್ಥಾನ ಮತ್ತು ತೀರ್ಥಯಾತ್ರೆಗಳಿಗೆ ಹೋಗುತ್ತಾರೆ.

ಶ್ರೀರಾಮ, ತನ್ನ ದೇಹವನ್ನು ತ್ಯಜಿಸಿ ಪರಲೋಕದಲ್ಲಿ ಸೀತೆಯನ್ನು ಸೇರಿದನು.

ಸೀತೆ, ಪರಿಶುದ್ಧಾತ್ಮಳು, ನಿತ್ಯದುಃಖಿನಿ !

ಭರತಖಂಡದಲ್ಲಿ ಯಾವುದು ಶುಭವೋ, ಶುದ್ಧವೋ, ಪವಿತ್ರವೋ ಅದಕ್ಕೆಲ್ಲಾ ಸೀತೆ ಎಂದು ಹೆಸರು. ಸ್ತ್ರೀಯರಲ್ಲಿ ಯಾವುದನ್ನು ಸ್ತ್ರೀತ್ವ ಎನ್ನುವೆವೋ ಅದೆಲ್ಲ ಸೀತೆ.

ಸೀತೆ, ತಾಳ್ಮೆಯ ಅವತಾರ. ನಿತ್ಯದುಃಖಿನಿ, ಪತಿವ್ರತಾಶಿರೋಮಣಿ, ನಿತ್ಯಪವಿತ್ರಳಾದ ಸತಿ. ಅವಳೆಷ್ಟೇ ದುಃಖ ಅನುಭವಿಸಿದರೂ ರಾಮನ ಮೇಲೆ ಒಂದಾದರೂ ಬಿರುನುಡಿಯಿಲ್ಲ.

ಸೀತೆ ಎಂದಿಗೂ ಹಿಂಸೆಗೆ ಹಿಂಸೆಯನ್ನು ಕೊಟ್ಟವಳಲ್ಲ. ಸೀತೆಯಾಗು !

೧೮. ಪಾಶ್ಚಾತ್ಯ ದೇಶದಲ್ಲಿ ಸ್ತ್ರೀ ಆಳುವಳು. ಎಲ್ಲಾ ಶಕ್ತಿ ಮತ್ತು ಪ್ರಭಾವವೂ ಅವಳದೇ. ಧೀರಳಾದ ವಿದ್ಯಾವತಿಯಾದ ವೇದಾಂತವನ್ನು ಬಲ್ಲ ನಿನ್ನಂತಹ ಸ್ತ್ರೀಯೊಬ್ಬಳು ಇಂಗ್ಲೆಂಡಿಗೆ ಪ್ರಚಾರಮಾಡಲು ಹೋದರೆ ಪ್ರತಿವರುಷವೂ ನೂರಾರು ಜನ ಸ್ತ್ರೀಪುರುಷರು ಭರತಖಂಡದ ಧರ್ಮವನ್ನು ಸ್ವೀಕರಿಸುವುದರಲ್ಲಿ ಸಂದೇಹವಿಲ್ಲ. ನಿನ್ನಂತಹವಳೊಬ್ಬಳು ಇಂಗ್ಲೆಂಡಿಗೆ ಹೋದರೆ ಅಲ್ಲಿ ಆಂದೋಳನವನ್ನೆಬ್ಬಿಸಬಹುದು. ಇನ್ನು ಅಮೆರಿಕಾದ ವಿಷಯದಲ್ಲಿ ಹೇಳಬೇಕಾಗಿಯೇ ಇಲ್ಲ. ಭಾರತೀಯ ನಾರಿ, ಭಾರತೀಯ ಉಡುಪಿನಲ್ಲಿ, ಭರತಖಂಡದ ಋಷಿಗಳು ಸಾರಿದ

ಧರ್ಮವನ್ನು ಪ್ರಚಾರ ಮಾಡಿದರೆ, ನನಗೆ ಒಂದು ಅಮೋಘವಾದ ಭವಿಷ್ಯವೇ ಕಾಣುತ್ತಿದೆ, ಪಾಶ್ಚಾತ್ಯ ದೇಶವನ್ನೆಲ್ಲಾ ಮುಳುಗಿಸಬಲ್ಲ ಒಂದು ಮಹಾತರಂಗ ಏಳುವುದು. ಮೈತ್ರೇಯಿ, ಖಾನ, ಲೀಲಾವತಿ, ಸಾವಿತ್ರಿ, ಉಭಯ ಭಾರತಿ ಮುಂತಾದವರ ದೇಶದಲ್ಲಿ ಇದನ್ನು ಮಾಡಲು ಧೈರ್ಯತಾಳುವ ನಾರಿಯರಿಲ್ಲವೆ ?

೧೯. ಸ್ವಾತಂತ್ರ್ಯವೆ ಜೀವನ ವಿಕಾಸಕ್ಕೆ ಪ್ರಪ್ರಥಮವಾಗಿ ಬೇಕಾಗಿರುವುದು. ನಾನು ಈ ಮಗುವಿನ ಅಥವಾ ಆ ಸ್ತ್ರೀಯ ಜೀವನದ ಜವಾಬ್ದಾರಿಯನ್ನು ವಹಿಸುತ್ತೇನೆ ಎಂಬುದು ತಪ್ಪು. ಸಾವಿರ ವೇಳೆ ತಪ್ಪು. ನನ್ನನ್ನು ಪದೇ ಪದೇ ವಿಧವೆಯರ ಸಮಸ್ಯೆ ವಿಚಾರವಾಗಿ, ಸ್ತ್ರೀಯರ ಸಮಸ್ಯೆ ವಿಷಯವಾಗಿ ಪ್ರಶ್ನಿಸುತ್ತಿರುವರು. ನಾನು ಒಂದೇ ಸಲ ಅವರನ್ನು ಕೇಳಿಬಿಡುತ್ತೇನೆ, ನಾನೇನು ಹೆಂಗಸೆ ಈ ಪ್ರಶ್ನೆಯನ್ನು ನನಗೆ ಹಾಕುತ್ತೀರಲ್ಲ ಎಂದು. ಸ್ತ್ರೀಯರ ಸಮಸ್ಯೆಯನ್ನು ಪರಿಹರಿಸುವುದಕ್ಕೆ ನೀವು ಯಾರು ? ಪ್ರತಿಯೊಬ್ಬ ವಿಧವೆ ಮತ್ತು ಸ್ತ್ರೀಯರನ್ನು ಆಳುವುದಕ್ಕೆ ನೀವೇನು ಸರ್ವೇಶ್ವರನಾದ ದೇವರೆ? ನಿಮ್ಮ ಕೈಗಳನ್ನು ತೆರೆಯಿರಿ. ಅವರ ಸಮಸ್ಯೆಯನ್ನು ಅವರೇ ಪರಿಹರಿಸಿಕೊಳ್ಳುವರು.

೨೦. ಸ್ತ್ರೀಯರನ್ನು ಅವರ ಸಮಸ್ಯೆಯನ್ನು ಅವರದೇ ರೀತಿಯಲ್ಲಿ ಬಗೆಹರಿಸಿಕೊಳ್ಳಲು ಬಿಡಿ. ಇತರರಾರೂ ಇದನ್ನು ಅವರಿಗಾಗಿ ಮಾಡಲಾರರು ಅಥವಾ ಮಾಡಲೂ ಬಾರದು. ನಮ್ಮ ಭಾರತೀಯ ಸ್ತ್ರೀಯರು ಪ್ರಪಂಚದ ಇತರ ಸ್ತ್ರೀಯರಷ್ಟೇ ಬುದ್ಧಿವಂತರು ಇದನ್ನು ಸಾಧಿಸುವುದಕ್ಕೆ.

೨೧. ಪ್ರಶ್ನೆ: ಸ್ವಾಮೀಜಿ, ಈಗ ನಮ್ಮ ದೇಶದಲ್ಲಿ ಗಾರ್ಗಿ, ಖಾನ, ಲೀಲಾವತಿ ಎಂಬ ವಿದ್ಯಾವಂತರಾದ ಸದ್ಗುಣಸಂಪನ್ನರಾದ ಸ್ತ್ರೀಯರನ್ನು ಎಲ್ಲಿಂದ ತರುವುದು ?

ಸ್ವಾಮೀಜಿ: ಅಂತಹ ಸ್ತ್ರೀಯರು ಈಗ ಇಂಡಿಯಾದೇಶದಲ್ಲಿ ಇಲ್ಲ ಎಂದು ಭಾವಿಸಿದಿರಾ ? ಈ ಸೀತಾ, ಸಾವಿತ್ರಿಯರ ದೇಶದಲ್ಲಿ, ಪುಣ್ಯಕ್ಷೇತ್ರವಾದ ಭರತ ಖಂಡದಲ್ಲಿ, ಈಗಲೂ ಹೆಂಗಸರಲ್ಲಿ ಎಂಥಾ ಗುಣ, ಸ್ನೇಹ, ಸೇವಾಭಾವ, ದಯೆ ತೃಪ್ತಿ ಮತ್ತು ಭಕ್ತಿ ಇವು ಕಂಡುಬರುತ್ತವೆಯೊ ಅವು ಅಷ್ಟರಮಟ್ಟಿಗೆ ಪೃಥ್ವಿಯಲ್ಲಿ ಮತ್ತೆಲ್ಲಿಯೂ ಇರುವುದನ್ನು ನಾನು ನೋಡಿಲ್ಲ. ಈ ಪಾಶ್ಚಾತ್ಯದೇಶದ ಹೆಂಗಸರನ್ನು ನೋಡಿದರೆ, ಅನೇಕ ವೇಳೆ ಅವರನ್ನು ಹೆಂಗಸರೆಂದೇ ಹೇಳುವುದಕ್ಕಾಗುವುದಿಲ್ಲ. ಅವರು ಮಾಡುವ ಕೆಲಸಗಳೆಲ್ಲಾ ಗಂಡಸರದು. ಗಾಡಿ ಹೊಡೆಯುತ್ತಾರೆ, ಆಫೀಸಿಗೆ ಹೋಗುತ್ತಾರೆ, ಸ್ಕೂಲಿಗೆ ಹೋಗುತ್ತಾರೆ, ಪ್ರೊಫೆಸರಿ ಕೆಲಸ ಮಾಡುತ್ತಾರೆ. ಭರತಖಂಡ ಒಂದರಲ್ಲಿ ಮಾತ್ರ ಹೆಂಗಸರಲ್ಲಿ ಲಜ್ಜೆ ವಿನಯ

ಮುಂತಾದುವನ್ನು ನೋಡಿ ಕಣ್ಣುಗಳಿಗೆ ಸಮಾಧಾನವಾಗುತ್ತದೆ. ಇಂತಹ ಆದರ್ಶಗಳಿದ್ದರೂ ನೀವು ಇವರನ್ನು ಉನ್ನತರನ್ನಾಗಿ ಮಾಡಲಾರದೇ ಹೋದಿರಿ ! ಸರಿಯಾದ ಶಿಕ್ಷಣವನ್ನು ಪಡೆದರೆ ಇವರು ಪ್ರಪಂಚದಲ್ಲಿ ಆದರ್ಶ ಸ್ತ್ರೀಯರಾಗಬಹುದು.

೨೨. ಸ್ತ್ರೀಯರಿಗೆ ಉತ್ತಮ ಶಿಕ್ಷಣ ಕೊಟ್ಟರೆ ಅವರೇ ತಮ್ಮ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವರು. ಯಾವಾಗಲೂ ಇವರನ್ನು ಅಬಲೆಯರೆಂದೇ ನೋಡಿಕೊಂಡಿರುವೆವು. ಯಾವಾಗಲೂ ಇತರರ ಆಶ್ರಯದಲ್ಲೇ ಬೆಳೆಯಬೇಕು. ಆದಕಾರಣವೇ ಏನಾದರೂ ಅಪಾಯ ಅಥವಾ ಕಷ್ಟದ ಸುಳಿವು ತೋರಿದರೂ ಸುಮ್ಮನೆ ಕಣ್ಣೀರು ಸುರಿಸಿ ಅಳತೊಡಗುವರು. ಅವರಲ್ಲಿ ಸ್ಥೈರ್ಯ ಧೈರ್ಯಗಳೂ ಇರಬೇಕು. ಈಗಿನ ಕಾಲದಲ್ಲಿ ಸ್ತ್ರೀಯರೂ ಕೂಡ ಆತ್ಮರಕ್ಷಣೆಯನ್ನು ಕಲಿತುಕೊಳ್ಳಬೇಕು. ಝಾನ್ಸಿರಾಣಿ ಎಷ್ಟು ಪೌರುಷವಂತಳಾಗಿದ್ದಳು !

೨೩. ಅಬ್ಬ! ಈ ದೇಶದ(ಅಮೇರಿಕದ) ಹೆಂಗಸರನ್ನು ನೋಡಿ ನಾನು ಸ್ಥಂಭೀಭೂತನಾಗಿದ್ದೇನೆ. ನನ್ನನ್ನು ಕೇವಲ ಹುಡುಗನೆಂದು ತಿಳಿದು ಅಂಗಡಿ ಮುಂತಾದುವುಗಳಿಗೆ ಕರೆದುಕೊಂಡು ಹೋಗುತ್ತಾರೆ. ಅವರು ಎಲ್ಲಾ ತರಹ ಕೆಲಸಗಳನ್ನೂ ಮಾಡುತ್ತಾರೆ. ಅವರು ಮಾಡುವ ಕೆಲಸದ ಹದಿನಾರನೇ ಒಂದು ಪಾಲನ್ನು ಕೂಡ ನಾವು ಮಾಡಲಾರೆವು. ಅವರು ರೂಪಿನಲ್ಲಿ ಲಕ್ಷ್ಮಿಯನ್ನೂ, ಗುಣದಲ್ಲಿ ಸರಸ್ವತಿಯನ್ನೂ ಹೋಲುವರು. ಅವರೇ ಜಗನ್ಮಾತೆಯ ಅವತಾರ. ಅವರ ಆರಾಧನೆಯ ಮೂಲಕ ಯಾವ ಕೆಲಸದಲ್ಲಾದರೂ ಸಿದ್ಧಿಯನ್ನು ಪಡೆಯಬಹುದು. ಅಯ್ಯೋ ದೇವರೇ, ನಾವು ಮನುಷ್ಯರ ಗುಂಪಿಗೆ ಸೇರಿದವರೆ ! ನಮ್ಮ ದೇಶದಲ್ಲಿ ಅಂತಹ ಜಗನ್ಮಾತೆಯ ಅವತಾರಸ್ವರೂಪಿಣಿಯರಾದಂತಹ ಒಂದು ಸಾವಿರ ಸ್ತ್ರೀರತ್ನಗಳನ್ನು ನಾನು ಸಾಯುವುದಕ್ಕೆ ಮುಂಚೆ ಒಂದುಗೂಡಿಸಿದರೆ ಶಾಂತವಾಗಿ ಪ್ರಾಣಬಿಡುವೆನು. ಆಗ ಮಾತ್ರ ನಮ್ಮ ದೇಶದವರು ತಾವು ಆರ್ಯಸಂತಾನರೆಂದು ಹೆಮ್ಮೆ ಕೊಚ್ಚಿಕೊಳ್ಳಬಹುದು.

ನಾನು ನಿಜವಾಗಿಯೂ ಇಲ್ಲಿಯ ಸ್ತ್ರೀಯರನ್ನು ನೋಡಿ ಆಶ್ಚರ್ಯಚಕಿತನಾಗಿರುವೆನು. ಜಗನ್ಮಾತೆಯು ಅವರ ಮೇಲೆ ಎಷ್ಟು ಕರುಣೆಯನ್ನು ಬೀರಿದ್ದಾಳೆ! ಅತ್ಯಾಶ್ಚರ್ಯಕರವಾದ ಸ್ತ್ರೀಯರಿವರು! ಪರಸ್ಪರ ಪೈಪೋಟಿಯಲ್ಲಿ ಸೋತ ಗಂಡಸನ್ನು ಮೂಲೆಗೊತ್ತುವುದರಲ್ಲಿರುವರು ! ಜಗನ್ಮಾತೆ, ಇದೆಲ್ಲಾ ನಿನ್ನ ಅನುಗ್ರಹದಿಂದ. ಈ ಲಿಂಗಭೇದಗಳಿಂದ ಬಂದಿರುವ ಮೇಲುಕೀಳೆಂಬ ಭಾವವನ್ನು ನಾನು

ಸಂಪೂರ್ಣವಾಗಿ ತೊಡೆದುಹಾಕುವತನಕ ಶಾಂತನಾಗಲಾರೆ. ಆತ್ಮನಲ್ಲಿ ಏನಾದರೂ ಲಿಂಗಭೇದವಿದೆಯೇನು? ಗಂಡಸಿಗೂ ಹೆಂಗಸಿಗೂ ಇರುವ ಭೇದಭಾವ ಹೋಗ ಬೇಕು. ಎಲ್ಲವೂ ಆತ್ಮಮಯ. ದೇಹ ನಾನೆಂಬ ಭ್ರಮೆಯನ್ನು ಬಿಡಿ. ಅಸ್ತಿ ಅಸ್ತಿ ಎಲ್ಲವೂ ಇದೆ ಎಂದು ಧೈರ್ಯವಾಗಿ ಹೇಳಿ.

Vijaya Evening College Library
BANGALORE

This book should be returned on or before the date last stamped An overdue charge of 10 paise will be levied for each day, if the book is kept beyond that date.

17 SEP 1993

3262

8 DEC 1998

4460

1 DEC 2001

Call No. :

Author : ಸ್ವಾಮಿ ವಿವೇಕಾನಂದರ

Title : ಬೋಧನೆಯ ಸಾರ

Signature	Borrowing Date
Manjunath S.B	3/9/93
V. Raghavendra	24.11.98
Mahesh R. 2462	21.12.2000.

Vijaya Evening College Library
Bangalore-560004

Accn. No. 9970

"ಸ್ವಾಮಿ ವಿವೇಕಾನಂದರ ರಚನಾತ್ಮಕ ಪ್ರತಿಭೆಯನ್ನು ಸಮತ್ವ ಮತ್ತು ಸಮುಚ್ಚಯ ಎಂಬ ಎರಡು ಶಬ್ಧಗಳಲ್ಲಿ ಸಂಕ್ಷೇಪಿಸಬಹುದು. ಅವರು ಎಲ್ಲ ಆಧ್ಯಾತ್ಮಿಕ ಭಾವನೆಗಳನ್ನೂ, ನಾಲ್ಕು ಯೋಗಗಳನ್ನೂ ಪೂರ್ಣರೂಪದಲ್ಲಿ ಅಪ್ಪಿಕೊಂಡರು. ತ್ಯಾಗ, ಸೇವೆ, ಕಲೆ, ವಿಜ್ಞಾನ, ಧರ್ಮ, ಕರ್ಮ ಎಲ್ಲವನ್ನೂ ಸ್ವೀಕರಿಸಿದರು. ಅವರ ಬೋಧನೆ ಅತ್ಯಂತ ಆಧ್ಯಾತ್ಮಿಕವೂ ಹೌದು ಹಾಗೂ ಅಷ್ಟೇ ವ್ಯಾವಹಾರಿಕವೂ ಹೌದು. ಅವರು ಎಲ್ಲ ಮಾನವ ಶಕ್ತಿಯ ಸಮನ್ವಯದ ಮೂರ್ತ ರೂಪವಾಗಿದ್ದರು."

–ರೋಮಾ ರೋಲಾ

(ನೋಬಲ್ ಪ್ರಶಸ್ತಿ ವಿಜೇತ
ಫ್ರೆಂಚ್ ಕಾದಂಬರಿಕಾರ)

**SWAMI VIVEKANANDARA
BODHANEYA SARA**

Rs. 21.00